ದಾವಣಗೆರೆ ಪ್ರದೇಶದ ರೈತ ಹೋರಾಟಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಸಂಶೋಧಕ
ಮ[illegible]ಲಿಂಗಪ್ಪ [illegible]ಟ್

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯-೨೦೧೦

ದಾವಣಗೆರೆ ಪ್ರದೇಶದ ರೈತ ಹೋರಾಟಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಸಂಶೋಧಕ
ಮಹಲಿಂಗಪ್ಪ. ಹೆಚ್

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯-೨೦೧೦

ದೃಢೀಕರಣ ಪತ್ರ

''ದಾವಣಗೆರೆ ಪ್ರದೇಶದ ರೈತ ಹೋರಾಟಗಳು'' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗದ ಎಂ.ಫಿಲ್. ಪದವಿಗಾಗಿ ಮಹಲಿಂಗಪ್ಪ ಹೆಚ್., ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೫·೦೯-೨೦೧೦

(ಡಾ. ಕೆ. ಮೋಹನ್‌ಕೃಷ್ಣ ರೈ)
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

''ದಾವಣಗೆರೆ ಪ್ರದೇಶದ ರೈತ ಹೋರಾಟಗಳು'' ಎಂಬ ನಿಬಂಧವನ್ನು ಡಾ.ಕೆ. ಮೋಹನ್‌ಕೃಷ್ಣ ರೈ, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ, ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Mahalinga. H.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೪-೦೬-೨೦೧೦

(ಮಹಲಿಂಗಪ್ಪ ಹೆಚ್)
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದಾವಣಗೆರೆ ಪ್ರದೇಶದ ರೈತ ಹೋರಾಟಗಳು

ಪರಿವಿಡಿ

* * *

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಆಹಾರವನ್ನು ಹುಡುಕುತ್ತಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದಾಡುತ್ತಿದ್ದ ಮಾನವ ಬಿತ್ತಿ ಬೆಳೆಯುವುದನ್ನು ಕಲಿತು ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದಾಗ ನಾಗರಿಕತೆ ಆರಂಭವಾಯಿತು. ಬೆಳೆ ಬೆಳೆಯುವ ಪದ್ಧತಿಯೂ ಸಹ ಆರಂಭದಲ್ಲಿ ಬಹಳ ಸರಳವಾಗಿದ್ದು, ಹೆಚ್ಚಿನ ಅಗತ್ಯ ತಿಳುವಳಿಕೆ ಬಂದ ಹಾಗೆ ಅದರಲ್ಲಿ ಸುಧಾರಣೆಗಳಾದವು. ಆಗ ಒಂದು ಕಡೆ ನೆಲೆ ನಿಲ್ಲುವ ಅಗತ್ಯ ಹೆಚ್ಚಾಯಿತು. ಬೀಜಗಳನ್ನು ಒಂದಿಷ್ಟು ಚೆಲ್ಲಿ ಅದು ಬೆಳೆದಾಗ ಅದನ್ನು ಬಳಸಿಕೊಳ್ಳುತ್ತಾ ಆ ಜಾಗದಲ್ಲಿ ಬೆಳೆ ಹೆಚ್ಚಿಗೆ ಬರದೇ ಇದ್ದಾಗ ಬೇರೆ ಜಾಗಕ್ಕೆ ವಲಸೆ ಹೋಗುವ ಪದ್ಧತಿ ಆರಂಭದಲ್ಲಿತ್ತು. ಆದರೆ ಈ ರೀತಿ ಬೆಳೆ ಕಡಿಮೆಯಾಗಲು ಭೂಮಿಯ ಸಾರದ ಕೊರತೆ ಕಾರಣ ಎಂಬ ಅಂಶ ತಿಳಿದುಬಂದಾಗ ಭೂಮಿಯ ಸಾರ ಹೆಚ್ಚಿಸಲು ಗೊಬ್ಬರಗಳನ್ನು ಭೂಮಿಗೆ ಸೇರಿಸುವ ಪದ್ಧತಿಗಳು ಜಾರಿಗೆ ಬಂದವು. ನಂತರ ಮಾನವ ಸಮುದಾಯಗಳು ಸ್ಥಿರವಾಗಿ ನಿಲ್ಲುವ ಸಾಧ್ಯತೆಗಳು ಹೆಚ್ಚಾದವು.

ಈ ರೀತಿಯಲ್ಲಿ ಕೃಷಿ ಒಟ್ಟಾರೆ ಮಾನವನ ನಾಗರಿಕ ಜೀವನದ ದಿಕ್ಕು ನಿರ್ಧರಿಸಿದ ಅಂಶವಾಗಿದೆ. ಮಾನವ ಜೀವನಕ್ಕೆ ಹಾಗೂ ಕೃಷಿಗೆ ನೀರು ಬಹಳ ಪ್ರಮುಖ ಅಂಶವಾದ ಕಾರಣ ಮಳೆ ಹೆಚ್ಚು ನಿಗದಿತವಾಗಿ ಬೀಳುವ ಪ್ರದೇಶಗಳು ಹಾಗೂ ಹೊಳೆ, ಕೆರೆ, ಕೊಳ್ಳಗಳು ಇರುವ ಜಾಗಗಳಲ್ಲಿ ಆರಂಭದ ನಾಗರಿಕತೆಗಳು ತಲೆ ಎತ್ತಿರುವುದನ್ನು ಚರಿತ್ರೆ ತಿಳಿಸುತ್ತದೆ. ಕೃಷಿಯನ್ನು ಪ್ರಮುಖ ಚಟುವಟಿಕೆಯಾಗಿಸಿಕೊಂಡ ನಂತರ ಒಟ್ಟಾಗಿ ಬದುಕುವ ಹಲವಾರು ಕುಟುಂಬಗಳ ವ್ಯವಸ್ಥೆಯ ಅಂಗವಾಗಿ ಗುಂಪುಗಳ ನಾಯಕತ್ವ, ಆ ನಾಯಕತ್ವಗಳ ಅಧಿಕಾರ ವ್ಯಾಪ್ತಿ, ಮುಂತಾದ ವಿಚಾರಗಳು ವಿಕಾಸಗೊಂಡು ಊರು-ಕೇರಿ-ರಾಜ್ಯ ಎಂಬ ಕಲ್ಪನೆಗಳು ಹುಟ್ಟಿಕೊಂಡಿರುವುದನ್ನು ಚರಿತ್ರೆ ತಿಳಿಸಿಕೊಡುತ್ತದೆ. ಸಾಮಾಜಿಕ ಜೀವನದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಕೆಲವು ಭಿನ್ನತೆಗಳು ಇದ್ದರೂ ಒಟ್ಟಾಗಿ ಜೀವಿಸುವಾಗ ಅನುಸರಿಸುವ ಹಲವಾರು ವಿಧಿ-ವಿಧಾನಗಳಲ್ಲಿ ಒಂದು ರೀತಿಯ ಸಮಾನತೆಯನ್ನು ಗಮನಿಸಬಹುದಾಗಿದೆ.

ಉತ್ತು ಬಿತ್ತಿ ಬೆಳೆಯುವ ಭೂಮಿ ಯಾರಿಗೆ ಎಷ್ಟು ಸೇರಿರಬೇಕು ಎಂಬ ನೀತಿ-ನಿಯಮಗಳ ರಚನೆ ಹಾಗೂ ಭೂಮಿಯ ಅಧಿಕಾರ ಹೊಂದಿರದೇ ಕೃಷಿಯಲ್ಲಿ ಸಹಕರಿಸುವ ಜನರಿಗೆ ಏನೇನು ಲಭ್ಯವಾಗಬೇಕು, ಎಷ್ಟು ಲಭ್ಯವಾಗಬೇಕು ಎಂಬ ಅಂಶಗಳಲ್ಲಿ ನಿಯಮ ನೀತಿ ಪಾಲಿಸಿಕೊಂಡು ಬರುತ್ತಿರುವಾಗ ಈ ನಿಯಮಗಳನ್ನು ಪಾಲಿಸುವಂತೆ ನೋಡಿಕೊಳ್ಳುವ ಅಧಿಕಾರವನ್ನು ಕೆಲವರಿಗೆ ಒಪ್ಪಿಸಿದಾಗ ಒಂದು ಸ್ಪಷ್ಟವಾದ ರೂಪದಲ್ಲಿ ರಾಜಕೀಯ ಚಟುವಟಿಕೆಗಳು ಉಗಮವಾದವು. ರಾಜರು ಸಾಮಂತರು, ರಾಜಭಟ್ಟರು ಎಂಬ ವ್ಯವಸ್ಥೆಗಳು, ತೆರಿಗೆ-ದಂಡ-ಕಂದಾಯ ಎಂಬ ಆಡಳಿತ ಅಗತ್ಯಗಳು ನಾಗರಿಕ ಜೀವನದ ಪ್ರಮುಖ ಅಂಶಗಳಾದವು.

ರೈತರು ಎಂದು ಕರೆಯಿಸಿಕೊಳ್ಳುವ ಭೂಮಿಯನ್ನು ಅವಲಂಬಿಸಿದ ಜನರು ಆಡಳಿತ ಹಾಗೂ ಸಾಮಾಜಿಕ ಜೀವನದ ಪ್ರಮುಖ ಅಂಶಗಳಾಗಿದ್ದರೂ, ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದಬಲ್ಲವರಾಗಿದ್ದರೂ, ಅವರು ಒಂದು ಕಡೆ ಸೇರಿ ಸಂಘಟಿತರಾಗಿ ಹೋರಾಟ ನಡೆಸಿದ ನಿದರ್ಶನಗಳು ಚರಿತ್ರೆಯಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ರೈತರು ತಮ್ಮ ಭೂಮಿಯನ್ನು ಹೊಂದಿ ಅದಕ್ಕೆ ಹತ್ತಿರವಾಗಿ ಬದುಕುವ ಅಗತ್ಯವಿದ್ದ ಕಾರಣ ಹಾಗೂ ಒಂದು ಕುಟುಂಬ ಅಥವಾ ವ್ಯಕ್ತಿಗೆ ಸೇರಿದ ಭೂಮಿ ಗಣನೀಯವಾಗಿ ವಿಸ್ತಾರವಾಗಿರುವ ಕಾರಣ ಹಲವಾರು ರೈತರು ಒಂದು ಕಡೆ ಸೇರಿ ಸಂಘಟಿತರಾಗಲು ನೈಸರ್ಗಿಕವಾಗಿಯೇ ಅಡೆತಡೆ ಇರುತ್ತದೆ. ಒಂದು ಗ್ರಾಮ ಎಂದು ಪರಿಗಣಿಸಿದ ಕಡೆ ಆ ಗ್ರಾಮದ ಸುತ್ತಮುತ್ತಲಿನ ಒಂದಿಷ್ಟು ಭೂಮಿಯನ್ನು ಬಳಸಿಕೊಳ್ಳುವ ರೈತರು ಒಂದು ಕಡೆ ವಾಸ ಮಾಡಬಹುದು, ಸಂಘಟಿತರಾಗಬಹುದು. ಬಹಳವೆಂದರೆ ಒಂದಿಷ್ಟು ಗ್ರಾಮಗಳ ರೈತರು ಒಂದು ಕಡೆ ವ್ಯವಸ್ಥಿತವಾಗಿ ಸೇರಬಹುದಾಗಿದೆ.

ರೈತರು ಎಂದರೆ ಸಾಮಾನ್ಯವಾಗಿ ಕೃಷಿಕರು, ಬೇಸಾಯ ಮಾಡುವವರು. ಕೃಷಿಕ ಎಂದರೆ ಒಕ್ಕಲಿಗ, ರೈತ, ಬೇಸಾಯಗಾರ ಎಂಬ ಅರ್ಥವನ್ನು ನಿಘಂಟುಗಳು ನೀಡುತ್ತವೆ. ಕೃಷಿ ಚಟುವಟಿಕೆಗಳಲ್ಲಿ ನಿರತರಾದವರೆಲ್ಲರನ್ನು ರೈತರು ಎಂದು ಗುರುತಿಸುವ ಪ್ರಯತ್ನ ಮಾಡಿದರೆ ಭೂಮಿ ಇಲ್ಲದೆ ಇತರರ ಭೂಮಿಯಲ್ಲಿ ಕೆಲಸ ಮಾಡುವ ಕೂಲಿಕಾರರನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಆರ್ಥಿಕ ಸ್ಥಿತಿ ಮತ್ತು ಭೂಮಿಯ ಮೇಲಿನ ಹಕ್ಕುಗಳ ಆಧಾರದ ಮೇಲೆ ವಿವಿಧ ಹಂತಗಳನ್ನು ಗುರುತಿಸಬಹುದು. ದೊಡ್ಡ ಜಮೀನ್ದಾರರು, ಶ್ರೀಮಂತ ರೈತರು, ಮಧ್ಯಮ ರೈತರು, ಬಡರೈತರು, ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಜನರು ಕೃಷಿ ವ್ಯವಸ್ಥೆಯಲ್ಲಿ ಭಾಗಿಗಳಾಗಿದ್ದರೂ 'ರೈತ' ಎನ್ನುವ ಚೌಕಟ್ಟಿನಿಂದ ಹೊರಗೆ ಉಳಿಯುತ್ತಾರೆ. ಪ್ರತ್ಯಕ್ಷವಾಗಿ ಬೇಸಾಯದಲ್ಲಿ ತೊಡಗಿರುವ ಜನರನ್ನು ರೈತರು ಎಂಬುದಾಗಿ ಕರೆಯಲಾಗಿದೆ.[೧] ಇವರು ಭೂಮಾಲೀಕರ ಹೊಲಗಳಲ್ಲಿ ಬೇಸಾಯ ಮಾಡಿಕೊಂಡಿರುತ್ತಾರೆ ಅಥವಾ ತಾವೇ ಹೊಂದಿರುವ ಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡಿಕೊಂಡಿರುತ್ತಾರೆ. ಇವೆರಡರಲ್ಲೂ ಕೃಷಿ ಮಾಡುವ ರೈತರು ಸಾಕಷ್ಟು ಇದ್ದಾರೆ. ಇವರು ಶ್ರೀಮಂತ ವರ್ಗದ ಮತ್ತು ಮಧ್ಯಮ ವರ್ಗದ ಜನರ ನಿರಂತರ ಶೋಷಣೆಗೆ ಒಳಗಾಗಿರುತ್ತಾರೆ. ರೈತ ಕ್ರಾಂತಿ ಅಥವಾ ಹೋರಾಟ ಈ ವರ್ಗದ ಜನರ ಪ್ರತಿಕ್ರಿಯೆಯಾಗಿದೆ. ಶೋಷಣೆಗೆ ಮಧ್ಯಮ ರೈತರು, ಚಿಕ್ಕ ರೈತರು ಮತ್ತು ಕೃಷಿ ಕೂಲಿಕಾರರು ಎಂಬುದಾಗಿ ಮತ್ತೊಮ್ಮೆ ವರ್ಗೀಕರಣ ಮಾಡಬೇಕಾಗುತ್ತದೆ.[೨] ರೈತನೆಂದರೆ ಯಾರು ಎಂಬ ಪ್ರಶ್ನೆಗೆ ಅನೇಕ ಚರಿತ್ರಕಾರರು ಮತ್ತು ಸಂಘಟನೆಗಳು ತಮ್ಮದೇ ಆದಂತಹ ವಾದಗಳನ್ನು ಮಂಡಿಸಿದ್ದಾರೆ. ಶರದ್‌ಜೋಶಿಯವರ ಮಹಾರಾಷ್ಟ್ರ ಶೇತ್ಕಾರಿ ಸಂಘಟನೆಯ ಪ್ರಕಾರ "ಯಾರು ತನ್ನ ಭೂಮಿಯನ್ನು ಸ್ವತಃ ಉಳುತ್ತಾನೋ ಅವನೇ ರೈತ" ಆಗಿರುತ್ತಾನೆ ಎಂದು ಹೇಳುತ್ತಾ ಹಾಗೆಯೇ ಮುಂದುವರಿದು ತನ್ನ ಅರ್ಥೈಸುವಿಕೆಯನ್ನು ಈ ರೀತಿಯಾಗಿ ವಿವರಿಸುತ್ತಾರೆ. "ಯಾರು ಕೃಷಿಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾರೋ ಅಥವಾ ಕೃಷಿಯಿಂದಲೇ ಬದುಕುತ್ತಿದ್ದಾರೋ ಅವರೂ ರೈತರೇ" ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿತು. ಮುಜಾಫರ್ ಅಸ್ಸಾದಿ ಅವರು ಅರ್ಥೈಸುವಾಗ ದ್ವಂದ್ವಗಳನ್ನು ಉದ್ದೇಶಪೂರ್ವಕವಾಗಿಯೇ ಇಟ್ಟುಕೊಂಡಿದೆ ಎಂದು ವಿಶ್ಲೇಷಿಸುತ್ತಾರೆ.[೩] ಏಕೆಂದರೆ ಇಲ್ಲಿ ಉಳುವವನು,

ಉಸ್ತುವಾರಿ ಮಾಡುವವನು, ಜಮೀನುದಾರಿಕೆ ಮಾಡುವವನು, ಶ್ರೀಮಂತ ರೈತ ಮತ್ತು ಬಡ ರೈತರ ನಡುವೆ ಏನೂ ಅಂತರಗಳಿಲ್ಲವೆಂದು ಹೇಳಿದ್ದಾರೆ. ಮೋಹನ್‌ಕೃಷ್ಣ ರೈ ಅವರು ಚರಿತ್ರೆ ಕಥನದಲ್ಲಿ ರೈತರಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಂತರವನ್ನು ಗುರುತಿಸಿದ್ದಾರೆ.

ರೈತ ಅಥವಾ ರೈತರು ತಮಗೆ ಒದಗಿದ ಸಂಕಷ್ಟಗಳ ಕುರಿತು ದೂರು ನೀಡುವುದು, ತಂಡವಾಗಿ ಬಂದು ಅಹವಾಲು ನೀಡುವುದು, ಪರಿಹಾರ ದೊರೆಯದಿದ್ದರೆ ಪ್ರತಿಭಟನೆ ತೋರುವುದು, ಅದು ಫಲಕಾರಿಯಾಗದಿದ್ದಾಗ ಹೋರಾಟಗಳನ್ನು ನಡೆಸುತ್ತಾ ಸಾಗುವುದು, ಬಂಡಾಯ ಮಾಡುವುದು, ಕೊನೆಗೆ ಗುರಿ ಈಡೇರುವವರಿಗೂ ಹೋರಾಟ ನಡೆಸುತ್ತಾರೆ. ರೈತ ಹೋರಾಟಗಳ ಕೆಲವು ಲಕ್ಷಣಗಳೆಂದರೆ ದೊಡ್ಡ ದೊಡ್ಡ ಸಭೆಗಳು ಗುಂಪುಗಳಲ್ಲಿ ಸಂಚರಿಸುತ್ತಾ ಗಲಭೆ ಎಬ್ಬಿಸುವುದು, ಅರಿವು ಮೂಡಿಸುವುದು ಮುಂತಾದವು. ೨೦ನೇ ಶತಮಾನದಲ್ಲಿ ಕರನಿರಾಕರಣೆಯೂ ಒಂದು ಮುಖ್ಯ ಅಸ್ತ್ರವಾಯಿತು. ರೈತ ಹೋರಾಟಗಳು ಸರ್ಕಾರದ ವಿರುದ್ಧ ಸಶಸ್ತ್ರ ಹೋರಾಟಗಳಾದುದು ಅಪರೂಪ. ಎಲ್ಲ ರೈತರು ಒಟ್ಟು ನಿರ್ಧಾರಕ್ಕೆ ಬದ್ಧರಾಗಿರುವಂತೆ ಮಾಡಲು ಸಾಮಾಜಿಕ ಬಹಿಷ್ಕಾರದ ಬೆದರಿಕೆ ತೋರುತ್ತಿದ್ದುದು ಸಾಮಾನ್ಯವಾಗಿದೆ. ಅಲ್ಲದೆ ಗಾಂಧೀಜಿಯವರ ಅಹಿಂಸೆ, ಉಪವಾಸ, ಸತ್ಯಾಗ್ರಹಗಳನ್ನು ರೈತ ಹೋರಾಟಗಳು ಅಳವಡಿಸಿಕೊಂಡವು.

ರೈತ ಹೋರಾಟಗಳು ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ನೆಲೆಗೊಳ್ಳುವ ಮುಂಚೆಯೂ ನಡೆದಿದ್ದವು. ಕಂದಾಯದ ಹೊರೆ ಹೆಚ್ಚಿಸಲು ರಾಜರು ಪ್ರಯತ್ನ ಮಾಡಿದಾಗ ಪ್ರತಿಭಟನೆ ಏಳುವುದು ಸಹಜವಾಗಿತ್ತು. ರಾಜಕೇಂದ್ರಿತ ವ್ಯವಸ್ಥೆಯಲ್ಲಿ ರೈತ ಹೋರಾಟವು ಮೊದಲಬಾರಿಗೆ ಕ್ರಿ.ಶ.೮ನೇ ಶತಮಾನದ ಮಾವಳಿ ಶಾಸನದಲ್ಲಿ ಕಾಣಿಸಿಕೊಂಡಿತು. ತದನಂತರ ಕ್ರಿ.ಶ.೧೨೨೦ರ ಚಿತ್ರದುರ್ಗ ಜಿಲ್ಲೆ ಶಾಸನವೊಂದರಲ್ಲಿ ಹೊಯ್ಸಳ ವೀರನರಸಿಂಹನ ಕಾಲದಲ್ಲಿ ಬದನಹಾಳು, ಮೊಲಹಾಳು ಮತ್ತು ಕಲ್ಲುಕೆರೆ ಗ್ರಾಮಗಳ ಜಮೀನು ಗಡಿ ವಿಚಾರದ ಸಂದರ್ಭದಲ್ಲಿ ನಡೆದಿರುವುದು ಉಲ್ಲೇಖವಾಗಿದೆ. ಕ್ರಿ.ಶ.೧೨ನೇ ಶತಮಾನದಲ್ಲಿ ಒಕ್ಕಲಿಗ ಮುದ್ದಯ್ಯ ಆ ಕಾಲದಲ್ಲಿಯೇ ಕಂದಾಯ ಹೆಚ್ಚಳದ ಹಿನ್ನೆಲೆಯಲ್ಲಿ ಕರವನ್ನು ನಿರಾಕರಿಸಿದ ಆ ಶತಮಾನದ ಮೊದಲಿಗನಾಗಿದ್ದಾನೆ.

ಈ ಮೇಲಿನ ಎರಡು ಉಲ್ಲೇಖಗಳು ಆಧುನಿಕ ಪರಿಭಾಷೆಯಲ್ಲಿ ರೈತ ಪ್ರತಿಭಟನೆ ಎನಿಸಿಕೊಂಡಿವೆ. ರಾಜಪ್ರಭುತ್ವ ವ್ಯವಸ್ಥೆಯಲ್ಲಿನ ರೈತ ಹೋರಾಟವು ಆಳುವ ದೊರೆಯನ್ನು ದೈವಕ್ಕೆ ಹೋಲಿಸಿ ಪರಿಹಾರ ಕೇಳುವಂತಹ ಹೋರಾಟಗಳಾಗಿದ್ದವು. ಬ್ರಿಟಿಷರ ಕಾಲಮಾನದ ೧೭ನೇ ಶತಮಾನದಲ್ಲಿ ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಲಿನ ಜನ, ಚಿಕ್ಕ ದೇವರಾಜ ಒಡೆಯರು ವಿಧಿಸಿದ ಹತ್ತೊಂಬತ್ತು ವಿವಿಧ ಸುಂಕಗಳ ವಿರುದ್ಧ ಹೋರಾಡಿದರು. ನೂರಾರು ಮಂದಿ ಜಂಗಮರು ರೈತರ ಪರವಾಗಿ ನಿಂತು ಪ್ರಾಣ ತೆತ್ತರು.[೪] ಈ ಕಾಲದ ರೈತ ಹೋರಾಟಗಳಲ್ಲಿ ಮೂರು ಮುಖ್ಯ ಮಾದರಿಗಳನ್ನು ಗಮನಿಸಬಹುದಾಗಿದೆ. ರೈತನೇ ಹೊಲದ ಒಡೆಯನಾಗಿದ್ದ ರೈತವಾರಿ ಪ್ರದೇಶಗಳಲ್ಲಿ ಮಿತಿಮೀರಿದ ಕಂದಾಯದ ಹೊರೆ, ನೀರಿನ ತೆರಿಗೆಯ ಏರಿಕೆ, ಅಭಾವ ಕಾಲದಲ್ಲಿ ಕಂದಾಯದ ಕಡ್ಡಾಯ ವಸೂಲಿ, ಇವು ವಸಾಹತುಶಾಹಿ ಸರ್ಕಾರದ ಕೃಷಿ ನೀತಿಯ ವಿರುದ್ಧ ರೈತ ಹೋರಾಟಗಳು ನಡೆಯುವುದಕ್ಕೆ ಕಾರಣವಾದವು.

ಭಾರತದ ರೈತ ಹೋರಾಟಗಳ ಬಗೆಗಿನ ಅಧ್ಯಯನ ಇತ್ತೀಚಿನ ಬೆಳವಣಿಗೆಯಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ೧೯೭೦ರ ದಶಕದ ಮಧ್ಯ ಭಾಗದಲ್ಲಿ ರೈತ ಹೋರಾಟಕ್ಕೆ ಕಾರಣವನ್ನು ಪ್ರಸ್ತಾಪಿಸುತ್ತಾ ಬ್ಯಾರಿಂಗಟನ್ ಮೂರ್ ಅವರು ತಮ್ಮ "ಸೋಷಿಯಲ್ ಆರಿಜಿನ್ಸ್ ಆಫ್ ಡಿಕ್ಟೇಟರ್‌ಶಿಫ್ ಅಂಡ್ ಡೆಮಾಕ್ರಸಿ" ಎಂಬ ಕೃತಿಯಲ್ಲಿ ಭಾರತೀಯ ರೈತರು ಸಾಂಪ್ರದಾಯಿಕವಾಗಿ ಸಾಧು ಮತ್ತು ಜಡ ಸ್ವಭಾವದವರು ಎಂದು ಹೇಳಿದ್ದಾರೆ. ಆದರೆ ಭಾರತೀಯ ರೈತರ ಈ ರೀತಿಯ ಸ್ವಭಾವದ ಪ್ರಸ್ತಾಪವನ್ನು ಕ್ಯಾತ್ಲೀನ್‌ಗುಹಾ, ಎ.ಆರ್. ದೇಸಾಯಿ, ಡಿ.ಎಸ್. ಧನಗರೆ ಮತ್ತು ರಣಜಿತ್‌ಗುಹಾ ಅವರು ಕ್ರಮವಾಗಿ ತಮ್ಮ ಗ್ರಂಥ ಮತ್ತು ಲೇಖನಗಳಾದ ''ಇಂಡಿಯನ್ ಫೆಸೆಂಟ್ ಆಫ್ ರೈಸಿಂಗ್, ಪೆಸೆಂಟ್ ಸ್ಟ್ರಗಲ್ ಇನ್ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸೆರ್‌ಜೆನ್ಸಿ ಇನ್ ಇಂಡಿಯಾ''ದಲ್ಲಿ ಆಕ್ಷೇಪಿಸಿದ್ದಾರೆ. ಚರಿತ್ರಕಾರರು ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಮತ್ತು ಬ್ರಿಟಿಷರ ಆಡಳಿತಾವಧಿಯಲ್ಲಿ ನಡೆದ ರೈತ ಹೋರಾಟಗಳನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ ಎಂದು ಬ್ಯಾರಿಂಗ್‌ಟನ್ ಮೂರ್ ಅವರ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ. ಧನಗರೆಯವರು, "ರೈತ ಹೋರಾಟಗಳು ಗ್ರಾಮೀಣ, ಪ್ರಾಂತೀಯ ಹಾಗೂ ವಸಾಹತುಶಾಹಿ ರಾಜ್ಯ ಮತ್ತು ರಾಜಕೀಯ ಮತ್ತು ಆರ್ಥಿಕತೆಯಿಂದ ಬೆಳೆದಿದ್ದವು. ನಿಷ್ಕ್ರಿಯತೆ ಅಥವಾ ಗ್ರಾಮೀಣ ಚೌಕಟ್ಟು ಅವುಗಳಿಗೆ ಅಡ್ಡಿ ಬರಲಿಲ್ಲ. ಭಾರತದ ರೈತ ವರ್ಗವು ಪ್ರತಿಭಟನೆಯ ಆಂತರಿಕ ಗುಣವನ್ನು ಹೊಂದಿದೆ'' ಎಂದಿದ್ದಾರೆ. ಇರ್ಫಾನ್ ಹಬೀಬ್ ತಮ್ಮ ಕೃತಿಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಭಾರತದ ರೈತ ವರ್ಗದ ವರ್ಗಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರ ಕುರಿತು ಅನುಮಾನಪಡುತ್ತಾರೆ.[೫] ಅವರ ಪ್ರಕಾರ ''ಭಾರತದ ರೈತರಿಗೆ ನಿರ್ದಿಷ್ಟವಾದ ವರ್ಗಪ್ರಜ್ಞೆಯಿಲ್ಲ. ಹಾಗಾಗಿ ರೈತ ಹೋರಾಟವು ವಿವಿಧ ರೂಪಗಳನ್ನು ಪಡೆಯಬಹುದು. ಅದು ರಾಜ್ಯದ ಕಂದಾಯ ನೀತಿಯ ವಿರುದ್ಧ ಒಂದಾಗಿ ಹೋರಾಡಬಹುದು. ಅದು ಜಾತಿಯ ರೂಪದಲ್ಲಿ ಹೋರಾಡಬಹುದು. ಒಂದು ಗುಂಪಾಗಿ ಕೂಡ ರೈತರು ಒಟ್ಟಾಗಬಹುದು.'' ಕ್ಯಾಥಲಿನ್ ಗಫ್ ಅವರು ಇದಕ್ಕೆ ಪೂರಕವಾಗಿ ಭಾರತೀಯ ರೈತ ಹೋರಾಟಗಳನ್ನು ಐದು ವಿಧಗಳನ್ನಾಗಿ ವಿಂಗಡಿಸುತ್ತಾರೆ.[೬] ಅವೆಂದರೆ ೧. ಸ್ಥಾನಿಕ, ೨. ಧಾರ್ಮಿಕ, ೩. ದರೋಡೆ, ೪. ಸಾಮಾಜಿಕ, ೫. ಭಯೋತ್ಪಾದಕ. ಧನಗರೆಯವರು ಇನ್ನೂ ಒಂದು ವಿಧವನ್ನು ಸೇರಿಸುತ್ತಾರೆ. ಅದು ಸ್ವಯಂತಂತ್ರ ಸುಧಾರಣಾವಾದಿ ರೈತ ಹೋರಾಟ. ಈ ಹೋರಾಟ ಗಾಂಧಿ ತತ್ವದ ಎಲ್ಲ ಅಂಶಗಳನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಸುಮಿತ್ ಸರ್ಕಾರ್ ಅವರು ರೈತರ ವರ್ಗಪ್ರಜ್ಞೆ ಅಂತಿಮವಾಗಿ ಕೋಮುವಾದದಲ್ಲಿ ಕೊನೆಗೊಳ್ಳುವಂತೆ ಮಾಡುವ ಪ್ರಕ್ರಿಯೆಗಳ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ಇದಕ್ಕೆ ಪೂರಕವಾಗಿ ರಣಜಿತ್‌ಗುಹಾ ಅವರು ಮತ ಅಥವಾ ಕುಲದ ಕಲ್ಪನೆ ರೈತ ಹೋರಾಟಗಳಲ್ಲಿ ಸರ್ವೇ ಸಾಮಾನ್ಯ ಅಥವಾ ಪ್ರಮುಖ ಅಂಶ ಎಂಬ ವಾದವನ್ನು ಎತ್ತಿ ಹಿಡಿಯುತ್ತಾರೆ.[೭]

೧೯೭೦ರ ದಶಕದ ನಂತರದ ಹೋರಾಟಗಳನ್ನು ನವರೈತ ಹೋರಾಟಗಳೆಂದು ಕರೆಯಲಾಗಿದೆ. ಇಲ್ಲಿ ಮುಖ್ಯವಾಗಿ ತುಲನಾತ್ಮಕ ಬೆಲೆಗಳ ವಿರುದ್ಧ ನಡೆದ ಹೋರಾಟಗಳಾಗಿವೆ. ಈ ಹೋರಾಟದ ಉಗಮವನ್ನು ಕುರಿತು ಟಾಮ್‌ಬ್ರಾಸ್ ಅವರು ತಮ್ಮ "ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ಸ್" ಎಂಬ ಕೃತಿಯಲ್ಲಿ ಹಸಿರು ಕ್ರಾಂತಿಯ ಪ್ರದೇಶಗಳಲ್ಲಿ ನಡೆದಂತಹ ಹೋರಾಟಗಳನ್ನು ಗುರುತಿಸಿದ್ದಾರೆ. ಅವರು ಪ್ರಾಚೀನ ಮತ್ತು ನವರೈತ

ಹೋರಾಟಗಳನ್ನು ಪ್ರತ್ಯೇಕಿಸಿ ನೋಡಿದ್ದಾರೆ. ಹಿಂದಿನ ರೈತ ಹೋರಾಟವು ನಿರ್ದಿಷ್ಟವಾಗಿ ಭೂಮಾಲೀಕರ ವಿರುದ್ಧವಾಗಿತ್ತು. ೧೯೭೦ರ ದಶಕದಿಂದ ಇತ್ತೀಚೆಗೆ ಎಲ್ಲ ಬೆಳೆಗಳನ್ನು ಬೆಳೆಯುವ ರೈತರು ಯಾವುದೇ ವರ್ಗವನ್ನು ತಮ್ಮೊಳಗೆ ಇಟ್ಟುಕೊಳ್ಳದೇ ಒಂದಾಗಿ ರಾಜ್ಯಕ್ಕೆ ಬೆಂಬಲ ಬೆಲೆಗಾಗಿ ಬೇಡಿಕೆ ಸಲ್ಲಿಸಿದವು. ಆದರೆ ನವ ಹೋರಾಟಗಳ ಕೆಲವು ಪ್ರಮುಖ ಬೇಡಿಕೆಗಳೆಂದರೆ, ತಾವು ಬೆಳೆದ ಧಾನ್ಯಗಳಿಗೆ ಬೆಂಬಲ ಬೆಲೆ ನಿಗದಿ ಮಾಡುವುದು. ಭೂಮಿ ರೈತ ಹೋರಾಟಗಳ ಕಾರ್ಯಸೂಚಿಯಲ್ಲಿದ್ದರೂ ಹಿಂದಿನ ರೈತ ಹೋರಾಟಗಳ ಜಮೀನ್ದಾರಿ ಪದ್ಧತಿಯ ಹೋರಾಟದಂತಲ್ಲ. ಅದರ ಬದಲಾಗಿ ಭೂಮಿಯನ್ನು ಉತ್ತಮಪಡಿಸಿ ಆ ಮೂಲಕ ಗ್ರಾಮೀಣ ಬಡತನವನ್ನು ನಿರ್ಮೂಲನೆ ಮಾಡಲು ಹೋರಾಟ, ಕೃಷಿಗೆ ಹೆಚ್ಚಿನ ಸಹಾಯವನ್ನು ನೀಡಬೇಕು. ನವರೈತ ಹೋರಾಟ ಕೃಷಿ ಕೂಲಿ ಕಾರ್ಮಿಕರ ಮತ್ತು ಮತ್ತು ಬಡ ಕೃಷಿಕರನ್ನು ತಮ್ಮ ಹೋರಾಟಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಬೆಂಬಲಿಗರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಹಾಗೆಯೇ ಅವರು ಮುಂದುವರಿದು ರೈತ ಹೋರಾಟಗಳಲ್ಲಿ ಚರ್ಚೆಗೊಳಗಾದ ಒಂದು ಪ್ರಮುಖ ವಿಷಯವೆಂದರೆ ರಾಜಕೀಯ ಸೈದ್ಧಾಂತಿಕ ಸಂಬಂಧದಿಂದ ರೂಪಗೊಂಡ ನೈಸರ್ಗಿಕ ಮಹಿಳಾವಾದ ಎಂದಿದ್ದಾರೆ.

ರುಡಾಲ್ಫರು ತಮ್ಮ "ಮಾಡರ್ನಿಟಿ ಆಫ್ ಟ್ರೆಡಿಷನ್, ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ" ಎಂಬ ಕೃತಿಯಲ್ಲಿ ೧೯೬೦ರ ದಶಕದ ನಂತರ ರೈತ ಹೋರಾಟಗಳನ್ನು ದೊಡ್ಡ ಹಿಡುವಳಿದಾರರ ಹೋರಾಟ ಎಂದು ಬಣ್ಣಿಸಿ, ತಮ್ಮ ಬೆಳೆಗಳಿಗೆ ಬೆಂಬಲ ಬೆಲೆಯ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ ಎಂದಿದ್ದಾರೆ.[೯] ಆದರೆ ಇವರ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ೧೯೬೦ರ ನಂತರ ದೊಡ್ಡ ದೊಡ್ಡ ಭೂ ಹಿಡುವಳಿಗಳು ಚಿಕ್ಕ ಚಿಕ್ಕ ಹಿಡುವಳಿಗಳಾಗಿ ಛಿದ್ರಗೊಂಡಿವೆ. ಅಲ್ಲದೇ ಸರ್ಕಾರಗಳ ಭೂ ಸುಧಾರಣೆ ಕಾಯ್ದೆಗಳಿಂದಾಗಿ ಇಂದು ದೊಡ್ಡ ದೊಡ್ಡ ಹಿಡುವಳಿಗಳು ಕಡಿಮೆಯಾಗಿವೆ.

ಧನಗರೆಯವರು ತಮ್ಮ ಕೃತಿಯಾದ 'ಪೆಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ'ದಲ್ಲಿ ಭಾರತದ ಹಲವಾರು ಪ್ರದೇಶಗಳಲ್ಲಿ ನಡೆದ ರೈತ ಹೋರಾಟಗಳನ್ನು ವಿಮರ್ಶಿಸಿದ್ದಾರೆ ಹಾಗೂ ಭಾರತದ ರೈತ ಸಮಸ್ಯೆಗಳು ಎಲ್ಲ ಪ್ರದೇಶಗಳಲ್ಲಿಯೂ ಒಂದೇ ತೆರನಾಗಿವೆ ಎಂಬ ಅಭಿಪ್ರಾಯ ನೀಡಿದ್ದಾರೆ. ಹಾಗೆಯೇ ಅವರ ವಿಚಾರಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಭಿನ್ನವಾಗಿವೆ. ಕೆಲವು ರೈತ ದಂಗೆಗಳು ಮತ್ತು ಹೋರಾಟದ ವಿಧಾನಗಳು ಇಂದಿಗೂ ಐತಿಹಾಸಿಕವಾಗಿ ಗಾಢವಾದ ಪರಿಣಾಮ ಬೀರಿವೆ ಎಂದು ತಿಳಿಸಿದ್ದಾರೆ.

ರಣಜಿತ್‌ಗುಹಾ ಅವರು ತಮ್ಮ "ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸರ್‌ಜೆನ್ಸಿ ಇನ್ ಕೋಲೋನಿಯಲ್ ಇಂಡಿಯಾ" ಎಂಬ ಕೃತಿಯಲ್ಲಿ ''ಜನತಾ ರಾಜಕೀಯ ಒಂದು ಸ್ವಾಯತ್ತತಾ ಕ್ಷೇತ್ರವನ್ನು ಹೊಂದಿದೆ ಎಂದು ವಾದಿಸುತ್ತಾ ಇದು ಯಾವುದೇ ಒಂದು ಹಿನ್ನೆಲೆಯಿಂದ ಹುಟ್ಟಿದ್ದು ಅಲ್ಲ ಹಾಗೂ ಯಾವುದೇ ಆಧುನಿಕತೆಯ ಮೇಲೆ ಅವಲಂಬಿತವಾದುದು ಅಲ್ಲ" ಎಂದಿದ್ದಾರೆ.

ಪಾಹತುಶಾಹಿ ಮತ್ತು ಮೈಸೂರು ಸಂಸ್ಥಾನದ ವಿರುದ್ಧ ಕಂಡು ಬಂದ ರೈತರ ಪ್ರತಿಭಟನೆಗಳು, ಹೋರಾಟಗಳು ಕರ್ನಾಟಕದಾದ್ಯಂತ ಕಂಡುಬಂದಿದೆ. ಇದಕ್ಕೆ ದಾವಣಗೆರೆ ಪ್ರದೇಶವು ಹೊರತಾಗಿರಲಿಲ್ಲ. ಈ ಪ್ರದೇಶದಲ್ಲಿ

ಮೈಸೂರು ಸಂಸ್ಥಾನ ಮತ್ತು ವಸಾಹತು ಬ್ರಿಟಿಷ್ ಸರ್ಕಾರದ ವಿರುದ್ಧ ಹಾಗೂ ಸ್ವಾತಂತ್ರ್ಯ ಪಡೆದ ನಂತರ ಸ್ಥಾಪನೆಗೊಂಡ ಪ್ರಜಾಪ್ರಭುತ್ವ ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ ರೈತರು ಸಂಘಟನೆಗೊಂಡು ಹೋರಾಟ ನಡೆಸಿದ್ದಾರೆ. ಈ ಹೋರಾಟಗಳಲ್ಲಿ ಕೆಳವರ್ಗದ ರೈತರು, ಕಾರ್ಮಿಕರು ಭಾಗವಹಿಸಿ ಹೋರಾಟ ಚುರುಕುಗೊಳ್ಳುವುದಕ್ಕೆ ಕಾರಣಕರ್ತರಾಗಿದ್ದಾರೆ. ದಾವಣಗೆರೆ ಪ್ರದೇಶದಲ್ಲಿ ಹೋರಾಟವು ಪ್ರತಿಭಟನೆ, ಮುಷ್ಕರ, ಸತ್ಯಾಗ್ರಹ, ಬಂದ್, ಪಾದಯಾತ್ರೆ, ಅಸಹಕಾರ ಸ್ವರೂಪದ ಮೂಲಕ ನಡೆಯುತ್ತಿದ್ದು, ಇವು ಮುಖ್ಯವಾಗಿ ಆರ್ಥಿಕ ಹಿನ್ನೆಲೆಯಿಂದ ಕೂಡಿವೆ.

ಚರಿತ್ರೆ ರಚನಾಶಾಸ್ತ್ರದ ಹಿನ್ನೆಲೆಯಿಂದ ನೋಡುವಾಗ ಒಪ್ಪಿತವಾಗಿರುವ ಚರಿತ್ರೆಯಲ್ಲಿ ಭಾರತದ ಬಹುಸಂಖ್ಯಾತ ರೈತರ, ಜನಸಾಮಾನ್ಯರ ಸಂವೇದನೆ ಮತ್ತು ಪ್ರತಿಭಟನೆಗಳು ದಾಖಲಾಗಿಲ್ಲ. ಆದುದರಿಂದ ೧೯೮೦ರ ದಶಕದ ನಂತರ ತಳಮಟ್ಟದಿಂದ ಚರಿತ್ರೆಯನ್ನು ನೋಡುವ ಕ್ರಮ ಬೆಳವಣಿಗೆಯಾಗಿದ್ದು, ಇದರಲ್ಲಿ ಸಬಾಲ್ಟರ್ನ್ ಚರಿತ್ರೆ ಕ್ರಮ ಒಂದಾಗಿದೆ. "ಸಬಾಲ್ಟರ್ನ್' ಎನ್ನುವ ಪದವು ಯುರೋಪಿನ ಮಧ್ಯಕಾಲೀನೋತ್ತರ ಸಂದರ್ಭದಲ್ಲಿ ರೈತರನ್ನು ಗುರುತಿಸಿತು. ರೈತ ಮೂಲವನ್ನು ಹೊಂದಿದ್ದ ಕೆಳವರ್ಗದ ಸೈನಿಕರನ್ನು ಸಬಾಲ್ಟರ್ನ್ ಎಂದು ಕರೆಯಲಾಗುತ್ತಿತ್ತು. ಆ್ಯಂಟೋನಿಯೊ ಗ್ರಾಂಸಿಯು ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಸಬಾಲ್ಟರ್ನ್ ಐಡೆಂಟಿಟಿಯನ್ನು ಪ್ರಚಾರಪಡಿಸಿದನು. ಭಾರತದ ಮಟ್ಟಿಗೆ ಚರಿತ್ರೆಕಾರನಾದ ರಣಜಿತಗುಹಾ ಅವರು ೧೯೭೦ರ ದಶಕದಲ್ಲಿ ಸಬಾಲ್ಟರ್ನ್ ಸ್ಟಡೀಸ್ ಸಂಪುಟಗಳನ್ನು ಹೊರತರುವುದರ ಮೂಲಕ ಅಲಕ್ಷಿತ ವರ್ಗದ ಕಡೆಗೆ ಹೆಚ್ಚಿನ ಗಮನ ನೀಡಿದನು.

ಕರ್ನಾಟಕ ಚರಿತ್ರೆ ಬರವಣಿಗೆಯು ಹೆಚ್ಚು ಕಡಿಮೆ ರಾಷ್ಟ್ರೀಯವಾದಿ ಮತ್ತು ಸಾಮ್ರಾಜ್ಯಶಾಹಿ ಪಂಥಗಳ ವಾದ-ಪ್ರತಿವಾದಗಳಿಗೆ ಸೀಮಿತವಾಗಿದ್ದು, ವೈಭವೀಕೃತ ರಾಜಕೀಯ ಕೇಂದ್ರೀಕೃತ, ಜಾತಿಪ್ರಧಾನ ಬರವಣಿಗೆಗಳಿಗಷ್ಟೇ ಸೀಮಿತಗೊಂಡಿದೆ. ಮಾರ್ಕ್ಸ್‌ವಾದಿ ಮತ್ತು ಸಬಾಲ್ಟರ್ನ್ ಹಿನ್ನೆಲೆಯಲ್ಲಿ ರಚನೆಗೊಂಡಿರುವ ಭಾರತದ ರೈತ ಹೋರಾಟಗಳು ಹಾಗೂ ಕರ್ನಾಟಕದ ರೈತ ಹೋರಾಟಗಳು ಕುರಿತ ಕೃತಿಗಳಲ್ಲಿ ಸ್ಥಳೀಯ ರೈತ ಹೋರಾಟಗಳ ಕುರಿತು ಅಲ್ಲೊಂದು ಇಲ್ಲೊಂದು ವಿವರಗಳಷ್ಟೇ ಸಿಗುತ್ತವೆ. ಟಾಮ್‌ಬ್ರಾಸ್ ಅವರ 'ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ ಇನ್ ಇಂಡಿಯಾ'[೯] ರಣಜಿತ್‌ಗುಹಾ ಅವರ ''ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸರ್‌ಜೆನ್ಸಿ ಇನ್ ಕೊಲೋನಿಯಲ್ ಇಂಡಿಯಾ''[೧೦] ಧನಗರೆಯವರನ ಪೆಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ''.[೧೧]

ರುಡಾಲ್ಫ್ ಅವರ "ಮಾಡರ್ನಿಟಿ ಆಫ್ ಟ್ರೆಡಿಷನ್, ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ''[೧೨] ಮುಜಾಫರ್ ಅಸ್ಸಾದಿಯವರ ''ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ'', ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳು. ಕರ್ನಾಟಕದಲ್ಲಿ ಅದರಲ್ಲೂ ದಾವಣಗೆರೆ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದ ರೈತ ಹೋರಾಟದ ಕುರಿತು ಮಾಹಿತಿ ನೀಡುವ ಕೆಲವೇ ಕೃತಿಗಳೆಂದರೆ ತಂಬಂಡ ವಿಜಯ್ ಪೂಣಚ್ಚ ಅವರ ''ರೈತ ಚಳುವಳಿಗಳು''[೧೩] ಕುಮಾರ್. ಕೆ.ಎಂ. ಅವರ "ಕರ್ನಾಟಕದಲ್ಲಿನ

ರೈತ ಚಳುವಳಿ'',[೧೪] ಎಂ.ಜಿ. ನಾಗರಾಜ್ ಅವರ ''ಕರ್ನಾಟಕ ರೈತ ಚಳುವಳಿ-ಸತ್ಯಾಗ್ರಹಗಳು', ಸಂ. ೧.೨. ಮತ್ತು ೩,[೧೫] ಎಂ.ವಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ ಅವರ "ಚಂದ್ರವಳ್ಳಿ"[೧೬] ಎಸ್. ಚಂದ್ರಶೇಖರ ಅವರ ''ಕರ್ನಾಟಕ ಚರಿತ್ರೆ'' ಸಂಪುಟ-೭,[೧೭] ಟಿ. ಗಿರಿಜ ಅವರ "ದಾವಣಗೆರೆ ಇದು ನಮ್ಮ ಜಿಲ್ಲೆ"[೧೮] ಎಂ.ಜಿ. ಈಶ್ವರಪ್ಪ ಅವರ "ಶತಮಾನದ ದಾವಣಗೆರೆ'',[೧೯] ಎನ್.ಪಿ. ಶಂಕರನಾರಾಯಣರಾವ್ ಅವರ "ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,"[೨೦] ಎಚ್.ವಿ. ನಾಗೇಶ್, ಎ.ಇ. ಪುನೀತ್ ಅವರ "ಭಾರತದಲ್ಲಿ ರೈತ ಹೋರಾಟಗಳು"[೨೧], ಕೆ. ಮೋಹನ್‌ಕೃಷ್ಣ ರೈ ಅವರ ''ವಸಾಹತುಶಾಹಿ ಮತ್ತು ನಗರೀಕರಣ'',[೨೨] ಮುಂತಾದವು ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳು. ಈ ಕೃತಿಗಳ ಜೊತೆಗೆ ಇನ್ನೂ ಹಲವಾರು ಆಕರಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅವುಗಳೆಂದರೆ ಮೌಖಿಕ ಆಕರಗಳು, ನೇರ ಸಂದರ್ಶನ ಹಾಗೂ ಪತ್ರಿಕೆಗಳು ಇವುಗಳ ಮೂಲಕ ಈ ವಿಷಯಕ್ಕೆ ಸಂಬಂಧಪಟ್ಟ ಹಲವಾರು ರೀತಿಯ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ದಾವಣಗೆರೆ ಪ್ರದೇಶದಾದ್ಯಂತ ಕ್ಷೇತ್ರಕಾರ್ಯ ನಡೆಸಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಾಧ್ಯವಾದಷ್ಟು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇವುಗಳೆಲ್ಲದರ ಆಧಾರದ ಮೇಲೆ ದಾವಣಗೆರೆ ಪ್ರದೇಶದ ರೈತ ಹೋರಾಟಗಳ ಕುರಿತು ಅಧ್ಯಯನ ನಡೆಸಲಾಗಿದೆ.

೧.೨. ಅಧ್ಯಯನದ ಉದ್ದೇಶ

ಒಂದು ಕಾಲದಲ್ಲಿ ಹತ್ತಿಗಿರಣಿ ಕೈಗಾರಿಕೆಗಳ ಅಭಿವೃದ್ಧಿಯಿಂದಾಗಿ ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂದು ಗುರುತಿಸಿಕೊಂಡಿದ್ದ ದಾವಣಗೆರೆ ಪ್ರದೇಶ ಇಂದು ರೈತ ಹೋರಾಟಗಳ ಮೂಲಕ ರಾಜ್ಯದ ಗಮನ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ದಾವಣಗೆರೆ ಪ್ರದೇಶದ ರೈತ ಹೋರಾಟಗಳ ಬಗ್ಗೆ ಪತ್ರಿಕೆಗಳ ವರದಿಗಳನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ಸಂಶೋಧನಾ ಗ್ರಂಥಗಳಾಗಲಿ, ಎಂ.ಫಿಲ್. ನಿಬಂಧಗಳಾಗಲಿ, ಪಿಎಚ್.ಡಿ. ಮಹಾಪ್ರಬಂಧಗಳಾಗಲಿ ರಚನೆಯಾಗಿಲ್ಲ. ಹೀಗಾಗಿ ಇದನ್ನು ಅಭ್ಯಸಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಈ ಪ್ರದೇಶದ ಕೃಷಿ ಕ್ಷೇತ್ರದಲ್ಲಾದ ಬದಲಾವಣೆ, ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪಾತ್ರ, ಪ್ರಜಾಪ್ರಭುತ್ವ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ನಡೆದ ಹೋರಾಟಗಳನ್ನು ವಿವರಿಸುವುದರ ಜೊತೆಗೆ ರೈತ ಸಂಘಟನೆಗಳು ಯಾವ ರೀತಿ ರೈತರನ್ನು ಸಂಘಟನೆ ಮಾಡಿದವು ಎಂಬುದನ್ನು ತಿಳಿಸುವ ಉದ್ದೇಶ ಹೊಂದಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

'ದಾವಣಗೆರೆ ಪ್ರದೇಶದ ರೈತ ಹೋರಾಟಗಳು' ಎಂಬ ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಗೆ ಒಳಪಟ್ಟಿದೆ. ದಾವಣಗೆರೆ ಜಿಲ್ಲೆಯಾಗುವ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಒಂಬತ್ತು ತಾಲ್ಲೂಕಿನಲ್ಲಿ ಒಂದಾಗಿತ್ತು. ೧೯೯೭ ಆಗಸ್ಟ್ ೧೫ರ ತರುವಾಯ ದಾವಣಗೆರೆ ಜಿಲ್ಲೆಯು ಆರು ತಾಲ್ಲೂಕುಗಳನ್ನೊಳಗೊಂಡ ಜಿಲ್ಲಾ ಕೇಂದ್ರವಾಗಿದೆ. ಚಿತ್ರದುರ್ಗ ವ್ಯಾಪ್ತಿಯಲ್ಲಿದ್ದ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಹಾಗೂ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಮತ್ತು ಹೊನ್ನಾಳಿ

ತಾಲ್ಲೂಕುಗಳನ್ನೊಳಗೊಂಡಿದೆ. ವಸಾಹತು ಕಾಲಘಟ್ಟದ ನಗರ ದಂಗೆಯಿಂದ ಪ್ರಸ್ತುತ ಕಾಲಘಟ್ಟದವರೆಗಿನ ರೈತ ಹೋರಾಟದ ಸ್ವರೂಪ ಮತ್ತು ವಿವಿಧ ಹಂತಗಳನ್ನು ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಆರ್ಥಿಕ ಚರಿತ್ರೆ ಕ್ಷೇತ್ರಕ್ಕೆ ಸಂಬಂಧಿಸಿದೆ. ದಾವಣಗೆರೆ ಪ್ರದೇಶದ ರೈತ ಹೋರಾಟಗಳು, ರೈತರ ಸ್ಥಿತಿಗತಿ ತಿಳಿಯುವ, ಚರ್ಚಿಸುವ ವಿಶ್ಲೇಷಿಸುವ ಒಂದು ಸ್ಥೂಲ ಅಧ್ಯಯನದ ಉದ್ದೇಶವಾಗಿದೆ. ಈ ಅಧ್ಯಯನಕ್ಕೆ ಚರಿತ್ರೆಯ ವಿಧಿ-ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಮಾಹಿತಿಯ ಸಂಗ್ರಹ-ಬಾಹ್ಯ ವಿಮರ್ಶೆ, ಆಂತರಿಕ ವಿಮರ್ಶೆ, ವಿಶ್ಲೇಷಣೆಯ ಕಾರ್ಯ ಸೂತ್ರಗಳನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಪ್ರಧಾನವಾಗಿ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಕರ್ನಾಟಕ ಸರ್ಕಾರದ ಗೆಜೆಟಿಯರ್‌ಗಳು, ರೈತರ ಸಂದರ್ಶನಗಳು, ದಿನಪತ್ರಿಕೆಯ ವರದಿಗಳು, ನಿಯತಕಾಲಿಕೆಗಳು, ಸ್ಮರಣ ಸಂಚಿಕೆಗಳು, ಪತ್ರಾಗಾರದ ವರದಿಗಳು, ಬಿಡಿ ಲೇಖನಗಳು ಮೊದಲಾದವುಗಳನ್ನು ಬಳಸಿಕೊಳ್ಳಲಾಗಿದೆ.

ದಾವಣಗೆರೆ ಪ್ರದೇಶದ ರೈತ ಸಂಘಟನೆಗಳು ಒಳಗೊಂಡಂತೆ ಸರ್ಕಾರಿ ಹಾಗೂ ಖಾಸಗಿ ಮೂಲದ ಗ್ರಂಥಾಲಯಗಳು, ಹೋರಾಟದ ಬದುಕನ್ನು ಹಂಚಿಕೊಂಡ ಒಡನಾಡಿಗಳು, ರೈತರ ಸಂದರ್ಶನದ ಮೂಲಕ ಸಂಗ್ರಹಿಸಿಕೊಂಡ ವಿವರಗಳನ್ನು ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಳಾದ ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಮುಂತಾದ ಅಂತರ ಶಿಸ್ತುಗಳನ್ನು ಬಳಸಿಕೊಂಡು ಸಂಶೋಧನಾ ವಿಧಿ-ವಿಧಾನಗಳ ಮೂಲಕ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

೧.೫. ಅಧ್ಯಯನದ ಸ್ವರೂಪ

ದಾವಣಗೆರೆ ಪ್ರದೇಶದ ರೈತ ಹೋರಾಟಗಳು ಎಂಬ ಸಂಶೋಧನ ವಿಷಯವನ್ನು ಏಳು ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ವಿವಿಧ ಆಕರಗಳನ್ನು ಪರಿಚಯಿಸಲಾಗಿದೆ. ಎರಡನೇ ಅಧ್ಯಾಯದಲ್ಲಿ ದಾವಣಗೆರೆ ಪ್ರದೇಶದ ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಕೃಷಿ ಕ್ಷೇತ್ರದಲ್ಲಾದ ಪಲ್ಲಟಗಳ ಅಂದರೆ ಬ್ರಿಟಿಷ್, ಮೈಸೂರು ಸಂಸ್ಥಾನದ ಮತ್ತು ಸ್ವಾತಂತ್ರ್ಯ ಭಾರತ ಸರ್ಕಾರದ ಭೂಹಿಡುವಳಿ ವ್ಯವಸ್ಥೆ ವಸಾಹತು ಕೃಷಿ ನೀತಿಯಿಂದಾಗಿ ಕೃಷಿಯ ವಾಣಿಜ್ಯೀಕರಣ, ಕೈಗಾರಿಕಾ ಅರ್ಥ ವ್ಯವಸ್ಥೆಯನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಉಗಮವಾದ ರಾಷ್ಟ್ರೀಯ ಹೋರಾಟದಲ್ಲಿ ರೈತರು ಭಾಗವಹಿಸುವುದರ ಮುಖಾಂತರ ರಾಷ್ಟ್ರೀಯ ಹೋರಾಟದ ಹಂತಗಳಾದ ಸ್ವದೇಶಿ ಚಳುವಳಿ, ಕಾಯಿದೆ ಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಗಾಂಧಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ರೈತರ ಅಭಿವ್ಯಕ್ತತೆಯನ್ನು ಗುರುತಿಸಲಾಗಿದೆ. ಐದನೇ ಅಧ್ಯಾಯದಲ್ಲಿ ಸ್ವಾತಂತ್ರ್ಯ ನಂತರದಲ್ಲಿ ನಾಡಿನ ಬೇರೆ ಬೇರೆ

ಭಾಗಗಳಲ್ಲಿ ನಡೆದ ರೈತ ಹೋರಾಟದಲ್ಲಿ ಈ ಪ್ರದೇಶದ ರೈತರು ಯಾವ ರೀತಿ ಸ್ಪಂದಿಸಿ, ಭಾಗ ವಹಿಸುವುದರ ಮುಖಾಂತರ ಜೊತೆಗೆ ೧೯೮೦ರಿಂದ ಯಾವ ಯಾವ ಕಾರಣಗಳಿಗೆ ರೈತ ಹೋರಾಟಗಳ ನಡೆದವು ಎಂಬುದನ್ನು ತಿಳಿಸಲಾಗಿದೆ. ಆರನೇ ಅಧ್ಯಾಯದಲ್ಲಿ ಪ್ರದೇಶದ ರೈತ ಸಂಘಟನೆಗಳ ಪಾತ್ರ, ಅವು ಹೇಗೆ ರೈತರನ್ನು ಸಂಘಟನೆ ಮಾಡಿ ರೈತರನ್ನು ಹೋರಾಟಕ್ಕೆ ಚುರುಕುಗೊಳಿಸಿದವು ಎಂಬುದನ್ನು ವಿವರಿಸಲಾಗಿದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಈ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರಿಸಲಾಗಿದೆ.

ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ, ಚರಿತ್ರೆ ಕಥನ, ಪಲ್ಲವ ಪ್ರಕಾಶನ, ೨೦೦೯, ಪು.೮೦

೨. ಅದೇ, ಪು.೮೧

೩. ತಂಬಂಡ ವಿಜಯ್ ಪೂಣಚ್ಚ, ರೈತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು.೨

೪. ನಾಗರಾಜ್ ಎಂ.ಜಿ., ಕರ್ನಾಟಕದಲ್ಲಿ ರೈತ ಚಳುವಳಿ ಸತ್ಯಾಗ್ರಹಗಳು ಸಂಪುಟ-೧. ೨೦೦೯, ಪು.೩೫

೫. ಇರ್ಫಾನ್ ಹಬೀಬ್, ದಿ ಅಗ್ರೇರಿಯನ್ ಸಿಸ್ಟಮ್ ಇನ್ ಮೊಗಲ್ ಇಂಡಿಯಾ, ಲೂಸಿಯಾ ಪಬ್ಲಿಕೇಷನ್, ಬೊಂಬಾಯಿ, ೧೯೬೨, ಪು.೩೨೪

೬. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ೨೦೦೯, ಪು.೪೯

೭. ಅದೇ, ಪುಟ.೪೭

೮. ಕುಮಾರ್ ಕೆ.ಎಂ, ಕರ್ನಾಟಕದಲ್ಲಿ ರೈತ ಚಳುವಳಿ, ೨೦೦೮, ಪು.೮

೯. ಟಾಮ್ ಬ್ರಾಸ್, ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ ಇನ್ ಇಂಡಿಯಾ, ಪ್ರ್ಯಾಂಕ್‌ಕಾಸ್ ಪಬ್ಲಿಕೇಷನ್, ಯುಕೆ, ೧೯೯೫

೧೦. ರಣಜಿತ್‌ಗುಹಾ, ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸರ್‌ಜೆನ್ಸಿ, ನ್ಯೂ ದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ

೧೧. ಧನಗರೆ, ಫೆಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ, ೧೯೨೦-೫೦, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, ೧೯೮೨

೧೨. ರುಡಾಲ್ಫ್, ಮಾಡರ್ನಿಟಿ ಆಫ್ ಟ್ರೆಡಿಷನ್, ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ

೧೩. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ

೧೪. ಕುಮಾರ್.ಕೆ.ಎಂ, ಕರ್ನಾಟಕದಲ್ಲಿನ ರೈತ ಚಳುವಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೧೫. ನಾಗರಾಜ್, ಎಂ.ಜಿ., ಕರ್ನಾಟಕದ ರೈತ ಚಳುವಳಿ-ಸತ್ಯಾಗ್ರಹಗಳು ಸಂ-೧ ಮತ್ತು ೩, ಕರ್ನಾಟಕ ವಿಧಾನ ಮಂಡಲ, ವಿಧಾನಸೌಧ, ಬೆಂಗಳೂರು, ೨೦೦೬

೧೬. ಎಂ.ವಿ. ಶ್ರೀನಿವಾಸ, ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ಜಿಲ್ಲಾ ಕೌನ್ಸಿಲ್ ಇತಿಹಾಸ ಸಂಶೋಧನ, ಚಿತ್ರದುರ್ಗ-೧೯೮೬

೧೭. ಎಸ್. ಚಂದ್ರಶೇಖರ್, ಕರ್ನಾಟಕ ಚರಿತ್ರೆ ಸಂ-೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ನೀಹಾರಿಕ ಪ್ರಕಾಶನ, ದಾವಣಗೆರೆ, ೨೦೦೧

೧೯. ಈಶ್ವರಪ್ಪ ಎಂ.ಜಿ, ಶತಮಾನದ ದಾವಣಗೆರೆ, ಚಂಪಾಲಾಲ್ ಬಿ.ಡಲ್ಹರಿಯಾ, ದಾವಣಗೆರೆ, ೨೦೦೧

೨೦. ಶಂಕರನಾರಾಯಣರಾವ್ ಎನ್.ಪಿ, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ೨೦೦೮

೨೧. ನಾಗೇಶ್ ಎಚ್ ವಿ., ಎ.ಇ., ಪುನೀತ್, ಭಾರತದಲ್ಲಿ ರೈತ ಹೋರಾಟಗಳು, ಚಂದ್ರನಾಥ ಪ್ರಕಾಶನ, ೧೯೮೪

೨೨. ಮೋಹನ್‌ಕೃಷ್ಣ ರೈ ಕೆ, ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

* * *

ಅಧ್ಯಾಯ ಎರಡು

ದಾವಣಗೆರೆ ಪ್ರದೇಶದ ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ದಾವಣಗೆರೆ ಪ್ರದೇಶದ ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಭೌಗೋಳಿಕ ಹಿನ್ನೆಲೆ

ದಾವಣಗೆರೆಯು ೧೯೯೭ ಆಗಸ್ಟ್ ೧ರವರೆಗೆ, ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳಲ್ಲೊಂದಾಗಿತ್ತು. ತರುವಾಯ ಚಿತ್ರದುರ್ಗದ ದಾವಣಗೆರೆ, ಹರಿಹರ ಮತ್ತು ಜಗಳೂರು, ಶಿವಮೊಗ್ಗ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಮತ್ತು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕುಗಳನ್ನೊಳಗೊಂಡ ಹೊಸ ಜಿಲ್ಲೆಯಾಯಿತು. ದಾವಣಗೆರೆಯು ಪೂರ್ವಕ್ಕೆ ಚಿತ್ರದುರ್ಗ, ಪಶ್ಚಿಮಕ್ಕೆ ಮಲೆನಾಡು, ಶಿವಮೊಗ್ಗ ಹಾಗೂ ಹಾವೇರಿ, ಉತ್ತರಕ್ಕೆ ಬಳ್ಳಾರಿ, ದಕ್ಷಿಣಕ್ಕೆ ಚಿಕ್ಕಮಗಳೂರು ಜಿಲ್ಲೆಗಳ ಸರಹದ್ದು ಹೊಂದಿದೆ. ಜಿಲ್ಲೆಯು ೫.೯೦೧ ಚ.ಕಿ.ಮೀ. ವಿಸ್ತೀರ್ಣವಿದೆ. ಆರು ನಗರ, ಪಟ್ಟಣ ೯೧೭ ಹಳ್ಳಿಗಳನ್ನು ಹೊಂದಿದೆ.

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ದಾವಣಗೆರೆ ಸಮುದ್ರ ಮಟ್ಟಕ್ಕಿಂತ ಸರಾಸರಿ ೬೦೨.೬ ಮೀಟರ್ ಎತ್ತರದಲ್ಲಿದೆ. ೧೪.೨೮° ಅಕ್ಷಾಂಶ ಮತ್ತು ೭೫.೯° ರೇಖಾಂಶದಲ್ಲಿರುವ ಈ ನಗರವು ಬಯಲು ಹಾಗೂ ಸಮತಲದಲ್ಲಿರುವುದರಿಂದ ವರ್ಷದ ಬಹುಕಾಲ ಒಣಹವೆಯಿಂದ ಕೂಡಿರುತ್ತದೆ. ಜನವರಿ ಕೊನೆಯಿಂದ ಪ್ರಾರಂಭವಾಗುವ ಬೇಸಿಗೆಯ ತಾಪಮಾನ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚಾಗಿರುತ್ತದೆ. ೭೭.೨ ಫ್ಯಾರನ್ ಹೀಟ್‌ನಷ್ಟು ವರ್ಷದ ಸರಾಸರಿ ಉಷ್ಣಾಂಶವಿರುತ್ತದೆ. ೫೦ ಶೇಕಡಾ ಸಾಪೇಕ್ಷ ಆರ್ದ್ರತೆಯು ಮಾರ್ಚ್ ತಿಂಗಳಲ್ಲಿರುತ್ತದೆ. ಆದರೆ ಜುಲೈ ಆಗಸ್ಟ್‌ನಲ್ಲಿ ಶೇ.೮೦ರವರೆಗೂ ಏರುತ್ತದೆ. ಜೂನ್ ತಿಂಗಳಿನಿಂದ ಮಳೆಗಾಲ ಪ್ರಾರಂಭವಾದರೂ ಜುಲೈ, ಆಗಸ್ಟ್, ಸೆಪ್ಟಂಬರ್‌ನಲ್ಲಿ ಹೆಚ್ಚು ಮಳೆಯಾಗಿ ಅಕ್ಟೋಬರ್‌ನವರೆಗೂ ಮಳೆ ಬರುತ್ತದೆ. ಸರಾಸರಿ ೫೭೮ ಮಿ.ಮೀ. ಮಳೆ ಬೀಳುತ್ತದೆ.[೧]

ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನಲ್ಲಿ ವಾಡಿಕೆಯಂತೆ ಹೆಚ್ಚು ಮಳೆ ಬೀಳುತ್ತದೆ. ಕಡಿಮೆ ಮಳೆ ಬೀಳುವ ತಾಲ್ಲೂಕುಗಳಲ್ಲಿ ಮೊದಲನೆಯದು ಜಗಳೂರು. ನಂತರದ್ದು ಹರಿಹರ. ಲಕ್ಕವಳ್ಳಿಯಲ್ಲಿ ಭದ್ರಾನದಿಗೆ ಅಣೆಕಟ್ಟು ನಿರ್ಮಿಸಿದ್ದು ಇದರ ಎರಡು ಕಾಲುವೆಗಳು ಜಿಲ್ಲೆಯ ಭೂಮಿ ಮತ್ತು ಜನರಿಗೆ ನೀರುಣಿಸುತ್ತಿವೆ. ಜಿಲ್ಲೆಯ ಜಗಳೂರು ತಾಲ್ಲೂಕನ್ನು ಹೊರತುಪಡಿಸಿದರೆ ಇತರೆ ೫ ತಾಲ್ಲೂಕುಗಳಲ್ಲಿ ಭದ್ರಾ ಜಲಾಶಯದ ನೀರು ಕೃಷಿ ಚಟುವಟಿಕೆಗಳ ಮೇಲೆ ತನ್ನದೇ ಆದ ಪಾತ್ರ ವಹಿಸುತ್ತದೆ. ಜಿಲ್ಲೆಯ ೭೪.೦೨೬ ಹೆಕ್ಟೇರ್ ಪ್ರದೇಶದಲ್ಲಿನ ನೀರಾವರಿಗೆ ಭದ್ರಾಜಲಾಶಯವೇ ಜೀವನದಿ.[೨]

ವ್ಯವಸಾಯಕ್ಕೆ ಭದ್ರಾ ನೀರು ಬಳಸುವವರೆಗೂ ಮಳೆ ಮತ್ತು ಕೆರೆಗಳ ಆಶ್ರಯವೇ ಪ್ರಧಾನವಾಗಿತ್ತು. ಜಿಲ್ಲೆಯ ವಿಸ್ತಾರದ ದೃಷ್ಟಿಯಿಂದ ಸೂಳೆಕೆರೆಯು ಪ್ರಥಮವಾದರೆ, ಕೊಡಗನೂರಿನ ಕೆರೆ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಹತ್ತಿ ಬೆಳೆಯು ನೀರಾವರಿ ಸೌಕರ್ಯ ಹೆಚ್ಚಾದಂತೆ ಕ್ಷೀಣಿಸಿದ್ದು ಹತ್ತಿ ಗಿರಣಿ, ಕೈಮಗ್ಗಗಳ ಆಧಾರವಾಗಿದ್ದ ಹತ್ತಿಯ ಬೆಳೆಯು ಕ್ರಮೇಣ ದುರ್ಬಲವಾಗಿದ್ದು, ಹಿಂದೆ ಕೈಗಾರಿಕೆ ಹುಟ್ಟಲು ಕಾರಣವಾದಂತೆಯೇ ಅವನತಿಯ ಮೇಲೂ ಪರಿಣಾಮ ಬೀರದೆ ಬಿಡಲಿಲ್ಲ.[೩] ಅರೆಮಲೆನಾಡು ಬಯಲು ಪ್ರದೇಶಗಳಿಂದ ಕೂಡಿ, ತುಂಗಭದ್ರೆಯ ಮೂಲದ ಜಲಸಂಪನ್ಮೂಲದ ಈ ಭಾಗದಲ್ಲಿ ಅಧಿಕ ಇಳುವರಿ ಕೊಡುವ ಬೆಳೆಗಳೆಂದರೆ ಮಕ್ಕೆಜೋಳ, ಅಡಿಕೆ, ಭತ್ತ, ಕಬ್ಬು, ರಾಗಿ ಮತ್ತು ಜೋಳ ಪ್ರಮುಖ ಬೆಳೆಗಳು. ಜಿಲ್ಲೆಯಲ್ಲಿ ೩.೪೦ ಲಕ್ಷ ಹೆಕ್ಟರ್ ಕೃಷಿ ಭೂಮಿ ಇದೆ. ೧.೮೬.೮೨೩ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತದೆ. ಮೂವತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ, ៦೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತದೆ.[೪] ಹತ್ತಿಯನ್ನು ಅಲ್ಲೊಬ್ಬ ಇಲ್ಲೊಬ್ಬ ರೈತ ಬೆಳೆಯುವುದನ್ನು ಕಾಣಬಹುದಾಗಿದೆ.

ಜಿಲ್ಲೆಯ ಜನಸಂಖ್ಯೆ ೧೭.೯೦.೯೫೨. ಜನವಸತಿ ಗ್ರಾಮಗಳು ೮೧೦, ಜನವಸತಿ ಇಲ್ಲದ ಗ್ರಾಮಗಳು ೧೧೩. ಗ್ರಾಮ ಪಂಚಾಯಿತಿಗಳು ೨೩೦. ಭೌಗೋಳಿಕ ವಿಸ್ತೀರ್ಣ ೫೯೭೫೯೭ ಹೆಕ್ಟೇರ್ ಪ್ರದೇಶ ಹೊಂದಿದೆ. ಇದರಲ್ಲಿ ಅರಣ್ಯ ೮೯೧೮ ಹೆಕ್ಟೇರ್ ಪ್ರದೇಶದಲ್ಲಿದೆ. ವ್ಯವಸಾಯೇತರ ಪ್ರದೇಶ ೩೮೯೬೩ ಹೆಕ್ಟೇರ್, ಸಾಗುವಳಿ ಯೋಗ್ಯವಾದ ಬಂಜರು ಭೂಮಿ ೮೫೨೫ ಹೆಕ್ಟೇರ್ ಪ್ರದೇಶ, ಖಾಯಂ ಗೋಮಾಳ ೧೯೫೩೮ ಹೆಕ್ಟೇರ್ ಪ್ರದೇಶ ಹೊಂದಿದೆ. ಜಿಲ್ಲೆಯಲ್ಲಿ ಅತಿ ಸಣ್ಣ ರೈತರು ೧.೨೦೦೭೪, ಸಣ್ಣ ರೈತರು ೮೦.೪೨೮, ಮಧ್ಯಮ ರೈತರು ೧೫೯೩೧, ದೊಡ್ಡರೈತರು ೧೭೯೪ ಇದ್ದಾರೆ. ಕೃಷಿ ಕಾರ್ಮಿಕರ ಸಂಖ್ಯೆ ೧೯೦೧೩೮ರಷ್ಟಿದೆ. ಜಿಲ್ಲೆಯ ನೀರಾವರಿ ಪ್ರದೇಶ ಕೆರೆಗಳಿಂದ ೧೦೧೦ ಹೆಕ್ಟೇರ್ ಪ್ರದೇಶ, ಬಾವಿಗಳಿಂದ ೪೭೪ ಪ್ರದೇಶ, ಕೊಳವೆ ಬಾವಿಗಳಿಂದ ೫೩.೨೫೮ ಹೆಕ್ಟೇರ್ ಪ್ರದೇಶ, ಕಾಲುವೆಗಳಿಂದ ೮೨. ೩೦೦ ಹೆಕ್ಟೇರ್ ಪ್ರದೇಶ, ಇತರೆ ಮೂಲಗಳಿಂದ ೮೦೦೭ ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಹೊಂದಿದೆ.[೫]

ದಾವಣಗೆರೆ ಜಿಲ್ಲೆಯ ಮೂರು ತಾಲ್ಲೂಕುಗಳು (ಹೊಸಪೇಟೆ-ಹರಿಹರ ರೈಲ್ವೆ ಮಾರ್ಗ ಪ್ರಗತಿಯಲ್ಲಿದೆ) ರೈಲ್ವೆ ಮಾರ್ಗದ ಸೌಕರ್ಯ ಪಡೆದಿದೆ. ದಾವಣಗೆರೆ ೪೦.ಕಿ.ಮೀ. ಹಾಗೂ ಹರಿಹರ ತಾಲ್ಲೂರು ೭.ಕಿ.ಮೀ. ರೈಲುಮಾರ್ಗ ಹೊಂದಿದೆ.[೬]

ಕೃಷಿ-ಕೈಗಾರಿಕೆಗಳ ಅಭಿವೃದ್ಧಿಯಲ್ಲೂ ಜಿಲ್ಲೆ ಉತ್ತಮ ಪ್ರಗತಿಯನು ಕಂಡಿತು. ಅಂದು ದಾವಣಗೆರೆ ಕಾಟನ್‌ಮಿಲ್, ಶಂಕರ್ ಟೆಕ್ಸ್‌ಟೈಲ್ಸ್ ಮಿಲ್, ಗಣೇಶ್ ಟೆಕ್ಸ್‌ಟೈಲ್ಸ್ ಮಿಲ್, ಎಲ್ಲಮ್ಮ ಕಾಟನ್ ಉಲನ್ ಅಂಡ್ ಸಿಲ್ಕ್‌ಮಿಲ್, ಚಂದ್ರೋದಯ ಮಿಲ್, ಸಿದ್ಧೇಶ್ವರ ಟೆಕ್ಸ್‌ಟೈಲ್ಸ್ ಮಿಲ್, ಆಂಜನೇಯ ಕಾಟನ್‌ಮಿಲ್, ಚಿಗಟೇರಿ ಮಿಲ್ ಮುಂತಾದ ಹತ್ತಿಗಿರಣಿಗಳಿದ್ದವು. ಇಂದು ''ದಿ ದಾವಣಗೆರೆ ಷುಗರ್ ಕಂಪನಿ'' ಕುಕ್ಕವಾಡ, ''ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ'' ಬಾತಿ, ಮತ್ತು ''ಶಾಮನೂರು ಷುಗರ್ಸ್'', ದುಗ್ಗಾವತಿ ಎಂಬ ಮೂರು ಕಬ್ಬಿನ ಕಾರ್ಖಾನೆಗಳಿವೆ. ಇವಲ್ಲದೆ ನೂರಾರು ಅಕ್ಕಿ ಗಿರಣಿಗಳು, ಸಾವಿರಾರು ಸಣ್ಣ ಕೈಗಾರಿಕೆಗಳು ನೆಲೆಗೊಂಡಿದ್ದು, ಸಾವಿರಾರು ಜನರಿಗೆ ಉದ್ಯೋಗ ನೀಡಿವೆ.[೭]

ದಾವಣಗೆರೆಯು ಕೋಟೆ, ಕೊತ್ತಲಗಳಿಂದ ಕೂಡಿರದಿದ್ದರೂ ವ್ಯಾಪಾರ-ವಾಣಿಜ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳ ಪ್ರಗತಿಯಿಂದ ಹಿಂದಿನಿಂದಲೂ ಗಮನ ಸೆಳೆದಿದೆ. ಜಿಲ್ಲೆಯಲ್ಲಿ ಹತ್ತಿ, ಶೇಂಗಾ, ಮೆಕ್ಕೆಜೋಳ ಮುಂತಾದವು ಪ್ರಮುಖ ಬೆಳೆಗಳಾದರೂ ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ಹತ್ತಿ ಪ್ರಮುಖ ಸ್ಥಾನ ಪಡೆದುಕೊಂಡಿತು.[೮] ಹೀಗಾಗಿ ದಾವಣಗೆರೆಯನ್ನು 'ಮ್ಯಾಂಚೆಸ್ಟರ್ ನಗರ'ವೆಂದು ಸಹ ಕರೆಯುತ್ತಿದ್ದರು. ಆದರೆ ಕ್ರಮೇಣ ಅದು ಮಾಯವಾಗಿ ಇಂದು 'ಆಕ್ಸ್‌ಫರ್ಡ್' ಆಗುವತ್ತ ಪಯಣ ಆರಂಭಿಸಿದೆ.[೯]

ಜಿಲ್ಲೆಯ ಮಾಯಕೊಂಡ, ಅಣಜಿ, ಹೊನ್ನಾಳಿ, ಚನ್ನಗಿರಿ, ಜಗಳೂರು, ಹರಪನಹಳ್ಳಿ, ಹರಿಹರ ಮಲೆಬೆನ್ನೂರುಗಳಲ್ಲಿ ಸಣ್ಣಪುಟ್ಟ ಚಿಕ್ಕ ಗುಡ್ಡಗಳಿವೆ. ಇವುಗಳಲ್ಲಿ ಅತಿ ಎತ್ತರದ ಶಿಖರವು ಹೊನ್ನಾಳಿ ತಾಲ್ಲೂಕಿನಲ್ಲಿದೆ. ಅಲ್ಲಿನ ಕಲ್ಪರಂಗನ ಬೆಟ್ಟವು ೧೦೩೧ ಮೀ. ಎತ್ತರವಿದ್ದು, ಅತ್ಯಂತ ಎತ್ತರದ್ದಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಮಾಯಕೊಂಡ, ಅಣಜಿ, ಹೊನ್ನಾಳಿಗಳಲ್ಲಿ ಖನಿಜ ಸಂಪತ್ತು ದೊರೆಯುತ್ತದೆ. ದಾವಣಗೆರೆ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ನಿಕ್ಷೇಪಗಳಿವೆ.[೧೦]

ಭೌಗೋಳಿಕ ಲಕ್ಷಣಗಳು ಯಾವುದೇ ಪ್ರದೇಶದ ಜನ ಜೀವನದ ಮೇಲೆ, ಆರ್ಥಿಕ, ರಾಜಕೀಯ ಮುಂತಾದ ಪಾತ್ರಗಳ ಮೇಲೆ ಪರಿಣಾಮ ಬೀರುವಲ್ಲಿ ಸಿಂಹಪಾಲು ಹೊಂದಿರುತ್ತದೆ. ಅಂತೆಯೇ ಜಿಲ್ಲೆಯ ಭೌಗೋಳಿಕ ಲಕ್ಷಣಗಳೂ ಸಹ ರೈತರ ಕೃಷಿ ಚಟುವಟಿಕೆ, ಅದಕ್ಕೆ ಪೂರಕವಾದ ಕೈಗಾರಿಕೆಗಳ ಬೆಳವಣಿಗೆಯ ಮೇಲೆ ಗುರುತರವಾದ ಪ್ರಭಾವ ಬೀರಿದೆ.

ದಾವಣಗೆರೆ ನಗರ

ಗ್ರಾಮೀಣ ಪ್ರದೇಶ ನಗರ ಪ್ರದೇಶವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆ ಸರಳವಾದದ್ದಲ್ಲ. ಅದೊಂದು ಸಂಕೀರ್ಣ ಪ್ರಕ್ರಿಯೆ. ಆ ಪ್ರಕ್ರಿಯೆ ನಗರಗಳ ಬೆಳವಣಿಗೆಗೆ ಕಾರಣವಾಗುತ್ತದೆ.[೧೧] ಅವು ಧಾರ್ಮಿಕ, ಆಡಳಿತ, ವಾಣಿಜ್ಯ, ಬಂದರು, ಶಿಕ್ಷಣ ಮುಂತಾದ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಕ್ರಮೇಣ ತಮ್ಮ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಂಡಿವೆ. ಭೌಗೋಳಿಕವಾಗಿ ರಾಜ್ಯದ ಮಧ್ಯಭಾಗದಲ್ಲಿರುವ ದಾವಣಗೆರೆಯಲ್ಲಿ ವಾಣಿಜ್ಯ ಮತ್ತು ವಿದ್ಯೆಯ ಸಂಗಮವಾಗಿದೆ. ನಗರವು ಆರಂಭದಲ್ಲಿ ವ್ಯಾಪಾರಿಗಳ, ಪ್ರವಾಸಿಗರ ತಂಗುದಾಣವಾಗಿ, ಕ್ರಮೇಣ ವ್ಯಾಪಾರ, ವ್ಯವಹಾರ ವೃದ್ಧಿಸಿಕೊಂಡು ವಾಣಿಜ್ಯನಗರವಾಗಿ ಬೆಳೆಯಿತು. ೧೨ನೇ ಶತಮಾನದ ಉಚ್ಚಂಗಿ ಪಾಂಡ್ಯರ ಶಾಸನದಲ್ಲಿ ಮೊದಲಬಾರಿಗೆ 'ದಾವಣಗೆರೆ' ಎಂಬ ಹೆಸರು ಕಂಡುಬಂದಿದೆ.[೧೨] ಆದ್ದರಿಂದ ನಗರಕ್ಕೆ ಸುಮಾರು ೯೦೦ ವರ್ಷಗಳ ಪ್ರಾಚೀನತೆಯಿದೆ ಎಂಬ ನಿರ್ಧಾರಕ್ಕೆ ಬರಬಹುದು. ೧೮೦೧ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಯಾದ ಫ್ರಾನ್ಸಿಸ್ ಬುಕಾನನ್. ದಾವಣಗೆರೆಗೆ ಭೇಟಿ ನೀಡಿದ್ದಾಗ ಅದೊಂದು ೫೦೦ ಮನೆಗಳನ್ನು ಹೊಂದಿದ ಸಣ್ಣ ಹಳ್ಳಿಯಾಗಿತ್ತು ಎಂದು ದಾಖಲಿಸಿದ್ದಾನೆ.

೧೯೯೭ ಆಗಸ್ಟ್ ೧೫ರಂದು ಜಿಲ್ಲಾ ಕೇಂದ್ರದ ಸ್ಥಾನಮಾನ ಪಡೆದುಕೊಂಡ ಈ ನಗರವನ್ನು ಯಾವ ಅರಸು ಮನೆತನವು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿಲ್ಲ. ಆದರೂ ಅತ್ಯಂತ ಪ್ರಾಚೀನ ಕಾಲದಿಂದ

ಕರ್ನಾಟಕವನ್ನಾಳಿದ ರಾಜಮನೆತನಗಳ ಪರೋಕ್ಷ ಆಡಳಿತಕ್ಕೆ ಒಳಪಟ್ಟಿತ್ತು. ಸರಿಸುಮಾರು ಕರ್ನಾಟಕದ ಯಾವುದೇ ಭಾಗದಿಂದಲೂ ೧೨ ಗಂಟೆಗಳ ದೂರ ಹೊಂದಿರುವ ಈ ನಗರ ಉದ್ಯಮಿಗಳಿಗೆ ಹೇಳಿ ಮಾಡಿಸಿದಂತಹ ಪ್ರದೇಶ.

ದಾವಣಗೆರೆ ನಗರದ ಸ್ಥಳನಾಮದ ಬಗ್ಗೆ ಹಲವು ಚರ್ಚೆಗಳಿವೆ.[೧೩] ಕ್ರಿ.ಶ. ೧೮೦೧ರಲ್ಲಿ ಕೇವಲ ೫೦೦ ಮನೆಗಳ ಅಜ್ಞಾತ ಹಳ್ಳಿಯಾಗಿದ್ದ ದಾವಣಗೆರೆಯ ಬಗ್ಗೆ ಪ್ರಚಲಿತವಾಗಿರುವ ಹೇಳಿಕೆಯಂತೆ ದಾವಣಗೆರೆಯ ಹಳೆಯ ಊರಿನ ದುರ್ಗಮ್ಮ ದೇವಾಲಯ ಸುತ್ತಮುತ್ತಲಿನ ದಾವಣ್ಣನ ಕೆರೆಯಾಗಿದ್ದ ಈ ಪ್ರದೇಶದ ಕೆರೆಯಂಗಳದಲ್ಲಿ ದೊಡ್ಡ ಹುಲ್ಲುಗಾವಲು ಇದ್ದಿತ್ತೆಂದು, ಆಗಿನ ಕಾಲದಲ್ಲಿಯೇ ಕುದುರೆ ಸವಾರರು ಮತ್ತು ಎತ್ತಿನಗಾಡಿಗಳು ಮುಂತಾದವು ಈ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದಂತೆ, ಈ ಕೆರೆಯಂಗಳದ ಹುಲ್ಲುಗಾವಲಿನಲ್ಲಿ ಕುದುರೆಗಳನ್ನು ದನಗಳನ್ನು, ಎತ್ತುಗಳನ್ನು 'ದಾವಣಿ' ಹಗ್ಗದಿಂದ ಕಟ್ಟಿ, ಅಲ್ಲೇ ತಂಗಿ, ವಿಶ್ರಾಂತಿ ಪಡೆದು ಮುಂದೆ ಹೋಗುತ್ತಿದ್ದರು. ಅದು ಒಂದೇ ಹಗ್ಗದಿಂದ ವಿಶಿಷ್ಟವಾಗಿ ಕಟ್ಟುತ್ತಿದ್ದ ವಿಧಾನಕ್ಕೆ 'ದವಣಿಕಟ್ಟು' ಎನ್ನುತ್ತಿದ್ದರಂತೆ. ಈ ದವಣಿಕಟ್ಟಿನಿಂದ ಮತ್ತು ಕೆರೆಯಿಂದ ಇಲ್ಲಿಯ ಈಶ್ವರ ದೇವರಿಂದ ದವಣಿಕೆರೆ, ದಾವಣಿಕೆರೆ, ದಾವಣಗೆರೆಯಾಯಿತೆಂದು ಒಂದು ಅಭಿಪ್ರಾಯ.[೧೪]

ಕ್ರಿ.ಶ. ೧೨ನೇ ಶತಮಾನದಲ್ಲಿ ಚಿಕ್ಕ ಅಜ್ಞಾತಹಳ್ಳಿಯಾಗಿದ್ದ ದಾವಣಗೆರೆ ಉಚ್ಚಂಗಿ ಪಾಂಡ್ಯರ ಪಾಂಡ್ಯಮಂಡಲದ ಒಂದು ಭಾಗವಾಗಿದ್ದು, ನೊಳಂಬವಾಡಿಯ ಮೂವತ್ತೆರಡು ಸಾವಿರದಲ್ಲಿ ಒಂದಾಗಿದ್ದು, ಎಲೆಬೇತೂರು, ಆನೆಕೊಂಡಗಳ, ರಾಜಧಾನಿಯಾಗಿ ಮೆರೆಯುತ್ತಿದ್ದ ಸಂದರ್ಭದಲ್ಲಿ ಪ್ರಪ್ರಥಮವಾಗಿ ಕ್ರಿ.ಶ. ೧೧೨೧ನೇ ಕಾಲದ ದಾವಣಗೆರೆ ೨ನೇ ಶಾಸನದಲ್ಲಿ 'ದಾವಣಗೆರೆ ಸೀಮೆಯಂ'[೧೫] ಎಂದು ಹೇಳಿದೆ. ಅಂದರೆ ಮೊಟ್ಟ ಮೊದಲ ಬಾರಿಗೆ ದಾವಣಗೆರೆ ಎಂಬ ಮಾಹಿತಿ ಈ ಶಾಸನದಿಂದ ಸಿಗುತ್ತದೆ. ಇದೊಂದು ದಾನ ಶಾಸನವಾಗಿದ್ದು ದೇವಿಶೆಟ್ಟಿ ಎಂಬ ವ್ಯಾಪಾರಿಯೊಬ್ಬರು ಭೂದಾನ ನೀಡಿದ ಭೂಮಿಗಳ ಪರಿಸರವೇ ಇಂದಿನ ದಾವಣಗೆರೆ ಬೆಳವಣಿಗೆ ಹೊಂದಿರುವ ಸ್ಥಳ ಎಂಬ ಅಭಿಪ್ರಾಯವಿದೆ.

ಸಾಹಿತಿ ಹಿ.ಚಿ. ಶಾಂತವೀರಯ್ಯನವರು ದಾವಣಗೆರೆಯನ್ನು ಹೀಗೆ ವಿವರಿಸಿದ್ದಾರೆ. ''ದಾವಣ+ಕೆರೆ, ದವಣಿ=ಹಗ್ಗ, ಕಣ್ಣಿ, ದಾವ=ಅಡವಿ, ಕಾಡು, ಕಟ್ಟುವ ಹಗ್ಗ, ದಾವಣ=ದಾಪಣಿ, ಸಂಸ್ಕೃತದ ದಾಮನಿ, ದವಣಿ=ಗುಂಪು=ಸಮೂಹ. ಕೆರೆ ಪ್ರವಾಹವನ್ನು ತಡೆದು ಏರಿಹಾಕಿ ನಿಲ್ಲಿಸಿದ ಪ್ರದೇಶ, ದೇವನಕೆರೆ ದೇವ ಒಂದು ಹೆಸರು, ಈ ಹೆಸರಿನ ಸೂಚಕವಾಗಿ ಕಟ್ಟಿದ ಕೆರೆ ಅಥವಾ ದೇವ ಕಟ್ಟಿಸಿದ ಕೆರೆ. ದಾವನ-ದ್ಯಾವನ-ದಾವನ-ಕೆರೆ, ದಾವನ+ಕೇರಿ, ದಾವ ಎಂಬುವನ ಕೇರಿ ದಾವ+ನಗರಿ ನಗರಿ+ನಗರಗಳಲ್ಲಿ (ದೊಡ್ಡ ಊರು), ದೇವನಕೇರಿ=ದೇವರು ನೆಲೆಸಿದ ಬೀದಿ, ರಸ್ತೆ, ಸ್ಥಳ.

ದೇವನ ಕೆರೆ, ದ್ಯಾವನ ಕೆರೆ, ದ್ಯಾವನಗೆರೆ, ದ್ಯಾವಣಗೆರೆ, ದಾವಣಗೆರೆ ಎಂದು ಹೆಸರಾಗಿದೆ.''[೧೬]

ಚರಿತ್ರೆಕಾರರಾದ ಬಿ. ರಾಜಶೇಖರಪ್ಪನವರು 'ದಾವಣಿ' ಶಬ್ದದ ಬಗ್ಗೆ ಹೇಳಿಕೆ ನೀಡಿ 'ದಾವಣ+ಕೆರೆ ಎಂಬ ಎರಡು ಭಾಗಗಳಿಂದ ಕೂಡಿದೆ. ದಾವಣ ಎಂಬುದು 'ದಾವಣಿ ಅರ್ಥದ ಶಬ್ದವಾಗಿಲ್ಲ.[೧೭] ಎಂಬ ಅಭಿಪ್ರಾಯಪಟ್ಟಿದ್ದಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ದಾವಣ ಎನ್ನುವ ವ್ಯಕ್ತಿಗೂ ದಾವಣಗೆರೆ ಸ್ಥಾಪನೆಗೂ ಸಂಬಂಧಿಸಿದ ಯಾವುದೇ ಉಲ್ಲೇಖಗಳು ಇದೂವರಿಗೂ ಕಂಡು ಬಂದಿಲ್ಲವಾದ್ದರಿಂದ ಜಾಲಿನಗರದ ಕೆರೆಯಿಂದಲೇ ದಾವಣಗೆರೆ ಆಯಿತು ಎಂಬ ತೀರ್ಮಾನಕ್ಕೆ ಬರಬಹುದು.

ದಾವಣಗೆರೆಯ ಚಾರಿತ್ರಿಕ ಹಿನ್ನೆಲೆ

ದಾವಣಗೆರೆಯ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸುವುದಾದರೆ ಪ್ರಾಚೀನ ಇತಿಹಾಸವನ್ನು ಹೊಂದಿರುವ ದಾವಣಗೆರೆಯ ಪ್ರದೇಶವು ಮೌರ್ಯರು, ಶಾತವಾಹನರು, ಕದಂಬ, ಗಂಗ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಬೆಳಗುತ್ತಿ ಸಿಂಧರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಹೊಯ್ಸಳರು, ವಿಜಯನಗರದ ಅರಸರು, ವಿಜಯನರೋತ್ತರ ಪಾಳೆಯಗಾರರಾದ ಚಿತ್ರದುರ್ಗ, ಹರಪನಹಳ್ಳಿ, ಬಸವಾಪಟ್ಟಣ/ ಸಂತೆಬೆನ್ನೂರು ಪಾಳೆಯಗಾರರು. ಹೈದರ್ ಮತ್ತು ಟೀಪುಸುಲ್ತಾನ, ಮೈಸೂರು ಒಡೆಯರು ಹಾಗೂ ಬ್ರಿಟಿಷರ ನೇರ ಮತ್ತು ಪರೋಕ್ಷ ಆಡಳಿತಕ್ಕೆ ಒಳಗಾಗಿತ್ತು.

ದಾವಣಗೆರೆ ಪ್ರದೇಶವನ್ನು ಮೊದಲು ಆಳ್ವಿಕೆ ನಡೆಸಿದ ರಾಜವಂಶವೆಂದರೆ ಮೌರ್ಯರು. ಕ್ರಿ.ಪೂ.೨ನೇ ಶತಮಾನದಲ್ಲಿ ಅವರು ಅಸಗೋಡು ಅಶೋಕನ ಪಟ್ಟಣವಾಗಿತ್ತೆಂದು ಹಾಗೆಯೇ ದಾವಣಗೆರೆ ತಾಲ್ಲೂಕಿನ ಶಾಮನೂರು, ಎಲೆಬೇತೂರು ಹಾಗೂ ಲೋಕಿ ಕೆರೆಗಳಲ್ಲಿ ಸಿಕ್ಕಿರುವ ಅವಲೋಕೇಶ್ವರ ತೀರ್ಥಂಕರ ವಿಗ್ರಹಗಳು ಮತ್ತು ಶಾಸನಗಳಿಂದ ದಾವಣಗೆರೆ ಪ್ರದೇಶ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಮೌರ್ಯರ ತರುವಾಯ ಆಡಳಿತಕ್ಕೆ ಬಂದವರು ಶಾತವಾಹನರು. ಇವರ ಕಾಲವನ್ನು ಕ್ರಿ.ಪೂ. ೨೨೦ರಿಂದ ಕ್ರಿ.ಶ.೨೨೦ ಎಂಬುದಾಗಿ ಗುರುತಿಸಲಾಗಿದೆ. ಇವರ ಆಳ್ವಿಕೆಯಲ್ಲಿ ದಾವಣಗೆರೆ ಪ್ರದೇಶ ಇವರ ಆಡಳಿತದ ಒಂದು ಭಾಗವಾಗಿತ್ತು.[೧೮] ಇಲ್ಲಿ ದೊರೆತ ಶಾಸನಗಳಿಂದ ಶಾತವಾಹನರನ್ನು ಕುಂತಳ ಸ್ವಾಮಿಗಳೆಂದು ಕರೆಯಲಾಗಿದೆ. ಇದಕ್ಕೆ ಪೂರ್ವಕವಾಗಿ ದಾವಣಗೆರೆ ತಾಲ್ಲೂಕಿನ ಅಣಜಿ, ಜಗಳೂರು ತಾಲ್ಲೂಕಿನ ಆಕನೂರು ಗ್ರಾಮದಲ್ಲಿ[೧೯] ಸಿಕ್ಕ ಅವಶೇಷಗಳು ಮಾಹಿತಿ ಕೊಡುತ್ತವೆ.

ಕ್ರಿ.ಶ. ೩೪೫ರಿಂದ ಕ್ರಿ.ಶ. ೫೪೦ ಅವಧಿಯಲ್ಲಿ ಕರ್ನಾಟಕದ ಮೊದಲ ರಾಜವಂಶವೆಂದು ಖ್ಯಾತಿ ಪಡೆದ ಕದಂಬರು, ಆಳ್ವಿಕೆ ನಡೆಸಿದ್ದಾರೆ. ದಾವಣಗೆರೆ ಸಮೀಪದ ಅಣಜಿ ಗ್ರಾಮದಲ್ಲಿ ಕದಂಬ ಅರಸ ಶಿವಸ್ಕಂದವರ್ಮನಿಗೆ ಸಂಬಂಧಿಸಿದ ಶಾಸನವೊಂದು ದೊರೆತಿದೆ.[೨೦] ಈ ಶಾಸನದಿಂದ ದಾವಣಗೆರೆ ಪ್ರದೇಶ ಕದಂಬರಿಗೆ ಒಳಪಟ್ಟಿತ್ತೆಂದು ತಿಳಿಯಬಹುದು. ಕದಂಬರ ನಂತರ ಆಳ್ವಿಕೆಗೆ ಬಂದವರು ಬಾದಾಮಿ ಚಾಲುಕ್ಯರು ಇವರ ಕಾಲಮಾನ ಕ್ರಿ.ಶ. ೫೦೦ರಿಂದ ೯೬೪ ರವರಿಗೆ ಆಳ್ವಿಕೆ ನಡೆಸಿದ್ದಾರೆ. ದಾವಣಗೆರೆ ತಾಲೂಕಿನ ಚನ್ನಗಿರಿಯಲ್ಲಿ ವಿನಯಾದಿತ್ಯನ ಕಾಲಕ್ಕೆ ಸೇರಿದ ಶಾಸನಗಳು ದೊರೆತಿವೆ. ಇದರಿಂದ ದಾವಣಗೆರೆ ಪ್ರದೇಶ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಎಂಬುದನ್ನು ತಿಳಿಯಬಹುದು. ಇವರ ತರುವಾಯ ಕಲ್ಯಾಣಿ ಚಾಲುಕ್ಯರು ಕ್ರಿ.ಶ. ೯೭೩ರಿಂದ ೧೨೦೦ ವರಿಗೆ ಆಳ್ವಿಕೆ ನಡೆಸಿದ್ದಾರೆ. ಹದಡಿ ಗ್ರಾಮದಲ್ಲಿ ದೊರೆತಿರುವ ಶಾಸನದಿಂದ ಚಾಲುಕ್ಯ ಅರಸ ಸೋಮೇಶ್ವರನ ಸಾಮಂತನಾದ ಪಲ್ಲವ ನೊಳಂಬನು ಅಲ್ಲಿನ ಈಶ್ವರ ದೇವರಿಗೆ ದಾನ ನೀಡಿದ ಮಾಹಿತಿ

ತಿಳಿಯುತ್ತದೆ. ಕ್ರಿ.ಶ. ೭೩೭ರಿಂದ ೯೭೩ರವರಗೆ ರಾಷ್ಟ್ರಕೂಟರು ಆಳ್ವಿಕೆ ನಡೆಸಿದ್ದಾರೆ. ದಾವಣಗೆರೆ ಸಮೀಪದ ಕಾಡಜ್ಜಿ ಗ್ರಾಮದಲ್ಲಿ ದೊರೆತಿರುವ ಶಾಸನದಿಂದ ಈ ಪ್ರದೇಶವು ರಾಷ್ಟ್ರಕೂಟರ ವ್ಯಾಪ್ತಿಗೆ ಸೇರಿತ್ತು ಎಂಬುದನ್ನು ಖಚಿತಪಡಿಸಿಕೊಳ್ಳಬಹುದು.[೨೨] ಇದೇ ಅವಧಿಯಲ್ಲಿ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಬೆಳಗುತ್ತಿಯಲ್ಲಿ ಸಿಂಧರು ಕ್ರಿ.ಶ.೯೦೦-೧೨೩೯ರವರೆಗೆ ಆಳ್ವಿಕೆ ನಡೆಸಿದರು. ಇವರನ್ನು ಬೆಳಗುತ್ತಿ ಸಿಂಧರು ಎಂದು ಕರೆಯಲಾಗಿದೆ.

ಉಚ್ಚಂಗಿ ಪಾಂಡ್ಯರು ೧೧-೧೨ನೆಯ ಶತಮಾನಗಳಲ್ಲಿ ಆಳ್ವಿಕೆ ನಡೆಸಿದರು. ಇದರಿಂದ ದಾವಣಗೆರೆ ಉಚ್ಚಂಗಿ ಪಾಂಡ್ಯಮಂಡಲದ ಒಂದು ಭಾಗವಾಗಿತ್ತು. ನೊಳಂಬವಾಡಿ ೩೨೦ಂದಲ್ಲಿ ಒಂದಾಗಿತ್ತು. ಈ ಭಾಗಕ್ಕೆ ಎಲೆಬೇತೂರು. ಆನೆಕೊಂಡ ರಾಜಧಾನಿಯಾಗಿದ್ದವು. ಈ ಸಂದರ್ಭದಲ್ಲಿ ಪ್ರಪ್ರಥಮವಾಗಿ ಕ್ರಿ.ಶ. ೧೧೨೧ನೇ ಕಾಲದ ದಾವಣಗೆರೆ ಮೂರನೇ ಶಾಸನದಲ್ಲಿ ''ದಾವಣಗೆರೆ ಸೀಮೆಯು'' ಎಂದು ಉಲ್ಲೇಖಿಸಲಾಗಿದೆ. ಈ ನಗರಕ್ಕೆ ಹೊಂದಿಕೊಂಡಿರುವ ಶಾಮನೂರಿನ ಶಾಸನದಿಂದ ಚಾಲುಕ್ಯ ತ್ರಿಭುವನಮಲ್ಲನ ಸೀಮಂತ ಅರಸ ತ್ರಿಭುವನಮಲ್ಲ ಪಾಂಡ್ಯನು ಕ್ರಿ.ಶ. ೧೧೨೮ರಲ್ಲಿ ಇಲ್ಲಿನ ದೇವಾಲಯಕ್ಕೆ ದಾನ ನೀಡಿದ ವಿವರ ತಿಳಿದು ಬರುತ್ತದೆ.[೨೩] ಕ್ರಿ.ಶ. ೯೨೦ರ ಜಗಳೂರು ತಾಲ್ಲೂಕಿನ ಮುಷ್ಟೂರುನಲ್ಲಿರುವ ಕಲ್ಲೇಶ್ವರ ದೇವಾಲಯದಲ್ಲಿನ ಶಾಸನಗಳಿಂದ ನೊಳಂಬರು, ಗಂಗರು, ಚಾಲುಕ್ಯರು, ಚೋಳ ಮತ್ತು ಹೊಯ್ಸಳರು ಮಹಾ ಸಾಮಂತರಾಗಿ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದವರಾಗಿದ್ದಾರೆ ಎಂಬುದನ್ನು ತಿಳಿಯಬಹುದು. ಹೊಯ್ಸಳ ರಾಜವಂಶವು ಕ್ರಿ.ಶ. ೧೦೦೦ರಿಂದ ೧೩೪೦ರವರೆಗೆ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದೆ. ಇವರ ಆಳ್ವಿಕೆಗೆ ದಾವಣಗೆರೆಯೂ ಸೇರಿತ್ತು ಎನ್ನುವುದಕ್ಕೆ ಜಗಳೂರು ತಾಲ್ಲೂಕಿನ ಕಲ್ಲೇದೇವಪುರ, ಹರಿಹರ, ಉಚ್ಚಂಗಿ ದುರ್ಗದ ಶಾಸನಗಳು ಸಾಕ್ಷಿಯಾಗಿವೆ.[೨೪]

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೩೩೬ರಿಂದ ೧೫೬೫ರವರೆಗೆ ಆಳ್ವಿಕೆ ನಡೆಸಿದೆ. ವಿಜಯನಗರ ಆಳ್ವಿಕೆ ಈ ಪ್ರದೇಶದ ಬಹುತೇಕ ಭಾಗ ಸೇರ್ಪಡೆಯಾಗಿತ್ತು. ದಾವಣಗೆರೆ ಪ್ರದೇಶ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು ಎಂದು ತಿಳಿಯಲು ಆ ಕಾಲದ ದೇವಾಲಯಗಳು ಮತ್ತು ಶಾಸನಗಳು ಆಧಾರಗಳಾಗಿವೆ. ಚನ್ನಗಿರಿಯಲ್ಲಿನ ಶಾಸನ ವಿಜಯನಗರದ ಇಮ್ಮಡಿ ದೇವರಾಯ, ಬುಕ್ಕರಾಯ ಆಳುತ್ತಿದ್ದಾಗ ವೀರಭದ್ರ ದೇವರನ್ನು ಪ್ರತಿಷ್ಠಾಪಿಸಿ ಗ್ರಾಮಗಳನ್ನು ಉಂಬಳಿ ನೀಡಿದ ಮಾಹಿತಿ ನೀಡುತ್ತದೆ.[೨೫] ಅಲ್ಲದೆ, ನೀರ್ಥಡಿ, ಮಾಯಕೊಂಡ, ಕೋಣಚಗಲ್ಲು, ಕೊಡದಗುಡ್ಡ, ಮೊದಲಾದ ಕಡೆ ದೊರೆತ ದೇವಾಲಯಗಳಿಂದ ದಾವಣಗೆರೆ ವಿಜಯನಗರ ಅರಸರ ಅಧೀನದಲ್ಲಿತ್ತೆಂದು ತಿಳಿದುಕೊಳ್ಳಬಹುದು. ೧೫ನೇ ಶತಮಾನದಿಂದ ಮೈಸೂರಿನ ಒಡೆಯರ ಆಳ್ವಿಕೆ ಪ್ರಾರಂಭವಾಗುತ್ತದೆ. ದಾವಣಗೆರೆ ಪ್ರದೇಶದಲ್ಲಿ ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳಿವೆ. ವಿಜಯನಗರ ಸಾಮ್ರಾಜ್ಯ ಅವನತಿ ಹಂತದಲ್ಲಿದ್ದಾಗ ಏಳಿಗೆ ಹೊಂದಿದ ಚಿತ್ರದುರ್ಗ ಮತ್ತು ಹರಪನಹಳ್ಳಿ ಪಾಳೇಗಾರರು ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು. ಆಲೂರಿನಲ್ಲಿರುವ ಐತಿಹಾಸಿಕ ಬತ್ತೇರಿಯನ್ನು ೧೭೯೨ರಲ್ಲಿ ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕನು ನಿರ್ಮಾಣಗೊಳಿಸಿದನು.[೨೬] ೧೭೪೭-೪೮ರಲ್ಲಿ ಹರಪನಹಳ್ಳಿ ಸೋಮಶೇಖರ ನಾಯಕನಿಗೂ, ಚಿತ್ರದುರ್ಗ ಸಂಸ್ಥಾನದ ಪಾಳೆಯಗಾರನಾದ ಹಿರೇಮದಕರಿನಾಯಕನಿಗೂ ದಾವಣಗೆರೆ ಸಮೀಪದ ಮಾಯಕೊಂಡದಲ್ಲಿ ಯುದ್ಧ ನಡೆಯಿತ್ತು. ಈ ಯುದ್ಧದಲ್ಲಿ

ಹಿರೇಮದಕರಿನಾಯಕ ಮರಣಹೊಂದಿದ.[೨೭] ಈಗಲೂ ಈತನ ಸಮಾಧಿ ಮಾಯಕೊಂಡದಲ್ಲಿದೆ. ಪಾಳೆಯಗಾರರನ್ನು ಸೋಲಿಸಿ ಹೈದರಾಲಿಯು ಅಧಿಕಾರಕ್ಕೆ ಬಂದನು. ಈ ಪ್ರದೇಶದ ಮೇಲೆ ಮರಾಠರು ಆಗಿಂದಾಗ್ಗೆ ದಾಳಿ ಮಾಡುತ್ತಿದ್ದರಿಂದ ದಾವಣಗೆರೆಯನ್ನು ಮರಾಠ ಪಾಳೆಯಗಾರನಾದ ಅಪ್ಪಾಜಿರಾವ್ ಎಂಬುವವನಿಗೆ ಮಾರಿದನು. ಅಪ್ಪಾಜಿರಾವ್ ಪ್ರೋತ್ಸಾಹದಿಂದ ದಾವಣಗೆರೆಯಲ್ಲಿ ಅನೇಕ ವ್ಯಾಪಾರಸ್ಥರು ನೆಲೆಸಿದರು.[೨೮] ೧೮೦೧ರಲ್ಲಿ ದಾವಣಗೆರೆಗೆ ಭೇಟಿ ನೀಡಿದ್ದ ಪ್ರವಾಸಿ ಫ್ರಾನ್ಸಿಸ್ ಬುಕಾನನ್ ಕೂಡ ಅಪ್ಪಾಜಿರಾವ್ ದಾವಣಗೆರೆ ಬೆಳೆಯಲು ಪ್ರೋತ್ಸಾಹಿಸಿದ ಮಾಹಿತಿ ನೀಡುತ್ತಾನೆ.[೨೯] ಆಗಲೂ ಇಲ್ಲಿ ವ್ಯಾಪಾರವೇ ಮುಖ್ಯ ಕಸುಬಾಗಿತ್ತು.

೩ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಬ್ರಿಟಿಷರಿಗೆ ಸೋತ ಟಿಪ್ಪು ಸುಲ್ತಾನನು ಶ್ರೀರಂಗಪಟ್ಟಣ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಯುದ್ಧವೆಚ್ಚ ಮೂರು ಕೋಟಿ ರೂಪಾಯಿಗಳನ್ನು ಬ್ರಿಟಿಷರಿಗೆ ನೀಡಬೇಕಾಗಿತ್ತು. ಅಷ್ಟೊಂದು ಹಣ ಟಿಪ್ಪುವಿನಲ್ಲಿಲ್ಲದ ಕಾರಣ ಹರಿಹರ, ತುಂಗಭದ್ರಾ ನದಿಯ ಉತ್ತರದ ಭಾಗಗಳನ್ನು ಮರಾಠರಿಗೆ ಮಾರಬೇಕಾಯಿತು. ಆಗ ದಾವಣಗೆರೆ ಮೈಸೂರು ಸಂಸ್ಥಾನದ ಉತ್ತರದ ಗಡಿಯಾಯಿತು.

ಕ್ರಿ.ಶ. ೧೭೯೯ರ ನಂತರ ದಾವಣಗೆರೆ ಪ್ರದೇಶದಲ್ಲಿ ಬ್ರಿಟಿಷರು ಪರೋಕ್ಷವಾಗಿ ಆಡಳಿತ ನಡೆಸತೊಡಗಿದರು. ೧೮೦೦ರಿಂದ ೧೮೫೭ ಕಾಲಾವಧಿಯಲ್ಲಿ ಬ್ರಿಟೀಷರ ನೀತಿಯನ್ನು ಕಂಡ, ಕರ್ನಾಟಕದ ಹಲವಾರು ಕಡೆಗಳಲ್ಲಿ ಪ್ರತಿಭಟನೆಗಳು ನಡೆದವು. ಅಂಥ ಪ್ರತಿಭಟನೆಯನ್ನು ಮಾಡಿದವರಲ್ಲಿ ಚನ್ನಗಿರಿ ಧೊಂಡಿಯವಾಘನು ಪ್ರಮುಖನಾಗಿದ್ದಾನೆ. ಈತನನ್ನು ಆಂಗ್ಲರು ಬಂಧಿಸಿ ರಾಯಚೂರಿನ ಗೊಂಡಿಯಾರ್‌ನಲ್ಲಿ ನೇಣುಗಂಭಕ್ಕೆ ಏರಿಸಿದರು.[೩೦] ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಹಲವಾರು ಕಡೆ ರೈತ ಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳನ್ನು ಆಂಗ್ಲರ ಸಹಾಯವನ್ನು ಪಡೆದು ದಮನಗೊಳಿಸಲಾಯಿತು. ಇದರಿಂದ ಆಂಗ್ಲರು ಮುಮ್ಮಡಿ ಕೃಷ್ಣರಾಜ ಒಡೆಯರ್ ಅಸಮರ್ಥರೆಂದು ಗ್ರಹಿಸಿ ಅಧಿಕಾರದಿಂದ ಕೆಳಗಿಳಿಸಿ ಕಮೀಷನರ್ ಆಳ್ವಿಕೆ ಪ್ರಾರಂಭಿಸಿದರು. ಈ ಅವಧಿಯಲ್ಲಿ ದಾವಣಗೆರೆ ಪ್ರದೇಶ ಹಲವು ರೀತಿಯ ಯೋಜನೆಗಳಿಂದ ಮೈಸೂರು ಸಂಸ್ಥಾನಕ್ಕೆ ಸಂಪರ್ಕ ಪಡೆಯಿತು. ೧೮೮೧ರವರೆಗೂ ಕಮಿಷನರ್ ಆಡಳಿತ ವ್ಯಾಪ್ತಿಗೆ ಈ ಪ್ರದೇಶ ಸೇರಿತ್ತು. ಈ ಅವಧಿಯಲ್ಲಿ ಬೆಂಗಳೂರಿನಿಂದ ಹರಿಹರಕ್ಕೆ ರಸ್ತೆ ಮಾರ್ಗ ಕಲ್ಪಿಸಲಾಗಿತ್ತು.[೩೧] ೧೮೬೮ರಲ್ಲಿ ಹರಿಹರದಲ್ಲಿ ಹರಿಯುವ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ ಮಾಡಲಾಯಿತು.[೩೨] ಕ್ರಿ.ಶ. ೧೮೭೬-೭೮ರ ಅವಧಿಯಲ್ಲಿ ಬೀಕರ ಬರಗಾಲದಿಂದ ಸಂಸ್ಥಾನದ ಪ್ರದೇಶ ಬರಗಾಲಕ್ಕೆ ತುತ್ತಾಯಿತ್ತು ಕಮೀಷನರ್ ಆಡಳಿತವನ್ನು ಕೊನೆಗೊಳಿಸಿದ ನಂತರ ಮೈಸೂರು ಸಂಸ್ಥಾನ ಮತ್ತೆ ಅಧಿಕಾರ ವಹಿಸಿಕೊಂಡಿತು.

ಹತ್ತನೇ ಚಾಮರಾಜ ಒಡೆಯರ್ (೧೮೮೧-೧೮೯೪), ನಾಲ್ವಡಿ ಕೃಷ್ಣರಾಜ ಒಡೆಯರ್ (೧೯೦೨-೧೯೪೦) ಮತ್ತು ಜಯಚಾಮರಾಜ ಒಡೆಯರ್ (೧೯೪೦-೪೭) ಆಡಳಿತ ನಡೆಸಿದರು. ಇವರ ಕಾಲಾವಧಿಯಲ್ಲಿ ಶ್ರೀರಂಗಾಚಾರ್ಲು (೧೮೮೧-೮೩), ಕೆ. ಶೇಷಾದ್ರಿ ಐಯ್ಯರ್ (೧೮೮೩-೧೯೦೧), ಸರ್.ಎಂ. ವಿಶ್ವೇಶ್ವರಯ್ಯ (೧೯೧೨-೧೯೧೮), ಎಂ. ಕಾಂತರಾಜ್ ಅರಸ್ (೧೯೧೮-೧೯೨೨), ಸರ್. ಮಿರ್ಜಾ ಇಸ್ಮಾಯಿಲ್ (೧೯೨೬-೧೯೪೧) ಮತ್ತು ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಇವರು ದಿವಾನರಾಗಿದ್ದರು. ಬ್ರಿಟಿಷರ ಕಾಲದಲ್ಲಿ

ಮೈಸೂರಿನ ಒಡೆಯರು ಮತ್ತು ದಾವಣಗೆರೆ ನಡುವಿನ ಸಂಬಂಧ ಬಲಗೊಂಡಿತು. ದಾವಣಗೆರೆ ನಗರದಲ್ಲಿ ಪ್ರಿನ್ಸ್ ಜಯಚಾಮರಾಜ ಬಡಾವಣೆಯೊಂದನ್ನು ಆರಂಭಿಸಿರುವುದು ಇವರೊಂದಿಗಿನ ಸಂಬಂಧಕ್ಕೆ ನಿದರ್ಶನವಾಗಿದೆ.[೩೩]

ಟಿಪ್ಪಣಿಗಳು

೧. ತಿಪ್ಪೇಸ್ವಾಮಿ ಹೆಚ್. ದಾವಣಗೆರೆ ಜಿಲ್ಲೆಗಳ ದೇವಾಲಯಗಳ ಅಧ್ಯಯನ (ಅಪ್ರಕಟಿತ), ಪಿ.ಎಚ್.ಡಿ. ಪ್ರಬಂಧ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭.

೨. ಟಿ. ಗಿರಿಜ, ಹೆಚ್.ಜಿ., ಶೋಭಾ (ಸಂ), ಕರ್ಪೂರ ಸ್ಮರಣ ಸಂಚಿಕೆ, ೨೦೦೨, ಪು.೨೫.

೩. ಬಿ.ಪಿ. ಕುಮಾರ್, ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು, (ಅಪ್ರಕಟಿತ್ಯ, ಎಚ್.ಡಿ. ಪ್ರಬಂಧ.,) ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೧೯.

೪. ಮಾಹಿತಿ : ಜಂಟಿ ನಿರ್ದೇಶಕರ ಕಛೇರಿ, ಕೃಷಿ ಇಲಾಖೆ ದಾವಣಗೆರೆ.

೫. ದಾವಣಗೆರೆ ಜಿಲ್ಲಾ ಅಂಕಿ ಅಂಶಗಳು

೬. ದಾವಣಗೆರೆ ಜಿಲ್ಲಾ ಅಂಕಿ ಅಂಶಗಳು

೭. ಪ್ರಜಾವಾಣಿ ದಿನಪತ್ರಿಕೆ, ಕರ್ನಾಟಕ ದರ್ಶನ, ದಿನಾಂಕ ೨೭, ಮೇ ೨೦೧೦, ಪು.೨

೮. ಕುಮಾರ್, ಬಿ.ಪಿ, ಪೂರ್ವೋಕ್ತ, ಪು.೧೮

೯. ಪ್ರಜಾವಾಣಿ ದಿನಪತ್ರಿಕೆ, ಕರ್ನಾಟಕ ದರ್ಶನ, ದಿನಾಂಕ ೨೭, ಮೇ, ೨೦೧೦, ಪು.೨
ದಾವಣಗೆರೆ ನಗರವು ಹತ್ತಿಗಿರಣಿಗಳ ವಹಿವಾಟಿನ ಹಿನ್ನೆಲೆಯಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂದು ಕರೆಯಲ್ಪಟ್ಟಿದ್ದ ಈ ನಗರವು ೧೯೯೦ ಮತ್ತು ೨೦೦೦ದ ಮೊದಲ ದಶಕದಲ್ಲಿ ಆಕ್ಸ್‌ಫರ್ಡ್ ನಗರವೆಂದು ಕರೆಯಲ್ಪಟ್ಟಿತ್ತು. ವಿಭಿನ್ನ ಕಾರಣಗಳಿಂದ ಹತ್ತಿಗಿರಣಿಗಳು ವಿನಾಶದ ಹಾದಿಯನ್ನು ಕ್ರಮಿಸುತ್ತಾ ಸಾಗಿದ ನಂತರ ನಗರದ ತುಂಬಾ ಶಿಕ್ಷಣ ಸಂಸ್ಥೆಗಳು ಹರಡಿಕೊಂಡವು. ವಾಣಿಜ್ಯ ನಗರಿ ವಹಿವಾಟಿನಲ್ಲಿ ಹಿನ್ನಡೆ ಕಂಡ ನಂತರ ಶಿಕ್ಷಣ ಪ್ರಸಾರದತ್ತ ಮುನ್ನಡೆದು ಆಕ್ಸ್‌ಫರ್ಡ್ ನಗರವೆನಿಸಿಕೊಂಡಿತು.

೧೦. ಸತ್ಯನ್ ಬಿ.ಎನ್. ಗೆಜೆಟಿಯರ್ ಆಫ್ ಇಂಡಿಯಾ, ಚಿತ್ರದುರ್ಗ ಜಿಲ್ಲೆ, ೧೯೬೭, ಪು.೨೦೩

೧೧. ಮೋಹನ್‌ಕೃಷ್ಣ ರೈ.ಕೆ, ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ ೨೦೦೬, ಪು.೨

೧೨. ಕುಮಾರ್ ಬಿ.ಪಿ. ಪೂರ್ವೋಕ್ತ, ಪು.೨೦

೧೩. ಗಿರಿಜ ಟಿ. ದಾವಣಗೆರೆ ಸ್ಥಳನಾಮದ ಬಗ್ಗೆ ಒಂದು ಸಮೀಕ್ಷೆ, ಇತಿಹಾಸ ದರ್ಶನ, ಸಂ, ೧೫, ೨೦೦೦, ಪು.೨೦೭

೧೪. ಅದೇ, ಪು, ೨೦೭

೧೫. ಕುಮಾರ ಬಿ.ಪಿ. ಪೂರ್ವೋಕ್ತ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು.೨೧.

೧೬. ಗಿರಿಜ ಟಿ, ದಾವಣಗೆರೆ ಇದು ನಮ್ಮ ಜಿಲ್ಲೆ, ೨೦೦೧, ಪು. ೨೯.

೧೭. ಅದೇ, ಪುಟ.೩೦.

೧೮. ತಿಪ್ಪೇಸ್ವಾಮಿ, ಟಿ. ರಚನಶಾಸ್ತ್ರದ ದಾವಣಗೆರೆ ಜಿಲ್ಲೆಯನ್ನು ಕುರಿತು ಅಧ್ಯಯನಗಳ ಸಮೀಕ್ಷೆ, (ಅಪ್ರಕಟಿತ) ಎಂ.ಫಿಲ್ ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೧೯. ಸೋಮಶೇಖರ, ಆಕನೂರು ಗ್ರಾಮದ ಬಳಿ ಆದಿ ಇತಿಹಾಸ ಕಾಲದ ಕುರುಹುಗಳು, ಇತಿಹಾಸ ದರ್ಶನ, ಸಂ, ೧೨. ೧೯೯೭, ಪು.೧೨, ೧೩, ೨೦

೨೦. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ಸಿರಿ, ೨೦೦೬, ಪು.೫೧

೨೧. ಕುಮಾರ್ ಬಿ.ಪಿ. ಪೂರ್ವೋಕ್ತ, ಪು.೨೩

೨೨. ಅದೇ, ಪು.೨೩

೨೩. ಎಫಿಗ್ರಾಫಿಯಾ ಕರ್ನಾಟಿಕಾ, ಸಂ. ೧೧, ಚಿತ್ರದುರ್ಗ್ಫ ಶಾಸನ ಸಂಖ್ಯೆ೦, ಪು.೧೬೨

೨೪. ತಿಪ್ಪೇಸ್ವಾಮಿ ಹೆಚ್. ಪೂರ್ವೋಕ್ತ, ಪು.೫೬

೨೫. ಕುಮಾರ್, ಬಿ.ಪಿ. ಪೂರ್ವೋಕ್ತ, ಪು.೨೪

೨೬. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗನಾಯಕ ಅರಸರು, ೨೦೦೯, ಪೃ.೯

೨೭. ಅದೇ, ಪು.೧೫

೨೮. ಸತ್ಯನ್ ಬಿ.ಎನ್. ಪೂರ್ವೋಕ್ತ, ಪು.೨೯೫

೨೯. ಈಶ್ವರಪ್ಪ ಎಂ.ಜಿ, ಶತಮಾನದ ದಾವಣಗೆರೆ, ೨೦೦೧, ಪು.೨೬

೩೦. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ ೧, ೧೯೮೪, ಪು.೨೭೧

೩೧. ಮೋಹನ್‌ಕೃಷ್ಣ ರೈ.ಕೆ, ವಸಾಹತುಶಾಹಿ ಮತ್ತು ನಗರೀಕರಣ, ೨೦೦೭, ಪು.೮೩

೩೨. ಅದೇ, ಪು.೮೩

೩೩. ಕುಮಾರ್, ಬಿ.ಪಿ. ಪೂರ್ವೋಕ್ತ, ಪು.೨೫

* * *

ಅಧ್ಯಾಯ ಮೂರು

ಕೃಷಿ ಕ್ಷೇತ್ರದಲ್ಲಾದ ಪಲ್ಲಟಗಳು

೩.೧. ಭೂ ಹಿಡುವಳಿ ವ್ಯವಸ್ಥೆ

೩.೨. ವಸಾಹತು ಕೃಷಿ ನೀತಿ

೩.೩. ಕೈಗಾರಿಕಾ ಅರ್ಥ ವ್ಯವಸ್ಥೆ

ಕೃಷಿ ಕ್ಷೇತ್ರದಲ್ಲಾದ ಪಲ್ಲಟಗಳು

೧೫ನೇ ಶತಮಾನದ ಜಲಮಾರ್ಗಗಳ ಅನ್ವೇಷಣೆಯಿಂದಾಗಿ ಹೊಸ ಹೊಸ ಖಂಡಗಳು ಜಗತ್ತಿಗೆ ಪರಿಚಯವಾದವು. ಜಲಮಾರ್ಗದ ಶೋಧನೆಯಿಂದಾಗಿ ಭಾರತಕ್ಕೆ ಯುರೋಪ್ ಖಂಡದಿಂದ ಬ್ರಿಟಿಷರು ವ್ಯಾಪಾರ-ವಾಣಿಜ್ಯ ಸಲುವಾಗಿ ಆಗಮಿಸಿದರು. ಹೀಗೆ ಬಂದಂತಹ ಬ್ರಿಟಿಷರು ಭಾರತದ ರಾಜರ ಮೇಲೆ ಸವಾರಿ ಮಾಡಿ ಭಾರತವನ್ನು ತಮ್ಮ ಹಿಡಿತಕ್ಕೆ ಒಳಪಡಿಸಿಕೊಂಡರು. ಭಾರತದ ಮೇಲೆ ತಮ್ಮ ಹಿಡಿತವನ್ನು ಹೊಂದಿದ ಮೇಲೆ ಕೃಷಿ ಕ್ಷೇತ್ರದಲ್ಲಿ ಭೂ ಹಿಡುವಳಿಗಳ ಮೇಲೆ ಭೂ ಕಂದಾಯವನ್ನು ಹೆಚ್ಚಿಸುವುದರ ಮೂಲಕ ಕೃಷಿಕರನ್ನು ಶೋಷಣೆ ಮಾಡತೊಡಗಿದರು. ೧೮ನೇ ಶತಮಾನದ ವೇಳೆಗೆ ಕೃಷಿ ಕ್ಷೇತ್ರದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಕೃಷಿಕರಿಗೆ ಒತ್ತಡ ಹೇರಲಾಯಿತು. ಹೊಸ ಕೃಷಿ ನೀತಿ, ನಿಯಮಗಳು ಜಾರಿಗೆ ಬರುವುದರ ಮೂಲಕ ಭಾರತದ ಕೃಷಿ ಕ್ಷೇತ್ರದಲ್ಲಿ ಬದಲಾವಣೆಗಳುಂಟಾದವು.

೩.೧. ಭೂ ಹಿಡುವಳಿ ವ್ಯವಸ್ಥೆ

ಮಾನವನ ಇತಿಹಾಸ ಮಾನವ ಮತ್ತು ಭೂಮಿಯ ನಡುವಿನ ಸಂಬಂಧದ ಮತ್ತು ಕಾಲಾನಂತರದಲ್ಲಿ ಈ ಸಂಬಂಧಗಳಲ್ಲಿನ ಬದಲಾವಣೆಗಳ ಚರಿತ್ರೆಯಾಗಿದೆ. ಈ ಚರಿತ್ರೆಯ ತುಂಬೆಲ್ಲ ಕ್ರಾಂತಿಕಾರಿ ಭೂ ಹಿಡುವಳಿಗಳ ಕಾಯಿದೆ ಸರ್ಕಾರದ ಮುಕ್ತ ಕೊಡುಗೆಯಾಗಿರದೇ ರೈತರ ದೀರ್ಘ ಹೋರಾಟದ ಫಲವೆಂದು ತೋರಿಸುವ ಉದಾಹರಣೆಗಳಿವೆ. ಆದ್ದರಿಂದ ಭೂ ಹಿಡುವಳಿಗಳು ಕೃಷಿ ರಚನೆಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಿರುವ ತೊಡಕುಗಳ ನಿವಾರಣೆಗೆ ಇರುವ ಹಲವು ಕ್ರಮಗಳ ಸಮೂಹವೆಂದು ಪರಿಗಣಿಸಲಾಗಿದೆ. ಅಲ್ಲದೆ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಆಸ್ತಿಯ ಮರುವಿತರಣೆ ಅಥವಾ ಭೂಮಿಯ ಮೇಲಿನ ಹಕ್ಕುಗಳ ಮರುವಿತರಣೆಗಾಗಿಯೂ ಬಳಸಲಾಗಿದೆ.

ವಸಾಹತು ಕಾಲದಲ್ಲಿ ಕೃಷಿ ಸಮಾಜ ಸಾಮಾನ್ಯವಾಗಿ ಅಧಿಕ ಬಡ್ಡಿ ಸಾಲ, ಸುರಕ್ಷಿತವಲ್ಲದ ರೈತರ ಜೀತ ಪದ್ಧತಿ ಮಿತಿಮೀರಿ ಹುಟ್ಟಿಕೊಂಡವು. ಇದರಿಂದಾಗಿ ಭಾರತೀಯ ನಾಯಕರು ಬಡತನಕ್ಕೆ ಕಾರಣವಾಗಿದ್ದರು. ಯಾರು ನಿಜವಾದ ಉಳುವವರಾಗಿದ್ದರೋ ಅವರ ಹೋರಾಟದಿಂದಲೂ ಆಗಾಗ್ಗೆ ಭೂ ಕಾಯ್ದೆ ಜಾರಿಗೆ ಬಂದಿತ್ತು. ಸ್ಥಳೀಯ ಮತ್ತು ದೇಶಿಯ ಸಂಸ್ಥಾನಗಳಲ್ಲಿಯೂ ಪರಿಸ್ಥಿತಿ ಬೇರೆಯಾಗಿರಲಿಲ್ಲ.

ದಿವಾನ್ ಪೂರ್ಣಯ್ಯನ ಕಾಲದ ಭೂ ಹಿಡುವಳಿ ವ್ಯವಸ್ಥೆ

ಟಿಪ್ಪುವಿನಿಂದ ಆಕ್ರಮಿಸಿಕೊಂಡ ಮೈಸೂರು ಸಂಸ್ಥಾನವನ್ನು ನೋಡಿಕೊಳ್ಳಲು ಬ್ರಿಟಿಷರು ದಿವಾನ್ ಪೂರ್ಣಯ್ಯನವರಿಗೆ ವಹಿಸಿಕೊಟ್ಟರು. ಪರಂಪರೆಯಾಗಿ ಬಂದಂತಹ ಭೂ ಹಿಡುವಳಿಗಳನ್ನು ಉಪಯೋಗಿಸುವ

ಹಕ್ಕು ದಿವಾನ್ ಪೂರ್ಣಯ್ಯನವರ ಕಾಲದಲ್ಲಿತ್ತು.[೧] ಅಂದರೆ ಪ್ರತಿಯೊಬ್ಬ ಭೂ ಹಿಡುವಳಿದಾರನೂ ಸ್ವತಂತ್ರವಾದ ಭೂ ಹಿಡುವಳಿಯನ್ನು ಹೊಂದಿದ್ದನು. ಈ ಪ್ರದೇಶದಲ್ಲಿ ಭೂಹಿಡುವಳಿದಾರನು ನಿರ್ದಿಷ್ಟ ಮೊತ್ತದ ತೆರಿಗೆಯನ್ನು ಸರಕಾರಕ್ಕೆ ಸಲ್ಲಿಸುವ ಮೂಲಕ ಭೂ ಒಡೆತನವನ್ನು ಹೊಂದಿದ್ದನು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಪಟೇಲರು, ದೊಡ್ಡ ಜಮೀನುದಾರರು ತಮ್ಮ ಹೆಸರುಗಳಲ್ಲಿ ನೂರಾರು ಎಕರೆ ಭೂ ಹಿಡುವಳಿಗಳನ್ನು ತಮ್ಮ ಆಧೀನದಲ್ಲಿ ಇಟ್ಟುಕೊಂಡಿದ್ದ ಬಗ್ಗೆ ವಿವರಗಳು ಸಿಗುತ್ತವೆ.[೨]

ಪೂರ್ಣಯ್ಯನವರ ಆಡಳಿತಾವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದು ವಂಶಪಾರಂಪರ್ಯವಾಗಿ ಬಂದ ಭೂ ಹಿಡುವಳಿಗಳ ಹಕ್ಕನ್ನು ಸಕ್ರಮಗೊಳಿಸಲಾಯಿತು. ಹೆಚ್ಚಿನ ಪ್ರಮಾಣದಲ್ಲಿದ್ದ ಇನಾಂ ಭೂ ಹಿಡುವಳಿಗಳನ್ನು ಜೋಡಿ ಇನಾಂಗಳಾಗಿ ಪರಿವರ್ತಿಸಿ ಹಗುರ ಕಂದಾಯ ಹೇರಿದ್ದನು. ಪೂರ್ಣಯ್ಯನವರ ಆಡಳಿತಾವಧಿಯಲ್ಲಿ ಸುಬೇದಾರ ಮತ್ತು ಅಮೀನರು ಪ್ರಾಂತ್ಯದ ಸಂಪೂರ್ಣವಾದ ಕಂದಾಯ ವಸೂಲಿ ಮತ್ತು ಮಿಲಿಟರಿ ಅಧಿಕಾರಿಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಮುಖ ತಾಲ್ಲೂಕುಗಳೆಂದರೆ ಬಿಳಿಚೋಡು, ಅಣಜಿ, ದಾವಣಗೆರೆ, ಹರಿಹರ, ಕಣಕುಪ್ಪೆ ಈ ಪ್ರದೇಶದ ಆಡಳಿತ ಕೇಂದ್ರಗಳಾಗಿದ್ದು, ಇವುಗಳ ಆಡಳಿತವನ್ನು ನೋಡಿಕೊಳ್ಳಲು ಸುಬೇದಾರ ಎಂಬ ಅಧಿಕಾರಿಗಳನ್ನು ನೇಮಕ ಮಾಡಲಾಯಿತ್ತು.

ಅಂದಿನ ದಾವಣಗೆರೆ ಪ್ರದೇಶದ ಭೂ ಹಿಡುವಳಿಗಳನ್ನು ತರಿ, ಖುಷ್ಕಿ, ಭಾಗಾಯ್ತು ಎಂಬುದಾಗಿ ವಿಂಗಡಿಸಲಾಗಿತ್ತು. ಸಾಮಾನ್ಯವಾಗಿ ಒಬ್ಬ ಭೂ ಹಿಡುವಳಿದಾರನ ಆಧೀನದಲ್ಲಿ ಮೂರು ವಿವಿಧ ಭೂ ಹಿಡುವಳಿಗಳಿದ್ದವು. ಭೂ ಹಿಡುವಳಿದಾರನ ವಶದಲ್ಲಿದ್ದ ಖುಷ್ಕಿ, ತರಿ ಮತ್ತು ಭಾಗಾಯ್ತು ಭೂಮಿಯ ವಿವರವೂ ಹೀಗಿತ್ತು. ಉತ್ತಮವಾದ 'ತರಿ' ೨೦ ಖಿಡಿ, ಮಧ್ಯಮ ಭೂಮಿ (ಖುಷ್ಕಿ) ೧೨ ಖಂಡಿ, ಭಾಗಾಯ್ತು ಅರ್ಧ ಖಂಡಿ ಇತ್ತು.[೩]

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಭೂ ಹಿಡುವಳಿ ವ್ಯವಸ್ಥೆ (೧೮೧೧-೧೮೩೧)

ದಿವಾನ್ ಪೂರ್ಣಯ್ಯನವರು ೧೮೧೧ರಲ್ಲಿ ನಿವೃತ್ತಿಯಾದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ರಾಜ್ಯಾಡಳಿತವನ್ನು ವಹಿಸಿಕೊಂಡರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನವನ್ನು ಆರು ಫೌಜುದಾರಿಗಳಾಗಿ ವಿಭಾಗಿಸಲಾಗಿತ್ತು. ಅಂದಿನ ದಾವಣಗೆರೆ ಪ್ರದೇಶವೂ ಚಿತ್ರದುರ್ಗದ ಫೌಜುದಾರಿಗೆ ಸೇರಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ಪ್ರಮುಖ ಭೂ ಹಿಡುವಳಿ ವ್ಯವಸ್ಥೆಯನ್ನು ಹೀಗೆ ಗುರುತಿಸಬಹುದು.[೪]

೧. ಕಂದಾಯ ಭೂಮಿ: ಇದು ನೇರವಾಗಿ ರೈತನ ಒಡೆತನದಲ್ಲಿರುವ ಭೂಮಿ. ಇದಕ್ಕೆ ನಿಗದಿತ ಹಣದ ರೂಪದಲ್ಲಿ ಕಂದಾಯ ನೀಡಬೇಕಾಗಿತ್ತು.

೨. ಅಮಾನಿ ತಲಾನ: ಅಮಾನಿ ಎಂದರೆ ಯಾವುದೇ ಆಸ್ತಿ ಟ್ರಸ್ಟ್ ವ್ಯವಸ್ಥೆಗೆ ಒಳಪಟ್ಟಿದ್ದು, ತಲಾನ ಎಂದರೆ ಕೆರೆ. ಇದು ಇನ್ನೊಂದು ಬಗೆಯ ಭೂಮಿ. ಇದನ್ನು ಸಾರ್ವಜನಿಕ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ರೈತರು ವ್ಯವಸಾಯ ಮಾಡುವುದು.

೩. ಭತಾಯಿ ಭೂಮಿ: ಇದು ವ್ಯವಸಾಯಗಾರ ತಾನು ಬೆಳೆದ ಬೆಳೆಯನ್ನು ಸರಕಾರದ ಜೊತೆಗೆ ಹಂಚಿಕೊಳ್ಳುವ ವ್ಯವಸ್ಥೆ.

೪. ಜೋಡಿದಾರ ಭೂಮಿಗಳು: ಇದು ಜೋಡಿದಾರರ ಆಧೀನದಲ್ಲಿರುವ ಕಡಿಮೆ ಕಂದಾಯದ ಭೂಮಿ.

೫. ಶ್ರಮ ಸಾಗುವಳಿ ಭೂಮಿ: ಇದು ರೈತರ ಒಡೆತನದಲ್ಲಿರುವ ಭೂಮಿ. ಇದಕ್ಕೆ ನಿಗದಿತ ಅವಧಿಯವರಿಗೆ ಕಡಿಮೆ ಕಂದಾಯವನ್ನು ನೀಡಲು ಅವಕಾಶವಿತ್ತು. ಸಾಮಾನ್ಯವಾಗಿ ಇದು ೨ ಅಥವಾ ೪ ವರ್ಷದ ತನಕ. ಆ ಕಾಲಾವಧಿಯ ನಂತರ ಪೂರ್ಣ ನಿಗದಿತ ಕಂದಾಯವನ್ನು ನೀಡಬೇಕಾಗಿತ್ತು.

೬. ಖಾಯಂಗುತ್ತ ಭೂ ಪದ್ಧತಿ: ಇದು ಮಹಾರಾಜರು ದತ್ತಿಯಾಗಿ ನೀಡಿದ ಹಳ್ಳಿಗಳು.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಭೂಮಿಯ ಒಡೆತನ ರೈತರಲ್ಲಿದ್ದಾಗ ಸರಕಾರವು ನೇರವಾಗಿ ರೈತರಿಂದ ಗೇಣಿಯನ್ನು ವಸೂಲಿ ಮಾಡುತ್ತಿತ್ತು. ಪೂರ್ಣಯ್ಯನವರ ಕಾಲಾವಧಿಯಲ್ಲಿದ್ದ ಭೂ ವ್ಯವಸ್ಥೆಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಯಾವ ಬದಲಾವಣೆ ಇಲ್ಲದೆ ಮುಂದುವರಿಸಿದರು.

ಕಮೀಷನರ ಕಾಲದ ಭೂ ಹಿಡುವಳಿ ವ್ಯವಸ್ಥೆ (೧೮೩೧-೧೮೮೧)

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಖಾಸಗಿ ಆಸ್ತಿಯ ಹಕ್ಕು ಹೆಚ್ಚು ಪವಿತ್ರವಾದ ಹಾಗೂ ಪರಭಾರೆ ಮಾಡಲಾಗದ ಒಂದು ಹಕ್ಕು ಎಂದು ಪರಿಗಣಿಸಲ್ಪಟ್ಟಿತ್ತು. ಈ ದೃಷ್ಟಿಯಿಂದ ಲಾರ್ಡ್ ಕಾರ್ನ್ ವಾಲೀಸ್ ೧೭೯೨ರಲ್ಲಿ ಜಾರಿಗೆ ತಂದ ಖಾಯಂ ಭೂ ಕಂದಾಯ ಸುಧಾರಣೆ ಪ್ರಮುಖವಾದುದು. ಲಾರ್ಡ್ ಕಾರ್ನ್ ವಾಲೀಸನು ಬಂಗಾಳದಲ್ಲಿ ಜಾರಿಗೆ ತಂದ ಖಾಯಂ ಭೂಕಂದಾಯ ಪದ್ಧತಿಯನ್ನು ಖಾಯಂ ಜಮೀನ್ದಾರಿ ಪದ್ಧತಿ ಅಥವಾ ಖಾಯಂ ಗುತ್ತಿಗೆದಾರಿ ಪದ್ಧತಿ ಎಂದು ಕರೆಯಲಾಗಿದೆ.

ಕಮೀಷನರ್ ಆಡಳಿತ ಅವಧಿಯಲ್ಲಿ ಪ್ರತ್ಯೇಕ ಕಂದಾಯ ಇಲಾಖೆಯನ್ನು ಸ್ಥಾಪಿಸಲಾಗಿತ್ತು. ಕೃಷಿಯ ಅಭಿವೃದ್ಧಿಗಾಗಿ ರೈತರಿಗೆ ಸಾಲ ನೀಡುವ ಏರ್ಪಾಡನ್ನು ಮಾಡಲಾಗಿತ್ತು. ಭೂ ಕಂದಾಯ ಆಡಳಿತವನ್ನು ವಿಭಾಗ ಮಟ್ಟದಲ್ಲಿ ವಿಕೇಂದ್ರಿಕರಿಸಲಾಗಿತ್ತು. ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ತಾಲ್ಲೂಕುಗಳಲ್ಲಿ ಅಮಲ್ದಾರರು, ಹೋಬಳಿಯಲ್ಲಿ ಶೇಕದಾರರಿಗೆ ವಹಿಸಿಕೊಡಲಾಗಿತ್ತು. ಗ್ರಾಮಗಳಲ್ಲಿ ಪಟೇಲ ಅಥವಾ ಗೌಡನು ಕಮೀಷನರ್ ಆಡಳಿತಾವಧಿಯಲ್ಲಿ ಗ್ರಾಮದ ಮುಖ್ಯಸ್ಥನಾಗಿದ್ದು, ಕಂದಾಯ ವ್ಯವಸ್ಥೆಯಲ್ಲಿ ಮಧ್ಯವರ್ತಿಯಂತೆ ಕಾರ್ಯ ನಿರ್ವಹಿಸುತ್ತಿದ್ದನು. ಗ್ರಾಮಗಳ ಭೂ ಹಿಡುವಳಿಗಳ ದಾಖಲಾತಿ ಮತ್ತು ಕಂದಾಯ ವಸೂಲಿಯ ಕಾರ್ಯವನ್ನು ಶಾನುಭೋಗರು ನಿರ್ವಹಿಸುತ್ತಿದ್ದರು.

ಮಾರ್ಕ್ ಕಬ್ಬನ್ (೧೮೩೪-೧೮೬೧)

ಮಾರ್ಕ್ ಕಬ್ಬನ್ ತನ್ನ ಕಾಲದಲ್ಲಿ ಭೂ ಹಿಡುವಳಿಗೆ ವ್ಯವಸ್ಥಿತವಾದ ರೂಪ ನೀಡಿದನು. ಈ ಕಾಲದಲ್ಲಿ ಸರಕಾರಕ್ಕೆ ಸೇರಿದ್ದ ಭೂಮಿಯ ಸರಹದ್ದುಗಳನ್ನು ಭೂಮಿಯ ಗುಣಮಟ್ಟ ಹಾಗೂ ಕೃಷಿ ಉತ್ಪನ್ನಗಳು ಸಂಬಂಧದಲ್ಲಿ ಗುರುತಿಸಿದನು. ಕಮೀಷನರ ಆಳ್ವಿಕೆಯ ಸಮಯದಲ್ಲಿ ಭೂ ಹಿಡುವಳಿಗಳು ರೈತವಾರಿ ಪದ್ಧತಿಯಲ್ಲಿ ಕೃಷಿಗೊಳಪಡುತ್ತಿದ್ದವು. ರೈತವಾರಿ ಪದ್ಧತಿಯಲ್ಲಿ ಸರಕಾರದ ಭೂಮಿಗೆ ಗೇಣಿದಾರರಾದ ರೈತರು ಕಂದಾಯ

ಕಟ್ಟುತ್ತಿದ್ದರು. ಇಲ್ಲವೇ ಭತಾಯಿ ರೂಪಾಯಿ ರೂಪದಲ್ಲಿ ತಾವು ಬೆಳೆದ ಬೆಳೆಯಲ್ಲಿ ಗೊತ್ತಾದ ಪಾಲಿನ ಧಾನ್ಯವನ್ನು ಸರಕಾರಕ್ಕೆ ಒಪ್ಪಿಸುತ್ತಿದ್ದರು. ಕಮೀಷನರ್ ಆಳ್ವಿಕೆಯಲ್ಲಿ ಭೂ ಒಡೆತನ ಸಂಬಂಧಪಟ್ಟ ಕಾನೂನುಗಳು ಜಾರಿಗೆ ಬಂದವು. ಹೊಸ ಪದ್ಧತಿಯನ್ನು ಜಾರಿಗೆ ತರುವಾಗ ಮಾರ್ಕ್ ಕಬ್ಬನ್ ಶಾನುಭೋಗರಿಗೆ ತುಂಬಾ ಪ್ರಾಮುಖ್ಯತೆ ಕೊಟ್ಟನು.[೫] ಇವರು ಕಾಲ ಕಳೆದಂತೆ ರೈತರಿಗೂ, ಸರಕಾರಕ್ಕೂ ನಡುವೆ ಮಧ್ಯವರ್ತಿಗಳಾಗಿ ಬೆಳೆದರು. ಹಾಗಾಗಿ ಹೊಸ ಪದ್ಧತಿಯು ಹಲವು ನ್ಯೂನತೆಗಳಿಂದ ಕೂಡಿತ್ತು. ರೈತರಿಗೆ ವಾರ್ಷಿಕವಾಗಿ ಪಟ್ಟಗಳನ್ನು ಅಥವಾ ಹಕ್ಕುದಾರ ಪತ್ರಗಳನ್ನು ನೀಡುವ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಅದರಲ್ಲಿ ಭೂಮಿಯ ವರ್ಣನೆ, ಕಂದಾಯದ ಮೊತ್ತ ರೈತರು ತೆರಿಗೆ ನೀಡಬೇಕಾದ ಬಗ್ಗೆ ವಿವರವಿರುತ್ತಿತ್ತು. ಇಂತಹ ಹಕ್ಕು ಪತ್ರಗಳನ್ನು ರೈತರು ಪ್ರತಿವರ್ಷವೂ ಕಂದಾಯ ಪಾವತಿ ಮಾಡುತಿದ್ದಾರೆಯೇ ಎಂಬುದರ ಮೇಲೆ ನೀಡಲಾಗುತ್ತಿತ್ತು. ಕೆಲವು ದೊಡ್ಡ ಭೂ ಹಿಡುವಳಿದಾರರು ಜಿಲ್ಲೆಯ ಸೂಪರಿಂಟೆಡೆಂಟರ ಅನುಮೋದನೆಯ ಮೇರೆಗೆ ಐದು ವರ್ಷದ ಕಂದಾಯವನ್ನು ಒಂದೇ ಬಾರಿ ಪಾವತಿ ಮಾಡಿ ಹಕ್ಕು ಪತ್ರಗಳನ್ನು ಪಡೆಯುತ್ತಿದ್ದರು.

ಲೂಯಿ ಬೆಂಥಾಮ್ ಬೌರಿಂಗ್

ಲೂಯಿ ಬೆಂಥಾಮ್ ಬೌರಿಂಗ್ ಕಾಲದಲ್ಲಿಯೇ ಇನಾಂ ಕಮೀಷನ್ ಜಾರಿಗೆ ತಂದು ಇನಾಂ ಭೂ ಹಿಡುವಳಿಗಳನ್ನು ಸರಕಾರದ ಆಧೀನಕ್ಕೆ ಒಳಪಡಿಸಲಾಯಿತು. ಮುಂಬೈ ಪ್ರಾಂತ್ಯದ ಕಂದಾಯ ಪದ್ಧತಿಯನ್ನು ಅನುಸರಿಸಿ ೧೮೬೨ರಲ್ಲಿ ಬೌರಿಂಗನು ಭೂಮಿಯ ಮೋಜಣಿ ಮತ್ತು ಕಂದಾಯ (ಸರ್ವೆ ಅಂಡ್ ಸೆಟ್ಲ್‌ಮೆಂಟ್) ಇಲಾಖೆಯನ್ನು ಜಾರಿಗೆ ತಂದನು. ಮೂವತ್ತು ವರ್ಷಗಳ ಸರಾಸರಿ ಆದಾಯವನ್ನು ಪರಿಗಣಿಸಿ ಭೂ ಕಂದಾಯವನ್ನು ನಿಷ್ಕರ್ಷೆ ಮಾಡುವ ಪದ್ಧತಿಯನ್ನು ಜಾರಿಗೆ ತಂದನು. ಅದೇ ರೀತಿ ಭೂ ಹಿಡುವಳಿಗಳನ್ನು ನೋಂದಣಿ ಮಾಡಲು ತಾಲ್ಲೂಕುಗಳಲ್ಲಿ ಸಬ್‌ರಿಜಿಸ್ಟ್ರಾರ್, ಜಿಲ್ಲಾ ಕೇಂದ್ರಗಳಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್‌ಗಳನ್ನು ನೇಮಿಸಲಾಗಿತ್ತು. ಕಂದಾಯ ವ್ಯವಸ್ಥೆಯಲ್ಲಾಗುವ ವ್ಯತ್ಯಾಸಗಳಿಗೆ ಶಾನುಭೋಗರು ಮತ್ತು ಪಟೇಲರು ಕಾರಣವೆಂದು ಬೌರಿಂಗ್ ಗಮನಿಸಿದ್ದನು.[೬]

ವಿವಿಧ ಷರತ್ತುಗಳ ಮೇಲೆ ಗೇಣಿದಾರರಿಂದ ಅಥವಾ ಪಾಯಕಾರಿಗಳಿಂದ ಸಾಗುವಳಿ ಮಾಡಲ್ಪಟ್ಟಿದ್ದವು.[೭] ಅವುಗಳೆಂದರೆ,

೧. ವಾರಂ ಪದ್ಧತಿ: ಇದರ ಪ್ರಕಾರ ಬೆಳೆಯನ್ನು ಜಮೀನ್ದಾರ ಮತ್ತು ಗೇಣಿದಾರನ ನಡುವೆ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವುದು, ಸರಕಾರಕ್ಕೆ ಭೂ ಕಂದಾಯವನ್ನು ಜಮೀನ್ದಾರನೇ ನೀಡುವುದು.

೨. ಮುಕಪ್ಪ ಪದ್ಧತಿ: ಇದರ ಪ್ರಕಾರ ಬೆಳೆಯಲ್ಲಿ ಮೂರನೇ ಎರಡು ಭಾಗ ಗೇಣಿದಾರನ ಪಾಲಾದರೆ, ಮೂರನೇ ಒಂದು ಭಾಗ ಜಮೀನ್ದಾರನಿಗೆ. ಜಮೀನ್ದಾರ ಸರ್ಕಾರಕ್ಕೆ ಭೂ ಕಂದಾಯವನ್ನು ಕಟ್ಟುತ್ತಾನೆ.

೩. ಅರೆ ಕಂದಾಯ ಪದ್ಧತಿ: ಈ ಪದ್ಧತಿಯಲ್ಲಿ ಬೆಳೆಯಲ್ಲಿ ನಾಲ್ಕನೇ ಒಂದು ಭಾಗವನ್ನು ಪಡೆದುಕೊಂಡು, ಭೂ ಕಂದಾಯದ ಅರ್ಧಭಾಗವನ್ನು ನೀಡುತ್ತಾನೆ. ಉಳಿದ ಅರ್ಧಭಾಗವನ್ನು ಗೇಣಿದಾರ ನೀಡುತ್ತಾನೆ.

೪. ಅರೆ ಕಂದಾಯ ಪದ್ಧತಿ: ಈ ಪದ್ಧತಿಯಲ್ಲಿ ನಿಗದಿತ ಬೆಲೆಯನ್ನು ಗೇಣಿದಾರ ಜಮೀನ್ದಾರನಿಗೆ ನೀಡಬೇಕು. ಇದು ಭೂ ಕಂದಾಯಕ್ಕೆ ಸಮಾನವಾಗಿರಬಹುದು ಅಥವಾ ಹೆಚ್ಚಾಗಿರಬಹುದು.

೫. ಭತಾಯಿ ಭೂಮಿ ಪದ್ಧತಿ: ಗೇಣಿದಾರ ನೇರವಾಗಿ ಸರ್ಕಾರದಿಂದ ಈ ಭೂಮಿಯನ್ನು ಪಡೆಯುವುದು. ಆದರೆ ಮೊದಲು ಭೂ ಕಂದಾಯಕ್ಕೆ ಬೆಳೆಯಲ್ಲಿ (ಫಸಲಿನಲ್ಲಿ) ಪಾಲನ್ನು ನೀಡುತ್ತಿದ್ದರು. ಈಗ ಹಣದ ರೂಪದಲ್ಲಿ ನೀಡಬೇಕಾಗಿತ್ತು.

ಇನಾಂ ಭೂ ಹಿಡುವಳಿ

ಇನಾಂ ಎಂಬ ಪದವು ಪರ್ಶಿಯನ್ ಭಾಷೆಯಿಂದ ಬಂದ ಪದವಾಗಿದೆ. ವ್ಯಕ್ತಿಗಳಿಗೆ, ಧಾರ್ಮಿಕ ದಾನದ ಮತ್ತು ಇತರ ಉದ್ದೇಶಗಳಿಗೆ ಅಥವಾ ಹಳ್ಳಿ ಸಮುದಾಯಕ್ಕೆ ಅಥವಾ ರಾಜ್ಯಕ್ಕೆ ಅವರು ನೀಡಿದ ಸೇವೆಗಳಿಗೆ ಪ್ರತಿಯಾಗಿ ಕೊಡಲಾದ ಕಂದಾಯರಹಿತ ಭೂಮಿಯಾಗಿದೆ. ಇದನ್ನು ೧೮೮೮ರ ಭೂ ಕಂದಾಯ ಸಂಹಿತೆಯಲ್ಲಿ ಕಾಣಬಹುದು. ಇದನ್ನು ಭಾರತ ಸ್ವಾತಂತ್ರ್ಯ ಪಡೆದ ನಂತರ ೧೯೫೫ರಲ್ಲಿ ರದ್ದುಗೊಳಿಸಲಾಗಿದೆ.

ಚಿತ್ರದುರ್ಗ ಪ್ರದೇಶವು ೧೭೭೯ರಲ್ಲಿ ಹೈದರಾಲಿಯ ಸ್ವಾಧೀನವಾದ ನಂತರ ಮೈಸೂರು ಸಂಸ್ಥಾನದಲ್ಲಿ ವಿಲೀನವಾಗುತ್ತದೆ. ಹೈದರ್‌ನ ಮಗನಾದ ಟಿಪ್ಪುಸುಲ್ತಾನನ ಕಾಲದಲ್ಲಿ ೧೭೮೮ರಲ್ಲಿ ರೆವಿನ್ಯೂ ಸರ್ವೇ ಕಾರ್ಯ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಇನಾಂ ಭೂ ಹಿಡುವಳಿಗಳನ್ನು ಸರಕಾರಕ್ಕೆ ಸೇರಿಸಿಕೊಳ್ಳಲಾಯಿತು. ಆದರೂ ಕೆಲವು ಧಾರ್ಮಿಕ ಸಂಸ್ಥೆಗಳಾದ ಮಸೀದಿಗಳು, ದೇವಾಲಯಗಳು, ಮಠಗಳು ಹಾಗೆಯೇ ಬ್ರಾಹ್ಮಣರು ತಮ್ಮ ಹಿಂದಿನ ಇನಾಂ ಭೂ ಹಿಡುವಳಿಗಳನ್ನು ಈ ವೇಳೆಯಲ್ಲಿ ರಕ್ಷಿಸಿಕೊಂಡರು. ದಿವಾನ್ ಪೂರ್ಣಯ್ಯನವರು ತಮ್ಮ ಕಾಲದಲ್ಲಿ ಇನಾಂ ಭೂ ಹಿಡುವಳಿಗಳನ್ನು ಪುನರುಜ್ಜೀವನಗೊಳಿಸಿದರು.[೮]

ಮೈಸೂರು ಅರಸರ ಕಾಲದ ಅವಧಿಯಲ್ಲಿ ಚಿತ್ರದುರ್ಗ, ದಾವಣಗೆರೆ ಪ್ರದೇಶದಲ್ಲಿ ದೇವಾಲಯಗಳು ಹೆಚ್ಚು ಭೂ ಹಿಡುವಳಿಗಳ ಒಡೆತನ ಹೊಂದಿದ್ದವು. ಇದಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಮತ್ತು ದತ್ತಿ ಆಯುಕ್ತರಲ್ಲಿರುವ ದಾಖಲೆಗಳನ್ನು ಗಮನಿಸಿದರೆ ಅವು ಹೊಂದಿರುವ ಭೂ ಹಿಡುವಳಿಯನ್ನು ಗಮನಿಸಬಹುದು.

ಹರಿಹರ ತಾಲ್ಲೂಕಿನ ಕೊಮಾರನಹಳ್ಳಿಯ ಶ್ರೀರಂಗನಾಥ ದೇವಾಲಯವು ಇಂದಿಗೂ ಸುಮಾರು ೪೫.೬೬೫ ರೂ. ತಸ್ತಿಕ್ ಪಡೆಯುತ್ತದೆ. ಹಾಗೆಯೇ ಹರಿಹರದ ಹರಿಹರೇಶ್ವರ ದೇವಾಲಯ ಭೂಮಿಯು ಇನಾಂ ಹೊಂದಿದ್ದವು.

ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಹಾಗೂ ಭೂ ಸುಧಾರಣೆ ಕ್ರಮದಿಂದಾಗಿ ಮೊದಲಿನ ಸಾಮಾಜಿಕ ಮತ್ತು ಧಾರ್ಮಿಕ ಪ್ರಭಾವಗಳು ಕಳೆದುಕೊಳ್ಳುತ್ತಾ ಬಂದವು. ಹೀಗಾಗಿ ಬಹಳಷ್ಟು ಮಂದಿ ಇನಾಂ ಭೂ ಹಿಡುವಳಿಗಳನ್ನು ಮಾರಿ ಪಟ್ಟಣಕ್ಕೆ ವಲಸೆ ಹೋದರು.[೯] ೧೯೫೫ರಲ್ಲಿ ಇನಾಂ ರದ್ಧತಿಯ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ಬಹಳಷ್ಟು ಇನಾಂದಾರರು ತಮ್ಮ ಭೂಮಿಯನ್ನು ಮಾರಿಕೊಂಡಿದ್ದರಿಂದ ಈ ಕಾನೂನಿಂದ ಉದ್ದೇಶ ಅಷ್ಟಾಗಿ ಸಫಲವಾಗಲಿಲ್ಲ. ದೇವಾಲಯಗಳು ಸಹ ತಮ್ಮ ಭೂ ಹಿಡುವಳಿಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದೇ ತಸ್ತಿಕ್ ಪಡೆಯುವುದರಲ್ಲಿಯೇ ತಟಸ್ಥವಾಗಿರುವುದನ್ನು ಅಧ್ಯಯನದಿಂದ ತಿಳಿಯಬಹುದು.

ದಾವಣಗೆರೆ ಪ್ರದೇಶದಲ್ಲಿ ಜಗಳೂರು ತಾಲ್ಲೂಕಿನಲ್ಲಿ ೪೯, ಹರಿಹರ ತಾಲ್ಲೂಕಿನಲ್ಲಿ ೨೦, ದಾವಣಗೆರೆ ತಾಲ್ಲೂಕಿನಲ್ಲಿ ೫೮ ಭೂ ಹಿಡುವಳಿ ಹೊಂದಿದ ದೇವಾಲಯಗಳಿವೆ.[೧೦]

ಸ್ವಾತಂತ್ರ್ಯ ನಂತರದ ಭೂ ಹಿಡುವಳಿ ವ್ಯವಸ್ಥೆ

ವಸಾಹತುಶಾಹಿಗಳಿಂದ ಮುಕ್ತಿ ದೊರೆತ ನಂತರ ಭೂ ಹಿಡುವಳಿಗಳಿಗೆ ಸಂಬಂಧಿಸಿದಂತೆ ಭಾರತ ಸರಕಾರವು ವಿಶೇಷ ಗಮನ ಹರಿಸಿತು. ಈ ಮೂಲಕ ಸಾಮಾಜಿಕ ಸಮಾನತೆಯನ್ನು ಕಂಡುಕೊಳ್ಳುವುದು ಮುಖ್ಯವಾಗಿತ್ತು. ಈ ಸಂದರ್ಭದಲ್ಲಿ ಭೂ ಹಿಡುವಳಿಗೆ ಸಂಬಂಧಿಸಿದಂತೆ ವಿಶೇಷ ಕಾಯ್ದೆ ಕಾನೂನುಗಳನ್ನು ಜಾರಿ ಮಾಡಲಾಯಿತು. ಜಮೀನ್ದಾರಿ ಪದ್ಧತಿ, ಗೈರು ಹಾಜರಿ ಭೂಮಾಲೀಕತ್ವ ಮೊದಲಾದ ಗೇಣಿದಾರ ವ್ಯವಸ್ಥೆಗಳನ್ನು ಕೃಷಿ ವಲಯದ ಅಭಿವೃದ್ಧಿಗಾಗಿ ಬಹುಮಟ್ಟಿಗೆ ಕಾಯಿದೆ ಕಾನೂನುಗಳ ಮೂಲಕ ನಿಯಂತ್ರಿಸಲಾಯಿತು.

ಸ್ವಾತಂತ್ರ್ಯ ನಂತರದಲ್ಲಿ ಜಮೀನ್ದಾರಿ ಮಾದರಿಯ ಭೂಹಿಡುವಳಿದಾರರಾಗಿದ್ದವರಲ್ಲಿ ಬಹುಮಂದಿ ಭೂ ಸುಧಾರಣೆಯ ನಂತರ ಆರ್ಥಿಕವಾಗಿ ಗಣನೀಯವಾಗಿ ದುರ್ಬಲರಾದರು. ೨೦ನೇ ಶತಮಾನದ ಮಧ್ಯಭಾಗದಲ್ಲಿ ಕೃಷಿ ಕ್ಷೇತ್ರದಲ್ಲಿ ಇರುವ ಹಲವಾರು ಸಮಸ್ಯೆಗಳ ಬಗ್ಗೆ ಸರಕಾರ ಗಮನ ಹರಿಸಿತು.

೧. ಭೂಮಾಲೀಕರು ಗೇಣಿದಾರರಿಗೆ ಕಡಿಮೆ ಗುತ್ತಿಗೆ ಕೊಡುವುದನ್ನು ರದ್ದುಗೊಳಿಸಲಾಗಿದೆ.

೨. ಗೇಣಿದಾರರನ್ನು ಖಾಯಂಗೊಳಿಸುವುದು.

೩. ಗೇಣಿದಾರರನ್ನು ಒಕ್ಕಲೆಬ್ಬಿಸುವುದರ ಬಗ್ಗೆ ಭೂಮಾಲೀಕರಿಗಿದ್ದ ಹಕ್ಕನ್ನು ರದ್ದುಗೊಳಿಸಲಾಗಿದೆ.

ಸ್ವಾತಂತ್ರ್ಯ ಬಂದ ಆರು ವರ್ಷಗಳವರೆಗೂ ಭೂಮಿತಿಯನ್ನು ಜಾರಿಗೊಳಿಸುವ ವಿಷಯದಲ್ಲಿ ಹಿನ್ನೆಡೆಯಾಯಿತು. ೧೯೫೩ರಲ್ಲಿ ಆಗ್ರಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದಲ್ಲಿ ಪ್ರತಿಯೊಂದು ರಾಜ್ಯವೂ ಭೂಮಿಗೆ ಸಂಬಂಧಪಟ್ಟ ಸರಿಯಾದ ಮಾಹಿತಿಯನ್ನು ಸಂಗ್ರಹಿಸುವಂತೆ ಸೂಚಿಸಲಾಗಿತ್ತು.[೧೧] ಇದರ ಅನ್ವಯ ಕರ್ನಾಟಕ ರಾಜ್ಯ ಸರ್ಕಾರವು ಕೆಲವು ಕಾಯ್ದೆಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಮುಖ್ಯವಾದವು ಹೀಗಿವೆ.

೧. ಸಾಗುವಳಿದಾರನಿಗೆ ಭೂಮಿ ಹಿಡುವಳಿಯ ಭದ್ರತೆ ನೀಡುವುದು.

೨. ಭೂ ಹಿಡುವಳಿದಾರನಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ದೊರಕಿಸಿಕೊಡುವುದು.

೩. ಶಾಸನಾತ್ಮಕವಾಗಿ ಗೇಣಿಯನ್ನು ನಿಗದಿಪಡಿಸುವುದು.

೪. ಅಕ್ರಮ ಗೇಣಿ ವಸೂಲಿ, ಭೂ ಹಿಡುವಳಿಗಳ ಸ್ವಾಧೀನಪಡಿಸುವಿಕೆಯನ್ನು ರದ್ದುಪಡಿಸಲಾಯಿತು.

೫. ದೊಡ್ಡ ಹಿಡುವಳಿದಾರ ಮತ್ತು ಸಣ್ಣ ಹಿಡುವಳಿದಾರರ ಗಾತ್ರದ ಮೇಲೆ ಪರಮಾವಧಿ ಮಿತಿ ವಿಧಿಸಿ ಹೆಚ್ಚುವರಿ ಭೂಮಿಯನ್ನು ಸರಕಾರಕ್ಕೆ ಸೇರಿಸಿಕೊಂಡು ಅದನ್ನು ಭೂರಹಿತರಿಗೆ ಹಂಚುವ ಪ್ರಯತ್ನ ಮಾಡಲಾಯಿತು.

೩.೨. ವಸಾಹತು ಕೃಷಿ ನೀತಿ

ಭಾರತದಲ್ಲಿ ಕೃಷಿಯು ಪ್ರಾಚೀನ ಕಾಲದಿಂದ ಮಧ್ಯಯುಗದವರೆಗೆ ವಾಣಿಜ್ಯಪರವಾಗಿರಲಿಲ್ಲ. ಮುಖ್ಯವಾಗಿ ಭಾರತ ಹಳ್ಳಿಗಳಿಂದ ಕೂಡಿದ ದೇಶ. ಭಾರತದ ಬಹುತೇಕ ಕಡೆಗಳಲ್ಲಿ ರೈತರು ತಮಗೆ ಯೋಗ್ಯವೆನಿಸಿದ ಭೂಮಿಯಲ್ಲಿ, ಜೊತೆಗೆ ನೀರು ಇತ್ಯಾದಿಗಳು ಸಿಗುವ ಸ್ಥಳದಲ್ಲಿ ಉತ್ತು, ಬಿತ್ತು ಬೆಳೆ ತೆಗೆಯುತ್ತಿದ್ದರು. ಬೆಳೆದ

ಬೆಳೆಯನ್ನು ಮಾರಾಟ ಮಾಡುತ್ತಿರಲಿಲ್ಲ. ಹೇಗೆಂದರೆ ಸಾಟಿ ವಿನಿಮಯ ಪದ್ಧತಿ ಜಾರಿಯಲ್ಲಿತ್ತು. ಒಂದು ಕಡೆ ಭತ್ತ ಬೆಳೆದರೆ ಮತ್ತೊಂದು ಕಡೆ ರಾಗಿ, ಇನ್ನೊಂದು ಕಡೆ ಎಣ್ಣೆ ಬೀಜಗಳನ್ನು ಬೆಳೆಯುತ್ತಿದ್ದರು. ಮುಖ್ಯವಾಗಿ ಆಹಾರಕ್ಕಾಗಿಯೇ ಬೆಳೆಗಳನ್ನು ಬೆಳೆಯುತ್ತಿದ್ದರು. ಹಾಗಾಗಿ ತಾವು ಬೆಳೆದ ಬೆಳೆಗಳನ್ನು ಅವರವರಲ್ಲೇ ವಿನಿಮಯ ಮಾಡಿಕೊಳ್ಳುತ್ತಿದ್ದರು. ಇಂತಹ ವ್ಯವಸ್ಥೆಯಲ್ಲಿದ್ದ ಭಾರತದ ಕೃಷಿ ವ್ಯವಸ್ಥೆಯ ಮೇಲೆ ಕ್ರಿ.ಶ. ೧೯೦೦ರಲ್ಲಿ ಯುರೋಪ್ ಖಂಡದಿಂದ ಬಂದಂತಹ ಬ್ರಿಟಿಷರು ತಮ್ಮ ಕೈಗಾರಿಕೆಗಳ ಹಿತಾಸಕ್ತಿಗಾಗಿ ಇಲ್ಲಿನ ಕೃಷಿಯಲ್ಲಿ ವಾಣಿಜ್ಯ ಬೆಳೆಗಳನ್ನು, ಅದೂ ಒಂದೇ ಬಗೆಯಾದ ವಾಣಿಜ್ಯ ಬೆಳೆಗಳನ್ನು ವಿಸ್ತರಿಸುತ್ತಾ ಹೋದ ವಸಾಹತು ಶಾಹಿಯೂ ಅಂತಾರಾಷ್ಟ್ರೀಯ ಮಾರುಕಟ್ಟೆಯ ಏರುಪೇರುಗಳಿಗೆ ಕರ್ನಾಟಕದ ರೈತರನ್ನು ಬಲಿಪಶು ಮಾಡಲು ಆರಂಭಿಸಿದ್ದನ್ನು ಇಲ್ಲಿ ನಾವು ಗಮನಿಸಬಹುದಾಗಿದೆ.

ಬ್ರಿಟಿಷರ ಈ ವಸಾಹತು ಕೃಷಿ ನೀತಿಯ ಪ್ರಕಾರ ಯುರೋಪಿನ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಇಲ್ಲಿಂದ ರಫ್ತು ಮಾಡುವುದು ಹಾಗೂ ಅಲ್ಲಿ ಸಿದ್ಧಪಡಿಸಿದ ವಸ್ತುಗಳನ್ನು ಭಾರತದಲ್ಲಿ ಮಾರಾಟ ಮಾಡುವುದು ಅವರ ವಸಾಹತು ನೀತಿಗಳಲ್ಲಿ ಒಂದಾಗಿತ್ತು.

ಇಂಗ್ಲೆಂಡಿನ ಕೈಗಾರಿಕೀಕರಣ ಪ್ರಕ್ರಿಯೆ ಚುರುಕುಗೊಳಿಸುವ ಅಲ್ಲಿನ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ, ಇತರೆ ದೇಶಗಳೊಂದಿಗೆ ಲಾಭದಾಯಕ ವ್ಯಾಪಾರ ನಡೆಸುವ ಉದ್ದೇಶಗಳನ್ನಿಟ್ಟುಕೊಂಡು ಭಾರತದಲ್ಲಿ ಬಲವಂತವಾಗಿ ಕೃಷಿಯನ್ನು ವಾಣಿಜ್ಯೀಕರಿಸುವ ಪ್ರಯತ್ನವನ್ನು ಬ್ರಿಟಿಷರು ಮಾಡಿದರು.

ಕೃಷಿಯ ವಾಣಿಜ್ಯೀಕರಣ

ಕರ್ನಾಟಕಕ್ಕೆ ಮೊದಲು ವಿದೇಶಿ ವಾಣಿಜ್ಯ ತಳಿಗಳನ್ನು ತಂದವರು ಪೋರ್ಚುಗೀಸರು. ಇವರು ಅಮೆರಿಕಾ ಖಂಡಗಳಿಂದ ಮುಸುಕಿನ ಜೋಳ, ಹೊಗೆಸೊಪ್ಪು (ತಂಬಾಕು), ನೆಲಗಡಲೆ, ಆಲೂಗಡ್ಡೆ, ಮೆಣಸಿನಕಾಯಿ ಮತ್ತು ಟೊಮ್ಯಾಟೋಗಳನ್ನು ತಂದು ಕರ್ನಾಟಕಕ್ಕೆ ಪರಿಚಯಿಸಿದರು. ಕರ್ನಾಟಕಕ್ಕೆ ಗೋವಾ ಬಹಳ ಸಮೀಪದಲ್ಲಿರುವುದರಿಂದ ಈ ಹೊಸ ಬೆಳೆಗಳ ತಿಳುವಳಿಕೆಯನ್ನು ಕರ್ನಾಟಕವು ಮೊದಲು ಪಡೆದುಕೊಂಡಿತು. ಅಲ್ಲದೇ ಗೋವಾದ ಕ್ರೈಸ್ತ ಕೃಷಿಕರು ಕರ್ನಾಟಕಕ್ಕೆ ಮುಖ್ಯವಾಗಿ ಕರಾವಳಿ ಹಾಗೂ ಮಲೆನಾಡುಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ವಲಸೆ ಬಂದರು. ಬುಕಾನನ್ ಕಿ.ಶ.೧೮೦೦ರಲ್ಲಿ ''ಇಲ್ಲಿನ ಭತ್ತದ ಗದ್ದೆಗಳು ಮಲಬಾರಿನದಕ್ಕಿಂತಲೂ ಹೆಚ್ಚು ಅಚ್ಚುಕಟ್ಟಾಗಿ ಕೃಷಿಯಾಗಿದ್ದವು''[೧೧] ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ರೀತಿ ಪೋರ್ಚುಗೀಸರಿಂದ ವಿದೇಶಿ ಬೆಳೆಗಳು ಬಂದಂತಹ ಕೃಷಿಯೊಂದಿಗೆ ಸಂಗಮವಾದವು. ಪೋರ್ಚುಗೀಸರ ನಂತರ ಬಂದಂತಹ ಬ್ರಿಟಿಷರು ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ೧೮೬೦ರ ದಶಕದಲ್ಲಾದ ಅಮೆರಿಕಾದಲ್ಲಾದ ಆಂತರಿಕ ಯುದ್ಧದಿಂದಾಗಿ ಅಮೆರಿಕಾದಿಂದ ಬ್ರಿಟನ್ನಿಗೆ ರಫ್ತು ಆಗುತ್ತಿದ್ದ ಹತ್ತಿ ಹಾಗೂ ಅದರ ವ್ಯಾಪಾರ ನಿಂತುಹೋಯಿತು. ಇದರಿಂದ ಯುರೋಪಿನ ಕೈಗಾರಿಕೆಗಳು ಭಾರತದತ್ತ ತಮ್ಮ ದೃಷ್ಟಿ ಹರಿಸಿದ್ದರಿಂದ ಕರ್ನಾಟಕದಲ್ಲಿ ಹತ್ತಿಯ ವಾಣಿಜ್ಯ ಬೆಳೆಗೆ ಬ್ರಿಟಿಷರು ಪ್ರೋತ್ಸಾಹ ನೀಡಲಾರಂಭಿಸಿದರು. ಇದರಿಂದ ಕರ್ನಾಟಕದ ಹತ್ತಿ ಬೆಳೆಯುವ ಪ್ರದೇಶಗಳನ್ನು ಬ್ರಿಟಿಷರು ಅಭಿವೃದ್ಧಿಗೊಳಿಸಿದರು.[೧೨] ಹತ್ತಿ ಬೆಳೆಗೆ

ಪ್ರಸಿದ್ಧವಾದ ಕಪ್ಪು ಭೂಮಿಯನ್ನು ಹೊಂದಿದ್ದ ಧಾರವಾಡ, ದಾವಣಗೆರೆ ಉತ್ತರ ಕರ್ನಾಟಕದ ಕೆಲ ಪ್ರದೇಶಗಳಲ್ಲಿ ಹತ್ತಿಯನ್ನು ಹೆಚ್ಚಾಗಿ ಬೆಳೆಯತೊಡಗಿದರು. ಈ ಹತ್ತಿ ಕಚ್ಚಾ ವಸ್ತುವಿಗೆ ಲಂಕಾಶೈರ್ ಮತ್ತು ಮ್ಯಾನ್‌ಚೆಸ್ಟರುಗಳಲ್ಲಿ ಬೇಡಿಕೆ ಹೆಚ್ಚಾಯಿತು. ಈ ಬೇಡಿಕೆಯ ಅನುಗುಣವಾಗಿ ವಿದೇಶಿ ಹತ್ತಿ ತಳಿಗಳು ಅಭಿವೃದ್ಧಿಗೊಂಡವು.

ಹತ್ತಿ: ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯನ್ನು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೆಳೆಯಲಾಗುತ್ತಿತ್ತು. ಹತ್ತಿಯನ್ನು ನಂಬಿ ಸಾವಿರಾರು ಗುಡಿ ಕೈಗಾರಿಕೆಗಳಲ್ಲಿ ನೂಲನ್ನು ತೆಗೆಯಲಾಗುತ್ತಿತ್ತು. ಚರಿತ್ರಕಾರರಾದ ಚೋಕ್ಸೆ ಅಭಿಪ್ರಾಯ ಪಡುವಂತೆ ಹತ್ತಿ ಬೆಳೆಯುವ ಪ್ರದೇಶವಾಗಿ ಕರ್ನಾಟಕದ ಪ್ರಾಮುಖ್ಯತೆ ಹೆಚ್ಚಾಗಿದ್ದು ಬ್ರಿಟಿಷರಿಗೆ ಗಣನೀಯ ಪ್ರಮಾಣದಲ್ಲಿ ಹತ್ತಿ ಲಾಭಕರವಾಗಿ ಬೆಳೆಯುವ ಪ್ರದೇಶವು ಭಾರತದಲ್ಲಿ ಇನ್ನೊಂದಿದೆ ಎಂಬ ಅರಿವುಂಟುಮಾಡಿತು.

ಪ್ರಾರಂಭದಲ್ಲಿ ಮೈಸೂರು ರಾಜ್ಯವು ಹತ್ತಿಯ ಬೆಳೆಗೆ ಸೂಕ್ತವಲ್ಲವೆಂದು ಭಾವಿಸಲಾಗಿತ್ತು. ಏಕೆಂದರೆ ಇಲ್ಲಿಯ ವಾಯುಗುಣದಲ್ಲಿ ಗಾಳಿ ಹೆಚ್ಚು ಮತ್ತು ಶುಷ್ಕ. ಮೈಸೂರಿನ ಹತ್ತಿಯ ಬೇಡಿಕೆಯನ್ನು ಹತ್ತೊಂಬತ್ತನೇ ಶತಮಾನದಲ್ಲಿ ಧಾರವಾಡ ಮತ್ತು ಬಳ್ಳಾರಿಗಳಿಂದ ಆಮದು ಮಾಡಿಕೊಳ್ಳಲಾಗಿತ್ತು. ದುರದೃಷ್ಟಕ್ಕೆ ಧಾರವಾಡದಲ್ಲಿ ಬೆಳೆಯುತ್ತಿದ್ದ ಹತ್ತಿ ಒರಟು ಬಗೆಯದಾಗಿತ್ತು. ಅದನ್ನು ಅಶುದ್ಧ ಸ್ಥಿತಿಯಲ್ಲೇ ಪ್ಯಾಕ್ ಮಾಡಿ ಮಾರುಕಟ್ಟೆಗೆ ಕಳುಹಿಸಲಾಗುತ್ತಿತ್ತು. ಧಾರವಾಡವು ಮುಂಬೈ ಪ್ರಾಂತ್ಯ ಸೇರಿದ ಮೇಲೆ ಬ್ರಿಟಿಷರು ೧೮೪೯ ಮತ್ತು ೧೮೫೯ರಲ್ಲಿ ಹತ್ತಿಯ ಉತ್ಪಾದನೆಯನ್ನು ಉತ್ಪಾದಿಸಲು ಪ್ರಯತ್ನಿಸಿದರು. ಅದರಿಂದ ಅಷ್ಟೇನೂ ಪರಿಣಾಮ ಕಂಡುಬರಲಿಲ್ಲ. ೧೮೬೦ರಲ್ಲಿ ಮುಂಬಯಿ ಕರ್ನಾಟಕದಲ್ಲಿ ಅಮೆರಿಕನ್ ಹತ್ತಿಯನ್ನು ಬಿತ್ತಿ ನೋಡಲಾಯಿತು. ಬೆಳೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಬರಲಿಲ್ಲ. ಹಾಗಾಗಿ ಬೆಳಗಾಂನಲ್ಲಿ ಆ ಪ್ರಯೋಗವನ್ನು ಕೈ ಬಿಡಲಾಯಿತು. ಆದರೆ ಧಾರವಾಡದಲ್ಲಿ ಅದು ಹೆಚ್ಚು ಯಶಸ್ವಿಯಾಯಿತು. ಬ್ರಿಟಿಷರು ಈ ರೀತಿಯಾಗಿ ಹತ್ತಿಯನ್ನು ಬೆಳೆಯಲು ಉತ್ತೇಜನ ನೀಡಿದರು. ಆದರೆ ಇಲ್ಲಿನ ಹತ್ತಿಯನ್ನು ತಮ್ಮ ಕೈಗಾರಿಕೆಗಳಿಗೆ ಬಳಸಿಕೊಳ್ಳುವ ಮೂಲಕ ಭಾರತೀಯ ಹತ್ತಿ ಕೈಗಾರಿಕೋದ್ಯಮವನ್ನು ಹಾಳು ಮಾಡುವ ಕ್ರಮ ಕೈಗೊಂಡರು.

ದಾವಣಗೆರೆ ಪ್ರದೇಶದಲ್ಲಿ ಹತ್ತಿ ಬೆಳೆಯಲು ಕೃಷಿ ಯೋಗ್ಯವಾದ ಕಪ್ಪು ಮಣ್ಣು ಹೆಚ್ಚಾಗಿತ್ತು. ಇಲ್ಲಿನ ಪರಿಸರ ಹತ್ತಿ ಕೃಷಿಗೆ ಆರಂಭದಲ್ಲಿ (ಭದ್ರಾ ಅಣೆಕಟ್ಟು ನೀರು ಬರುವವರೆಗೆ) ಉತ್ತೇಜನಕಾರಿಯಾಗಿತ್ತು. ಈ ಬೆಳೆಯು ಹತ್ತಿ ವ್ಯಾಪಾರವನ್ನು ಹೆಚ್ಚಿಸಿ ಆ ಕ್ಷೇತ್ರದಲ್ಲಿ ಪಳಗಿದ ವ್ಯಾಪಾರಿಗಳು ಎಂಟು ಹತ್ತಿ ಗಿರಣಿಗಳನ್ನು ಸ್ಥಾಪಿಸಲು ಪ್ರೇರಣೆ ನೀಡಿತು. ಸುಧಾರಿತ ತಳಿಯಾದ ಲಕ್ಷ್ಮಿ ಹತ್ತಿಯನ್ನು ಹೆಚ್ಚಾಗಿ ಈ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ನಂತರ ಪಕ್ಕದ ಧಾರವಾಡ ಜಿಲ್ಲೆಯಿಂದ 'ಜಯಧರ' ತಳಿಯನ್ನು ಬಳಸಿ ಹತ್ತಿ ಬೆಳೆಯುತ್ತಿದ್ದರು. ಕ್ರಮೇಣ, ಬಿ-೪೦ ಎಂ.ಎ. ೫, ಮುಂತಾದ ತಳಿಗಳನ್ನು ಬಳಸಿ ಹತ್ತಿ ಬೆಳಯಲಾಯಿತು. ಆದರೆ ೧೯೬೦ರ ದಶಕದಲ್ಲಿ ಭದ್ರಾ ಅಣೆಕಟ್ಟಿನ ನೀರು, ದಾವಣಗೆರೆ, ಹರಿಹರ, ಮುಂತಾದ ಪ್ರದೇಶಗಳಿಗೆ ವ್ಯವಸಾಯಕ್ಕೆ ಲಭ್ಯವಾಯಿತು. ಇಲ್ಲಿಂದ ಮುಂದೆ ದಾವಣಗೆರೆ ಪ್ರದೇಶದ ಹತ್ತಿ ಬೆಳೆಯ ಮೇಲೆ ತೀವ್ರ ಪರಿಣಾಮ ಉಂಟಾಗಿ ಉತ್ಪಾದನೆಯಲ್ಲಿ ಕುಸಿತ ಉಂಟಾಯಿತು. ಫ್ರಾನ್ಸಿಸ್ ಬುಕಾನ್‌ನ ತನ್ನ ವರದಿಯಲ್ಲಿ ತಿಳಿಸುವಂತೆ

ಹತ್ತಿ ಕೃಷಿಗೆ ಯೋಗ್ಯವಾದ ಕಪ್ಪು ಮಣ್ಣಿನ ಪ್ರದೇಶವು ನೀರಾವರಿ ಸೌಕರ್ಯಕ್ಕೊಳಪಟ್ಟಾಗ ರೈತರು ತಾವು ಬೆಳೆಯುತ್ತಿದ್ದ ವಾಣಿಜ್ಯ ಬೆಳೆಗಳಲ್ಲಿ ಬದಲಾವಣೆ ಮಾಡಿಕೊಂಡರು. ಹತ್ತಿ ಬೆಳೆಯುತ್ತಿದ್ದವರು ಅದೇ ಮಣ್ಣಿನಲ್ಲಿ ಭತ್ತ, ಅಡಿಕೆ, ತೆಂಗು, ಶೇಂಗಾ, ಮೆಕ್ಕೆಜೋಳ, ಸೂರ್ಯಕಾಂತಿಯನ್ನು ಹೆಚ್ಚು ಹೆಚ್ಚು ಬೆಳೆಯಲಾರಂಭಿಸಿದರು.[೧೩]

ಕಬ್ಬು: ಇದು ಮೂಲತಃ ಭಾರತದಲ್ಲಿ ಬೆಳೆಯುತ್ತಿದ್ದ ವಾಣಿಜ್ಯ ಬೆಳೆಯಾಗಿದೆ. ಕ್ರಿಶ. ೧ ಮತ್ತು ೩ನೇ ಶತಮಾನದ ಸಂಗಂ ಯುಗದ ಸಾಹಿತ್ಯವಾದ ಪಟ್ಟಿಪ್ಪಾಳ್ಳಿ ಮತ್ತು ಶಿಲಪ್ಪದಿಗಾರಂನಲ್ಲಿ ಕಂಡುಬರುವಂತೆ[೧೪] ನಾನಾ ರೀತಿಯ ಕೃಷಿ ಬೆಳೆಗಳು, ನೀರಾವರಿ ಕೃಷಿ ಉತ್ಪನ್ನಗಳು, ಕೃಷಿ ಸಲಕರಣೆಗಳ ವಿಪುಲ ಮಾಹಿತಿಯಿದೆ. ಹಾಗೆಯೇ "ಜೀವಕ ಚಿಂತಾಮಣಿ" ಎಂಬ ಕೃತಿಯಲ್ಲಿ ಕೃಷಿಯ ಬಗ್ಗೆ ವಿವರ ನೀಡುತ್ತಾ ರೈತರು ಬೆಲ್ಲವನ್ನು ತಯಾರಿಸುತ್ತಾರೆ.[೧೫] ಎಂಬ ಉಲ್ಲೇಖ ಗಮನಿಸಿದರೆ ಆ ಕಾಲಕ್ಕಾಗಲೇ ಭಾರತದಲ್ಲಿ ವಾಣಿಜ್ಯ ಬೆಳೆಯಾಗಿ ಕಬ್ಬನ್ನು ಬೆಳೆಯಲಾಗುತ್ತಿತ್ತು ಎಂಬುದನ್ನು ಮನಗಾಣಬಹುದಾಗಿದೆ.

ಟಿಪ್ಪುವಿನ ಮರಣದ ನಂತರ ಬ್ರಿಟಿಷರು ವಶಪಡಿಸಿಕೊಂಡ ಪ್ರದೇಶದ ಸ್ಥಿತಿಗತಿಗಳನ್ನು ವರದಿ ಮಾಡಲು ನೇಮಕಗೊಂಡಿದ್ದ ಫ್ರಾನ್ಸಿಸ್ ಬುಕಾನನ್ ಕೂಡ ಕಬ್ಬನ್ನು ಕರ್ನಾಟಕದಲ್ಲಿ ಬೆಳೆಯಲಾಗುತ್ತಿತ್ತು ಎಂದು ವಿವರಿಸಿದ್ದಾನೆ.[೧೬] ಈ ಎಲ್ಲ ಉಲ್ಲೇಖಗಳಿಂದ ಪ್ರಾಚೀನ ಕಾಲದಿಂದಲೂ ಕಬ್ಬು ವಾಣಿಜ್ಯ ಬೆಳೆಯಾಗಿತ್ತು ಎಂಬುದು ತಿಳಿದುಬರುತ್ತದೆ. ಆದರೆ ಅದು ಕೈಗಾರಿಕಾ ಕೇಂದ್ರಿತವಾಗಿರಲಿಲ್ಲವೆಂದು ತಿಳಿಯಬಹುದು. ಆದರೆ ಬ್ರಿಟಿಷ್ ವಸಾಹತು ಕೃಷಿ ನೀತಿಯ ಪ್ರಭಾವದಿಂದಾಗಿ ಕೃಷಿ ವಾಣಿಜ್ಯೀಕರಣಗೊಂಡಾಗ ಕಬ್ಬು ವಸಾಹತು ನೀತಿಗೆ ಒಳಪಟ್ಟಿತ್ತು. ಬ್ರಿಟಿಷರು ಕರ್ನಾಟಕದ ಪ್ರಾಚೀನ ತಳಿಯನ್ನು ಆಧುನೀಕರಿಸುವ ದೃಷ್ಟಿಯಿಂದ ಮಾರಿಷಸ್, ಚೀನಾ, ದಕ್ಷಿಣ ಸಮುದ್ರ ಪ್ರದೇಶಗಳಿಂದ ಹೊಸ ಮಾದರಿಯ ಕಬ್ಬು ತಳಿಗಳನ್ನು ತರಿಸಿ ಮೈಸೂರಿನಲ್ಲಿ ಬೆಳೆಯಲಾಗುತ್ತಿತ್ತು.[೧೭] ಹಾಗೆಯೇ ಮಾರ್ಕ್ ಕಬ್ಬನ್ ಬೆಂಗಳೂರಿನಲ್ಲಿ ಮಲ್‌ಬರಿ ಬೆಳೆಯ ಒಂದು ತೋಟವನ್ನು ಸ್ಥಾಪಿಸಿದನು. ಐಲಿಫೋನ್ಸ್‌ನಿಂದ ತರಿಸಿದ ಬಿತ್ತನೆಯ ಬೀಜದ ತುಂಡುಗಳ ಜೊತೆಗೆ ಚೈನಾ ಮತ್ತು ಹೆಲೆನಾಗಳಿಂದ ತರಿಸಿದ ಬೀಜಗಳನ್ನು ಬಿತ್ತುವುದರ ಮೂಲಕ ಕಬ್ಬಿನ ಬೆಳೆಯನ್ನು ವಾಣಿಜ್ಯೀಕರಿಸಲಾಯಿತು.

ಪ್ಲಾಂಟೇಷನ್ ಬೆಳೆಗಳು

ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ವಸಾಹತುಶಾಹಿ ಆಡಳಿತಗಾರರು ಭಾರತದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಿದರು. ಪಶ್ಚಿಮಘಟ್ಟ ಪ್ರದೇಶವು ವಾಣಿಜ್ಯ ಬೆಳೆಗಳಾದ ರಬ್ಬರ್, ತಂಬಾಕು, ಟೀ, ಕಾಫೀ, ಕಿತ್ತಳೆ ಮುಂತಾದ ಪ್ಲಾಂಟೇಷನ್ ತೋಟಗಳಾಗಿ ಪರಿವರ್ತನೆಗೊಳ್ಳಲಾರಂಭಿಸಿತು.[೧೮] ವಾಣಿಜ್ಯ ಬೆಳೆ ಬೆಳೆಯುವ ಪ್ರವೃತ್ತಿ ಇಲ್ಲಿಂದ ಆರಂಭಗೊಂಡಿತು. ಇದರಿಂದಾಗಿ ಕರ್ನಾಟಕದಲ್ಲಿ ಬಂಡವಾಳಶಾಹಿ ಬೆಳವಣಿಗೆ ಚುರುಕುಗೊಂಡಿತು. ಬ್ರಿಟಿಷರು ಬರುಬರುತ್ತಾ ೧೯ನೇ ಶತಮಾನದ ಅಂತ್ಯದ ವೇಳೆಗೆ ತೋಟದ ಉದ್ಯಮಕ್ಕೆ ಹೆಚ್ಚಿನ ಪ್ರೊತ್ಸಾಹ ನೀಡಿದರು. ಈ ಪ್ರಕ್ರಿಯೆ ಭಾರತದಾದ್ಯಂತ ಕಂಡುಬಂತು. ಅಸ್ಸಾಂ, ಬಂಗಾಳ, ಅಹಮದಾಬಾದ್, ಮುಂಬಯಿ, ಕರ್ನಾಟಕದ ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಪ್ಲಾಂಟೇಷನ್ ಬೆಳೆಗಳು ಅಭಿವೃದ್ಧಿಗೊಂಡವು.[೧೯]

ಬ್ರಿಟಿಷರು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶಗಳಿಗೆ ಬೇರೆ ಪ್ರದೇಶಗಳಲ್ಲಿ ಬೆಳೆಯುವ ಆಹಾರ ಧಾನ್ಯಗಳನ್ನು ರವಾನಿಸಿ ಅಲ್ಲಿಂದ ವಾಣಿಜ್ಯ ಬೆಳೆಗಳನ್ನು ತರಿಸಿಕೊಳ್ಳುತ್ತಿದ್ದರು. ಇದು ಸ್ಥಳೀಯ ಕೃಷಿ ಅರ್ಥ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿತು. ಬಲವಂತದ ವಾಣಿಜ್ಯೀಕರಣದ ಪ್ರಕ್ರಿಯೆಯಿಂದಾಗಿ ಆಹಾರ ಧಾನ್ಯಗಳ ಬೆಳೆ ಕಡಿಮೆಯಾಯಿತು. ಈ ಪ್ರಕ್ರಿಯೆಯು ಕ್ಷಾಮ ಪರಿಸ್ಥಿತಿಯನ್ನು ಉಂಟುಮಾಡಿತು. ಕ್ಷಾಮದ ಸಂದರ್ಭದಲ್ಲೂ ಆಹಾರ ಧಾನ್ಯಗಳನ್ನು ಬೇರೆಡೆಗೆ ಸಾಗಿಸಲಾಗುತ್ತಿತ್ತು. ಕೃಷಿಯನ್ನು ವಾಣಿಜ್ಯೀಕರಿಸುವುದರ ಜೊತೆಗೆ ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಿಸಿದರು. ಇದರಿಂದಾಗಿ ಧಾನ್ಯಗಳನ್ನು ತಮಗೆ ಇಷ್ಟ ಬಂದ ಹಾಗೆ ಮಾರಲು ಅಥವಾ ಬೇರೆಡೆಯಿಂದ ಕೊಂಡುತರಲು ಖಾಸಗಿ ವರ್ತಕರಿಗೂ ರೈತರಿಗೂ ಮುಕ್ತ ಅವಕಾಶ ನೀಡಿದರು. ಇದರ ಲಾಭವನ್ನು ಮಧ್ಯವರ್ತಿಗಳು ಹೆಚ್ಚಾಗಿ ಪಡೆದು ಕೃಷಿಯಲ್ಲಿ ಮಹತ್ವದ ಪಾತ್ರ ವಹಿಸಿದರು.[೨೦] ಇವರು ಬ್ರಿಟಿಷರು ಮತ್ತು ಸ್ಥಳೀಯ ರೈತರ ಮಧ್ಯೆ ಕೊಂಡಿಗಳಾಗಿ ಕೆಲಸ ಮಾಡಿದರು.

ಒಟ್ಟಾರೆ ಈ ವಸಾಹತು ಕೃಷಿ ನೀತಿಯು ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡುವುದು ಹಾಗೂ ಪ್ರತಿಯೊಬ್ಬರನ್ನೂ ಸಾಧ್ಯವಿದ್ದಡೆಗಳಲ್ಲೆಲ್ಲ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಮಾಡುವುದೇ ಬ್ರಿಟಿಷರ ಉದ್ದೇಶವಾಗಿತ್ತು.

೩.೩. ಕೈಗಾರಿಕಾ ಅರ್ಥ ವ್ಯವಸ್ಥೆ

ಕೈಗಾರಿಕೆ ಎಂಬ ಶಬ್ದಕ್ಕೆ ನಿಘಂಟು ಕೊಡುವ ಸಾಮಾನ್ಯ ಅರ್ಥವೆಂದರೆ ಹಸ್ತಕೌಶಲ್ಯದ ಕಾರ್ಯ ಎಂದು. ಅಂದರೆ ತೋಳ್ಬಲ ಅಥವಾ ಬಾಹು ಶಕ್ತಿಯಿಂದ ವಸ್ತುಗಳನ್ನು ತಯಾರಿಸುವ ಕಾರ್ಯಕ್ಕೆ ಕೈಗಾರಿಕೆ ಎನ್ನಬಹುದು. ಇದು ಸೀಮಿತವಾದ ಅರ್ಥವನ್ನು ನೀಡುವುದು. ಆದರೆ ವಿಶಾಲಾರ್ಥದಲ್ಲಿ ಹೇಳುವುದಾದರೆ ಹಸ್ತಕೌಶಲ್ಯ ಅಥವಾ ಯಂತ್ರಗಳ ನೆರವಿನಿಂದ ಮೂಲ ವಸ್ತುವಿನ ರೂಪ ಅಥವಾ ಗುಣವನ್ನು ಪರಿವರ್ತಿಸುವುದನ್ನು ಕೈಗಾರಿಕೆ ಎಂದು ಕರೆಯುತ್ತಾರೆ. ಯಂತ್ರಗಳನ್ನು ಉಪಯೋಗಿಸಿ ಕಚ್ಚಾ ವಸ್ತುಗಳನ್ನು ಸಿದ್ಧ ವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ವ್ಯವಸ್ಥೆಯನ್ನು ಕೈಗಾರಿಕೋದ್ಯಮವೆಂದು ಕರೆಯಲಾಗುತ್ತದೆ.

ಕೃಷಿಪ್ರಧಾನ ದೇಶವಾದ ಭಾರತದ ಮೇಲೆ ಕೈಗಾರಿಕಾಪ್ರಧಾನ ದೇಶವಾದ ಬ್ರಿಟನ್ ಆಳ್ವಿಕೆ ನಡೆಸಲು ಆರಂಭಿಸಿದಾಗ ಸಹಜವಾಗಿಯೇ ಕೆಲವೊಂದು ಬದಲಾವಣೆಗಳು ಉಂಟಾದವು. ಬ್ರಿಟಿಷರು ಭಾರತದಲ್ಲಿ ಕೃಷಿ ಅಥವಾ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಬಂದವರಲ್ಲ. ಅವರಿಗಿದ್ದ ಉದ್ದೇಶವೆಂದರೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಕಟ್ಟುವುದು ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ಲಾಭವನ್ನು ಗಳಿಸುವುದು ಮತ್ತು ಏಕಸ್ವಾಮ್ಯವನ್ನು ಸ್ಥಾಪಿಸುವುದಾಗಿತ್ತು. ಈ ಉದ್ದೇಶಗಳಿಗಾಗಿ ಪೂರಕವಾದ ಕೃಷಿ ಹಾಗೂ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿದರು.

ದೇಶದ ಆರ್ಥಿಕ ವ್ಯವಸ್ಥೆ ಎರಡು ಪ್ರಮುಖ ಬೆಳವಣಿಗೆಗಳನ್ನು ಅವಲಂಬಿಸಿರುತ್ತದೆ. ಅವುಗಳೆಂದರೆ ಕೃಷಿ ಕ್ಷೇತ್ರ ಹಾಗೂ ಕೈಗಾರಿಕಾ ಕ್ಷೇತ್ರ. ಈ ಎರಡೂ ಕ್ಷೇತ್ರಗಳು ಪರಸ್ಪರ ಪೂರಕವಾಗಿ ಕೆಲಸ ಮಾಡಿದಾಗ ಮಾತ್ರ ಒಂದು ರಾಷ್ಟ್ರ ಬಲಿಷ್ಠ ರಾಷ್ಟ್ರವಾಗಬಲ್ಲದು.[೨೧] 'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬ ಅಂಶವನ್ನು ಸರ್.ಎಂ.

ವಿಶ್ವೇಶ್ವರಯ್ಯನವರು ಈ ಹಿಂದೆಯೇ ಪ್ರತಿಪಾದಿಸಿದ್ದಾರೆ. ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಆರ್ಥಿಕ ಅಭಿವೃದ್ಧಿಗೋಸ್ಕರ ದೇಶ ದೇಶಗಳ ನಡುವೆ ಇಂದು ಸ್ಪರ್ಧೆ ಏರ್ಪಟ್ಟಿದೆ.

ದಾವಣಗೆರೆ ಪ್ರದೇಶದ ಕೈಗಾರಿಕಾ ಅರ್ಥವ್ಯವಸ್ಥೆಯನ್ನು ಗಮನಿಸುವುದಾದರೆ ಮೊದಲು ಕೈಗಾರಿಕೆಗಳಿಗೆ ಪೂರಕವಾದಂತಹ ಸಾರಿಗೆ ವ್ಯವಸ್ಥೆಯನ್ನು ಗಮನಿಸುವುದು ಅಗತ್ಯವಾಗಿದೆ. ದಾವಣಗೆರೆ ಪ್ರದೇಶವು ರಾಜ್ಯದ ಯಾವ ಮೂಲೆಯಿಂದಲಾದರೂ ಕೇವಲ ಹನ್ನೆರಡು ಗಂಟೆಗಳಲ್ಲಿ ತಲುಪಬಹುದಾದಂತಹ ವಿಶೇಷ ಸೌಕರ್ಯ ಪಡೆದುಕೊಂಡಿದೆ. ದಾವಣಗೆರೆ ಪ್ರದೇಶವು, ರಾಜ್ಯದ ಮಧ್ಯ ಭಾಗದಲ್ಲಿದೆ. ಈ ನಗರದ ಮೂಲಕ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಹಾದು ಹೋಗುತ್ತದೆ. ಈ ಜಿಲ್ಲೆಯು ಸುಮಾರು ೬೫ ಕಿ.ಮೀ. ಉದ್ದದ ರಾಷ್ಟ್ರೀಯ ರಸ್ತೆ ಹಾಗೂ ೩೦೩ ಕಿ.ಮೀ. ಉದ್ದದ ರಾಜ್ಯ ಮುಖ್ಯ ರಸ್ತೆಗಳು ಹಾಗೂ ೧೦೦೩ ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳನ್ನು ಹೊಂದಿದೆ.[೨೨] ಈ ಪ್ರದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಅದರಲ್ಲೂ ಹತ್ತಿಗಿರಣಿಗಳ ಸ್ಥಾಪನೆ ಪ್ರಗತಿಯ ದೃಷ್ಟಿಯಿಂದ ಅಗತ್ಯವಾಗಿದ್ದ ರೈಲ್ವೆ ತಂತಿ, ವಿದ್ಯುತ್ ಸಂಪರ್ಕವನ್ನು ದಾವಣಗೆರೆ ನಗರವು ಬಹಳ ಹಿಂದೆಯೇ ಪಡೆದುಕೊಂಡಿತ್ತು. ೧೮೮೬ರಲ್ಲಿ ಬೆಂಗಳೂರು-ಹರಿಹರ ನಡುವಿನ ನೇರ ರೈಲ್ವೆ ಸಂಪರ್ಕ ಪಡೆದುಕೊಂಡಿತು.[೨೩] ೧೯೩೮ರಲ್ಲಿ ೧೫ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಕೇಂದ್ರವನ್ನು ಇಲ್ಲಿ ಸ್ಥಾಪಿಸಲಾಯಿತು.[೨೪] ೧೯೫೩ರಲ್ಲಿ ಫೆಬ್ರವರಿ ೫ರಂದು ೪೪ ಸಂಪರ್ಕಗಳೊಂದಿಗೆ ಪ್ರಪ್ರಥಮವಾಗಿ ತಂತಿ ಸಂಪರ್ಕವನ್ನು ಪಡೆಯಿತು.[೨೫] ಈ ಸೌಲಭ್ಯಗಳಿಂದಾಗಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಿದವು.

ಈ ಮೇಲಿನ ಸೌಕರ್ಯವನ್ನು ಪಡೆದುಕೊಂಡು ಈ ಪ್ರದೇಶದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳು ಬೆಳೆದವು ಎಂಬುದನ್ನು ಗಮನಿಸಬಹುದು.

೧. ಹತ್ತಿಗಿರಣಿ ಕೈಗಾರಿಕೆಗಳು

೨. ಕಬ್ಬು ಕೈಗಾರಿಕೆಗಳು

೩. ಎಣ್ಣೆ ಕೈಗಾರಿಕೆಗಳು

೪. ಸಣ್ಣ ಕೈಗಾರಿಕೆಗಳು

೧. ಹತ್ತಿಗಿರಣಿ ಕೈಗಾರಿಕೆಗಳು

ಈ ಪ್ರದೇಶದಲ್ಲಿ ಹೆಚ್ಚಾಗಿ ಕಪ್ಪು ಮಿಶ್ರಿತ ಭೂಮಿಯಿರುವುದರಿಂದ ಹತ್ತಿ ಬೆಳೆಗೆ ಹೆಸರುವಾಸಿಯಾಗಿದೆ. ಆದ್ದರಿಂದ ರೈತರು ಇಲ್ಲಿ ಹೆಚ್ಚಾಗಿ ಹತ್ತಿಯನ್ನು ಬೆಳೆಯತೊಡಗಿದರು. ಇದರಿಂದ ಇಲ್ಲಿನ ಬಂಡವಾಳಶಾಹಿಗಳು ಹತ್ತಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು. ಇದರಿಂದಾಗಿ ಈ ಪ್ರದೇಶದಲ್ಲಿ ಸು. ೮ ಹತ್ತಿಗಿರಣಿಗಳು ಸ್ಥಾಪನೆಯಾಗಿ ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂಬ ಹೆಸರು ಪಡೆದಿತ್ತು.

೧.೧ ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್

ದಾವಣಗೆರೆ ನಗರದ ದೊಡ್ಡ ಹತ್ತಿಗಿರಣಿ ಕಾರ್ಖಾನೆ 'ದಿ ದಾವಣಗೆರೆ ಕಾಟನ್ ಮಿಲ್ಸ್' ೨೨, ಜೂನ್ ೧೯೩೬ರಲ್ಲಿ ಸ್ಥಾಪನೆಯಾಯಿತು. ಆದರೆ ಇದು ಉತ್ಪಾದನೆಯನ್ನು ಪ್ರಾರಂಭಿಸಿದ್ದು ೧೯೩೭ರಲ್ಲಿ. ಈ ಕಾರ್ಖಾನೆಯ ಸ್ಥಾಪಕರು ರಾಜನಹಳ್ಳಿ ಹನುಮಂತಪ್ಪನವರು. ಪ್ರಾರಂಭದಲ್ಲಿ ಕಾರ್ಖಾನೆಯು ೧೦ ಲಕ್ಷ ಬಂಡವಾಳದೊಂದಿಗೆ ೧೨ ಸ್ಪಿಂಡಲ್ಸ್‌ಗಳ ಸಾಮರ್ಥ್ಯದಿಂದ ಪ್ರಾರಂಭಿಸಿ ನಂತರ ೪೯೦೪೮ ಸಾಮರ್ಥ್ಯದವರಿಗೆ ಹೆಚ್ಚಿಸಲಾಯಿತು.[೨೬] ಈ ಕಾರ್ಖಾನೆಯು ಹತ್ತಿಯನ್ನು ನೂಲುವ, ನೇಯುವ ಹಾಗೂ ಬಣ್ಣ ಹಾಕುವ ಎಲ್ಲ ವಿವಿಧ ಘಟಕಗಳನ್ನು ಹೊಂದಿತ್ತು. ದೇಶವಿದೇಶಗಳಲ್ಲಿ ಈ ಗಿರಣಿಯು ಉತ್ಪಾದಿಸುತ್ತಿದ್ದ ಉತ್ಪನ್ನಗಳಿಗೆ ಮಾರುಕಟ್ಟೆಯಿತ್ತು. ಈ ಭಾಗದ ಜನರಿಗೆ ಈ ಗಿರಣಿಯು ಜೀವನವನ್ನು ನೀಡಿತ್ತು. ೩೧ ಮಾರ್ಚ್, ೧೯೮೮ರ ಕಾಲಕ್ಕೆ ೨, ೫೯೪, ೧೧ ಲಕ್ಷ ರೂ.ಗಳ ವಿದೇಶಿ ವ್ಯಾಪಾರ ನಡೆಸಿತ್ತು.[೨೭] ಆದರೆ ೧೯೮೦ರ ದಶಕದೊತ್ತಿಗೆ ನಷ್ಟದ ಹಿನ್ನೆಲೆಯಲ್ಲಿ ಈ ಕಾರ್ಖಾನೆಯನ್ನು ಮುಂಬೈನ ಗೋಕುಲದಾಸ್ ಮಿಲ್ಸ್‌ನವರಿಗೆ ಮಾರಲಾಯಿತು.[೨೮] ಈ ಕಂಪೆನಿಯೂ ಕಾರ್ಖಾನೆಯ ಪುನಶ್ಚೇತನಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಸತತ ನಷ್ಟದಿಂದಾಗಿ ಕಾರ್ಖಾನೆಯನ್ನು ಶಾಶ್ವತವಾಗಿ ಮುಚ್ಚಲಾಯಿತು.

೧.೨ ಶ್ರೀ ಶಂಕರ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿಮಿಟೆಡ್

ಈ ಪ್ರದೇಶದ ಎರಡನೆಯ ಪ್ರಮುಖ ಹತ್ತಿ ಗಿರಣಿಯಾಗಿ ಶಂಕರ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ೧೯೪೫ರಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು. ಈ ಗಿರಣಿಯ ಸ್ಥಾಪಕರು ಅರಳೆ ಅರಸ ಎಂದು ಖ್ಯಾತಿ ಪಡೆದ ಚಿಗಟೇರಿ ಮುರಿಗೆಪ್ಪನವರು. ೧೯೪೫ರಲ್ಲಿ ಸ್ಥಾಪಿತವಾದ ಈ ಕಾರ್ಖಾನೆಯು ೧೯೪೬ರಿಂದ ಉತ್ಪಾದನೆಯನ್ನು ಪ್ರಾರಂಭಿಸಿತು.[೨೯] ನಗರದ ಸುತ್ತಮುತ್ತಲಿನ ರೈತರು ಮುಂತಾದವರಿಂದ ಬಂಡವಾಳವನ್ನು ಸಂಗ್ರಹಿಸಿ ಪ್ರಾರಂಭಿಕವಾಗಿ ೫೦೪೦ ಸ್ಪಿಂಡಲ್ಸ್‌ನಿಂದ ೨೫೦೮೦ ಸ್ಪಿಂಡಲ್ಸ್‌ವರೆಗೆ ಉತ್ಪಾದನೆ ಮಾಡುತ್ತಿತ್ತು. ಆದರೆ ಈ ಕಾರ್ಖಾನೆಯು ಸತತ ನಷ್ಟದ ಪರಿಣಾಮವಾಗಿ ೧೯೮೪ರಲ್ಲಿ ತನ್ನ ಉತ್ಪಾದನೆಯನ್ನು ಶಾಶ್ವತವಾಗಿ ಮುಚ್ಚಿತು.[೩೦]

೧.೩ ಶ್ರೀ ಗಣೇಶ ಟೆಕ್ಸ್‌ಟೈಲ್ಸ್ ಲಿಮಿಟೆಡ್

ಈ ಹತ್ತಿಗಿರಣಿ ಕಾರ್ಖಾನೆಯು ೧೯೪೬ರಲ್ಲಿ ಪ್ರಾರಂಭವಾಯಿತು. ಇದರ ಸ್ಥಾಪಕರು ಶ್ರೀ ಗುಂಡಿ ಮಹದೇವಪ್ಪನವರು. ಶ್ರೀಯುತರು ೫ ಲಕ್ಷ ಬಂಡವಾಳವನ್ನು ಯಂತ್ರೋಪಕರಣಗಳ ಮೇಲೆ ಹಾಕಿದರು.[೩೧] ಗಿರಣಿಯ ಆಧುನೀಕರಣಕ್ಕೂ ಮಹತ್ವ ನೀಡಲಾಯಿತು. ೧೯೮೦-೮೧ರವರೆಗೆ ಕಾರ್ಯ ನಿರ್ವಹಿಸಿದ ಈ ಗಿರಣಿಯನ್ನು ಸತತ ನಷ್ಟದಿಂದಾಗಿ ಮುಚ್ಚಲಾಯಿತು. ನಂತರ ೧೯೯೦ರಲ್ಲಿ ಖಾಸಗಿ ವ್ಯಕ್ತಿಗಳ ಹಣಕಾಸಿನ ಸಹಾಯದಿಂದ ಪುನಃ ಆರಂಭಗೊಂಡಿತು.

೧.೪ ಎಲ್ಲಮ್ಮ ಕಾಟನ್, ಉಲ್ಲನ್ ಆ್ಯಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್

ದಾವಣಗೆರೆ ನಗರದ ವ್ಯಾಪ್ತಿಯ ಗಿರಣಿಗಳಲ್ಲಿ ಅತ್ಯಂತ ಭಿನ್ನವಾದುದು ಯಲ್ಲಮ್ಮ ಗಿರಣಿ. ಈ ಗಿರಣಿಯು ಹತ್ತಿಯಿಂದ ನೂಲು ತಯಾರಿಸುವುದರ ಜೊತೆಗೆ ರೇಷ್ಮೆಯಿಂದ ನೂಲನ್ನು ತಯಾರಿಸುವ ಘಟಕವಾಗಿದೆ.

ದಾವಣಗೆರೆಯ ಹೊರವಲಯದ ತೋಳಹುಣಸೆ ಗ್ರಾಮದಲ್ಲಿ ಜುಲೈ ೧೯೫೧ರಲ್ಲಿ ಪ್ರಾರಂಭವಾಯಿತು. ಈ ಕಾರ್ಖಾನೆಯ ಸ್ಥಾಪಕರು.

೧. ಶ್ರೀ ಅಂಬರ್‌ಕರ್ ವಿರೂಪಣ್ಣ ದೊಡ್ಡ ಎಲ್ಲಪ್ಪ

೨. ಶ್ರೀ ರಾಮಚಂದ್ರಪ್ಪರಾವ್ ವೆ. ಅಂಬರ್‌ಕರ್

೩. ಶ್ರೀ ಅಂಬರ್‌ಕರ್ ವೈ. ಪಾಂಡುರಂಗರಾವ್ ಇವರು ಖಾಸಗಿ ಕಂಪನಿಯಾಗಿ ಸ್ಥಾಪಿಸಿದರು.[೩೨] ಒಂದು ಕೋಟಿ ಬಂಡವಾಳ ತೊಡಗಿಸಿ ಹತ್ತಿ, ಉಣ್ಣೆ ಮತ್ತು ರೇಷ್ಮೆ ಉತ್ಪಾದನೆ ಆರಂಭಿಸಿತು.[೩೩]

ಈ ಪ್ರದೇಶದಲ್ಲಿ ರೈತರು ಬೆಳೆಯುತ್ತಿದ್ದ ಅಲ್ಪಸ್ವಲ್ಪ ರೇಷ್ಮೆಯ ಉಪಯೋಗಕ್ಕೆ ಈ ಕಾರ್ಖಾನೆಯಿಂದ ಅನುಕೂಲವಾಯಿತು. ೧೯೬೫-೬೬ರ ಅವಧಿಯಲ್ಲಿ ೪೪೦ ಕಾರ್ಮಿಕರಿಗೆ ಗಿರಣಿಯು ಉದ್ಯೋಗಾವಕಾಶ ಕಲ್ಪಿಸಿತ್ತು.[೩೪] ೧೯೬೯ರವರೆಗೂ ಚೆನ್ನಾಗಿ ಮುನ್ನಡೆದ ಕಾರ್ಖಾನೆ ಕಾಲಕ್ರಮೇಣ ರೋಗಗ್ರಸ್ತವಾಯಿತ್ತು. ೧೯೭೨ರಲ್ಲಿ ರೋಗಗ್ರಸ್ತ ಕಾರ್ಖಾನೆಗಳನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುವ ಯೋಜನೆಯಡಿಯಲ್ಲಿ ಎನ್.ಟಿ.ಸಿ (ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್) ವಹಿಸಿಕೊಂಡು ಜೀವದಾನ ನೀಡಿತು. ರೋಗಗ್ರಸ್ತವಾಗಿದ್ದ ಕಾರ್ಖಾನೆ ಅಭಿವೃದ್ಧಿಗೆ ಕೇಂದ್ರ ಸರ್ಕಾರ ೧೯೭೬ರಿಂದ ೧೯೭೮ರ ಅವಧಿಯಲ್ಲಿ ೬೯ ಲಕ್ಷ ಬಂಡವಾಳ ಹಾಕಿ ಅಭಿವೃದ್ಧಿಯೆಡೆಗೆ ಕೊಂಡೊಯ್ಯಲು ಯತ್ನಿಸಿತು. ಆದರೂ ಈ ಕಾರ್ಖಾನೆ ಲಾಭ ನೋಡದೆ ೨೦೦೮ರಲ್ಲಿ ಸಂಪೂರ್ಣ ಸ್ಥಗಿತಗೊಂಡಿತು.

೧.೫. ಚಂದ್ರೋದಯ ಮಿಲ್ಸ್ (ಪ್ರೈ) ಲಿಮಿಟೆಡ್

ರಾಜನಹಳ್ಳಿ ವಂಶಸ್ಥರಾದ ರಾಜನಹಳ್ಳಿ ರಾಮಶೆಟ್ರು ಮತ್ತು ಅವರ ಮಗ ಆರ್.ಆರ್. ಶ್ರೀನಿವಾಸಮೂರ್ತಿ ಇವರಿಂದ ೧೯೫೭ರಲ್ಲಿ ಈ ಕಾರ್ಖಾನೆ ಪ್ರಾರಂಭವಾಯಿತು.[೩೫] ಮೊದಲಿಗೆ ಸ್ಪಿಂಡಲ್ಸ್‌ಗೆ ಹೆಚ್ಚಾಯಿತು. ಈ ಕಾರ್ಖಾನೆಯು ಉತ್ತಮ ಸೌಲಭ್ಯಗಳನ್ನು ಹೊಂದಿತ್ತು. ದಾವಣಗೆರೆ ಕಾಟನ್‌ಮಿಲ್ ಮೂಲದ ಹಿನ್ನೆಲೆ ಹೊಂದಿದ್ದ ಕಾರ್ಖಾನೆಯು ಉತ್ತಮ ಪ್ರಗತಿಯನ್ನು ಕಾಣುತ್ತಾ ಮುನ್ನಡೆಯುತ್ತಿತ್ತು. ಈ ಕಾರ್ಖಾನೆಯು ಉತ್ಪಾದನೆಯಾದ ವಸ್ತುಗಳನ್ನು ಥಾಯ್‌ಲ್ಯಾಂಡ್, ಯು.ಕೆ., ಹಾಂಕಾಂಗ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಿತ್ತು.[೩೬] ೧೯೯೦ವರೆಗೂ ಈ ಕಾರ್ಖಾನೆ ಸಮರ್ಥವಾಗಿ ಕಾರ್ಯ ನಿರ್ವಹಿಸಿತು. ನಂತರ ಈ ಕಾರ್ಖಾನೆಯ ನಷ್ಟವನ್ನು ಭರಿಸಲಾಗದೆ ತನ್ನ ಕಾರ್ಯವನ್ನು ಶಾಶ್ವತವಾಗಿ ನಿಲ್ಲಿಸಿತು.

೧.೬. ಸಿದ್ಧೇಶ್ವರ ಟೆಕ್ಸ್‌ಟೈಲ್ಸ್ ಮಿಲ್ಸ್ ಪ್ರೈ ಲಿಮಿಟೆಡ್

ಈ ಕಾರ್ಖಾನೆಯನ್ನು ಜಿ. ಮಹದೇವಪ್ಪ, ಜಿ. ಸಿದ್ಧಲಿಂಗಪ್ಪ ಹಾಗೂ ಜಿ.ಎಂ. ಹಾಲಪ್ಪ ಇವರು ೧೯೫೭ರಲ್ಲಿ ಪ್ರಾರಂಭಿಸಿದರು.[೩೭] ಇವರು ಬಂಡವಾಳಗಾರರು ಹಾಗೂ ನುರಿತ ಹತ್ತಿ ವ್ಯಾಪಾರಿಗಳಾಗಿದ್ದರು. ಈ ಕಾರ್ಖಾನೆಯಲ್ಲಿ ಬನೀನು ಮತ್ತು ಉತ್ತಮ ಗುಣಮಟ್ಟದ ನೂಲನ್ನು ತಯಾರಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಳ್ಳೆಯ ಹೆಸರು ಗಳಿಸಿತ್ತು. ಈ ಕಾರ್ಖಾನೆಯು ೧೯೬೨ರಲ್ಲಿ ೨೪.೮೦೦ ಸ್ಪಿಂಡಲ್ಸ್‌ಗಳಿಗೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿತು.[೩೮] ೧೯೯೦ರಲ್ಲಿ ಸತತ ನಷ್ಟದಿಂದಾಗಿ ತನ್ನ ಉತ್ಪಾದನಾ ಕಾರ್ಯವನ್ನು ಸ್ಥಗಿತಗೊಳಿಸಿತು.

೧.೭ ಶ್ರೀ ಆಂಜನೇಯ ಕಾಟನ್ ಮಿಲ್ಸ್, (ಪ್ರೈ) ಲಿಮಿಟೆಡ್

ಈ ಕಾರ್ಖಾನೆಯು ತೊಳಹುಣಸೆ ಗ್ರಾಮದಲ್ಲಿದೆ. ಶ್ರೀ ಎಂ. ರಂಗಪ್ಪ ಮತ್ತು ತಿಮ್ಮಪ್ಪ ಮಲ್ಲಾಡಿಹಳ್ಳಿಯವರು ೧೯೭೨ರಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿದರು.[೩೯] ಈ ಕಾರ್ಖಾನೆಗೆ ೫೦ ಲಕ್ಷ ರೂ.ಗಳ ಪ್ರಾರಂಭಿಕ ಬಂಡವಾಳವನ್ನು ಹೂಡಲಾಗಿತ್ತು. ಯಂತ್ರಗಳ ಆಧುನೀಕರಣಕ್ಕೆ ವಿವಿಧ ಸಂದರ್ಭಗಳಲ್ಲಿ ಬೃಹತ್ ಬಂಡವಾಳವನ್ನು ವಿನಿಯೋಗಿಸಿದರೂ ನಗರದ ಬಹುತೇಕ ಕಾರ್ಖಾನೆಗಳಂತೆ ನಷ್ಟದ ಹಾದಿ ಹಿಡಿಯಿತು. ೧೯೬೨ರಲ್ಲಿ ಜೂನ್‌ನಲ್ಲಿ ಈ ಕಾರ್ಖಾನೆಯನ್ನು ಚಳ್ಳಕೆರೆ ವೀರಭದ್ರಪ್ಪ ಎಂಬುವವರು ಖರೀದಿಸಿ ಹೊಸ ಚಾಲನೆ ನೀಡಿದರು.[೪೦]

೧.೮. ಚಿಗಟೇರಿ ಮಿಲ್ಸ್ ಲಿಮಿಟೆಡ್

ನಗರದ ಹತ್ತಿ ಕಾರ್ಖಾನೆಗಳಲ್ಲಿ ಇದು ಅತ್ಯಂತ ಸಣ್ಣ ಕಾರ್ಖಾನೆಯಾಗಿದೆ. ಈ ಕಾರ್ಖಾನೆಯನ್ನು ೧೯೬೩ರಲ್ಲಿ ವೀರಭದ್ರಪ್ಪ ಎಂ. ಚಿಗಟೇರಿ ಹಾಗೂ ಜಯಣ್ಣ ಎಂ. ಚಿಗಟೇರಿಯವರು ಸ್ಥಾಪಿಸಿದರು. ಶಂಕರ್ ಗಿರಣಿಯ ಮಾಲೀಕರಾದ ಶ್ರೀ ಮುರಿಗೆಪ್ಪ ಚಿಗಟೇರಿಯವರ ಅನುಭವದ ಹಿನ್ನೆಲೆಯಲ್ಲಿ ಅವರ ಮಕ್ಕಳು ಈ ಗಿರಣಿಯನ್ನು ಸ್ಥಾಪಿಸಿ ಮುನ್ನಡೆಸುತ್ತಿದ್ದರು.

ಈ ಕಾರ್ಖಾನೆಗೆ ೬೦ ಲಕ್ಷ ಬಂಡವಾಳ ಹೂಡಲಾಯಿತು. ೧೯೬೫-೬೬ರ ಅವಧಿಯಲ್ಲಿ ೧೬೫ ಕಾರ್ಮಿಕರಿಗೆ ಉದ್ಯೋಗ ನೀಡಿದ್ದರೆ ೧೨,೦೦೦ ಸ್ಪಿಂಡಲ್ಸ್ ಉತ್ಪಾದನೆ ಮಾಡುತ್ತಿತ್ತು. ನಂತರ ಸತತ ನಷ್ಟದಿಂದಾಗಿ ೧೯೮೯ರಲ್ಲಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ಮೇಲ್ಕಂಡ ಎಲ್ಲ ಹತ್ತಿ ಕಾರ್ಖಾನೆಗಳು ೧೯೮೦ರ ದಶಕದವರೆಗೆ ಉತ್ತಮ ಕಾರ್ಯ ನಿರ್ವಹಿಸಿ ಅದರಿಂದಾಚೆಗೆ ನಷ್ಟವನ್ನು ಅನುಭವಿಸಿದ ಫಲವಾಗಿ ಕೆಲವು ಮುಚ್ಚಲ್ಪಟ್ಟವು. ಕೆಲವು ಕಾರ್ಖಾನೆಗಳು ಹಲವಾರು ಕೈಗಾರಿಕೋದ್ಯಮಿಗಳ ಸಹಾಯದಿಂದ ಹಾಗೂ ಹೀಗೂ ಮುಂದುವರಿದವು. ಹತ್ತಿ ಗಿರಣಿಗಳ ಈ ಸ್ಥಿತಿಗೆ ಮುಖ್ಯ ಕಾರಣವೆಂದರೆ;

೧. ಇಡೀ ರಾಷ್ಟ್ರದಲ್ಲಿ ೧೯೮೦ರ ದಶಕದಲ್ಲಿ ಹತ್ತಿಗಿರಣಿಗಳ ವ್ಯವಹಾರದಲ್ಲಿ ಆದ ಹಿಂಜರಿತ.

೨. ದಾವಣಗೆರೆ ಪ್ರದೇಶದ ಮಟ್ಟದಲ್ಲಿ ಹೇಳುವುದಾದರೆ ಹತ್ತಿಗಿರಣಿಗಳಿಗೆ ಬೇಕಾದ ಕಚ್ಚಾ ವಸ್ತುವಾದ ಹತ್ತಿಯ ಬೆಳೆಯಲ್ಲಿ ಕುಂಠಿತವಾಯಿತು. ಈ ಪ್ರದೇಶದಲ್ಲಿ ಈ ಹಿಂದೆ ಸಾಕಷ್ಟು ಹೆಕ್ಟೇರ್ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಆದರೆ ೧೯೬೫ರ ನಂತರ ಭದ್ರಾ ನದಿಯ ನೀರು ಈ ಪ್ರದೇಶಕ್ಕೆ ಲಭ್ಯವಾಗಿದ್ದರಿಂದ ಹತ್ತಿಯಿಂದ ಮುಕ್ತಿ ಪಡೆದ ರೈತರು ಇನ್ನಿತ್ತರ ವಾಣಿಜ್ಯ ಬೆಳೆಗಳಾದ ಕಬ್ಬು, ಭತ್ತ, ಮತ್ತಿತ್ತರ ಬೆಳೆಗಳನ್ನು ಬೆಳೆಯುವುದಕ್ಕೆ ಮುಂದಾದರು.

೩. ಕಾರ್ಮಿಕರು ಹಾಗೂ ಮಾಲೀಕರ ನಡುವೆ ಭಿನ್ನಾಬಿಪ್ರಾಯ, ಅಶಾಂತಿ ತಲೆದೋರಿತು.

೪. ಕಾರ್ಖಾನೆಗಳ ಸ್ಥಾಪನೆಯಲ್ಲಿ ಇದ್ದಂತಹ ದೂರದರ್ಶಿತ್ವ ಮುಂದಿನ ಪೀಳಿಗೆಯಲ್ಲಿ ಇಲ್ಲದೇ ಇರುವುದು.

೫. ಬಹಳಷ್ಟು ಕಾರ್ಖಾನೆಗಳು ಹಳೆಯ ಯಂತ್ರಗಳನ್ನು ಹೊಂದಿದ್ದು ಹೆಚ್ಚು ವಿದ್ಯುತ್ ಬಳಕೆಯಾಗಿ, ಉತ್ಪಾದನಾ ವೆಚ್ಚ ಅಧಿಕವಾಗಿತ್ತು.

೨. ಸಕ್ಕರೆ ಕೈಗಾರಿಕೆಗಳು

ಒಂದು ಕಾಲದಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಕರೆಯಿಸಿಕೊಂಡ ದಾವಣಗೆರೆ ಹತ್ತಿಗಿರಣಿಗಳು ಸ್ಥಗಿತಗೊಂಡ ನಂತರ ಅಲ್ಲಿನ ಕೃಷಿಗೆ ರೈತರು ೧೯೬೫ರ ನಂತರ ಭದ್ರಾ ಜಲಾಶಯದ ನೀರನ್ನು ಬಳಸಿಕೊಂಡರು. ಇದರಿಂದ ಈ ಪ್ರದೇಶದ ರೈತರು ಕಬ್ಬಿನ ವ್ಯವಸಾಯದ ಕಡೆ ಹೆಚ್ಚು ಗಮನ ಹರಿಸಿದರು. ಹೆಚ್ಚಾಗಿ ಕಬ್ಬು ಬೆಳೆಯುತ್ತಿದ್ದರಿಂದ ಸಕ್ಕರೆ ಕೈಗಾರಿಕೆ ಸ್ಥಾಪನೆ ಮಾಡಲು ಇಲ್ಲಿನ ಬಂಡವಾಳಗಾರರು ಮುಂದಾದರು. ಇದರಿಂದಾಗಿ ಈ ಪ್ರದೇಶದಲ್ಲಿ ಈಗ ಮೂರು ಕಬ್ಬಿನ ಕಾರ್ಖಾನೆಗಳಿವೆ.

೨.೧ ದಿ ದಾವಣಗೆರೆ ಷುಗರ್ ಕಂಪನಿ, ಕುಕ್ಕವಾಡ

ದಾವಣಗೆರೆಯಿಂದ ೧೨ ಕಿ.ಮೀ. ದೂರದ ಕುಕ್ಕವಾಡದಲ್ಲಿ ೧೯೭೪ರಲ್ಲಿ ಈ ಕಾರ್ಖಾನೆ ಸ್ಥಾಪನೆಯಾಯಿತು. 'ದಿ ದಾವಣಗೆರೆ ಷುಗರ್ ಕಂಪನಿ'ಯ ಮೊದಲ ಅಧ್ಯಕ್ಷ ಎಂ.ಡಿ. ಶಿವನಂಜಪ್ಪ ಅವರು ಈ ಕಾರ್ಖಾನೆಯ ಸ್ಥಾಪನೆ, ಅಸ್ತಿತ್ವಕ್ಕೆ ಕೆ.ಎಸ್.ಐ.ಡಿ.ಸಿ. ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಸಹಕಾರಿಯಾಗಿವೆ.[೪೧] ಇದು ದಿನವೊಂದಕ್ಕೆ ೧೨೫೦ ಮೆಟ್ರಿಕ್ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯದಿಂದ ಆರಂಭವಾಗಿ ಇಂದು ೨೫೦೦ ಟನ್ ಕಬ್ಬನ್ನು ಅರೆಯುತ್ತಿದೆ. ಎಸ್.ಎಸ್. ಮಲ್ಲಿಕಾರ್ಜುನ ಅವರು ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಖಾನೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಈಗ ಈ ಸಂಸ್ಥೆಯ ಅಧ್ಯಕ್ಷರಾಗಿ ಐ.ಪಿ. ವಿಶ್ವಾರಾಧ್ಯ ಅವರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಆರ್.ಎಸ್. ಶೇಖರಪ್ಪ ವಹಿಸಿಕೊಂಡಿದ್ದಾರೆ. ಈ ಕಾರ್ಖಾನೆಯು ಸುತ್ತಮುತ್ತಲಿನ ಕಬ್ಬು ಬೆಳೆಗಾರರಿಗೆ ವರದಾನವಾಗಿದೆ.

೨.೨ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ

ದಾವಣಗೆರೆ ನಗರದಿಂದ ೮ ಕಿ.ಮೀ. ಅಂತರದ ದೂರದಲ್ಲಿರುವ ದೊಡ್ಡಬಾತಿ ಗ್ರಾಮದಲ್ಲಿ ಸ್ಥಾಪಿತವಾಗಿರುವ ಭದ್ರಾ ಸಹಕಾರಿ ಕಾರ್ಖಾನೆಯೂ ಸಹಕಾರಿ ತತ್ವದ ಮೇಲೆ ಸ್ಥಾಪಿತವಾಗಿದೆ. ೧೯೭೦ರ ದಶಕದಲ್ಲಿ ಆರಂಭವಾದ ಈ ಕಾರ್ಖಾನೆಯು ೨೦೦೦ ಮೆಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ. ಈ ಕಾರ್ಖಾನೆಯ ಅಧ್ಯಕ್ಷರಾದ ಹೆಚ್. ಶಿವಪ್ಪನವರ ಮೇಲ್ವಿಚಾರಣೆಯಿಂದ ೨೦೦೪ರವರಿಗೆ ಇದು ಲಾಭದಲ್ಲಿ ನಡೆಯಿತ್ತು. ಆದರೆ ಆಡಳಿತ ವರ್ಗದ ಬೇಜವಾಬ್ದಾರಿಯಿಂದಾಗಿ ೨೦೦೪ರಲ್ಲಿ ಕಬ್ಬು ಅರೆಯುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತು. ಅನಂತರ ಕಬ್ಬು ಬೆಳೆಗಾರರು ಮತ್ತು ಅಲ್ಲಿನ ಕಾರ್ಮಿಕರ ಹೋರಾಟದ ಫಲವಾಗಿ ಕಾರ್ಖಾನೆಯು ಧಾರವಾಡದ ಮೂಲದ 'ಗ್ಯಾನ್ಸ ಡೆವಲಪರ್ಸ್' ಕಂಪನಿಗೆ ೨೦ ವರ್ಷದ ಗುತ್ತಿಗೆ ಆಧಾರದ ಮೇಲೆ ಒಪ್ಪಿಸಲಾಯಿತು. ಇದರಿಂದಾಗಿ ಈ ಪ್ರಸ್ತುತ ಋತುಮಾನದಿಂದ ಕಾರ್ಖಾನೆ ಆರಂಭವಾಗುವ ಲಕ್ಷಣಗಳು ಕಂಡುಬರುತ್ತದೆ.

೨.೩ ಶಾಮನೂರು ಷುಗರ್ಸ್, ದುಗ್ಗಾವತಿ

ದಾವಣಗೆರೆ ನಗರದಿಂದ ೨೫ ಕಿ.ಮೀ. ದೂರದ ದುಗ್ಗಾವತಿ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಶಾಮನೂರು ಷುಗರ್ಸ್ ಕಂಪನಿಯು ಶಾಮನೂರು ಶಿವಶಂಕರಪ್ಪ ವಂಶಸ್ಥರಿಗೆ ಸೇರಿದೆ. ಇದು ದಿನವೊಂದಕ್ಕೆ ೩೫೦೦ ಮೆಟ್ರಿಕ್

ಟನ್‌ಗಳಷ್ಟು ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿದೆ. ಕಾರ್ಖಾನೆಯಲ್ಲಿ ಪೂರಕ ಘಟಕಗಳಾದ ವಿದ್ಯುಚ್ಛಕ್ತಿ ಉತ್ಪಾದನೆ, ಡಿಸ್ಟಿಲರಿ ಘಟಕ ಹಾಗೂ ಜೈವಿಕ ಗೊಬ್ಬರ ತಯಾರಿಕೆ ಮುಂತಾದ ಘಟಕಗಳನ್ನು ಹೊಂದಿದೆ. ವಿದ್ಯುತ್ ಉತ್ಪಾದಿಸಿ ಕೆ.ಪಿ.ಟಿ.ಸಿ.ಎಲ್.ಗೆ. ಮಾರಾಟ ಮಾಡಲಾಗುತ್ತದೆ.

೩. ಎಣ್ಣೆ ಗಿರಣಿಗಳು

ದಾವಣಗೆರೆ ಪ್ರದೇಶದಲ್ಲಿ ಎಣ್ಣೆ ಗಿರಣಿಗಳು ಹೇರಳವಾಗಿವೆ. ದಾವಣಗೆರೆ ಸುತ್ತಮುತ್ತ ನೆಲಗಡಲೆ, ಹತ್ತಿ, ಸೂರ್ಯಕಾಂತಿ ಹಾಗೂ ಇತರೆ ಎಣ್ಣೆ ಕಾಳುಗಳನ್ನು ಬೆಳೆಯಲಾಗುತ್ತಿದೆ. ಈ ಕಾರಣದಿಂದಾಗಿ ದಾವಣಗೆರೆ ಈ ಹಿಂದೆ ಎಣ್ಣೆ ಉದ್ಯಮಕ್ಕೆ ಪ್ರಸಿದ್ಧವಾದ ನಗರವಾಗಿತ್ತು.[೪೨] ಇಲ್ಲಿ ಉತ್ಪಾದನೆಯಾದ ಎಣ್ಣೆಯನ್ನು ರಾಜ್ಯದ ಇತರ ನಗರಗಳಿಗೆ ಸರಬರಾಜು ಮಾಡಲಾಗುತ್ತಿತ್ತು. ಈ ಉದ್ಯಮವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡ ಎರಡು ಪ್ರಮುಖ ಕಾರ್ಖಾನೆಗಳೆಂದರೆ,

೩.೧ ಬ್ರಹ್ಮಪ್ಪ ತವನಪ್ಪನವರ ಎಣ್ಣೆಗಿರಣಿ

ಬ್ರಹ್ಮಪ್ಪ ತವನಪ್ಪನವರು ೧೯೦೫ರಲ್ಲಿ ಎಣ್ಣೆಗಿರಣಿಯನ್ನು ಸ್ಥಾಪಿಸಿದರು. ಇದರ ಜೊತೆಗೆ ೧೯೧೮ರಲ್ಲಿ ವನಸ್ಪತಿ ಹಾಗೂ ಕಡಲೆಕಾಯಿ ಎಣ್ಣೆ ತಯಾರಿಸುವ ಘಟಕಗಳನ್ನು ಪ್ರಾರಂಭಿಸಿದರು. ಇದಕ್ಕೆ ಪೂರಕವಾಗಿ ಬಿ.ಟಿ. ಬಾಕ್ ಸೋಪ್ ಎಂಬ ಬಟ್ಟೆ ಸಾಬೂನು ಕಾರ್ಖಾನೆಯನ್ನು ಸಹ ಪ್ರಾರಂಭಿಸಲಾಯಿತು. ಸ್ವಾತಂತ್ರ್ಯ ನಂತರದ ದಶಕಗಳಲ್ಲಿ ಎಣ್ಣೆ ಬೀಜಗಳನ್ನು ಬೆಳೆಯುವುದು ಕಡಿಮೆಯಾಗುವುದರೊಂದಿಗೆ ೧೯೮೦ರ ದಶಕದಲ್ಲಿ ಈ ಕಾರ್ಖಾನೆ ಮುಚ್ಚಲ್ಪಟ್ಟಿತು.

೩.೨ ರವಿ ವೆಜಿಟೆಬಲ್ ಆಯಿಲ್ ಮಿಲ್

ಈ ಕಾರ್ಖಾನೆಯ ಸ್ಥಾಪಕರು ರಾಜನಹಳ್ಳಿ ರಾಮ ಶೆಟ್ರು ಮತ್ತು ಅವರ ಮಕ್ಕಳಾದ ಆರ್.ಆರ್. ಶ್ರೀನಿವಾಸಮೂರ್ತಿಗಳು. ಈ ಕಾರ್ಖಾನೆ ಅತ್ಯಾಧುನಿಕ ಉಪಕರಣಗಳಿಂದ ಕೂಡಿದ್ದು ಎಣ್ಣೆ ವನಸ್ಪತಿ ಹಾಗೂ ಪೂರಕ ಘಟಕವಾದ ಸೋಪು ತಯಾರಿಕಾ ಘಟಕವನ್ನು ಹೊಂದಿತ್ತು. ಆದರೆ ೧೯೯೦ರ ದಶಕದಲ್ಲಿ ಕಾರ್ಖಾನೆಯು ರೋಗಗ್ರಸ್ತವಾಗಿ ಮುಚ್ಚಲ್ಪಟ್ಟಿತು.

ಈ ಮೇಲಿನ ಎರಡು ಎಣ್ಣೆ ಕೈಗಾರಿಕೆಗಳಲ್ಲದೆ ಸುಮಾರು ೨೫ಕ್ಕೂ ಹೆಚ್ಚು ಎಣ್ಣೆ ಕೈಗಾರಿಕೆಗಳು ಎಣ್ಣೆ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಆದರೆ ಇಂದು ಬಹುತೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ.

೪. ಅಕ್ಕಿ ಗಿರಣಿ ಕೈಗಾರಿಕೆಗಳು

ದಾವಣಗೆರೆ ಪ್ರದೇಶದ ಬಹುತೇಕ ಭಾಗ ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಹೆಚ್ಚಾಗಿ ಭತ್ತವನ್ನು ಬೆಳೆಯಲಾಗುತ್ತದೆ. ಸುಮಾರು ೬೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದೆ.[೪೩] ಜೊತೆಗೆ ದಾವಣಗೆರೆ ನಗರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಇರುವುದರಿಂದ ಹೆಚ್ಚು ಹೆಚ್ಚು ಅಕ್ಕಿ ಗಿರಣಿಗಳನ್ನು ಸ್ಥಾಪಿಸಲಾಗಿದೆ.[೪೪] ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು ಸುಮಾರು ೧೫೦ ಕ್ಕೂ ಹೆಚ್ಚು ಅಕ್ಕಿ ಗಿರಣಿಗಳು ಸ್ಥಾಪಿತವಾಗಿವೆ.[೪೫]

ಈ ರೀತಿ ದಾವಣಗೆರೆ ಪ್ರದೇಶ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುವುದರ ಮೂಲಕ ಕೈಗಾರಿಕಾ ಅಭಿವೃದ್ಧಿಗೆ ಕಾರಣವಾಗಿದೆ.

ದಾವಣಗೆರೆ ಪ್ರದೇಶದಲ್ಲಿ ಭೂ ಹಿಡುವಳಿ ವ್ಯವಸ್ಥೆಯಲ್ಲಿ ಸುಧಾರಣೆ ತರುವುದರ ಮೂಲಕ ದೊಡ್ಡ ದೊಡ್ಡ ಭೂ ಹಿಡುವಳಿಯಿಂದ ಚಿಕ್ಕ ಚಿಕ್ಕ ಹಿಡುವಳಿಯಾಗಿ ಬದಲಾವಣೆಯಾಗತೊಡಗಿದವು. ಬ್ರಿಟಿಷರು ಜಾರಿಗೆ ತಂದ ವಸಾಹತು ಕೃಷಿ ನೀತಿಯು ವ್ಯಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡಿದ್ದರಿಂದ ಹತ್ತಿ, ಕಬ್ಬು, ತಂಬಾಕು, ನೀಲಿ, ರಬ್ಬರ್, ಕಿತ್ತಾಳೆ ಮುಂತಾದ ಪ್ಲಾಂಟೇಷನ್ ಬೆಳೆಗಳನ್ನು ಹೆಚ್ಚಾಗಿ ಬೆಳೆಯಬೇಕಾಯಿತು. ಇದರಿಂದಾಗಿ ಕೃಷಿಯಲ್ಲಿ ವಾಣಿಜ್ಯ ಕೃಷಿ ಕಚ್ಚಾ ವಸ್ತುಗಳು ಇಂಗ್ಲೆಂಡ್‌ಗೆ ರಫ್ತಾಗತೊಡಗಿದವು. ಇದರ ಮೂಲಕ ಇಂಗ್ಲೆಂಡಿನ ಕೈಗಾರಿಕೆಗಳು ಅಭಿವೃದ್ಧಿಗೊಂಡು ಅಲ್ಲಿ ಸಿದ್ಧಪಡಿಸಿದ ವಸ್ತುಗಳಿಗೆ ಭಾರತ ಮಾರುಕಟ್ಟೆಯಾಗಿತ್ತು. ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದರಿಂದ ಆಹಾರ ಧಾನ್ಯಗಳ ಕೊರತೆಯುಂಟಾಯಿತು. ೨೦ನೇ ಶತಮಾನದ ಆರಂಭದಲ್ಲಿ ಮೈಸೂರು ಸಂಸ್ಥಾನದ ಅರಸರು ದಿವಾನರ ಒತ್ತಾಯದ ಮೇರೆಗೆ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳಿಗೆ ಪ್ರೊತ್ಸಾಹ ನೀಡಿದ್ದರಿಂದ ಕೈಗಾರಿಕೆಗಳು ಬೆಳವಣಿಗೆಗೊಂಡವು. ದಾವಣಗೆರೆ ಪ್ರದೇಶದಲ್ಲಿ ಹತ್ತಿ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದರಿಂದ ೧೯೩೦ರ ದಶಕದಿಂದ ಹತ್ತಿಯ ಕೈಗಾರಿಕೆಗಳು ಅಭಿವೃದ್ಧಿಗೊಂಡವು. ಸ್ವಾತಂತ್ರ್ಯ ನಂತರದ ಕಾಲದಲ್ಲಿ ಕಬ್ಬಿನ ಕೈಗಾರಿಕೆಗಳು, ಎಣ್ಣೆಯ ಕೈಗಾರಿಕೆಗಳು ಅಭಿವೃದ್ಧಿಯಾಗುವುದರ ಮುಖಾಂತರ ಕೃಷಿಗೆ ಪೂರಕವಾಗಿವೆ.

ಟಿಪ್ಪಣಿಗಳು

೧. ಕುಮಾರ್ ಕೆ.ಎಂ., ಕರ್ನಾಟಕದಲ್ಲಿನ ರೈತ ಚಳುವಳಿ, ೨೦೦೮ ಪು.೨೮

೨. ಬಸವರಾಜಪ್ಪ ಹೆಚ್.ಇ., ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧, ಪು.೨೦

೩. ಹಯವದನ ರಾವ್ ಸಿ., ಮೈಸೂರು ಗೆಜೆಟಿಯರ್, ಸಂ, ೪, ೧೯೩೦. ಪು.೪೫

೪. ಸೆಬಾಸ್ಟಿಯನ್ ಜೋಸೆಫ್, ಕರ್ನಾಟಕ ಚರಿತ್ರೆ ಸಂಪುಟ ೬, ಪು

೫. ಸಿದ್ಧಲಿಂಗ ಸ್ವಾಮಿ, ಅಗ್ರೇರಿಯನ್ ರಿಲೇಷನ್ ಇನ್ ಮೈಸೂರು, ೧೯೯೭, ಪು.೬೭

೬. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ೨೦೦೧, ಪು.೭೪

೭. ಕುಮಾರ್ ಕೆ.ಎಂ., ಪೂರ್ವೋಕ್ತ, ೨೦೦೮, ಪು.೩೦

೮. ಅದೇ, ಪು.೩೧

೯. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ೨೦೦೧, ಪು.೮೮

೧೦. ಅದೇ, ಪು.೮೮

೧೧. ಅದೇ, ಪು.೧೯

೧೨. ಪಾಟೀಲ ಎಂ.ಬಿ., ಕರ್ನಾಟಕ ಗ್ಯಾಜಿಟಿಯರ್, ಕರ್ನಾಟಕ ಕೈಪಿಡಿ, ೧೯೯೬, ಪು.೮೬

೧೩. ಮೋಹನ್‌ಕೃಷ್ಣ ರೈ., ವಸಾಹತುಶಾಹಿ ಮತ್ತು ನಗರೀಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು.೧೯

೧೪. ಕುಮಾರ್ ಬಿ.ಪಿ., ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು, ೨೦೦೭, ಪ್ರಕಟಿತ, ಪು.೬೪

೧೫. ಸೂರ್ಯನಾಥ ಕಾಮತ್, ಒಕ್ಕಲುತನ ಮತ್ತು ಒಕ್ಕಲಿಗರು ಇತಿಹಾಸ ಅನ್ವೇಷಣೆ, ೨೦೦೬. ಪು.೨೯

೧೬. ಅದೇ, ಪು.೨೯

೧೭. ಈಶ್ವರಪ್ಪ ಎಂ.ಜಿ., ಶತಮಾನದ ದಾವಣಗೆರೆ, ೨೦೦೧, ಪು.೨೭

೧೮. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ೨೦೦೭, ಪು.೨೧

೧೯. ಅದೇ, ಪು.೧೮

೨೦. ಅದೇ, ಪು.೧೮

೨೧. ಅದೇ, ಪು.೨೩

೨೨. ಶಂಕರನಾರಾಯಣರಾವ್ ಎನ್.ಪಿ., ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ೨೦೦೮, ಪು.೪೭

೨೩. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ೨೦೦೧, ಪು.೪೨

೨೪. ಸೂರ್ಯನಾಥ ಕಾಮತ್ (ಸಂ), ಕರ್ನಾಟಕ ಸ್ಟೇಟ್ ಗೆಜೆಟಿಯರ್, ಭಾಗ ೨

೨೫. ಕುಮಾರ್ ಬಿ.ಪಿ., ಪೂರ್ವೋಕ್ತ, ೨೦೦೭, ಪ್ರಕಟಿತ, ಪು.೩೭

೨೬. ಸತ್ಯನ್ ಬಿ.ಎನ್., ಗೆಜಿಟಿಯರ್ ಆಫ್ ಇಂಡಿಯಾ, ಚಿತ್ರದುರ್ಗ ಜಿಲ್ಲೆ, ೧೬೬೭, ಪು.೨೧೩

೨೭. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ೨೦೦೧, ಪು.೪೩

೨೮. ಅದೇ, ಪು.೪೬

೨೯. ಅದೇ, ಪು.೪೩

೩೦. ಅದೇ, ಪು.೪೪

೩೧. ಅದೇ, ಪು.೪೪

೩೨. ಕುಮಾರ್ ಬಿ.ಪಿ., ಪೂರ್ವೋಕ್ತ, ೨೦೦೭, ಪು.೫೩

೩೩. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ೨೦೦೧. ಪುಟ.೪೪

೩೪. ಕುಮಾರ್ ಬಿ.ಪಿ., ಪೂರ್ವೋಕ್ತ, ೨೦೦೭. ಪು.೫೭

೩೫. ಸತ್ಯನ್ ಬಿ.ಎನ್., ಮೈಸೂರು ರಾಜ್ಯ ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭

೩೬. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ೨೦೦೧, ಪು.೪೫

೩೭. ಅದೇ, ಪು.೪೫

೩೮. ಅದೇ, ಪು.೪೫

೩೯. ಕುಮಾರ್ ಬಿ.ಪಿ., ಪೂರ್ವೋಕ್ತ, ಪು.೫೯

೪೦. ಅದೇ, ಪು.೫೪

೪೧. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ಪು.೪೬

೪೨. ಅದೇ, ಪು.೪೭

೪೩. ಸೂರ್ಯನಾಥ ಕಾಮತ್, ಕರ್ನಾಟಕ ಗೆಜೆಟಿಯರ್, ಪು.೨೯೦

೪೪. ಪ್ರಜಾವಾಣಿ ದಿನಪತ್ರಿಕೆ, ಕರ್ನಾಟಕ ದರ್ಶನ, ೨೭, ೦೫, ೨೦೧೦, ಪು.೧

೪೫. ಅದೇ, ಪು.೨

* * *

ಅಧ್ಯಾಯ ನಾಲ್ಕು

ಸ್ವಾತಂತ್ರ್ಯ ಹೋರಾಟ ಸಂದರ್ಭದ ರೈತ ಹೋರಾಟಗಳು

೪.೧ ನಗರ ದಂಗೆ

೪.೨ ಸ್ವದೇಶಿ ಚಳುವಳಿ

೪.೩ ಗಾಂಧೀಜಿ ಮತ್ತು ರೈತರು

೪.೪ ಕಾಂಗ್ರೆಸ್ ಪಕ್ಷ ಮತ್ತು ರೈತರು

೪.೫ ಕಾಯಿದೆ ಭಂಗ ಚಳುವಳಿ

೪.೫.೧. ಅರಣ್ಯ ಸತ್ಯಾಗ್ರಹ

೪.೫.೨. ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್

೪.೫.೩. ವಿದೇಶಿ ಬಟ್ಟೆ ಮಾರಾಟ ಮಾಡುವ ಅಂಗಡಿಯ ಮುಂದೆ ಪಿಕೆಟಿಂಗ್

೪.೬. ಕ್ವಿಟ್ ಇಂಡಿಯಾ ಚಳುವಳಿ

ಸ್ವಾತಂತ್ರ್ಯ ಹೋರಾಟ ಸಂದರ್ಭದ ರೈತ ಹೋರಾಟಗಳು

ವಸಾಹತುಶಾಹಿ ಮತ್ತು ಮೈಸೂರು ಸಂಸ್ಥಾನದ ಕಾಲಘಟ್ಟದಲ್ಲಿ ನಡೆದ ನಗರ ದಂಗೆಯನ್ನು ಹೊರತುಪಡಿಸಿದರೆ ಯಾವುದೇ ರೈತರು ಪ್ರತ್ಯೇಕವಾಗಿ ಈ ಪ್ರದೇಶದಲ್ಲಿ ಹೋರಾಟ ಮಾಡಿರುವುದು ಕಂಡುಬಂದಿಲ್ಲ. ಹಾಗಾಗಿ ಅದೇ ಕಾಲಘಟ್ಟದಲ್ಲಿ ವಸಾಹತುಶಾಹಿ ಮತ್ತು ಮೈಸೂರು ಸಂಸ್ಥಾನದ ವಿರುದ್ಧ ಚುರುಕುಗೊಂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಭೂ ಒಡೆತನ ಹೊಂದಿದ ರೈತರು ಮತ್ತು ಕಾರ್ಮಿಕರು. ೧೯೩೭ರ ನಂತರ ದಾವಣಗೆರೆ ಪ್ರದೇಶದಲ್ಲಿ ಗ್ರಾಮಮಟ್ಟದಿಂದ ತಾಲೂಕು ಮತ್ತು ಜಿಲ್ಲಾ ಮಟ್ಟದವರಿಗೆ ಅಸ್ತಿತ್ವಕ್ಕೆ ಬಂದಿದ್ದ ಕಾಂಗ್ರೆಸ್ ಸಮಿತಿಗಳಲ್ಲಿ ಸಾಮಾನ್ಯವಾಗಿ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರಾಗಿ ಕಾರ್ಯ ನಿರ್ವಹಿಸಿದವರೆಲ್ಲರೂ ರೈತರು ಮತ್ತು ರೈತ ಸಮುದಾಯದ ಬೆಂಬಲ ಪಡೆದವರೇ ಆಗಿದ್ದರು. ಗಾಂಧೀಜಿಯವರ ರೈತಪರ ಹಿನ್ನೆಲೆಯಿಂದ ಮತ್ತು ಕಾಂಗ್ರೆಸ್ ಕೂಡ ಆ ಸಂದರ್ಭದಲ್ಲಿ ರೈತರ ಪರ ಚಿಂತನೆಯಿಂದಾಗಿ ರೈತರು ವಸಾಹತುಶಾಹಿ ಮತ್ತು ಮೈಸೂರು ಸಂಸ್ಥಾನದ ರೈತ ವಿರೋಧಿ ನೀತಿಗಳಿಂದಾಗಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ರಾಷ್ಟ್ರೀಯ ಹೋರಾಟದ ಅಧಿವೇಶನಗಳಲ್ಲಿ ಭೂಮಾಲೀಕರಿಗೆ ಅನುಕೂಲವಾಗುವಂತಹ ಠರಾವುಗಳನ್ನು ಮಂಡಿಸಿದರು. ಇದರ ಫಲವಾಗಿ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವ ಮೂಲಕ ಸ್ವಾತಂತ್ರ್ಯ ಪಡೆಯುವ ಉದ್ದೇಶವನ್ನು ಹೊಂದಲಾಗಿತ್ತು. ಹಾಗಾಗಿ ರೈತ ಸಮುದಾಯವು ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಬ್ರಿಟಿಷ್ ಹಾಗೂ ಮೈಸೂರು ಸಂಸ್ಥಾನದ ಧೋರಣೆಗಳನ್ನು ಸಮಾನ ಸೈದ್ಧಾಂತಿಕ ನೆಲೆಯಲ್ಲಿ ವಿರೋಧಿಸಿದರು.

ಪ್ರಸ್ತುತ ಅಧ್ಯಾಯವು ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ನಡೆದ ರೈತ ಹೋರಾಟಗಳ ಅಭಿವ್ಯಕ್ತಿಯನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ. ಅದಕ್ಕಾಗಿ ಹಲವು ಭಾಗಗಳನ್ನು ವಿಭಾಗಿಸಿಕೊಂಡು ಆ ಮೂಲಕ ಸ್ವಾತಂತ್ರ್ಯ ಚಳುವಳಿಯ ವಿವಿಧ ಆಯಾಮಗಳನ್ನು ರೈತ ಹೋರಾಟದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೪.೧. ನಗರ ದಂಗೆ

ನಗರ ದಂಗೆಯು ವಸಾಹತು ಶಾಹಿ ಮತ್ತು ಮೈಸೂರು ಸಂಸ್ಥಾನದ ರೈತ ವಿರೋಧಿ ನೀತಿಗಳಾದ ಕಂದಾಯ ಹೆಚ್ಚಳ, ಬ್ರಾಹ್ಮಣರ ಪ್ರಾಬಲ್ಯದಿಂದಾಗಿ ಆಗಿನ ನಗರ ಪ್ರಾಂತ್ಯದ ರೈತರು ಹೋರಾಟ ನಡೆಸಿದರು. ನಗರ ಪ್ರದೇಶದಲ್ಲಿ ಶುರುವಾದ ಹೋರಾಟವು ಮೈಸೂರು ಸಂಸ್ಥಾನದ ಹೆಚ್ಚು ಕಡಿಮೆ ಎಲ್ಲ ಫೌಜುದಾರಿ ಪ್ರದೇಶಗಳಿಗೂ ಹರಡಿತು.

ಮೈಸೂರು ಸಂಸ್ಥಾನದ ದಿವಾನರಾದ ಪೂರ್ಣಯ್ಯನವರ ಕಾಲದಲ್ಲಿ ಸಂಸ್ಥಾನದ ಭೂಹಿಡುವಳಿ ಮೇಲೆ ಹೆಚ್ಚಿನ ಕಂದಾಯ ವಸೂಲಿ ಮಾಡುವ ಉದ್ದೇಶದಿಂದ ಹಲವಾರು ಕ್ರಮಗಳನ್ನು ಕೈಗೊಂಡರು. ಈ ಕ್ರಮಗಳಲ್ಲಿ

ಪ್ರತಿಯೊಂದು ತಾಲ್ಲೂಕಿನಿಂದ ನಿಗದಿಪಡಿಸಿದ ಕಂದಾಯವನ್ನು ವಸೂಲಿ ಮಾಡುವ ಜವಾಬ್ದಾರಿಯನ್ನು ಅಮಲ್ದಾರರಿಗೆ ವಹಿಸಲಾಯಿತು. ಇದರಿಂದಾಗಿ ಅಮಲ್ದಾರರಿಗೆ ಹೆಚ್ಚಿನ ಅಧಿಕಾರ ಪ್ರಾಪ್ತವಾಯಿತು. ಪೂರ್ಣಯ್ಯನವರು ನಿವೃತ್ತಿಯಾದ ನಂತರ ಸಂಸ್ಥಾನದ ಹೆಚ್ಚಿನ ಅಧಿಕಾರ ಸವಾರಿ ಕಛೇರಿಯ ರಾಮರಾಯನಿಗೆ ದೊರೆಯಿತು.[೧] ನಗರ ಪ್ರದೇಶದ ರಾಮರಾಯನ ಸಂಬಂಧಿಗಳು ರೈತರಿಗೆ ಬಹಳ ಚಿತ್ರಹಿಂಸೆ ಕೊಟ್ಟರು. ರೈತರ ಸ್ಥಿತಿಗತಿ ಮಹಾರಾಜರಿಗೆ ತಿಳಿಯದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿದ ರಾಮರಾಯನ ಸಂಬಂಧಿಗಳು ನಗರ ಪ್ರದೇಶದ ಫೌಜುದಾರರಾಗಿ ಕೆಲಸ ಮಾಡುತ್ತಿದ್ದುದರಿಂದ ಅವರೆಲ್ಲ ಸೇರಿಕೊಂಡು ರೈತರಿಂದ ವಸೂಲಾದ ಕಂದಾಯ ತೆರಿಗೆ ಮುಂತಾದವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು.[೨] ಅವರಲ್ಲಿ ಅನೇಕರು ದರೋಡೆ ಕೋರರಿಗೆ ಸಹಾಯಕರಾಗಿ ಕಂದಾಯ ಹಣವನ್ನು ಲೂಟಿ ಮಾಡುತ್ತಿದ್ದರು. ಇವರಲ್ಲಿ ನಗರ ಫೌಜುದಾರನಾಗಿದ್ದ ಹಾನುಗಲ್ಲು ಕೃಷ್ಣರಾಯ್, ಚನ್ನಗಿರಿಯ ಸುಬೇದಾರ ಅಣ್ಣೆಗೆರೆ ವೆಂಕಟರಾಯ್ ಪ್ರಮುಖರು. ಈ ದಂಗೆಕೋರರ ವಿಚಾರವು ರಾಜನಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ತಲುಪಿದ್ದರಿಂದ ನಗರ ಪ್ರಾಂತ್ಯದ ಫೌಜುದಾರನಾದ ಹಾನುಗಲ್ಲು ಕೃಷ್ಣರಾಯ ತನ್ನ ಹುದ್ದೆಯನ್ನು ಕಳೆದುಕೊಂಡನು.

ಇವನ ಜಾಗಕ್ಕೆ ಫೌಜುದಾರನಾಗಿ ವೀರರಾಜೇ ಅರಸನನ್ನು ನೇಮಿಸಿದರು. ಇದರಿಂದ ಕುಪಿತನಾದ ಸುಬೇದಾರ ಮತ್ತು ರಾಮರಾಯನು ಸಂಸ್ಥಾನದ ರೈತರಲ್ಲಿ ಹಾಲಿ ಫೌಜುದಾರನ ವಿರುದ್ಧ ಗೊಂದಲದ ಹೇಳಿಕೆಗಳನ್ನು ನೀಡತೊಡಗಿದರು. ಚನ್ನಗಿರಿಯ ಅಮಲ್ದಾರ ಗೋಪಾಲರಾಯನು ಬ್ರಿಟಿಷರಿಗೆ ಸೇರಿದ್ದ ಬಳ್ಳಾರಿ ಪ್ರಾಂತ್ಯಕ್ಕೆ ಹೋಗುವಂತೆ ರೈತರಿಗೆ ಕರೆ ನೀಡಿದನು. ಇದೇ ಸಂದರ್ಭದಲ್ಲಿ ಇವರ ಜೊತೆ ಬೂದಿಬಸಪ್ಪನು ಕೈ ಜೋಡಿಸಿದನು.

ಫೌಜುದಾರರ ಒಳಜಗಳದ ಲಾಭ ಪಡೆದ ಹೈಗಮಲ್ಲನೆಂಬ ಹೆಸರು ಪಡೆದ ಬೂದಿಬಸಪ್ಪನು ಜನರಲ್ಲಿ ಮತ್ತಷ್ಟು ತಪ್ಪು ಅಭಿಪ್ರಾಯ ಬಿತ್ತಿ ರೈತರನ್ನು ಎತ್ತಿಕಟ್ಟುತ್ತಿದ್ದನು. ಇವನು ಹೊನ್ನಾಳಿ ಸಮೀಪದ ಚಿನ್ನಕಟ್ಟಿ ಗ್ರಾಮದವನು. ಚಿಕ್ಕ ಹಿಡುವಳಿಗಾರನ ಮಗನಾದ ಇವನು ಚಿಕ್ಕಂದಿನಿಂದಲೂ ಅಲೆಮಾರಿಯಾಗಿ ಚಿಟ್ಟನಹಳ್ಳಿ ಪಾಸೇಗಾರ ಜಾತಿಯ ಜನಗಳ ಮುಖಂಡನಾಗಿದ್ದನು. ಇವನು ಕಳ್ಳತನ, ದರೋಡೆ ಮಾಡಿ ಸಿಕ್ಕಿ ಬಿದ್ದು ಎರಡು ವರ್ಷ ಕಾಲ ಸೆರೆಯಲ್ಲಿದ್ದನು. ಶಿಕ್ಷೆ ಅವಧಿ ಮುಗಿದ ಮೇಲೆ ಇವನು ಬಿಡುಗಡೆ ಆಗಿ ಬರುವಾಗ ಜಿಲ್ಲಾ ಕೋರ್ಟಿನವರು ನೀಡಿದ್ದ ರಹದಾರಿಯಲ್ಲಿ ತನ್ನ ಹೆಸರನ್ನು ''ಬೂದಿಬಸಪ್ಪ ನಗರ ಖಾವಿಂದ'' ಎಂದು ಬರೆಯಿಸಿಕೊಂಡನು. ಹೀಗೆ ಬಂದಂತಹ ಬೂದಿಬಸಪ್ಪನು ನಗರ ಪ್ರಾಂತ್ಯಕ್ಕೆ ವಾರಸುದಾರನೆಂದು ರೈತಾಪಿ ಜನರನ್ನು ನಂಬಿಸಿದನು. ಇದರಿಂದ ಅನೇಕ ಹಳ್ಳಿಗಳ ಪಟೇಲರು, ರೈತರು, ಸರ್ಕಾರಿ ಅಧಿಕಾರಿಗಳು ಸೇರಿ ಬೂದಿಬಸಪ್ಪನನ್ನು ನಗರ ಸಂಸ್ಥಾನದ ರಾಜನೆಂದು ಘೋಷಿಸಿದರು.[೩] ಇದರಿಂದ ಪುಳಕಿತನಾದ ಬೂದಿಬಸಪ್ಪನು ರೈತರಿಗೆ ಕಂದಾಯ ಮನ್ನಾ, ಕಂದಾಯದ ದರ ಇಳಿಸುವಿಕೆ, ಇತ್ಯಾದಿ ಆಶ್ವಾಸನೆ ನೀಡುವುದರ ಮೂಲಕ ರೈತರನ್ನು ಸಂಘಟಿಸಿ ಹೋರಾಟಕ್ಕೆ ಸನ್ನದ್ಧನಾದನು. ಹೋರಾಟವು ಹೊಳೆಹೊನ್ನೂರಿನಲ್ಲಿ ೧೮೩೦ರಲ್ಲಿ ಪ್ರಾರಂಭವಾಯಿತು.[೪]

ಹೊಳೆಹೊನ್ನೂರಿನಲ್ಲಿ ಆರಂಭವಾದ ನಗರ ದಂಗೆಯು ಹೊನ್ನಾಳಿ, ಚನ್ನಗಿರಿ, ಬಸವಾಪಟ್ಟಣ, ಉಡುಗಣೆ, ಶಿಕಾರಿಪುರ, ಕುಂಸಿ, ಪ್ರಾಂತ್ಯದಲ್ಲಿ ಹರಡಿತು. ಇಲ್ಲಿನ ರೈತರೂ ದಂಗೆಯೆದ್ದರು. ಚಿತ್ರದುರ್ಗದ ಭಾಗವಾಗಿದ್ದ ಉಚ್ಚಂಗಿದುರ್ಗದಲ್ಲಿಯೂ ಹೋರಾಟ ಕಾಣಿಸಿಕೊಂಡಿತು.[೫]

ರೈತರು ತಮ್ಮ ಹೋರಾಟದಲ್ಲಿ ಅಧಿಕಾರಿಗಳನ್ನು ವಿವಿಧ ಯಾತನೆಗಳಿಗೆ ಗುರಿಪಡಿಸಿದರು. ''ಮುಖ್ಯವಾಗಿ ಅವರ ಮುಖಕ್ಕೆ ಉರಿಯುವ ಪಂಜನ್ನು ಹಿಡಿಯುವುದು, ಅವರ ತೊಡೆಗಳನ್ನು ಚಿವುಟುವುದು, ಅವರ ತೋಳುಗಳನ್ನು ಚುಚ್ಚಿ ಸಾಲಿನಲ್ಲಿ ನಿಲ್ಲಿಸುವುದು, ಅವರ ಕಿವಿಗಳಿಗೆ ಸಣ್ಣ ಕಲ್ಲುಗಳನ್ನು ಹಾಕುವುದು. ಈ ರೀತಿ ರೈತರು ಅಧಿಕಾರಿಗಳಿಗೆ ಚಿತ್ರಹಿಂಸೆ ನೀಡುತ್ತಿದ್ದರು. ಈ ಪ್ರದೇಶದ ಹೊನ್ನಾಳಿ, ಚನ್ನಗಿರಿ, ಉಚ್ಚಂಗಿದುರ್ಗ ಮೊದಲಾದ ಸ್ಥಳಗಳಲ್ಲಿ ರೈತರು ಅಧಿಕಾರಿಗಳಿಗೆ ಕಿರುಕುಳ ನೀಡಿದರು. ಈ ರೈತ ಹೋರಾಟವನ್ನು ಹತ್ತಿಕ್ಕಲು ಮೈಸೂರು ಸಂಸ್ಥಾನ ಮತ್ತು ವಸಾಹತು ಸರ್ಕಾರವು ಚುರುಕಾಗಿ ಕೆಲಸ ಮಾಡಿತು. ಈ ಹೋರಾಟದಿಂದಾಗಿ ಕೃಷ್ಣರಾಜ ಒಡೆಯರು ರೈತರ ಸಮಸ್ಯೆಗಳಿಗೆ ಸ್ಪಂದಿಸತೊಡಗಿದರು. ತಪ್ಪಿತಸ್ಥ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿ ಕೆಲವರಿಗೆ ಕ್ರೂರ ಶಿಕ್ಷೆ ನೀಡಿ ರೈತರ ಸಮಸ್ಯೆಗಳನ್ನು ಪರಿಹರಿಸತೊಡಗಿದರು. ಅಲ್ಲದೆ ರೈತರಿಗೆ ಹೊರೆ ಎನಿಸಿದ ಅನೇಕ ತೆರಿಗೆಗಳನ್ನು ವಜಾ ಮಾಡಿದರು. ಕಂದಾಯ ದರವನ್ನು ಕಡಿಮೆ ಮಾಡಿದರು. ನಗರ ದಂಗೆಯು ೧೮೩೧ರವರೆಗೆ ನಡೆಯಿತು. ೧೮೩೨ರಲ್ಲಿ ಮತ್ತೆ ಒಂದೆರಡು ಬಾರಿ ಹೋರಾಟಗಳು ಕಂಡುಬಂದವು. ೧೮೩೩ರಲ್ಲಿ ಮತ್ತೊಮ್ಮೆ ಈ ಹೋರಾಟ ನಡೆಯುವ ಸಾಧ್ಯತೆ ಕಂಡುಬಂತಲ್ಲದೇ ಅದು ಪ್ರೆಸಿಡೆನ್ಸಿ ಪ್ರದೇಶಗಳಿಗೂ ಹರಡುವ ಸಾಧ್ಯತೆಯನ್ನು ವಸಾಹತುಶಾಹಿ ಸರ್ಕಾರ ತಳ್ಳಿಹಾಕಲಿಲ್ಲ. ಲಾರ್ಡ್ ಬೆಂಟಿಂಕ್‌ಗೆ ಬರೆದ ಗುಪ್ತ ಪತ್ರದಲ್ಲಿ ಈ ಮಾತನ್ನು ಡಬ್ಲ್ಯು. ಆರ್ ವೈಟಲ್ ಹೇಳುತ್ತಾನೆ.[೬] ''ನಗರ ಪ್ರದೇಶದಲ್ಲಿರುವ ಅಶಾಂತಿಯು ಕೆನರಾ ಪ್ರದೇಶಕ್ಕೆ ಎರಡನೇ ಬಾರಿ ಹರಡಬಹುದು. ಇದು ಮೈಸೂರು ಜಿಲ್ಲೆಗೂ ಹರಡುವುದನ್ನು ನಾನು ತಳ್ಳಿಹಾಕುವುದಿಲ್ಲ'' ಎಂಬ ಮಾತನ್ನು ಗಮನಿಸಿದರೆ ರೈತರ ಹೋರಾಟವು ವಸಾಹತು ಸರ್ಕಾರಕ್ಕೆ ಯಾವ ರೀತಿಯ ಭಯವನ್ನು ತಂದಿತ್ತು ಎಂಬುದನ್ನು ಕಾಣಬಹುದಾಗಿದೆ.

ಈ ನಗರ ದಂಗೆಯ ಸಲುವಾಗಿ ಮೈಸೂರು ಸಂಸ್ಥಾನದ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅಧಿಕಾರ ಕಳೆದುಕೊಂಡರು. ಇಲ್ಲಿಂದ ಮುಂದೆ ೫೦ ವರ್ಷ ಬ್ರಿಟಿಷರ ನೇರ ಆಳ್ವಿಕೆಗೆ ಮೈಸೂರು ಪ್ರಾಂತ್ಯ ಒಳಪಟ್ಟಿತು.

ಈ ಹೋರಾಟವು ಸೈದ್ಧಾಂತಿಕ ನೆಲೆಯ ಮೇಲಾಗಲೀ, ಸಾಮಾಜಿಕ ಸಂಬಂಧಗಳಲ್ಲಿನ ಬದಲಾವಣೆಗಾಗಲೀ ಒತ್ತು ನೀಡದಿದ್ದರೂ, ಅದರ ಪರಿಣಾಮ ನಾವು ಈ ಹಿಂದೆ ಹೇಳಿದಂತೆ ಮೈಸೂರು ಸಂಸ್ಥಾನದ ಮೇಲಾದದ್ದು ಒಂದು ಇತಿಹಾಸ ಎನ್ನಬಹುದು. ಈ ಹೋರಾಟವು ವಸಾಹತುಶಾಹಿ ಮೈಸೂರು ಸಂಸ್ಥಾನವನ್ನು ಕಬಳಿಸಲು ಅವಕಾಶ ಮಾಡಿಕೊಟ್ಟಿತು.

೪.೨. ಸ್ವದೇಶಿ ಚಳುವಳಿ

ವಸಾಹತು ಸರ್ಕಾರದ ವಿರುದ್ಧ ಸ್ವದೇಶಿ ಚಳುವಳಿ, ಅಸಹಕಾರ ಚಳುವಳಿ, ಕಾಯಿದೆ ಭಂಗ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರು ಭಾಗವಹಿಸದಿದ್ದರೆ ರಾಷ್ಟ್ರೀಯ ಹೋರಾಟ ಯಶಸ್ವಿಯಾಗಿ ನಡೆದು ಭಾರತ ಸ್ವಾತಂತ್ರ್ಯಗೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.[೭] ರಾಷ್ಟ್ರೀಯ ಹೋರಾಟದ ಮುನ್ನ ರೈತರು ಸ್ವಾವಲಂಬಿಗಳಾಗಿದ್ದರು. ಅವರಿಗೆ ಸಂಘಟನೆಯ ಕೊರತೆಯಿತ್ತು. ಅಂತಹ ಸಂದರ್ಭದಲ್ಲಿ ರೈತರು ತಮ್ಮ ಸಮಸ್ಯೆಗಳನ್ನು ರಾಷ್ಟ್ರೀಯ ಹೋರಾಟಗಳಲ್ಲಿ ಭಾಗವಹಿಸುವುದರ ಮೂಲಕ ವ್ಯಕ್ತಪಡಿಸಿದರು.

ಭಾರತದ ರಾಷ್ಟ್ರೀಯ ಚಳುವಳಿಗಳಲ್ಲಿ ಸ್ವದೇಶಿ ಚಳುವಳಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ೧೯೦೫ರ ಜೂನ್ ತಿಂಗಳಿನಲ್ಲಿ ಲಾರ್ಡ್ ಕರ್ಜನ್‌ನು ಬಂಗಾಳ ವಿಭಜನೆಯ ಯೋಜನೆಯನ್ನು ಪ್ರಕಟಿಸಿದನು. ಇದರ ವಿರುದ್ಧ ೧೯೦೫ ಆಗಸ್ಟ್ ೭ರಂದು ಕಲ್ಕತ್ತಾದ ಪುರಸಭೆಯಲ್ಲಿ ಬೃಹತ್ ಸಭೆಯೊಂದನ್ನು ನಡೆಸುವುದರ ಮೂಲಕ ಸ್ವದೇಶಿ ಚಳುವಳಿ ಆರಂಭವಾಯಿತು. ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಬೇಕೆಂಬ ನಿರ್ಣಯ ಅಲ್ಲಿ ಅಂಗೀಕೃತವಾಯಿತು. ವಿಭಜನೆಯನ್ನು ಜಾರಿಗೆ ತಂದ ಅಕ್ಟೋಬರ್ ೧೬ನೆಯ ದಿನವನ್ನು ರಾಷ್ಟ್ರೀಯ ಶೋಕದಿನ ಎಂದು ಕರೆಯಲಾಯಿತು.[೮] ಅಂದು ಸಾರ್ವತ್ರಿಕ ಹರತಾಳ ನಡೆಯಿತು.

ಮಹಾತ್ಮಾ ಗಾಂಧೀಜಿಯವರು ಸ್ವದೇಶಿ ಮತ್ತು ವಿದೇಶಿ ಪದಗಳನ್ನು ವ್ಯಾಖ್ಯಾನಿಸಿದ್ದು ಹೀಗೆ: ''ದೂರವಿರುವವನನ್ನು ಹೊರತುಪಡಿಸಿ ನಮ್ಮ ಅತೀ ಸಮೀಪದ ಪರಿಸರಗಳ ಉಪಯೋಗ ಹಾಗೂ ಸೇವೆಗಳಿಗೆ ನಮ್ಮನ್ನು ಮಿತಿಗೊಳಿಸುವ ಮನೋಭಾವಕ್ಕೆ ಸ್ವದೇಶಿ ಎಂದು ಹೇಳಿದರು.[೯]

ಬಂಗಾಳದ ವಿಭಜನೆಯ ವಿರುದ್ಧ ಸ್ವದೇಶಿ ಚಳುವಳಿಯು ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ಹುರುಪು ಮೂಡಿಸಿತು. ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರಾದ ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ತಿಲಕ್, ಲಾಲಾಲಜಪತ್‌ರಾಯ್, ಬಿಪಿನ್‌ಚಂದ್ರಪಾಲ್ ಇವರ ನೇತೃತ್ವದಲ್ಲಿ ಸ್ವದೇಶಿ ಚಳುವಳಿ ರಾಷ್ಟ್ರದಾದ್ಯಂತ ಪ್ರಾರಂಭವಾಯಿತು.

ಬಹಿಷ್ಕಾರ ಮತ್ತು ಸ್ವದೇಶಿ ಚಳುವಳಿ ವಾಸ್ತವವಾಗಿ ಒಂದು ವಿಶಾಲ ತಳಹದಿಯ ಮೇಲೆ ರಚನೆಗೊಂಡ ಚಳುವಳಿ. ಇದಕ್ಕೆ ಎಲ್ಲ ವರ್ಗದ ಜನರ ಬೆಂಬಲವನ್ನು ಪಡೆಯಲು ಪ್ರಯತ್ನಿಸಲಾಯಿತು. ಜಮೀನ್ದಾರರು, ವಕೀಲರು ಭಾಗವಹಿಸಿದ್ದಲ್ಲದೆ ವಿದ್ಯಾರ್ಥಿಗಳು ಮತ್ತು ಯುವ ಜನರು, ರೈತರು, ಸಣ್ಣ ವ್ಯಾಪಾರಿಗಳು ಇದರಲ್ಲಿ ಪಾಲ್ಗೊಂಡರು.[೧೦] ವೈದ್ಯರು ಮತ್ತು ದೇಶೀಯ ಸೈನಿಕರು ಕೂಡ ಸೇರಿದರು. ಬ್ರಾಹ್ಮಣರು, ಪೂಜಾರಿವರ್ಗ, ಕ್ಷೌರಿಕರು ಮತ್ತು ಅಗಸರು ಮುಂತಾದ ವರ್ಗದವರು ಸ್ವದೇಶಿ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸ್ವದೇಶಿ ಚಳವಳಿಯ ಮುಖ್ಯಗುರಿಯೆಂದರೆ ಮ್ಯಾಂಚೆಸ್ಟರ್‌ನ ಗಿರಣಿ ಬಟ್ಟೆಗಳ ಬಹಿಷ್ಕಾರವಾಗಿತ್ತು. ಅಷ್ಟೇ ಅಲ್ಲದೆ ಬ್ರಿಟನ್ನಿನ ಮತ್ತಿತರ ಸಾಮಗ್ರಿಗಳಾಗಿದ್ದ ಉಪ್ಪು, ಸಕ್ಕರೆ, ಇತರ ಭೋಗ ಸಾಮಗ್ರಿ ಮುಂತಾದವುಗಳಿಗೂ ಈ ಬಹಿಷ್ಕಾರದ ಚಳವಳಿ ಚಾಚಿಕೊಂಡಿತ್ತು. ಭಾರತದಲ್ಲೇ ಸಿಗುತ್ತಿದ್ದ ಕಲ್ಲುಪ್ಪು ಮತ್ತು ಸ್ಥಳೀಯವಾಗಿ ಉತ್ಪಾದಿತವಾಗುತ್ತಿದ್ದ ಸಕ್ಕರೆ ಮತ್ತು ಬೆಲ್ಲಕ್ಕೆ ಬೇಡಿಕೆ ಹೆಚ್ಚಾಯಿತು ಆದರೆ ಬಟ್ಟೆಯ ಪ್ರಶ್ನೆ ಕಠಿಣವಾಯಿತು. ದೇಶದೊಳಗಿನ ಬಟ್ಟೆ ಉತ್ಪಾದನೆಗಿಂತ ಅವಶ್ಯಕತೆ ಹೆಚ್ಚಾಗಿರುತ್ತಿತ್ತು. ಆಗ ಬೊಂಬಾಯಿ ಮತ್ತು ಅಹಮದಾಬಾದಿನ ಗಿರಣಿ ಮಾಲೀಕರು ನೆರವಿಗೆ ಬಂದರು. ಬಂಗಾಳದಲ್ಲಿ ನಡೆದ ವಿದೇಶಿ ಬಟ್ಟೆ ಬಹಿಷ್ಕಾರ ಭಾರತದ ಬಟ್ಟೆ ಗಿರಣಿಗಳ ಅಭಿವೃದ್ಧಿಗೆ ಕಾರಣವಾಯಿತು. ಸ್ವದೇಶಿ ಚಳವಳಿಯಲ್ಲಿ ರೈತರು ರಾಷ್ಟ್ರೀಯ ಗೀತೆಯಲ್ಲಿ 'ಈ ಕೈ ಮಗ್ಗದ ಬಟ್ಟೆಯನ್ನು ಗೌರವಿಸಿರಿ ಬಡತನದಲ್ಲಿರುವ ನಮ್ಮ ತಾಯಿ ನೀಡುವ ಈ ಉಡುಗೊರೆಯ ಒರಟು ಬಟ್ಟೆಯನ್ನು ಶಿರದ ಮೇಲಿಟ್ಟುಕೊಳ್ಳಿ' ಎಂದು ಹಾಡಲಾಗುತ್ತಿತ್ತು.[೧೧]

ಸರ್ಕಾರದ ದಬ್ಬಾಳಿಕೆ ಹೆಚ್ಚಾದಂತೆ ವಿದೇಶಿ ಬಹಿಷ್ಕಾರ ಕಾರ್ಯಕ್ರಮ ಇನ್ನೂ ತೀವ್ರವಾಗಿ ನಾಲ್ಕು ವಿವಿಧ ಕ್ರಮಗಳನ್ನು ಅನುಸರಿಸಲು ತಿಳಿಸಲಾಯಿತು.

೧. ಇಂಗ್ಲೆಂಡಿನ ಬಟ್ಟೆ, ಸಕ್ಕರೆ, ಉಪ್ಪು, ಮುಂತಾದ ವಸ್ತುಗಳ ತಿರಸ್ಕಾರ.

೨. ಇಂಗ್ಲಿಷ್ ಭಾಷೆಗೆ ಬಹಿಷ್ಕಾರ

೩. ಸರ್ಕಾರದ ಕಾರ್ಯಾಲಯಗಳಲ್ಲಿ ಅದು ರಚಿಸಿದ ಸಮಿತಿಗಳಲ್ಲಿನ ಗೌರವ ಸದಸ್ಯರು ರಾಜೀನಾಮೆ ಕೊಡುವುದು.

೪. ವಿದೇಶಿ ವಸ್ತುಗಳನ್ನು ಬಳಸುವವರ ಮೇಲೆ ಸಾಮಾಜಿಕ ಬಹಿಷ್ಕಾರ

೪.೧. ಅವರೊಡನೆ ಸಹಭೋಜನ ನಿರಾಕರಣೆ

೪.೨. ವಿವಾಹ ಸಂಬಂಧಗಳನ್ನು ಮಾಡದಿರುವುದು.

೪.೩. ವ್ಯಾಪಾರ ವ್ಯವಹಾರಗಳನ್ನು ನಿಲ್ಲಿಸುವುದು.

೪.೪. ಕ್ಷೌರಿಕರ ಸೇವೆಯನ್ನು ಹಿಂತೆಗೆದುಕೊಳ್ಳುವುದು.

೪.೫. ಅವರ ಮಕ್ಕಳೊಡನೆ ಇತರರ ಮಕ್ಕಳನ್ನು ಆಟಕ್ಕೆ ಸೇರದಂತೆ ನಿರ್ಬಂಧಿಸುವುದು.

ಈ ಸಾಮಾಜಿಕ ಬಹಿಷ್ಕಾರ ತುಂಬಾ ಪರಿಣಾಮಕಾರಿ ಪ್ರಬಲ ಅಸ್ತ್ರವಾಗಿತ್ತು. ವಿದೇಶಿ ವಸ್ತುಗಳನ್ನು ಮಾರುವವರು, ಸ್ವದೇಶಿ ಚಳುವಳಿಯನ್ನು ವಿರೋಧಿಸುವವರು, ಸರ್ಕಾರದೊಡನೆ ದಬ್ಬಾಳಿಕೆಗೆ ಸಹಕರಿಸುವವರು ಬಹು ವಿಧದ ಸಾರ್ವಜನಿಕ ಅವಹೇಳನವನ್ನು ಅನುಭವಿಸುತ್ತಿದ್ದರು. ಅಂಥವರೊಡನೆ ಯಾರೂ ಮಾತನಾಡುತ್ತಿರಲಿಲ್ಲ. ದೂರದಿಂದ ಗೇಲಿ ಮಾಡುತ್ತಿದ್ದರು. ಶಾಲೆಗಳಲ್ಲಿ ಆಟದ ಮೈದಾನಗಳಲ್ಲಿ ಅವರ ಮಕ್ಕಳನ್ನು ಬಯ್ದು ಹೀಯಾಳಿಸುತ್ತಿದ್ದರು. ಬಂಧುಗಳು, ನೆರೆಹೊರೆ ಅವರ ಮನೆಯ ಸಮಾರಂಭಗಳಲ್ಲಿ ಭಾಗಿಗಳಾಗುತ್ತಿರಲಿಲ್ಲ. ಪುರೋಹಿತರು, ವೈದ್ಯರು, ಆಳುಗಳು, ಅಗಸರು, ಕ್ಷೌರಿಕರು ತಮ್ಮ ಸೇವೆಗಳನ್ನು ನಿಲ್ಲಿಸುತ್ತಿದ್ದರು. ಕೊನೆಗೆ ಅವರ ಮಕ್ಕಳ ಮದುವೆಗಳಾಗುವುದು ಕೆಲವು ಕಡೆ ಅತ್ಯಂತ ಕಷ್ಟವಾಗಿತ್ತು.[೨]

ಸ್ವದೇಶಿ ಚಳುವಳಿ ಭಾರತೀಯ ರಾಷ್ಟ್ರೀಯ ಚಳುವಳಿಯಾಗಿ ಪರಿವರ್ತಿತವಾಗಿ ಮುಂದೆ ರಾಷ್ಟ್ರೀಯ ಸ್ವಾತಂತ್ರ್ಯದ ಮಹಾಸಂಗ್ರಾಮದಲ್ಲಿ ಲೀನವಾದುದು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಸಂಭವಿಸಿದ ಭಾರತ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳಲ್ಲೊಂದು. ರಾಷ್ಟ್ರೀಯತೆ ಉಗಮ ಮತ್ತು ಅದರ ಬೆಳವಣಿಗೆಯು ತಿಲಕರು, ಅರವಿಂದರು, ಲಜಪತರಾಯ್ ಮತ್ತು ಬಿಪಿನ್ ಚಂದ್ರಪಾಲರ ನೇತೃತ್ವದಲ್ಲಿ ನಡೆಯಿತು. ಸ್ವದೇಶಿ ಚಳವಳಿ ಮತ್ತು ರಾಷ್ಟ್ರೀಯತೆಗಳ ಕ್ರಿಯೆ ಪ್ರತಿಕ್ರಿಯೆಗಳು ಪರಸ್ಪರ ಸ್ಪಂದಿಸಿ ಒಂದರ ಮೇಲೆ ಮತ್ತೊಂದು ಪ್ರಭಾವ ಬೀರಿ ಅವುಗಳ ವಲಯಗಳನ್ನು ವಿಸ್ತರಿಸಿತು.

೧೯೦೬ರಲ್ಲಿ ತಿಲಕರು ಕರ್ನಾಟಕಕ್ಕೆ ಬಂದು ಪ್ರಥಮವಾಗಿ ಬೆಳಗಾವಿಗೆ ಭೇಟಿ ನೀಡಿ ಸ್ವರಾಜ್ಯದ ಬಗ್ಗೆ ಭಾಷಣ ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು. ತಿಲಕರ ಸಂದೇಶವೆಂದರೆ ಸ್ವರಾಜ್ಯ

ಹಾಗೂ ಸ್ವದೇಶಿ ಚಳವಳಿ ಮಾತ್ರ ಪರಕೀಯ ಆಳ್ವಿಕೆಯಿಂದ ದೇಶವನ್ನು ರಕ್ಷಿಸಬಹುದು ಎಂಬುದಾಗಿತ್ತು. ತಿಲಕರ ಭಾಷಣಗಳ ಪರಿಣಾಮವಾಗಿ ವಿದೇಶಿ ವಸ್ತುಗಳನ್ನು ಸುಡುವ ಕಾರ್ಯಕ್ರಮ ನಡೆಯಿತು. ಇದೇ ರೀತಿ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಸ್ವದೇಶಿ ಚಳವಳಿ ಉಗ್ರ ಸ್ವರೂಪವನ್ನು ಪಡೆದುಕೊಂಡಿತು. ದಾವಣಗೆರೆ ಮತ್ತು ರಾಣೆಬೆನ್ನೂರಿನಲ್ಲಿ ವಿದೇಶಿ ವಸ್ತುಗಳನ್ನು ಸುಡಲಾಯಿತು. ವಿದೇಶಿ ಸಕ್ಕರೆಯನ್ನು ಬಳಸಿಕೊಳ್ಳುವುದಿಲ್ಲವೆಂದು ಧಾರವಾಡದಲ್ಲಿ ಜನರು ಪ್ರತಿಜ್ಞೆ ಮಾಡಿದರು. ದೇಶಪಾಂಡೆಯವರೂ ಸಹ ಕಾಂಗ್ರೆಸ್ ಸೇರಿ ಜನರು ತಮ್ಮ ವಿದೇಶಿ ಬಟ್ಟೆಗಳನ್ನು ಬೆಂಕಿಗೆ ಆಹುತಿ ಮಾಡಬೇಕೆಂದು ಪ್ರೋತ್ಸಾಹಿಸಿದರು. ಆರ್.ಎಸ್. ಹುಕ್ಕೇರಿಕರ್ ಅಂಥವರು ತಾವು ತೊಟ್ಟಿದ್ದ ಬಟ್ಟೆ ವಿದೇಶಿ ಬಟ್ಟೆಯೇ ಇಲ್ಲವೇ ಎಂಬುದನ್ನು ನೋಡದೆಯೇ ಕಳಚಿ ಬೆಂಕಿಗೆ ಹಾಕಿದರು. ವಿದೇಶಿ ವಸ್ತುಗಳನ್ನು ತಿರಸ್ಕರಿಸಬೇಕೆಂಬ ತೀರ್ಮಾನದಲ್ಲಿ ವಿದೇಶಿ ಔಷಧಿಗಳೂ ತ್ಯಾಜ್ಯವಾದದ್ದು ಪ್ರಮುಖ ಸಂಗತಿ. ಸ್ವದೇಶಿ ಚಳವಳಿಯನ್ನು ಸಂಪೂರ್ಣವಾಗಿ ನಡೆಸಿದ ಉದಾಹರಣೆಗಳು ನಡೆದವು. ಬೆಂಕಿಕಡ್ಡಿ, ಪಾತ್ರೆ ಸಾಮಾನುಗಳನ್ನು, ವಸ್ತ್ರ, ಪೆನ್ಸಿಲ್‌ಗಳನ್ನು ತಯಾರಿಸುವಂಥ ಅನೇಕ ಗಿರಣಿಗಳು ಸ್ಥಾಪನೆ ಆಗಿ ಅವು ಮುಂದೆ ನೆಲ ಕಚ್ಚಿದವು.[೧೩]

ದಾವಣಗೆರೆಯಲ್ಲಿ ಸ್ವದೇಶಿ ಚಳುವಳಿ ಚುರುಕುಗೊಳಿಸಲು ಹರ್ಡೇಕರ್ ಮಂಜಪ್ಪನವರು ೧೯೦೬ರಲ್ಲಿ 'ಧನುರ್ಧಾರಿ' ಪತ್ರಿಕೆಯನ್ನು ಆರಂಭಿಸುವ ಮೂಲಕ ರೈತಾಪಿ ಜನತೆಯಲ್ಲಿ ಸ್ವದೇಶಿ ಭಾವನೆ ಮೂಡಿಸುವಲ್ಲಿ ಪ್ರಧಾನ ಪಾತ್ರ ವಹಿಸಿದರು.[೧೪]

೪.೩. ಗಾಂಧೀಜಿ ಮತ್ತು ರೈತರು

ಗಾಂಧೀಜಿಯವರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವುದಕ್ಕೆ ಪ್ರೇರಣೆಯೇ ರೈತರು. ಅವರು ಮೊದಮೊದಲು ನಡೆಸಿದ ಹೊರಾಟಗಳು ಕೃಷಿಕರ ಮತ್ತು ಕಾರ್ಮಿಕರಿಗೆ ಸಂಬಂಧಿಸಿದವಾಗಿದ್ದವು. ೧೯೧೭ರಲ್ಲಿ ಚಂಪಾರಣ್ಯದ ನೀಲಿ ಕೃಷಿಕರ ಪರವಾಗಿ ಸತ್ಯಾಗ್ರಹ ಮಾಡುವುದರ ಮುಖಾಂತರ ನಾಯಕತ್ವ ವಹಿಸಿಕೊಂಡರು. ಬ್ರಿಟಿಷರ ಕೃಷಿ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೀಲಿಯನ್ನು ಬಲವಂತವಾಗಿ ವಾಣಿಜ್ಯೀಕರಿಸಲಾಗಿತ್ತು. ೧೮ನೆಯ ಶತಮಾನದಿಂದ ನೀಲಿ ಬೆಳೆಯಲಾಗುತ್ತಿತ್ತು. ಗೇಣಿದಾರರು ತಾವು ಪಡೆದ ಗೇಣಿ ಜಮೀನಿನ ಇಪ್ಪತ್ತನೇ ಮೂರು ಭಾಗದಲ್ಲಿ ಕಡ್ಡಾಯವಾಗಿ ನೀಲಿ ಬೆಳೆದು, ಯುರೋಪಿಯನ್ ಪ್ಲಾಂಟರುಗಳಿಗೆ ಅವರು ನಿರ್ಧರಿಸಿದ ಬೆಲೆಗೆ ಮಾರಬೇಕಾಗಿತ್ತು. ಇಂತಹ ಪರಿಸ್ಥಿತಿಯಲ್ಲಿದ್ದ ಚಂಪಾರಣ್ಯದ ರೈತರ ಸಮಸ್ಯೆಗಳಿಗೆ ಸ್ಪಂದಿಸಿದ ಗಾಂಧೀಜಿಯು ಹೋರಾಟದ ಹಾದಿಯಾಗಿ ಸತ್ಯಾಗ್ರಹ ಮಾಡಬೇಕಾಗಿತ್ತು. ಇದರ ಹಿನ್ನೆಲೆಯಲ್ಲಿ ಗಾಂಧೀಜಿಯು ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಮಾಡಿದ ಸೇವೆಗಾಗಿ ಸರ್ಕಾರ ನೀಡಿದ್ದ 'ಕೈಸರ್-ಇ-ಹಿಂದ್' ಪದಕವನ್ನು ಹಿಂತಿರುಗಿಸುವುದಾಗಿ ಹೇಳಿದರು.[೧೫]

ಗಾಂಧೀಜಿಯವರ 'ಸತ್ಯಾಗ್ರಹ'ದ ಹಿನ್ನೆಲೆಯಲ್ಲಿ ಸರ್ಕಾರವು ನೀಲಿ ಬೆಳೆಗಾರರ ಕಷ್ಟಗಳನ್ನು ವಿಚಾರಿಸಲು ಗಾಂಧೀಜಿಯವರನ್ನು ಒಳಗೊಂಡ ಐವರ ಸಮಿತಿ ರಚನೆ ಮಾಡಿತ್ತು. ಈ ಸಮಿತಿಯ ವರದಿಯ ಪರಿಣಾಮ ಚಂಪಾರಣ್ಯ ಕೃಷಿ ಕಾಯಿದೆ ಜಾರಿಯಾಗಿ ಕಡ್ಡಾಯ ನೀಲಿ ಕೃಷಿ ಕೊನೆಗೊಂಡಿತಲ್ಲದೆ ಗೇಣಿದರಗಳು

ಕಡಿಮೆಯಾದವು. ಈ ರೀತಿಯ ಚಂಪಾರಣ್ಯದ ಚಳುವಳಿಗೆ ದೊರೆತ ಪ್ರಚಾರ ಭಾರತೀಯ ರಾಜಕೀಯ ರಂಗಕ್ಕೆ ಗಾಂಧೀಮಾರ್ಗದ ಪರಿಚಯ ಮಾಡಿಕೊಟ್ಟಿತಲ್ಲದೆ ಅವರ ಹೆಸರು ದೇಶದೆಲ್ಲೆಡೆ ಪ್ರಸಿದ್ಧವಾಯಿತು. ಅದೇ ರೀತಿಯ ಇನ್ನೊಂದು ಚಳುವಳಿ ಖೇಡ ರೈತರದು. ಗುಜರಾತಿನ ಖೇಡ ಜಿಲ್ಲೆಯಲ್ಲಿ ಮಳೆ ಬೆಳೆಗಳು ತೃಪ್ತಿಕರ ವಾಗಿರಲಿಲ್ಲವಾದರೂ ಅಧಿಕಾರಿಗಳು ಬಲವಂತವಾಗಿ ಕಂದಾಯ ವಸೂಲಿ ಮಾಡುತ್ತಿದ್ದರು. ಭೂಮಿಯ ವಾರ್ಷಿಕ ಉತ್ಪಾದನೆ ಶೇ. ೨೫ಕ್ಕಿಂತ ಕಡಿಮೆಯಾಗಿದ್ದರೆ ಸರ್ಕಾರವೇ ಒಪ್ಪಿದ ಕಂದಾಯದ ಪ್ರಕಾರ ಕಂದಾಯದ ವಸೂಲಿಯನ್ನು ರದ್ದುಪಡಿಸಬೇಕಾಗಿತ್ತು. ಆದರೆ ಸರ್ಕಾರ ಕಂದಾಯವನ್ನು ಬಲಪ್ರಯೋಗದಿಂದ ವಸೂಲಿ ಮಾಡಲು ನಿರ್ಧರಿಸಿತ್ತು.

ಗಾಂಧೀಜಿ ಖೇಡ ಜಿಲ್ಲೆಯ ಹಲವಾರು ಹಳ್ಳಿಗಳಿಗೆ ಭೇಟಿ ನೀಡಿ ಸಮಸ್ಯೆಯ ಗಂಭೀರತೆಯನ್ನು ಅರಿತು, ಕರ ನಿರಾಕರಣ ಚಳುವಳಿ ಪ್ರಾರಂಭಿಸಿದರು.[೧೬] ಸರ್ಕಾರ ಬಡ ರೈತರ ಕಂದಾಯ ಮನ್ನಾ ಮಾಡುವಂತಾಯಿತು. ಸುಮಾರು ಆ ಸಂದರ್ಭದಲ್ಲಿಯೇ ಅಹಮದಾಬಾದಿನ ಹತ್ತಿಗಿರಣಿ ಕಾರ್ಮಿಕರಿಗೆ, ಪ್ಲೇಗ್ ಕಾರಣವಾಗಿ ನೀಡುತ್ತಿದ್ದ ಭತ್ಯೆಯನ್ನು ಮಾಲೀಕರು ಹಿಂತೆಗೆದುಕೊಂಡಾಗ, ಅದರ ಬದಲು ಶೇ.೫೦ರಷ್ಟು ಹೆಚ್ಚಿನ ವೇತನ ಬೇಡಿ ಮುಷ್ಕರ ಪ್ರಾರಂಭಿಸಿದರು. ಅವರ ಬೇಡಿಕೆಗಳ ಈಡೇರಿಕೆಗಾಗಿ ಗಾಂಧೀಜಿ ಉಪವಾಸ ಮುಷ್ಕರ ಹೂಡಿ ಶೇಕಡಾ ೩೫ರಷ್ಟು ಹೆಚ್ಚಳ ದೊರೆಯುವಂತೆ ಮಾಡಿದರು. ಈ ಮೂರು ಹೋರಾಟಗಳು ಹೆಚ್ಚು ಕಡಿಮೆ ರೈತವರ್ಗಗಳ ಹೋರಾಟಗಳ ಕಾರಣ ರೈತರಲ್ಲಿ ಗಾಂಧೀಜಿಯು ಆದರ್ಶ ನಾಯಕನಾಗಿ ಬೆಳೆದರು. ಇದರಿಂದಾಗಿ ಗಾಂಧಿ ಹೋದೆಲ್ಲೆಡೆ ರೈತಾಪಿ ವರ್ಗವು ಗಾಂಧೀಜಿಯವರ ರಾಷ್ಟ್ರೀಯ ಹೋರಾಟಕ್ಕೆ ಬೆಂಬಲ ನೀಡಿತು.

ರೈತರು ಮತ್ತು ಕಾರ್ಮಿಕರ ವಿಶ್ವಾಸ ಗೆದ್ದಂತಹ ಗಾಂಧೀಜಿಯವರು ದಾವಣಗೆರೆ ಪ್ರದೇಶಕ್ಕೆ ೧೧ ಮತ್ತು ೧೨ ಆಗಸ್ಟ್ ೧೯೨೭ರಲ್ಲಿ ಭೇಟಿ ನೀಡಿದರು. ದಾವಣಗೆರೆ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳ ರೈತರ ಸಮಸ್ಯೆಗಳನ್ನು ಕಣ್ಣಾರೆ ಕಂಡರು. ನಂತರ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅಲ್ಲಿನ ವರ್ತಕರಿಗೆ 'ಪಾಪದ ಅರ್ಥಶಾಸ್ತ್ರಕ್ಕೆ ಮಡಿಲು ಕಟ್ಟಬೇಡಿರಿ, ಪುಣ್ಯದ ಅರ್ಥಶಾಸ್ತ್ರ ಅನುಸರಿಸಿರಿ' ಎಂದು ಕಿವಿಮಾತು ಹೇಳಿದರು.[೧೭] ಅಂದರೆ ರೈತರ ಶೋಷಣೆ ಮಾಡುತ್ತಿದ್ದ ವರ್ತಕರಿಗೆ ಈಗಿನ ಕಾಲದಲ್ಲಿ ಪಾಪದ ಅರ್ಥಶಾಸ್ತ್ರಕ್ಕೆ ಬೆಲೆ ಹೆಚ್ಚುತ್ತದೆ. ಕೆಲವರ ಕೈಯಲ್ಲೇ ಹಣ ಸೇರುತ್ತದೆ. ಅದು ಎಲ್ಲರಲ್ಲೂ ಹಂಚಿಹೋಗುತ್ತಿಲ್ಲವೆಂದು ರೈತಪರವಾಗಿ ಮಾತನಾಡಿದರು.

ಗಾಂಧೀಜಿಯವರು ದಾವಣಗೆರೆ ಪ್ರದೇಶದಲ್ಲಿ ರೈತನ್ನು ಭೇಟಿಯಾದಾಗ ಅನೇಕರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರು. ಅವರಲ್ಲಿ ಎಸ್. ನಿಜಲಿಂಗಪ್ಪ, ಹರಿಹರದ ಗುಂಡೂರಾಯರು, ಬಳ್ಳಾರಿ ಸಿದ್ದಮ್ಮ, ಕಾಸಲ ಶ್ರೀನಿವಾಸ ಶೆಟ್ಟರು, ಬಳ್ಳಾರಿ ವಾಸುದೇವರಾವ್, ಇಜಾರಿ ವಾಸುದೇವಪ್ಪ, ಕೆ.ಟಿ. ಜಂಬಣ್ಣ, ಇಟ್ಟಿಗೆ ವೇದಮೂರ್ತಿ ಹಾಗೂ ಮುರಿಗೆಪ್ಪ ಪ್ರಮುಖರು.[೧೮]

ಗಾಂಧೀಜಿಯವರು ದಾವಣಗೆರೆಗೆ ಭೇಟಿ ನೀಡಿದ ನಂತರ ಈ ಪ್ರದೇಶದಲ್ಲಿ ರಾಷ್ಟ್ರೀಯ ಹೋರಾಟ ಚುರುಕುಗೊಳ್ಳುವುದರ ಮೂಲಕ ಚಳುವಳಿಗೆ ರೈತರನ್ನು ಆಕರ್ಷಿಸಿ, ಸಂಘಟಿಸಿದರು. ಇದರ ಫಲವಾಗಿ ಚಿತ್ರದುರ್ಗ

ಹಾಗೂ ದಾವಣಗೆರೆಯ ರೈತರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹಚ್ಚಿದರು. ಎಲ್ಲೆಲ್ಲೂ ಹೋರಾಟದ ಉತ್ಸಾಹವನ್ನು ತುಂಬಿ ಚಳುವಳಿಯನ್ನು ತೀವ್ರಗೊಳ್ಳುವಂತೆ ಮಾಡಿದರು. ಜನರ ಮನಸ್ಸಿನ ಮೇಲೂ ಇದರ ಪ್ರಭಾವವುಂಟಾಗಿ ಚಳುವಳಿಗಾರರಿಗೆ ತಮ್ಮ ತನು ಮನ ಧನಗಳ ಸಹಾಯ ಸಹಕಾರಗಳನ್ನು ಹಾಗೂ ಹೋರಾಟಕ್ಕೆ ಬೆಂಬಲವನ್ನು ನೀಡಿದರು.

ದಾವಣಗೆರೆ ಸ್ವಾತಂತ್ರ್ಯ ಹೋರಾಟದ ಮುಖ್ಯ ಕೇಂದ್ರ ಸ್ಥಳಗಳಲ್ಲಿ ಒಂದಾಯಿತು. ಕಾನೂನು ಭಂಗ ಚಳುವಳಿಯ ತೀವ್ರತೆ ದೇಶದುದ್ದಕ್ಕೂ ಹಬ್ಬಿತು. ಇದು ದಾವಣಗೆರೆಯ ರೈತರ ಮೇಲೂ ಉಂಟಾಯಿತು. ರೈತರು ಸರ್ಕಾರಿ ಕಛೇರಿಗಳ ಮುಂದೆ ಗುಂಪು ಗುಂಪಾಗಿ ಮೆರವಣಿಗೆಯನ್ನು ಮಾಡತೊಡಗಿದರು. ಹೀಗಾಗಿ ದಾವಣಗೆರೆಯಲ್ಲಿ ಪ್ರತಿಭಟನೆ, ಹರತಾಳ, ವ್ಯಾಪಕವಾಗಿ ಹಬ್ಬಿತು. ಈ ಸಂದರ್ಭದಲ್ಲಿ ಹರ್ಡೇಕರ್ ಮಂಜಪ್ಪನವರು ಈ ಪ್ರದೇಶಕ್ಕೆ ಭೇಟಿ ನೀಡಿದ ನಂತರ ರೈತರು ಮತ್ತಷ್ಟು ಚುರುಕುಗೊಂಡರು. ಇದರಿಂದ ಹೋರಾಟ ತೀವ್ರಗೊಂಡಿತ್ತು.[೧೯] ಈ ರೀತಿ ರೈತರು ಚಳುವಳಿಯಲ್ಲಿ ಭಾಗವಹಿಸಿದ ವರದಿಯನ್ನು ತರಿಸಿಕೊಂಡ ಗಾಂಧೀಜಿಯವರು ಎರಡನೇ ಬಾರಿ ದಾವಣಗೆರೆಗೆ ಭೇಟಿ ನೀಡಲು ನಿರ್ಧರಿಸಿದರು.

ಗಾಂಧೀಜಿಯವರು ಮಾರ್ಚ್ ೨, ೧೯೩೪ರಂದು ದಾವಣಗೆರೆ ಪ್ರದೇಶಕ್ಕೆ ಆಗಮಿಸಿ ಜನರನ್ನು ಉದ್ದೇಶಿಸಿ ಮಾತನಾಡಿದರು. ಡಾ.ಶಂಕರಪ್ಪನವರು ಹೇಳುವಂತೆ ''ದೇಶಕ್ಕೆ ಸ್ವಾತಂತ್ರ್ಯ ದೊರಕುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಸಭೆಯಲ್ಲಿ ಭಾಗವಹಿಸಿದ ರೈತರೆಲ್ಲರೂ ಒಕ್ಕೊರಲಿನಿಂದ ಕೂಗಿ ಹೇಳಿದರಂತೆ''.[೨೦] ಗಾಂಧೀಜಿಯವರು ತಮ್ಮ ರಚನಾತ್ಮಕ ಹೋರಾಟಗಳಿಂದಾಗಿ ಹರಿಜನ ಉದ್ಧಾರಕ್ಕಾಗಿ ಹಲವಾರು ಕಾರ್ಯಕ್ರಮ ಕೈಗೊಂಡರು. ಇದರಂತೆ ದಾವಣಗೆರೆ ನಗರದಲ್ಲಿ ಹರಿಜನ ವಿದ್ಯಾರ್ಥಿಗಳ ಏಳ್ಗೆಗಾಗಿ ಹರಿಜನ ವಿದ್ಯಾರ್ಥಿನಿಲಯವನ್ನು ೩ ಮಾರ್ಚ್ ೧೯೩೪ರಂದು ಶಂಕುಸ್ಥಾಪನೆ ಮಾಡಿದರು. ಇದರ ನೇತೃತ್ವವನ್ನು ಕಾಸಲು ಶ್ರೀನಿವಾಸ ಶೆಟ್ಟರು ವಹಿಸಿಕೊಂಡಿದ್ದರು.

ಗಾಂಧೀಜಿಯವರು ಆದಿಕರ್ನಾಟಕ ಜನರನ್ನು ಉದ್ದೇಶಿಸಿ ಈ ರೀತಿ ಮಾತನಾಡಿದರು. ''ಕೈಮಗ್ಗದ ಕಸುಬು, ಮೇಟಿಯ ಕಸುಬು ಎರಡೂ ದೇಶಕ್ಕೆ ಅತ್ಯಗತ್ಯ. ನೀವು ಮೇಳಗಾರರು, ಓಲಗ ಬಾರಿಸುತ್ತಾ ಸ್ವರ ಸಹಾಯದಿಂದ ನೀವು ಜನಗಳನ್ನು ಭಗವಂತನ ಹತ್ತಿರ ಕರೆದೊಯ್ಯಬಲ್ಲಿರಿ, ಪರದೇಶಿ ಬಟ್ಟೆ, ಗಿರಣಿಯ ನೂಲನ್ನು ಕೂಡ ಬಿಡಬೇಕೆಂದು ಸ್ವದೇಶಿ ಚಳುವಳಿಯ ಬಗ್ಗೆ ನೇಕಾರರಿಗೆ ಹೇಳುತ್ತಿದ್ದೇನೆ. ಅವರು ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆಯ ಬಗ್ಗೆ ತಿಳಿಹೇಳಿದರು. ಹೀಗೆ ಗಾಂಧೀಜಿಯವರು ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ದಾವಣಗೆರೆ, ಹೊನ್ನಾಳಿ, ಹರಿಹರ, ಹರಪನಹಳ್ಳಿಗೆ ತೆರಳುವ ಮೂಲಕ ಹರಿಜನ ಸುಧಾರಣೆ ಜೊತೆಗೆ ಗಾಂಧೀಜಿಯವರು ಒತ್ತಾಯಿಸುತ್ತಿದ್ದ ಇತರೆ ಅಂಶಗಳೆಂದರೆ ಮದ್ಯಪಾನ ನಿಷೇದ, ಖಾದಿ ಉತ್ಪಾದನೆ, ಖದ್ದರ್ ಧರಿಸುವುದು ಮುಂತಾದವು. ಚರಕವು ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಸಂಕೇತವಾಯಿತು. ಸಮಾಜ ಸುಧಾರಣೆಯು ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾದ ಕಾರ್ಯವಾಗಿತ್ತು. ಸಮಾಜ ಸುಧಾರಣೆಯ ಗುರಿಯನ್ನಿಟ್ಟುಕೊಂಡು ರೂಪಗೊಂಡಿದ್ದ ರಚನಾತ್ಮಕ ಕಾರ್ಯಕ್ರಮಗಳು ಭಾರತ ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ

ಅಂಗಗಳಾಗಿದ್ದವು.[೩೨] ಈ ರೀತಿ ಗಾಂಧೀಜಿಯವರು ಈ ಪ್ರದೇಶದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡಿಸುವುದರ ಮೂಲಕ ರೈತ ವರ್ಗವನ್ನು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

೪.೪ ಕಾಂಗ್ರೆಸ್ ಪಕ್ಷ ಮತ್ತು ರೈತರು

ದಾವಣಗೆರೆ ಪ್ರದೇಶದಲ್ಲಿ ರಾಷ್ಟ್ರೀಯತೆಯು ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಮೂಡಿಬಂದಿತ್ತು. ಈ ಭಾಗದಲ್ಲಿ ತಿಲಕ್, ಆಲೂರು ವೆಂಕಟರಾವ್, ಗಂಗಾಧರರಾವ್ ದೇಶಪಾಂಡೆ ಮೊದಲಾದ ಆರಂಭದ ಕಾಲದ ರಾಷ್ಟ್ರೀಯವಾದಿಗಳು ಜನರಲ್ಲಿ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಿದರು. ಈ ಸಂದರ್ಭದಲ್ಲಿ ದಾವಣಗೆರೆ ಪ್ರದೇಶವು ಒಟ್ಟು ರಾಷ್ಟ್ರದ ಒಂದು ಅಂಗವಾಗಿ ಭಾಗವಹಿಸಿತ್ತೇ ಹೊರತು ಪ್ರತ್ಯೇಕವಾಗಿ ಅಲ್ಲ ಎಂಬ ಮಾತು ನಿಜ. ರೈತರು ಸೇರಿದಂತೆ ಯಾವಾಗ ಕಾಂಗ್ರೆಸ್ ಪಕ್ಷದ ಬೇಡಿಕೆಗಳು ಎಲ್ಲ ಜನವರ್ಗಗಳಿಗೂ ಸಹಾಯಕವಾಗುವಂತೆ ಇದ್ದವೋ, ಆಗ ಇಡೀ ಜನವರ್ಗವು ಚಳುವಳಿಯಲ್ಲಿ ಭಾಗವಹಿಸಿತು. ಹರ್ಡೇಕರ ಮಂಜಪ್ಪನವರು ಈ ಪ್ರದೇಶದ ರೈತರನ್ನು ಸಂಘಟಿಸಿದರು. ಹರ್ಡೇಕರ್ ಅವರು ಪ್ರಾರಂಭದಲ್ಲಿ ಬಾಲಗಂಗಾಧರ ತಿಲಕರ ವಿಚಾರಗಳ ಪ್ರೇರಣೆಯಿಂದ ೧೯೦೮ರಲ್ಲಿ ಸ್ವದೇಶಿ ವಿಚಾರ ಕುರಿತು ತಮ್ಮ ಬಾಷಣದಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ವ್ಯಕ್ತಪಡಿಸುವುದರ ಮೂಲಕ ರೈತರನ್ನು ಸಂಘಟಿಸಿದರು. ಈ ಪ್ರದೇಶದ ಮಾಗನಹಳ್ಳಿ ದೊಡ್ಡಬಸಪ್ಪನವರ ಸಹಾಯದಿಂದ ಸೆಪ್ಟೆಂಬರ್ ೧೬೦೭ರಲ್ಲಿ 'ಧನುರ್ಧಾರಿ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು.[೩೩] ಪತ್ರಿಕೆಯಲ್ಲಿ ಲಾಲ್, ಬಾಲ್, ಬಿಪಿನ್‌ರ ವಿಚಾರ ಲಹರಿಗಳನ್ನು ಕನ್ನಡದಲ್ಲಿ ಪ್ರಕಟಿಸುವುದರ ಮೂಲಕ ಸ್ವಾತಂತ್ರ್ಯದ ಕಿಚ್ಚನ್ನು ರೈತ ವರ್ಗದಲ್ಲಿ ಮೂಡಿಸಿದರು.

೧೯೩೦ರ ದಶಕದಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ ಮತ್ತು ಅಖಿಲ ಭಾರತ ಕಿಸಾನ್ ಸಭಾಗಳು ಸ್ಥಾಪನೆಗೊಂಡವಲ್ಲದೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಜವಹರ್‌ಲಾಲ್ ನೆಹರೂ ಅವರ ಬೆಂಬಲದಿಂದ ಒಳ್ಳೆಯ ಉತ್ತೇಜನ ದೊರೆಯಿತು. ಉಪ್ಪಿನ ಸತ್ಯಾಗ್ರಹ ಹಾಗೂ ಕಾನೂನು ಭಂಗ ಚಳುವಳಿಗಳಲ್ಲಿ ರೈತರು ಭಾಗವಹಿಸಿದರು. ಇದರಿಂದ ವಸಾಹತು ಸರ್ಕಾರದ ಮೇಲೆ ಒತ್ತಡ ಹೆಚ್ಚಾಯಿತು.[೩೪]

೧೯೩೭ರ ನಂತರ ದಾವಣಗೆರೆ ಪ್ರದೇಶದ ಕೃಷಿಯ ಮೇಲೆ ಮೈಸೂರು ಅರಸರು ವಿಧಿಸುತ್ತಿದ್ದ ಭೂಕಂದಾಯ ಹಾಗೂ ಇನ್ನಿತರ ತೆರಿಗೆಗಳನ್ನು ಕೇಂದ್ರವಾಗಿಟ್ಟುಕೊಂಡು ಮಹಾರಾಜರನ್ನು ಟೀಕಿಸುವ ಮೂಲಕ ಕಾಂಗ್ರೆಸ್ ನಾಯಕರು ರೈತ ಸಮುದಾಯವನ್ನು ಸ್ವಾಂತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಉದಾಹರಣೆಗೆ ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ೧೯೩೭ರ ಅಕ್ಟೋಬರ್ ೨ರಂದು ಗಾಂಧೀಜಿಯ ಹುಟ್ಟು ಹಬ್ಬ ಆಚರಿಸಲಾಯಿತು. ಕೆ.ಎಸ್.ವೆಂಕಟರಾಮಯ್ಯ, ಪಾರ್ಥನಾರಾಯಣ ಪಂಡಿತ್ ಮತ್ತು ಇತರರು ದಾವಣಗೆರೆಯಲ್ಲಿ ಮಾತನಾಡುತ್ತಾ 'ಮೈಸೂರು ಒಂದು ಮಾದರಿ ರಾಜ್ಯವಲ್ಲ. ಇದು ಮಾರೀ ರಾಜ್ಯ' ಎಂದು ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಮಹಾರಾಜರನ್ನು ಕುರಿತು ಟೀಕಿಸುತ್ತಾ ಮಹಾರಾಜರು ಪದೇ ಪದೇ ಇಂಗ್ಲೆಂಡಿಗೆ ರೈತರ ಹಣದಿಂದ ಹೋಗುತ್ತಾರೆ ಎಂದು ಟೀಕಿಸಿದರು. ಆದರೆ ಮಹಾರಾಜರು ರೈತರಿಂದ ಪಡೆಯುವ

ಭೂ ಕಂದಾಯಕ್ಕೆ ಬದಲಾಗಿ ರೈತರಿಗೆ ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ ಎಂದು ಜನರ ಗಮನ ಸೆಳೆದರು.[೨೪] ೧೯೩೭ ಅಕ್ಟೋಬರ್ ೧೧ರಂದು ದಾವಣಗೆರೆ, ಹರಿಹರಗಳಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕರ್ತರು ಆ ದಿನವನ್ನು 'ದಮನಕಾರಿದಿನ'ವನ್ನಾಗಿ ಆಚರಿಸಿದರು. ಅದೇ ದಿನ ಹೊಳಲ್ಕೆರೆಯಲ್ಲಿ ನಡೆದ ಸಭೆಯಲ್ಲಿ ಹನುಮಂತಪ್ಪ, ಕೃಷ್ಣರೆಡ್ಡಿ, ಬಿ.ಹೆಚ್.ಚಂದ್ರಶೇಖರಯ್ಯನವರು ಚಿತ್ರದುರ್ಗದ ಕೃಷ್ಣಮೂರ್ತಿ ಮತ್ತು ಆರ್.ಟಿ.ಗೋವಿಂದರಾವ್ ಭಾಗವಹಿಸಿದ್ದರು. ಅದರಲ್ಲಿ ಗೋವಿಂದರಾವ್ ಜನತೆಯನ್ನುದ್ದೇಶಿಸಿ ಮಾತನಾಡುತ್ತಾ ಇತ್ತೀಚಿನ ಸೆಕ್ಷನ್ ೪೯ರ ಪೊಲೀಸ್ ಕಾಯಿದೆ ಜಾರಿ ಮಾಡಿದರು. ದಾವಣಗೆರೆಯ ಪ್ರಥಮ ದರ್ಜೆಯ ನ್ಯಾಯಾಧೀಶರು ಜನತೆಯ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದ್ದಾರೆಂದು ಟೀಕಿಸಿದರು. ದಾವಣಗೆರೆಯಲ್ಲಿ ಬಿ.ಎಚ್.ಚಂದ್ರಶೇಖರಯ್ಯನವರು ಸರಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರು. ಇದೇ ಸಂದರ್ಭದಲ್ಲಿ ಟಿ.ಸಿದ್ದಲಿಂಗಯ್ಯನವರು ಹಾಗೂ ಇತರೆ ಕಾಂಗ್ರೆಸ್ ನಾಯಕರು ಕಾರಾಗೃಹ ಸೇರಿದರು. ಅವರ ಉದ್ದೇಶ ಮೈಸೂರಿನಲ್ಲಿ ಜವಾಬ್ದಾರಿ ಸರಕಾರವನ್ನು ರಚಿಸಬೇಕೆಂಬುದಾಗಿತ್ತು. ಅಂದೇ ಚಿತ್ರದುರ್ಗ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಪ್ರತಿಬಂಧಕಾಜ್ಞೆಯನ್ನು ತಂದು ಆರ್.ವಿ.ಗೋವಿಂದರಾವ್ ಅವರ ಭಾಷಣವು ದಿವಾನರ ''ನಿಂದನೆಯಿಂದ ಕೂಡಿದೆ'' ಎಂದು ಅವರ ವಿರುದ್ಧ ಕಾಯಿದೆ ಜಾರಿಗೊಳಿಸಿದರು.[೨೫]

೧೯೩೭ ಅಕ್ಟೋಬರ್ ೨೨ರಂದು ವಕೀಲರಾಗಿದ್ದ ಕಾಸಲು ಶ್ರೀನಿವಾಸಶೆಟ್ಟಿ, ದೊಡ್ಡಬಸಪ್ಪ, ಹಾವೇರಿಯ ಕಾರ್ ರುದ್ರಪ್ಪ ಇವರು ಹರಿಹರದಲ್ಲಿ ಸಭೆ ಸೇರಿ ರಾಷ್ಟ್ರೀಯ ನಾಯಕ ಕೆ.ಎಫ್.ನಾರಿಮನ್ ವಕೀಲರನ್ನು ಭೇಟಿ ಮಾಡಿದರು. ಪಾರ್ಥನಾರಾಯಣ ಪಂಡಿತ್ ಅವರ ಜೊತೆಯಲ್ಲಿ ಕೆ.ಎಫ್.ನಾರಿಮನ್ ಹರಿಹರಕ್ಕೆ ಬಂದು ಹಿಂದಿಯಲ್ಲಿ ಭಾಷಣ ಮಾಡುತ್ತಾ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪನೆ ಮಾಡುವುದು ಅವಶ್ಯಕವಾಗಿದೆ. ಆದರೆ ಸರಕಾರದ ನಾಯಕರನ್ನು ದಸ್ತಗಿರಿ ಮಾಡುತ್ತಿರುವುದು ಅತಿರೇಕದ ವಿಚಾರವಾಗಿದೆ ಎಂದರು. ಆ ದಿನ ಕೆ.ಎಸ್.ನಾರಿಮನ್ ದಾವಣಗೆರೆಯಲ್ಲಿ ಸ್ಥಳೀಯ ಕಾಂಗ್ರೆಸ್ ಮುಂಖಂಡರು ವ್ಯವಸ್ಥೆ ಮಾಡಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಅವರ ಭಾಷಣದಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಮತ್ತು ನಾಗರಿಕ ಸನ್ನಿವೇಶವು ತುಂಬಾ ಆಪತ್ತಿನಲ್ಲಿದೆ ಎಂದು ಅಭಿಪ್ರಾಯಪಟ್ಟರು. ಈ ಸಮುದಾಯದಲ್ಲಿ ಕೆ.ಟಿ.ಭಾಷ್ಯಂ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಅಡಿಗಲ್ಲು ಹಾಕಿದರೂ ಅದು ಅಷ್ಟು ಯಶಸ್ವಿಯಾಗಲಿಲ್ಲ. ಮೈಸೂರು ಸಂಸ್ಥಾನದ ಜನತೆಯ ಜೀವನ ತುಂಬಾ ನಿಕೃಷ್ಟವಾಗಿದೆ. ಗ್ರಾಮಗಳಲ್ಲಿ ಸಂಗ್ರಹಿಸಿದ ತೆರಿಗೆ ಅರಸರ ದುಂದುವೆಚ್ಚಕ್ಕೆ ಮತ್ತು ಬೆಂಗಳೂರು, ಮೈಸೂರು ನಗರಗಳ ಅಭಿವೃದ್ಧಿಗೆ ಪೋಲಾಗುತ್ತಿದೆ. ಬ್ರಿಟಿಷರ ಸಂವಿಧಾನವನ್ನೇ ಮಹಾರಾಜರು ರಾಜ್ಯದ ಜನತೆಯ ಮೇಲೆ ಹೇರುತ್ತಿದ್ದಾರೆ. ಇಂತಹ ದೌರ್ಜನ್ಯದಿಂದ ವಿಮೋಚನೆಯಾಗದ ಹೊರತು ಇಲ್ಲಿಯ ಜನತೆಗೆ ಉಳಿಗಾಲವಿಲ್ಲವೆಂದು ಮಾತನಾಡಿದರು. ಇವರ ತೀಕ್ಷ್ಣವಾದ ಭಾಷಣದಿಂದಾಗಿ ಸರಕಾರ ಕೆ.ಎಫ್.ನಾರಿಮನ್ ಅವರನ್ನು ದಸ್ತಗಿರಿ ಮಾಡಿತು. ಇದರ ಪರಿಣಾಮವಾಗಿ ಕೆ.ಸಿ.ರೆಡ್ಡಿ, ಎಂ.ಎ.ಜೋಷ್ ಪ್ರದೇಶಾದ್ಯಂತ ಪ್ರವಾಸ ಮಾಡಿ ಕೆ.ಎಫ್.ನಾರಿಮನ್ ಅವರ ದಸ್ತಗಿರಿಯನ್ನು ಬಲವಾಗಿ ಖಂಡಿಸಿದರು.

ಕೆ.ಎಫ್.ನಾರಿಮನ್ ಅವರನ್ನು ದಸ್ತಗಿರಿ ಮಾಡಿದ್ದನ್ನು ವಿರೋಧಿಸಿ ದಾವಣಗೆರೆ ವಿದ್ಯಾರ್ಥಿಗಳು ೧೯೩೭ ಅಕ್ಟೋಬರ್ ೨೯ರಂದು ಮಹಾತ್ಮಾಗಾಂಧಿ ಮತ್ತು ಇತರ ನಾಯಕರ ಫೋಟೋಗಳನ್ನು ಕೈಯಲ್ಲಿ ಹಿಡಿದು ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ಇಂದಿನ ಸರಕಾರಿ ಹೈಸ್ಕೂಲ್ ಮೈದಾನದಲ್ಲಿ ಸೇರಿದರು. ಈ ಪ್ರತಿಭಟನೆಯಲ್ಲಿ ಕಾಸಲು ಶ್ರೀನಿವಾಶೆಟ್ಟಿ ಮಾತನಾಡುತ್ತಾ ''ಮೈಸೂರು ರಾಮರಾಜ್ಯವೂ ಅಲ್ಲ ಮಾದರಿ ರಾಜ್ಯವೂ ಅಲ್ಲ'' ಎಂದು ಟೀಕಿಸಿ ದಸ್ತಗಿರಿಯಾಗಿದ್ದ ನಾರಿಮನ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಡ ತಂದರು. ಬಳ್ಳಾರಿ ಸಿದ್ಧಮ್ಮ ಮಾತನಾಡಿ ಸರಕಾರದ ನೀತಿ ನಿರೂಪಣೆಗಳನ್ನು ಖಂಡಿಸುತ್ತಾ ನಾರಿಮನ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದರು. ಬಿ.ವೀರಶೆಟ್ಟಿ, ಶೇಷಪ್ಪ, ಬ್ಯಾಡಗಿಯ ವೀರಣ್ಣಗೌಡ, ಡಿ.ಆರ್.ಮುದ್ದಪ್ಪ, ಅಗಳವಾಡಿ ರಾಮಶಾಸ್ತ್ರೀ, ಗಾಯಕವಾಡ್, ನಾರಾಯಣರಾವ್, ವಿದ್ಯಾರ್ಥಿ ಓ. ಶಿವಾನಂದ, ಹಾಲಪ್ಪ, ಬಳ್ಳಾರಿ ಸಿದ್ಧಮ್ಮ ಮುಂತಾದ ನಾಯಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ಎಸ್. ನಿಜಲಿಂಗಪ್ಪನವರು ಹತ್ತಿ ವ್ಯಾಪಾರಿಗಳು ಕಾಂಗ್ರೆಸ್‌ನಲ್ಲಿ ಸೇರಬೇಕೆಂದು ಮತ್ತು ಕಾಟನ್ ಮಾರ್ಕೆಟ್ ಕಮಿಟಿಯನ್ನು ಚಿತ್ರದುರ್ಗದಲ್ಲಿ ರಚಿಸಬೇಕೆಂದು ಜಿಲ್ಲೆಯ ಹತ್ತಿ ವ್ಯಾಪಾರಿಗಳಿಗೆ ತಿಳಿಸಿದರು. ಏಕೆಂದರೆ ೧೯೩೮ರ ವೇಳೆಗೆ ದಾವಣಗೆರೆ ಮತ್ತು ಚಿತ್ರದುರ್ಗ ಹತ್ತಿ ವ್ಯಾಪಾರದ ಕೇಂದ್ರಗಳಾಗಿದ್ದವು. ಇಲ್ಲಿನ ಸ್ಥಳೀಯ ಹತ್ತಿ ವ್ಯಾಣಿಜ್ಯೋದ್ಯಮಿಗಳು ಆರ್ಥಿಕವಾಗಿ ಶ್ರೀಮಂತರಾಗಿದ್ದರು. ಹೀಗಾಗಿ ಕಾಂಗ್ರೆಸ್‌ಗೆ ಇಂತಹ ಶ್ರೀಮಂತ ವರ್ಗದ ಬೆಂಬಲದ ಅವಶ್ಯಕತೆಯೂ ಇತ್ತು. ಹೀಗೆ ದಾವಣಗೆರೆ ಪ್ರದೇಶದಲ್ಲಿ ೧೯೩೭ರ ನಂತರ ಗ್ರಾಮಮಟ್ಟದಿಂದ ಕಾಂಗ್ರೆಸ್ ಸಮಿತಿಗಳು ರಚನೆಯಾದವು. ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ರೈತರು ಮೈಸೂರು ಸಂಸ್ಥಾನದ ರಾಷ್ಟ್ರೀಯ ಹೋರಾಟಕ್ಕೆ ರೈತರ ಗಮನ ಸೆಳೆದರು.

೧೯೩೯ ಮಾರ್ಚ್ ೨೭ರಂದು ಎಸ್.ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಚಳ್ಳಕೆರೆಯಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಕುರಿತು ಚರ್ಚಿಸಲಾಯಿತು. ಹಾಗೆಯೇ ಸರಕಾರ ಮತ್ತು ಕಾಂಗ್ರೆಸ್ ಮಧ್ಯೆ ಒಂದು ನಿರ್ದಿಷ್ಟ ಒಪ್ಪಂದ ಮಾಡಿಕೊಳ್ಳುವ ತೀರ್ಮಾನ ಕೈಗೊಳ್ಳಲಾಯಿತು. ಇದರ ಜೊತೆಗೆ ಮೈಸೂರು ಸಂಸ್ಥಾನದ ಎಲ್ಲ ಕಾಂಗ್ರೆಸ್ ಸಮಿತಿಗಳ ಮನೋವೃತ್ತಿಯನ್ನು ಗಮನಿಸಿ, ಸ್ಥಳೀಯ ಸಮಿತಿಗಳನ್ನು ಕಟ್ಟುವ ಬಗ್ಗೆ ಚರ್ಚಿಸಲಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ರೈತರ ಬೆಂಬಲ ಪಡೆದು ಪ್ರಬಲ ಸಂಘಟನೆಯಾಗಿ ಬೆಳೆಯಿತು. ಹಾಗೆಯೇ ದಾವಣಗೆರೆ ಪ್ರದೇಶದಲ್ಲಿ ನಗರ, ಪಟ್ಟಣ, ಗ್ರಾಮಗಳಲ್ಲಿ ಜನರು ಸ್ವಯಂಸ್ಫೂರ್ತಿಯಿಂದ ಚಳುವಳಿಯಲ್ಲಿ ಭಾಗಿಗಳಾದರು. ರಾಷ್ಟ್ರೀಯ ಹೋರಾಟ. ಸ್ವರೂಪ ಕುರಿತು ತುಂಬಾ ಮುಗ್ಧರಾಗಿದ್ದ ರೈತರಿಗೆ ಸ್ಥಳೀಯ ರಾಷ್ಟ್ರೀಯವಾದಿ ನಾಯಕರೇ ಸ್ಫೂರ್ತಿಯಾಗಿದ್ದರು.[೨೬]

ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಚಟುವಟಿಕೆಗಳು

ದಾವಣಗೆರೆ ಪ್ರದೇಶದಲ್ಲಿ ಕಾಂಗ್ರೆಸ್ ೧೯೩೭ರ ನಂತರ ಜನಸಮುದಾಯದ ಸಂಘಟನೆಯಾಗಿ ವಹಿಸಿದ ಪಾತ್ರ, ಅದಕ್ಕೆ ರೈತ ಸಮುದಾಯಗಳು ಪ್ರತಿಕ್ರಿಯಿಸಿದ ವಿಧಾನ ಮಹತ್ವಪೂರ್ಣವಾದುದು. ಈ ಪ್ರದೇಶದ

ದಾವಣಗೆರೆ ನಗರವನ್ನು ಹೊರತುಪಡಿಸಿದರೆ ಸ್ವಾತಂತ್ರ್ಯಪೂರ್ವದಲ್ಲಿ ಈ ಪ್ರದೇಶವು ಸಂಪೂರ್ಣ ಕ್ಷಾಮ ಇಲ್ಲವೇ ಬರದ ಸನ್ನಿವೇಶಗಳನ್ನು ಎದುರಿಸಿತು. ಜೊತೆಗೆ ಸರಕಾರಿ ಅಧಿಕಾರಿಗಳ ದಬ್ಬಾಳಿಕೆಯ ವಿರುದ್ಧ ರೈತ ಸಮುದಾಯ ರಕ್ಷಿಸಿಕೊಳ್ಳಬೇಕಾಗಿತ್ತು. ಅಂದರೆ ಅಧಿಕ ಪ್ರಮಾಣದ ಭೂಕಂದಾಯವನ್ನು ರೈತರು ಸರಕಾರಕ್ಕೆ ಸಲ್ಲಿಸಬೇಕಾಗಿತ್ತು. ಕಂದಾಯ ಕೊಡಲು ನಿರಾಕರಿಸಿದರೆ ಚರ ಸ್ಥಿರ ಆಸ್ತಿಯನ್ನು ಜಪ್ತಿ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್, ರೈತ ಸಮುದಾಯ ಪರವಾದ ನೀತಿಯನ್ನು ಅನುಸರಿಸಿತ್ತು. ಕಂದಾಯದಲ್ಲಿ ಆಂಶಿಕ ಇಲ್ಲವೇ ಪೂರ್ತಿ ರಿಯಾಯಿತಿ ನೀಡಬೇಕೆಂದು ನೀರಾವರಿ ಅನುಕೂಲಗಳು ಸಿಗಬೇಕೆಂದು ೧೯೩೭ರಲ್ಲಿ ಠರಾವು ಮಾಡಿತು. ಹೀಗಾಗಿ ಕಾಂಗ್ರೆಸ್ ನಾಯಕರಿಗೆ ಪ್ರದೇಶದ ಭೂಮಾಲೀಕ ರೈತರು ಬೆಂಬಲವಿತ್ತರು.[೨೭] ಈ ಪ್ರದೇಶಕ್ಕೆ ಹಲವು ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಭೇಟಿ ನೀಡಿದರು. ಅವರು ರಾಷ್ಟ್ರ ಸ್ವಾತಂತ್ರ್ಯ ಪಡೆಯುವ ಅವಶ್ಯಕತೆ ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯನ್ನು ಜನತೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಿದರು. ಜನ ಸಾಮಾನ್ಯರ ಬೆಂಬಲ ಪಡೆದ ನಾಯಕರ ೧೯೩೭ ಮೇ ೧೪ರಂದು ಎನ್.ಎಸ್. ಹರ್ಡೇಕರ್ ಮತ್ತು ಉಮಾಬಾಯಿ ಕುಂದಾಪುರ ಹುಬ್ಬಳ್ಳಿಯಿಂದ ದಾವಣಗೆರೆಗೆ ಬಂದರು. ಅವರನ್ನು ಎಸ್. ನಿಜಲಿಂಗಪ್ಪ ಮತ್ತು ಎಸ್.ವಾಸುದೇವರಾವ್ ಮುಂತಾದವರು ಬರಮಾಡಿಕೊಂಡರು. ಅವರು ೧೯೩೭ರಲ್ಲಿ ಪ್ರದೇಶದಲ್ಲಿ ಪ್ರವಾಸ ಮಾಡಿ ಕಾಂಗ್ರೆಸ್ ಪ್ರಚಾರ ಕೈಗೊಂಡರು. ಇವರ ಪ್ರವಾಸವು ಈ ಪ್ರದೇಶದಲ್ಲಿ ವ್ಯಾಪಕ ಪ್ರಭಾವವನ್ನು ಬೀರಿತು. ತಾಲೂಕು ಮಟ್ಟದಲ್ಲಿ ಕಾಂಗ್ರೆಸ್ ಸಮಿತಿಗಳು ಅಸ್ತಿತ್ವಕ್ಕೆ ಬಂದವು.[೨೮]

೧೯೩೭ರ ಕಾಂಗ್ರೆಸ್ ಸಮಿತಿಯಲ್ಲಿ ಪ್ರದೇಶದ ರೈತರೇ ಪ್ರಮುಖ ನಾಯಕರಾಗಿದ್ದರು.

ಜಗಳೂರು ಕಾಂಗ್ರೆಸ್ ಸಮಿತಿ - ೧೪ ಮೇ ೧೯೩೭

ರಾಘುವೇಂದ್ರರಾವ್ - ಕಾರ್ಯದರ್ಶಿಗಳು

ಮಹಲಿಂಗಪ್ಪ - ಖಜಾಂಚಿ ಇತರ ಸದಸ್ಯರು

ಜಗಳೂರು ತಾಲೂಕು ಕಾಂಗ್ರೆಸ್ ಸಮಿತಿಯನ್ನು ೩೦ ಜನವರಿ ೧೯೩೯ರಂದು ಪುನರ್ ರಚಿಸಲಾಯಿತು.

ಜಿ.ಎಸ್. ಕಲ್ಲಪ್ಪ - ಅಧ್ಯಕ್ಷರು

ಭರಮಾಜಿರಾವ್ - ಕಾರ್ಯದರ್ಶಿಗಳು

ಮಹಲಿಂಗಪ್ಪ ಮತ್ತು ಆರು ಜನ ಸದಸ್ಯರಿದ್ದರು.

ದಾವಣಗೆರೆ ತಾಲೂಕು ಕಾಂಗ್ರೆಸ್ ಸಮಿತಿ

ಖಾದಿ ಸಿದ್ದಪ್ಪ - ಅಧ್ಯಕ್ಷರು.

ಕೆ.ಟಿ. ಜಂಬಣ್ಣ - ಕಾರ್ಯದರ್ಶಿಗಳು

ಓಂಕಾರಪ್ಪ - ಇನ್ನಿತರ ಆರು ಮಂದಿ ಸದಸ್ಯರು.

ಹರಿಹರ ತಾಲೂಕು ಕಾಂಗ್ರೆಸ್ ಸಮಿತಿ

ಎಚ್.ಸಿ. ದಾಸಪ್ಪ - ಅಧ್ಯಕ್ಷರು

ಓಬಳಪ್ಪ - ಕಾರ್ಯದರ್ಶಿಗಳು

ಎಸ್. ನೀಲಪ್ಪ - ಇನ್ನಿತರ ಸದಸ್ಯರುಗಳು

ಹರಪನಹಳ್ಳಿ ತಾಲೂಕು ಕಾಂಗ್ರೆಸ್ ಸಮಿತಿ

ಶೆಟ್ರು ಚೂಡಪ್ಪ - ಅಧ್ಯಕ್ಷ

ಅರಳಿಕಟ್ಟೆ ಪೂರ್ಣಾಚಾರ್ - ಕಾರ್ಯದರ್ಶಿಗಳು

ಇನ್ನಿತರ ಆರು ಮಂದಿ ಸದಸ್ಯರುಗಳು

ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿ ೧೬ ಫೆಬ್ರವರಿ ೧೯೩೮

ಎಸ್. ನಿಜಲಿಂಗಪ್ಪ - ಅಧ್ಯಕ್ಷರು

ಆನೆಕೊಂಡ ಚೆನ್ನಬಸಪ್ಪ ಮತ್ತು ಎನ್. ಗೋವಿಂದರೆಡ್ಡಿ - ಉಪಾಧ್ಯಕ್ಷರು

ಡಿ. ಹನುಮಂತಪ್ಪ - ಕಾರ್ಯದರ್ಶಿ

ಪಂಡಿತ್ ಎಂ. ಕೃಷ್ಣರೆಡ್ಡಿ - ಜಂಟಿ ಕಾರ್ಯದರ್ಶಿ

ಯಳಗೋಡು ಮುರುಗಪ್ಪ - ಖಜಾಂಚಿ

ಕುಸ್ತಿ ಬಸಪ್ಪ, ಕೆ. ಕರೀಮ್‌ಖಾನ್, ಈ ಕೊಟ್ರನಂಜಪ್ಪ, ಕೆ.ಟಿ. ವಾಸುದೇವರೆಡ್ಡಿ, ಸೀತಾರಾಮರೆಡ್ಡಿ, ದುಮ್ಮೀ ತಿಪ್ಪೇರುದ್ರಪ್ಪ, ಎಸ್ ವಾಸುದೇವರಾವ್ ಮುಂತಾದವರು ಸಮಿತಿಯ ಸದಸ್ಯರಾಗಿದ್ದರು.

೧೯೩೮ರಲ್ಲಿ ಚಿತ್ರದುರ್ಗದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಒಂದೇ ಸ್ವಾತಂತ್ರ್ಯ ಚಳುವಳಿಗೋಸ್ಕರ ಹೋರಾಟ ಮಾಡುವ ಸಂಘಟನೆಯಾಗಿತ್ತು. ೧೯೩೮ ಏಪ್ರಿಲ್ ೩ರಂದು ದಾವಣಗೆರೆ ಗಾಂಧೀಭವನದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಧಾರವಾಡ ಈ ಎರಡು ಸಮಿತಿಗಳನ್ನು ದಾವಣಗೆರೆಯಲ್ಲಿ ಪುನರ್‌ರಚಿಸಲಾಯಿತು.

ಮೈಸೂರು ಕಾಂಗ್ರೆಸ್ ಸಮಿತಿ ಮೈಸೂರು - ೩ ಏಪ್ರಿಲ್ ೧೯೩೮

ಗಂಜಿ ವೀರಪ್ಪ - ಅಧ್ಯಕ್ಷರು

ಕೆ.ಟಿ. ಜಂಬಣ್ಣ - ಉಪಾಧ್ಯಕ್ಷರು

ಕೆ. ವೀರಭದ್ರಪ್ಪ ಮತ್ತು ಮೌನೇಶ್ವರಪ್ಪ - ಜಂಟಿ ಕಾರ್ಯದರ್ಶಿಗಳು

ಬಂಡೆ ಹನುಮಂತಪ್ಪ ಮತ್ತು ಐದು ಜನ ಸದಸ್ಯರು

ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಧಾರವಾಡ - ೩ ಏಪ್ರಿಲ್ ೧೯೩೮

ಕಾಸಲು ಶ್ರೀನಿವಾಸ ಶೆಟ್ಟಿ - ಅಧ್ಯಕ್ಷರು

ಬಂಡೆ ಹನುಮಂತಪ್ಪ - ಉಪಾಧ್ಯಕ್ಷರು

ಕೆ.ಬಿ. ಜಂಬಣ್ಣ ಮತ್ತು ದಾಸಪ್ಪ - ಜಂಟಿ ಕಾರ್ಯದರ್ಶಿಗಳು[೨೯]

ಗಂಜಿ ವೀರಪ್ಪ ಮತ್ತು ಇತರ ಎಂಟು ಜನ ಸದಸ್ಯರು

೪.೫. ೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿ

೧೯೩೦ರ ದಶಕದಲ್ಲಿ ಸ್ವಾತಂತ್ರ್ಯ ಚಳವಳಿಯು ದಾವಣಗೆರೆ ಪ್ರದೇಶದಲ್ಲಿ ಸುಸಂಘಟಿತವಾಯಿತು. ಸ್ವಾತಂತ್ರ್ಯ ಚಳುವಳಿಯ ಸಂದೇಶ ಹಾಗೂ ಗಾಂಧೀಜಿಯ ವಿಚಾರಗಳು ನಗರ ಪಟ್ಟಣಗಳನ್ನು ಮೀರಿ ತಾಲೂಕು ಕೇಂದ್ರ

ಮತ್ತು ಗ್ರಾಮಗಳವರೆಗೆ ಹಬ್ಬಿತು. ೧೯೨೭ರಲ್ಲಿ ಮತ್ತು ೨ ಮಾರ್ಚ್ ೧೯೩೪ರಂದು ಗಾಂಧೀಜಿಯವರು ದಾವಣಗೆರೆ ಪ್ರದೇಶಕ್ಕೆ ಭೇಟಿ ನೀಡಿ ರೈತರಲ್ಲಿ ಹೊಸ ಹುರುಪು ತುಂಬಿದರು.

ಭಾರತ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ '೧೯೩೦' ನೇ ಸಂವತ್ಸರಕ್ಕೆ ವಿಶೇಷ ಮಹತ್ವವಿದೆ. ಏಕೆಂದರೆ ನೆಹರು ಅವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ೨೯.೧.೧೯೩೦ರಂದು ನಡೆದ ಕಾಂಗ್ರೆಸ್‌ನ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಕೈಗೊಳ್ಳಲಾಯಿತು. ಅಲ್ಲಿಂದ ಮುಂದೆ ೧೯೪೭ರವರೆಗೆ ಪ್ರತಿವರ್ಷ ಜನವರಿ ೨೬ನ್ನು 'ಸ್ವಾತಂತ್ರ್ಯದಿನ'ವನ್ನಾಗಿ ಭಾರತದಲ್ಲಿ ಆಚರಿಸುತ್ತಾ ಬರಲಾಯಿತು.[೩೦]

ಸವಿನಯ ಕಾಯಿದೆ ಭಂಗ ಚಳುವಳಿಯ ಬೇಡಿಕೆಗಳಾದ ಭೂ ಕಂದಾಯವನ್ನು ಅರ್ಧದಷ್ಟು ಕಡಿಮೆ ಮಾಡುವುದು. ರೂಪಾಯಿಯ ಪರಿವರ್ತನೆಯ ಬೆಲೆಯನ್ನು ಇಳಿಸುವುದು. ರಕ್ಷಣಾ ವೆಚ್ಚ ಮತ್ತು ಅಧಿಕಾರಿಗಳ ವೇತನವನ್ನು ಅರ್ಧದಷ್ಟು ಕಡಿತಗೊಳಿಸುವುದು. ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವುದು, ಉಪ್ಪಿನ ಕರವನ್ನು ರದ್ದುಗೊಳಿಸುವುದು, ಪಾನ ನಿಷೇಧವನ್ನು ಜಾರಿಗೊಳಿಸುವುದು. ಆಮದು ಜವಳಿಯ ಮೇಲೆ ಸುಂಕವನ್ನು ವಿಧಿಸುವುದು ಮೊದಲಾದವುಗಳ ಪಟ್ಟಿಯನ್ನು ತಯಾರಿಸಿ ಸರ್ಕಾರದ ಗಮನಕ್ಕೆ ತಂದಾಗ ಸರ್ಕಾರವು ಈ ಬೇಡಿಕೆಗಳ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದಿದ್ದಾಗ ಉಪ್ಪಿನ ಸತ್ಯಾಗ್ರಹದ ಮೂಲಕ ಕಾಯಿದೆ ಭಂಗ ಚಳುವಳಿಯನ್ನು ಆರಂಭಿಸಿದರು.[೩೧]

ಸವಿನಯ ಕಾಯಿದೆ ಭಂಗ ಚಳವಳಿ ಭಾಗವಾಗಿ ದಾವಣಗೆರೆ ಪ್ರದೇಶದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲು ಸಾಧ್ಯವಿರಲಿಲ್ಲ. ಕರ್ನಾಟಕದ ಪ್ರಾಂತ್ಯದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲು 'ಅಂಕೋಲ'ವನ್ನು ಆರಿಸಲಾಗಿತ್ತು. ದಾವಣಗೆರೆ ಪ್ರದೇಶದಲ್ಲಿ ಮದ್ಯಪಾನ ವಿರೋಧಿ ಚಳುವಳಿ, ಈಚಲ ಮರ ಕಡಿಯುವುದು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು. ಪ್ರಭಾತ್ ಫೇರಿ ನಡೆಸುವುದು, ಹೆಂಡದಂಗಡಿಗಳ ಬಹಿರಂಗ ಹರಾಜನ್ನು ತಡೆಯುವುದು, ವಿದೇಶಿ ಬಟ್ಟೆ ಸುಡುವುದು ಮುಂತಾದವು ದಾವಣಗೆರೆ ಪ್ರದೇಶದಲ್ಲಿ ೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿ ಕಾಲದಲ್ಲಿ ನಡೆದವು.

೪.೫.೧. ಅರಣ್ಯ ಸತ್ಯಾಗ್ರಹ

ಕಾಯಿದೆ ಭಂಗ ಚಳುವಳಿಯ ಅಂಗವಾಗಿ ಮೈಸೂರು ಸಂಸ್ಥಾನದ ಸರಕಾರಿ ಜಮೀನಿನಲ್ಲಿರುವ ಈಚಲು ಮರದ ವನಗಳನ್ನು ಕಡಿದು ಸಂಸ್ಥಾನದಾದ್ಯಂತ ಸರಬರಾಜಾಗುತ್ತಿರುವ ಹೆಂಡದ ಮಾರಾಟವನ್ನು ನಿಲ್ಲಿಸುವುದಾಗಿತ್ತು.[೩೨] ಇಂತಹ ಚಳುವಳಿಯಲ್ಲಿ ಭಾಗವಹಿಸಿದ್ದ ರೈತರು ಮತ್ತು ಕಾಂಗ್ರೆಸ್ ನಾಯಕರನ್ನು ಸರಕಾರವು ದಸ್ತಗಿರಿ ಮಾಡಿ ದೂರದ ಕಾಡುಗಳಲ್ಲಿ ಮಧ್ಯರಾತ್ರಿಯಲ್ಲಿ ಬಿಟ್ಟು ಚಿತ್ರಹಿಂಸೆ ಕೊಡುತ್ತಿದ್ದರು. ಇದರ ಹಿಂದಿನ ಸರಕಾರದ ಮುಖ್ಯ ಉದ್ದೇಶವೆಂದರೆ ಈ ಚಳುವಳಿಗಳಲ್ಲಿ ರೈತರು ಮತ್ತು ಜನತೆ ಭಾಗವಹಿಸಿದಂತೆ ತಡೆಯುವುದೇ ಆಗಿತ್ತು. ಇದನ್ನೇ ಮೈಸೂರು ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ಅರಣ್ಯ ಸತ್ಯಾಗ್ರಹವೆಂದು ಕರೆಯಲಾಗಿದೆ. ದಾವಣಗೆರೆ ಪ್ರದೇಶದ ಮಾಯಕೊಂಡ, ಹರಪನಹಳ್ಳಿ, ಕಂಚೀಕೆರೆ, ಹರಿಹರ, ಸುತ್ತಮುತ್ತಲಿನ ಗ್ರಾಮದ ರೈತರು, ವಿದ್ಯಾರ್ಥಿಗಳು ಸಮೇತ ಬಹುಸಂಖೆಯ ರೈತರು ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಈ ಗ್ರಾಮಗಳಲ್ಲಿ

ಅಂದಿನ ಸತ್ಯಾಗ್ರಹಿಗಳಿಗೆ ಮಹಿಳೆಯರು ಹಣೆಗೆ ಕುಂಕುಮ, ಅರಿಶಿನ ಹಚ್ಚಿ, ವೀರ ತಿಲಕವಿಟ್ಟು, ಕೊರಳಿಗೆ ಹೂಮಾಲೆಯನ್ನು ಹಾಕಿ, ಆರತಿ ಬೆಳಗಿ ಬೀಳ್ಕೊಡುತ್ತಿದ್ದರು. ಪ್ರತಿಯೊಂದು ಭಾಗದಲ್ಲಿಯೂ ೨೦ಕ್ಕಿಂತ ಹೆಚ್ಚು ಅರಣ್ಯ ಸತ್ಯಾಗ್ರಹಿಗಳಿರುತ್ತಿದ್ದರು. ಈ ಸತ್ಯಾಗ್ರಹಿಗಳು ತಮ್ಮ ಹೆಗಲ ಮೇಲೆ ಕೊಡಲಿ ಹೊತ್ತು ಜಯಘೋಷ ಕೂಗುತ್ತಾ, ರಾಷ್ಟ್ರಗೀತೆ ಹಾಡುತ್ತಾ ಈಚಲ ಮರಗಳಿರುವ ಪ್ರದೇಶಗಳಿಗೆ ಹೋಗುತ್ತಿದ್ದರು. ಇಂತಹ ಸ್ಥಳಗಳಲ್ಲಿ ಹರಪನಹಳ್ಳಿ ತಾಲ್ಲೂಕಿನ ಕಂಚೀಕೆರೆ ಗ್ರಾಮವೂ ಒಂದು. ಇಲ್ಲಿ ರೈತ ನಾಯಕರಾದ ಇಜಾರಿ ವಸುಪಾಲಪ್ಪನವರ ನೇತೃತ್ವದಲ್ಲಿ ಗ್ರಾಮದ ಕೆಂಚಪ್ಪನ ಜಮೀನಿನಲ್ಲಿ ದಯಾನಂದ ರಾಜು, ಕೆ.ಬಿ. ಕುಲಕರ್ಣಿ, ಬಾಲಾಜಿ. ಚೂಡಪ್ಪ ಮುಂತಾದವರು ಈಚಲ ಮರವನ್ನು ಕಡಿದರು. ಈಚಲ ಮರವನ್ನು ಕಡಿಯುವ ಚಳುವಳಿಯೂ ಹರಪನಹಳ್ಳಿಯಲ್ಲಿ ಸಂಘಟಿತವಾಗಿ ದಾವಣಗೆರೆ ಪ್ರದೇಶದಾದ್ಯಂತ ವ್ಯಾಪಿಸಿತು.[೨೩]

ಹರ್ಡೇಕರ ಮಂಜಪ್ಪನವರ ಅಧ್ಯಕ್ಷತೆ ಹಾಗೂ ಇಜಾರಿ ವಸುಪಾಲಪ್ಪನವರ ಮುಖಂಡತ್ವದಲ್ಲಿ ರೈತರನ್ನು ಸಂಘಟನೆ ಮಾಡಲಾಯಿತು. ಇದರ ಪ್ರಭಾವದಿಂದಾಗಿ ತಾಲೂಕಿನ ಕಣವಿಹಳ್ಳಿ ಗ್ರಾಮದಲ್ಲಿ ಪಟ್ಟಾ ಜಮೀನಿನಲ್ಲಿ ಎ.ಬಿ. ಕುಲಕರ್ಣಿಯವರ ನೇತೃತ್ವದಲ್ಲಿ ಕಂಚಿನ ಕೇವಿ, ಬ್ರಹ್ಮಪ್ಪ, ಇಜಾರಿ ಶ್ರೀಧರಪ್ಪ, ಅರಳಿಕಟ್ಟೆ ಪೂರ್ಣಾಚಾರ್, ಶೆಟ್ರ ಚೂಡಪ್ಪ, ಕೊಪ್ಪಳ ರುದ್ರಪ್ಪ, ಬಣ್ಣೆಹಳ್ಳಿ ಬಸವಲಿಂಗಪ್ಪ, ಲಕ್ಕುಂಡಿ ಶಾಮರಾವ್ ಮತ್ತು ಬಿದರಹಳ್ಳಿ ಜಗನ್ನಾಥರಾವ್ ಇವರು ಈಚಲ ಮರ ಕಡಿಯಲು ಹೋಗಿ ಬಂಧನಕ್ಕೊಳಗಾದರು. ಇವರಿಗೆ ಮೂರು ತಿಂಗಳ ಶಿಕ್ಷೆ ಮತ್ತು ದಂಡ ವಿಧಿಸಲಾಯಿತು.

ಈ ಪ್ರದೇಶದಾದ್ಯಂತ ಈಚಲ ಮರಗಳನ್ನು ಕಡಿಯುವ ಕೆಲಸವು ಚುರುಕಿನಿಂದ ನಡೆಯುವ ಸಂದರ್ಭದಲ್ಲಿ ಕೆಲವು ನಾಯಕರನ್ನು ಸರಕಾರ ಬಂಧಿಸಿ, ದಾವಣಗೆರೆ ಸ್ಪೆಷಲ್ ಕೋರ್ಟಿನಲ್ಲಿ ಹಾಜರುಪಡಿಸಿತು.[೨೪] ಇಂತಹ ಕೆಲವು ಸತ್ಯಾಗ್ರಹಿಗಳ ತನಿಖೆಯನ್ನು ಪ್ರಾರಂಭಿಸಿದಾಗ ಸತ್ಯಾಗ್ರಹಿಗಳು ನೀಡುತ್ತಿದ್ದ ಉತ್ತರಗಳನ್ನು ಆಲಿಸಿದ ನ್ಯಾಯಾಧೀಶರು ಆಶ್ಚರ್ಯಪಡುತ್ತಿದ್ದರು. ಉದಾಹರಣೆಗೆ ವಯಸ್ಸನ್ನು ಕೇಳಿ ಪ್ರಶ್ನಿಸಿದರೆ ಸ್ವಾತಂತ್ರ್ಯ ಪ್ರಜ್ಞೆ ಮೂಡಿದಾಗಿನಿಂದ ಲೆಕ್ಕ ಹಾಕಿ ವಯಸ್ಸು ಹೇಳುತ್ತಿದ್ದರು, ನಿಮ್ಮ ಕೆಲಸ ಏನೆಂದು ಪ್ರಶ್ನಿಸಿದರೆ ದೇಶಸೇವೆ ಎಂಬ ಉತ್ತರ ನೀಡುತ್ತಿದ್ದರು. ಇಂತಹ ಸತ್ಯಾಗ್ರಹಿಗಳಿಗೆ ಶಿಕ್ಷೆ ನೀಡಿದ ಸರಕಾರ ೫೦೦ ರೂ. ದಂಡ ವಿಧಿಸಿತ್ತು. ಆ ದಂಡವನ್ನು ಕಟ್ಟಲು ಸಾಧ್ಯವಿಲ್ಲದವರು ಸುಮಾರು ೪ ವರ್ಷಗಳ ಕಾಲ ಶಿಕ್ಷೆಗೊಳಗಾಗಿದ್ದರು.

೪.೫.೨. ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್

ಮದ್ಯದಂಗಡಿಗಳ ಬಹಿಷ್ಕಾರವನ್ನು ವ್ಯವಸ್ಥಿತವಾಗಿ ನಡೆಸುವ ಸಲುವಾಗಿ ದಾವಣಗೆರೆ ಪ್ರದೇಶದಲ್ಲಿ ಹರ್ಡೇಕರ್ ಮಂಜಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಮದ್ಯಪಾನ ವಿರೋಧಿ ಹೋರಾಟದಲ್ಲಿ ಗ್ರಾಮಗಳ ರೈತರ ಪಾತ್ರ ಮುಖ್ಯವಾಗಿತ್ತು. ಇವರು ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಅಲ್ಲದೆ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸಿ ಎಂದು ಗೋಡೆ ಪತ್ರಗಳನ್ನು ಬರೆಯುವುದರೊಂದಿಗೆ ಘೋಷಣೆಗಳನ್ನು ಸಹ ಕೂಗುತ್ತಿದ್ದರು.

೪.೫.೩. ವಿದೇಶಿ ಬಟ್ಟೆ ಮಾರಾಟ ಮಾಡುವ ಅಂಗಡಿಯ ಮುಂದೆ ಪಿಕೆಟಿಂಗ್

ಕಾಯಿದೆ ಭಂಗ ಚಳುವಳಿಯ ಭಾಗವಾದ ವಿದೇಶಿ ಬಟ್ಟೆ ಸುಡುವ ಹೋರಾಟವು ಚುರುಕುಗೊಂಡಿತು. ದಾವಣಗೆರೆ ಖಾದಿಕೇಂದ್ರವು ಎಲ್ಲ ಸ್ವಾತಂತ್ರ್ಯ ಹೋರಾಟದ ರಾಜಕೀಯ ಚಟುವಟಿಕೆಗಳಿಗಾಗಿ ಪ್ರಮುಖ ಸ್ಥಳವಾಗಿತ್ತು. ಈಗಿನ ಬಿ.ಟಿ ಗಲ್ಲಿಯ ಕೊನೆಯಲ್ಲಿ ಎಲ್ಲ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು. ೧೯೩೧ ಫೆಬ್ರವರಿ ೪ರಂದು ಖಾದಿ ವಸ್ತ್ರಾಲಯದ ಬೆಲ್ಲದ ಸಿದ್ಧಲಿಂಗಪ್ಪ ಮತ್ತು ಇತರರು ದಾವಣಗೆರೆಯ ದೊಡ್ಡ ಬಟ್ಟೆ ವ್ಯಾಪಾರಿಯಾದ 'ಕೆರೋಜಿರಾವ್' ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿ ಅಂಗಡಿಯ ಮಾಲೀಕರಿಗೆ ಇನ್ನು ಮುಂದೆ ವಿದೇಶಿ ವಸ್ತುಗಳನ್ನು ತರಿಸಬಾರದೆಂದು ವ್ಯಾಪಾರಿಗಳಲ್ಲಿ ಕೇಳಿಕೊಂಡರು. ಜೊತೆಗೆ ವ್ಯಾಪಾರಿಗಳು ಈಗಿರುವ ಸರಕು ಸಾಮಗ್ರಿಗಳನ್ನು ನಾಲ್ಕು ತಿಂಗಳೊಳಗಾಗಿ ಮಾರಾಟ ಮಾಡಬೇಕೆಂದು ಹಾಗೂ ವಿದೇಶಿ ವಸ್ತುಗಳನ್ನು ತರಕೂಡದೆಂದು ಒಪ್ಪಂದ ಮಾಡಿಕೊಳ್ಳಲಾಯಿತು. ಸಾರ್ವಜನಿಕ ಸಭೆಯಲ್ಲಿ ಬೆಲ್ಲದ ಸಿದ್ಧಲಿಂಗಪ್ಪ ೧೯೩೧ ಫೆಬ್ರವರಿ ೬ರಂದು ಮಾತನಾಡುತ್ತಾ ವಿದೇಶಿ ವಸ್ತುಗಳನ್ನು ಎಲ್ಲ ಸಾರ್ವಜನಿಕರು ಬಹಿಷ್ಕರಿಸಬೇಕೆಂದರು. ವ್ಯಾಪಾರಿಗಳು ವಿದೇಶಿ ವಸ್ತುಗಳನ್ನು ತರದಂತೆ ಹೋರಾಟಕ್ಕೆ ಬಂಬಲ ನೀಡಬೇಕೆಂದು ಕೋರಿದರು. ಅವರು ಗಾಂಧೀಜಿಯವರ ಮನೋಭಾವನೆಯನ್ನು ಅರ್ಥ ಮಾಡಿಕೊಂಡು ನಾವು ಸಾಧ್ಯವಾದಷ್ಟು ಬೇಗ ಸ್ವರಾಜ್ಯ ಪಡೆಯಬೇಕಾದರೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಅಗತ್ಯವೆಂದರು. ದಾವಣಗೆರೆಯಲ್ಲಿ ೧೯೩೧ ಫೆಬ್ರವರಿ ೬ರಿಂದ ೧೨ರವರಿಗೆ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಲಾಯಿತು.

ಅದೇ ವೇಳೆಯಲ್ಲಿ ಆ ಬಟ್ಟೆ ಅಂಗಡಿಯ ವ್ಯಾಪಾರಿಗಳಾದ ಮುರಿಗೆಪ್ಪ ಮತ್ತು ವೀರಚಂದ್ ಮಧ್ಯೆ ಪ್ರವೇಶಿಸಿ ಖಾದಿ ವಸ್ತ್ರಾಲಯದ ಸದಸ್ಯರೊಂದಿಗೆ ಇನ್ನು ಮುಂದೆ ಯಾವುದೇ ವಿದೇಶಿ ಬಟ್ಟೆಗಳನ್ನು ತಂದು ತಮ್ಮ ಅಂಗಡಿಗಳಲ್ಲಿ ಮಾರುವುದಿಲ್ಲವೆಂದು ಒಪ್ಪಂದ ಮಾಡಿಕೊಂಡರು.[೩೫] ಖಾದಿ ವಸ್ತ್ರಾಲಯದ ಇತರ ಸದಸ್ಯರು ರೈಲ್ವೆ ನಿಲ್ದಾಣದಿಂದ ಯಾವುದೇ ರೀತಿಯ ವಿದೇಶಿ ವಸ್ತುಗಳು ನಗರಕ್ಕೆ ಬರದಂತೆ ಗಮನಿಸುತ್ತಿದ್ದರು. ಇದರಿಂದಾಗಿ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಬೆಲ್ಲದ ಸಿದ್ಧಲಿಂಗಪ್ಪ ಮತ್ತು ಶಿವಗಂಗಪ್ಪ ಇತರ ಖಾದಿ ವಸ್ತ್ರಾಲಯದ ಸದಸ್ಯರಿಗೆ ಎಚ್ಚರಿಕೆ ನೀಡಿದರು. ವಿದೇಶಿ ಬಟ್ಟೆಗಳನ್ನು ತರುವುದನ್ನು ಈ ಪ್ರದೇಶದ ಪ್ರತಿಯೊಂದು ಹಳ್ಳಿಯ ರೈತರು ಬಹಿಷ್ಕರಿಸಿದರು. ಕಾರಣ ಈ ಪ್ರದೇಶವು ಮೂಲದಿಂದಲೇ ಹತ್ತಿ ಬೆಳೆಗೆ ಪ್ರಸಿದ್ಧವಾಗಿದ್ದು ಇಲ್ಲಿನ ನೇಯ್ಗೆ ಕಾರ್ಯವು ಅತ್ಯಂತ ಚುರುಕಿನಿಂದ ಸಾಗಿತು. ವಿದೇಶಿ ಬಟ್ಟೆಗಳ ಆಮದಿನಿಂದಾಗಿ ಈ ಭಾಗದಲ್ಲಿ ತಯಾರಾದ ಬಟ್ಟೆಗಳ ಬೇಡಿಕೆ ಕಡಿಮೆಯಾಯಿತು. ಹೀಗಾಗಿ ರೈತರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ರಾಷ್ಟ್ರೀಯ ಹೋರಾಟಕ್ಕೆ ಇಳಿದರು.

೧೯೩೨ರ ಮಾರ್ಚ್‌ನಲ್ಲಿ ಹೋಳಿಹಬ್ಬದಂದು ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ವಿದೇಶಿ ವಸ್ತ್ರದ ದಹನವಾಯಿತು. ನೂರಾರು ದೇಶಪ್ರೇಮಿಗಳು ತಮ್ಮಲ್ಲಿದ್ದ ವಿದೇಶಿ ವಸ್ತುಗಳನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟು ಮುಂದೆ ಖಾದಿಯನ್ನೇ ತೊಡುವುದಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಕಾರ್ಯಕರ್ತರು ಪ್ರದೇಶದ ಎಲ್ಲ ಸ್ಥಳಗಳನ್ನು ಸಂದರ್ಶಿಸಿ ಕೈ ಬರಹ ಮತ್ತು ಇತರ ಪ್ರಚಾರ ಸಾಹಿತ್ಯಗಳೊಡನೆ ಸ್ವದೇಶಿ, ಖಾದಿ ಮತ್ತು ರಾಷ್ಟ್ರೀಯತೆಯನ್ನು ಪ್ರಚಾರಪಡಿಸಿದರು.[೩೬]

ಹೀಗೆ ದಾವಣಗೆರೆ ಪ್ರದೇಶದಲ್ಲಿ ಈಚಲ ಮರ ಕಡಿಯುವುದು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ವಿದೇಶಿ ಬಟ್ಟೆಗಳನ್ನು ಸುಡುವುದು. ಪ್ರಭಾತ್‌ಫೇರಿ ಹೊರಡಿಸುವುದು. ಮುಂತಾದವುಗಳ ರೂಪದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿ ನಡೆಯಿತು.

೪.೬. ಕ್ವಿಟ್ ಇಂಡಿಯಾ ಚಳುವಳಿ

೧೯೪೨ ಆಗಸ್ಟ್ ೮ರ ರಾತ್ರಿ ಮುಂಬಯಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಜವಹರಲಾಲ್ ನೆಹರು ಕ್ವಿಟ್ ಇಂಡಿಯಾ ನಿರ್ಣಯವನ್ನು ಸ್ವೀಕರಿಸಿದರು. ಮಹಾತ್ಮಗಾಂಧಿಯವರು ಈ ಚಳುವಳಿಯ ನೇತೃತ್ವವನ್ನು ವಹಿಸಿಕೊಂಡಿದ್ದರು. ವಸಾಹತು ಸರ್ಕಾರದ ನೀತಿಗಳಿಂದ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿ ಮಾಡಿ ಬ್ರಿಟಿಷರಿಂದ ಸಂಪೂರ್ಣ ಸ್ವಾತಂತ್ರ್ಯ ಪಡೆಯುವ ನಿರ್ಣಯ ಅಂಗೀಕರಿಸಿತ್ತು. ೧೯೪೨ರಲ್ಲಿ ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ನಡೆಸಿದ ಅಹಿಂಸಾ ಹೋರಾಟ ಮತ್ತು ಅಂತ್ಯದ ಹೋರಾಟವೇ 'ಕ್ವಿಟ್ ಇಂಡಿಯಾ' ಅಥವಾ 'ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿ. ಕಾಂಗ್ರೆಸ್‌ನ ಈ 'ಕ್ವಿಟ್ ಇಂಡಿಯಾ' ನಿರ್ಣಯದೊಂದಿಗೆ ದೇಶಾದ್ಯಂತ 'ಮಾಡಿ ಇಲ್ಲವೆ ಮಡಿಯಿರಿ' ಎಂಬ ಘೋಷಣೆ ಮೊಳಗಿತ್ತು. ೧೯೪೨ ಆಗಸ್ಟ್ ೯ರ ನಸುಕಿನ ಜಾವದಲ್ಲಿ ಧರಣಿ ನಿರತ ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕರನ್ನು ವಸಾಹತುಶಾಹಿ ಸರ್ಕಾರ ಬಂಧಿಸಿತು.[೨೭]

ಮೊದಲು ಈ ಚಳುವಳಿಯು ನಗರ, ಮಹಾನಗರಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು, ಕಾರ್ಮಿಕರು ರೈತರು, ವ್ಯಾಪಾರಿಗಳು ಎಲ್ಲರೂ ಇದರಲ್ಲಿ ಗಣನೀಯ ಪಾತ್ರ ವಹಿಸಿದರು. ವಿದ್ಯಾರ್ಥಿಗಳು ದೇಶದಾದ್ಯಂತ ಮುಷ್ಕರ ನಡೆಸಿದರು. ಕಾರ್ಮಿಕರು ಒಂದು ವಾರದಿಂದ ಮೂರು ತಿಂಗಳವರೆಗೆ ಮುಷ್ಕರ ಹೂಡಿದರು. ಭಾರತದಾದ್ಯಂತ ಪ್ರತಿಕ್ರಿಯೆ ತೋರದ ಹಳ್ಳಿಯೇ ಇರಲಿಲ್ಲ. ಹಲವಾರು ದೇಶೀಯ ಸಂಸ್ಥಾನಗಳ ರೈತರು ಚಳುವಳಿ ನಡೆಸಿದರು.[೨೮]

ಈ ಚಳುವಳಿಯಲ್ಲಿ ದಾವಣಗೆರೆ ಪ್ರದೇಶದ ಎಲ್ಲ ಗ್ರಾಮಗಳ ರೈತರು ಪಾಲ್ಗೊಂಡರು. ಗಾಂಧೀಜಿಯವರು ಮತ್ತು ಅವರ ಸಂಗಡಿಗರ ಬಂಧನಕ್ಕೆ ದಾವಣಗೆರೆಯಲ್ಲಿ ಭಾರಿ ಪ್ರತಿಭಟನೆ ನಡೆಯಿತು. ರೈತರ ಜೊತೆಗೂಡಿ ಕಾರ್ಮಿಕರು ಸಹ ಮುಷ್ಕರ ನಡೆಸಿದರು. ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸುವುದರ ಮೂಲಕ ಚಳುವಳಿಗೆ ಸೇರಿದರು. ಇಂತಹ ಸಂದರ್ಭದಲ್ಲಿ ಸರ್ಕಾರವು ಸೈನ್ಯವನ್ನು ಬಳಸಿ ಚಳುವಳಿಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿತು. ನಾಗಪ್ಪ ಹುಲ್ಲೂರ್ ಎಂಬ ರೈತನು ದಾವಣಗೆರೆಯಲ್ಲಿ ಸೈನಿಕ ಅಧಿಕಾರಿಯನ್ನು ತಡೆದಾಗ ಅಲ್ಲಿ ನಡೆದ ಗೋಲಿಬಾರ್‌ನಲ್ಲಿ ಮರಣ ಹೊಂದುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಅಮರನಾದ. ಈ ಘಟನೆಯಿಂದಾಗಿ ಹೋರಾಟ ಮತ್ತಷ್ಟು ಚುರುಕುಗೊಂಡಿತು. ಹರಿಹರದಿಂದ ಹುಬ್ಬಳ್ಳಿಗೆ ಚಲಿಸುತ್ತಿದ್ದ ರೈಲಿನಲ್ಲಿ ದಾವಣಗೆರೆಯ ಒಂದು ವಿದ್ಯಾರ್ಥಿ ಗುಂಪು ರಾಷ್ಟ್ರೀಯ ಧ್ವಜವನ್ನು ರೈಲ್ವೆ ಇಂಜಿನ್‌ಗೆ ಕಟ್ಟಿದರು. ಅದೇ ರೈಲಿನ ಎರಡನೇ ದರ್ಜೆಯ ಭೋಗಿಯಲ್ಲಿ ಪ್ರಯಾಣಿಸುತ್ತಿದ್ದ ಯುರೋಪಿನ ಪ್ರಯಾಣಿಕರ ಟೋಪಿಯನ್ನು ಕಿತ್ತುಕೊಂಡು ಅವರ ಕೈಯಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದುಕೊಳ್ಳುವಂತೆ ಮಾಡಿದರು. ಅದರಲ್ಲಿ ಯುರೋಪಿನ

ಪುರುಷ ಮತ್ತು ಮಹಿಳಾ ಪ್ರಯಾಣಿಕರಿದ್ದರು.[೩೯] ಹಾಗೆಯೇ ಚಳುವಳಿಗಾರರು ರೈತರು ಮತ್ತು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ರೈಲು ನಿಲ್ದಾಣವನ್ನು ಸುಟ್ಟುಹಾಕಿದರು. ಜಿಲ್ಲೆಯಲ್ಲಿನ ವಿಧ್ವಂಸಕ ಕೃತ್ಯಕ್ಕೆ ಹೆದರಿದ ಸರ್ಕಾರವು ರಾತ್ರಿ ಓಡಾಡುವ ರೈಲುಗಳನ್ನು ಒಂದು ತಿಂಗಳ ಕಾಲ ನಿಲ್ಲಿಸಿತು. ಈ ಪ್ರದೇಶದ ಅನೇಕ ಸ್ಥಳಗಳಲ್ಲಿ ಅಂಚೆ ಕಛೇರಿ ಲೂಟಿ ಮಾಡಿ ಟೆಲಿಗ್ರಾಫ್ ತಂತಿಗಳನ್ನು ನಾಶಪಡಿಸಲಾಯಿತು. ಹಾಗೆಯೇ ಸರ್ಕಾರದ ಉಗ್ರಾಣಗಳಿಗೆ ಮುತ್ತಿಗೆ ಹಾಕಲಾಯಿತು.

ಕ್ವಿಟ್ ಇಂಡಿಯಾ ಚಳುವಳಿಯು ದಿನದಿಂದ ದಿನಕ್ಕೆ ಚುರುಕುಗೊಂಡು ಉಗ್ರರೂಪ ತಾಳಿದಾಗ ಪರಿಸ್ಥಿತಿಯನ್ನು ನಿಯಂತ್ರಿಸಲು ಸೈನಿಕರ ಸಹಾಯದಿಂದ ಪೊಲೀಸರು ರೈತರ ಮೇಲೆ ಗುಂಡು ಹಾರಿಸಿದರು. ಗುಂಡು ತಗುಲಿದ ಲಿಂಗಪ್ಪ, ನಾಗಪ್ಪ ಮತ್ತು ವಿರೂಪಾಕ್ಷಪ್ಪ ಎಂಬ ರೈತ ತರುಣರು ಮರಣ ಹೊಂದಿದರು. ಹಾಗೆಯೇ ಅಲ್ಲಿ ತೀವ್ರವಾಗಿ ಗಾಯಗೊಂಡ ನಿಂಗಪ್ಪ, ತಿಮ್ಮಪ್ಪ, ನೀಲಜ್ಜಿ ಹನುಮಂತಪ್ಪ ಮತ್ತು ಬಸಪ್ಪ ಇವರು ಸಹ ಮರಣ ಹೊಂದಿದ್ದರಿಂದ ದಾವಣಗೆರೆ ನಗರದಲ್ಲಿ ಸರ್ಕಾರಿ ಕಛೇರಿಗಳ ಮೇಲೆ ರೈತರು ಮುತ್ತಿಗೆ ಹಾಕಿದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದಾವಣಗೆರೆ ಪ್ರದೇಶದ ರೈತರು ವಸಾಹತುಶಾಹಿ ಸರ್ಕಾರದ ವಿರುದ್ಧ ಗಂಭೀರವಾಗಿ ಭಾಗವಹಿಸುವುದರ ಮುಖಾಂತರ ರಾಷ್ಟ್ರೀಯ ಹೋರಾಟವನ್ನು ಯಶಸ್ವಿಯಾಗಿಸಲು ಕಾರಣೀಭೂತರಾದರು. ಇವರಲ್ಲಿ ಪ್ರಮುಖ ನಾಯಕರೆಂದರೆ ಬಳ್ಳಾರಿ ಸಿದ್ದಮ್ಮ, ಖಾದಿ ಸಿದ್ದಲಿಂಗಪ್ಪ, ಇಟ್ಟಿಗಿ ವೇದಮೂರ್ತಿ, ಕಾಸಲ ಶ್ರೀನಿವಾಸ ಶೆಟ್ಟರು, ಬಳ್ಳಾರಿ ಮುರುಗಯ್ಯ, ಕೆ.ಟಿ. ಜಂಬಣ್ಣ, ಬೆಳ್ಳುಳ್ಳಿ ಷಣ್ಮುಖಪ್ಪ, ಇಜಾರಿ ವಾಸುದೇವಪ್ಪ ಇನ್ನೂ ಮುಂತಾದ ನಾಯಕರು.

ವಸಾಹತು ಕಾಲಘಟ್ಟದ ರಾಷ್ಟ್ರೀಯ ಹೋರಾಟದಲ್ಲಿ ರೈತರು ಕಂದಾಯ ಹೆಚ್ಚಳ, ಗೇಣಿದಾರರ ಸಮಸ್ಯೆ ಮುಂತಾದ ಸಮಸ್ಯೆಗಳನ್ನು ಕುರಿತು ಹೋರಾಟದ ಜರೂರು ಕಂಡುಬಂದರೂ ಸಹ ಅಂದು ಪ್ರತ್ಯೇಕವಾದ ಹೋರಾಟಕ್ಕೆ ಇಳಿಯಲಿಲ್ಲ. ಅಲ್ಲದೇ ಮೈಸೂರು ಸಂಸ್ಥಾನವು ಮಾದರಿ ರಾಜ್ಯವೆಂಬ ಹೆಸರು ಪಡೆದುಕೊಂಡಿತ್ತು. ಆದುದರಿಂದ ರೈತರು ಮಹಾರಾಜರಿಗೆ ನಿಷ್ಠೆ ತೋರಿದ ಫಲವಾಗಿ ಆರಂಭದಲ್ಲಿ ರಾಷ್ಟ್ರೀಯ ಹೋರಾಟ ಚುರುಕುಗೊಳ್ಳಲಿಲ್ಲ. ಆದರೆ ಗಾಂಧೀಜಿಯವರು ದಾವಣಗೆರೆ ಪ್ರದೇಶಕ್ಕೆ ಭೇಟಿ ನೀಡಿದ ನಂತರ ಕಾಂಗ್ರೆಸ್ ಪಕ್ಷದ ರಚನಾತ್ಮಕ ಕಾರ್ಯಗಳು ಮತ್ತು ರೈತ ಪರವಾಗಿ ಪಕ್ಷ ನಿಷ್ಠೆ ತೋರಿಸಿದ ಫಲವಾಗಿ ರೈತರು ಸ್ವಯಂ ಪ್ರೇರಣೆಯಿಂದ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವುದರ ಮೂಲಕ ಭಾರತ ಸ್ವಾತಂತ್ರ್ಯಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆದರೆ ಆ ಸಂದರ್ಭದಲ್ಲಿ ಕಾಂಗ್ರೆಸ್ ಕೂಡ ದೊಡ್ಡ ಜಮೀನುದಾರರ ಹಿಡಿತದಲ್ಲಿದ್ದುದನ್ನು ಮರೆಯುವಂತಿಲ್ಲ. ಹೀಗಾಗಿ ಸಣ್ಣಪುಟ್ಟ ರೈತರ ಸಮಸ್ಯೆಗಳಿಗೆ ಹೆಚ್ಚಿನ ಗಮನ ಹರಿಸದೇ ಇರುವುದು ದೌರ್ಬಲ್ಯವೆಂದು ಹೇಳಬೇಕು.

ಟಿಪ್ಪಣಿಗಳು

೧. ನಾಗರಾಜ್ ಎಂ.ಜಿ., ಕರ್ನಾಟಕ ರೈತ ಚಳುವಳಿ ಸತ್ಯಾಗ್ರಹಗಳು, ಸಂ.೧, ಕರ್ನಾಟಕ ವಿಧಾನಮಂಡಲ, ವಿಧಾನ ಸೌಧ ೨೦೦೬ ಪು.೪೩

೨. ಅದೇ, ಪು.೪೩

೩. ಸೆಬಾಸ್ಟಿಯನ್ ಜೋಸೆಫ್, (ಸಂ), ಕರ್ನಾಟಕ ಚರಿತ್ರೆ, ಸಂ.೬, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪೮

೪. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ೨೦೦೮, ಪು. ೫೧

೫. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ೨೦೦೯, ಪು. ೧೩೦

೬. ಮುಜಾಫರ್ ಅಸ್ಸಾದಿ, ಪೂರ್ವೋಕ್ತ, ೨೦೦೯, ಪು. ೫೨

೭. ಚಂದ್ರಶೇಖರ್ ಎಸ್., ಕರ್ನಾಟಕ ಚರಿತ್ರೆ ಸಂಪುಟ.೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩೪

೮. ಬಿಪನ್‌ಚಂದ್ರ, ಅಮಲೇಶ್ ತ್ರಿಪಾಠಿ, ಬರುನ್ ಡೇ, ಸ್ವಾತಂತ್ರ್ಯ ಹೋರಾಟ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೦೧, ಪು.೮೨

೯. ಹಿರೇಬಿದ್ರಿ ಹೋಳಿಬಸಪ್ಪ, ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳುವಳಿ, ಅಪ್ರಕಟಿತ ಎಂ.ಫಿಲ್. ನಿಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫, ಪು. ೧೪

೧೦. ಆರ್.ಸಿ. ಮಜುಂದಾರ್, ಸ್ವಾತಂತ್ರ್ಯ ಸಂಗ್ರಾಮ, ಭಾಗ ೧, ಭಾರತೀಯ ವಿದ್ಯಾಭವನ, ಬೆಂಗಳೂರು, ಪು.೪೭

೧೧. ಅದೇ, ಪು.೪೬

೧೨. ಅದೇ, ಪು.೫೨

೧೩. ಹಿರೇಬಿದ್ರಿ ಹೋಳಿಬಸಪ್ಪ, ಪೂರ್ವೋಕ್ತ, ಪು. ೩೪

೧೪. ಈಶ್ವರಪ್ಪ ಎಂ.ಜಿ., ಶತಮಾನದ ದಾವಣಗೆರೆ, ಚಂಪಾಲಾಲ್ ಬಿ. ಡೆಲ್ಲರಿಯಾ, ೨೦೦೧, ಪು. ೮೫

೧೫. ಶಂಕರನಾರಾಯಣರಾವ್ ಎನ್.ಪಿ., ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ೨೦೦೮, ಪು.೧೫೭

೧೬. ಪರಮೇಶ್ವರ, ನರೇಂದ್ರ ಪ್ರಸಾದ್, ಮಹದೇವಸ್ವಾಮಿ, ಭಾರತ ಸ್ವಾತಂತ್ರ್ಯ ಚಳುವಳಿ, ಚೇತನ ಬುಕ್ ಹೌಸ್, ಮೈಸೂರು, ೨೦೦೨, ಪು.೨೧೦

೧೭. ಹಿರೇಬಿದ್ರಿ ಹೋಳಿಬಸಪ್ಪ, ಪೂರ್ವೋಕ್ತ, ಪು. ೪೩

೧೮. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ಪು. ೩೦

೧೯. ಅದೇ, ಪು. ೩೧

೨೦. ಅದೇ, ಪು. ೩೧

೨೧. ಶೇಷಾದ್ರಿ ಬಿ., ಚಂದ್ರಶೇಖರ್ ಟಿ.ಆರ್., ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ., ಪು.೮೩

೨೨. ಈಶ್ವರಪ್ಪ ಎಂ.ಜಿ., ಪೂರ್ವೋಕ್ತ, ಪು. ೮೫

೨೩. ಚಂದ್ರಶೇಖರ್ ಎಸ್., ಕರ್ನಾಟಕ ಚರಿತ್ರೆ ಸಂಪುಟ.೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪಂಪಿ, ಪು.೧೩೪

೨೪. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ಪು.೧೯೦

೨೫. ಅದೇ, ಪು.೧೯೦

೨೬. ಅದೇ, ಪು.೧೯೨

೨೭. ಅದೇ, ಪು.೧೮೭

೨೮. ಅದೇ, ಪು.೧೮೭

೨೯. ಅದೇ, ಪು.೧೯೯

೩೦. ಬಿಪನ್‌ಚಂದ್ರ, ಪೂರ್ವೋಕ್ತ, ಪು.೧೫೯

೩೧. ಪರಮೇಶ್ವರ, ಪೂರ್ವೋಕ್ತ, ಪು.೨೬೮

೩೨. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ಪು.೧೯೯

೩೩. ಹಿರೇಬಿದ್ರಿ ಹೊಳಿಬಸಪ್ಪ, ಪೂರ್ವೋಕ್ತ, ಪು.೬೭

೩೪. ಬಸವರಾಜಪ್ಪ ಹೆಚ್.ಇ.,ಪೂರ್ವೋಕ್ತ, ಪು.೨೦೦

೩೫. ಹಾಲಪ್ಪ ಜಿ.ಎಸ್., ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ., ಸಂ.೨. ಪು.೬೨೭

೩೬. ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ., ಚಂದ್ರವಳ್ಳಿ, ಜಿಲ್ಲಾ ಕೌನ್ಸಿಲ್, ಇತಿಹಾಸ ಸಂಶೋಧನ ಮಂಡಳ, ೧೯೨೬, ಪು.೧೧೮

೩೭. ಶಂಕರನಾರಾಯಣರಾವ್ ಎನ್.ಪಿ., ಪೂರ್ವೋಕ್ತ, ಪು.೧೭೮

೩೮. ಅದೇ, ಪು.೧೭೯

೩೯. ಬಸವರಾಜಪ್ಪ ಹೆಚ್.ಇ., ಪೂರ್ವೋಕ್ತ, ಪು.೨೦೫

* * *

ಅಧ್ಯಾಯ ಐದು

ಸ್ವಾತಂತ್ರ್ಯೋತ್ತರ ಸಂದರ್ಭದ ರೈತ ಹೋರಾಟಗಳು

ಸ್ವಾತಂತ್ರ್ಯೋತ್ತರ ಸಂದರ್ಭದ ರೈತ ಹೋರಾಟಗಳು

"ರೈತ ದೇಹಿ ಅಲ್ಲ ಆತ ದಾತ" ಎಂಬ ಸೂಕ್ತಿಯಂತೆ ರೈತನು ಪ್ರಪಂಚದ ಜನತೆಯ ಹೊಟ್ಟೆಗೆ ಅನ್ನವನ್ನು ಕೊಡುವ ಅನ್ನದಾತ. ಇಂತಹ ರೈತರು ಇಂದು ಹೋರಾಟದ ಹಾದಿಯಲ್ಲಿದ್ದಾರೆ. ರೈತರು ಈ ಹಿಂದೆ ಬ್ರಿಟಿಷ್ ವಸಾಹತುಶಾಹಿ ನೀತಿಗಳನ್ನು ವಿರೋಧಿಸಿ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ದೇಶವನ್ನು ಬ್ರಿಟಿಷರಿಂದ ಮುಕ್ತಿಗೊಳಿಸಲು ಹೋರಾಡಿದರು. ಸ್ವಾತಂತ್ರ್ಯಾನಂತರ ಸರ್ಕಾರದ ರೈತ ವಿರೋಧಿ ನಿಲುವುಗಳನ್ನು ವಿರೋಧಿಸುವ, ರೈತರಲ್ಲಿ ಜಾಗೃತಿ ಮೂಡಿಸುವ ಹಾಗೂ ಹೋರಾಟಗಳನ್ನು ಸಂಘಟಿಸುವ ಕಾರ್ಯದಲ್ಲಿ ರೈತರು ನಿರತರಾದರು.

೧. ಕಾಗೋಡು ಚಳವಳಿ

ಕಾಗೋಡು ಚಳವಳಿಯು ಭೂಮಾಲೀಕರ ವಿರುದ್ಧ ಗೇಣಿದಾರರು ಮತ್ತು ರೈತರು ನಡೆಸಿದಂತಹ ಹೋರಾಟವಾಗಿದೆ. ಈ ಹೋರಾಟದಲ್ಲಿ ದಾವಣಗೆರೆ ಪ್ರದೇಶದ ರೈತರು ನೇರವಾಗಿ ಭಾಗವಹಿಸದಿದ್ದರೂ ಕಾಗೋಡು ಸತ್ಯಾಗ್ರಹದ ರೈತರಿಗೆ ಬೆಂಬಲ ವ್ಯಕ್ತಪಡಿಸಿ ಚಳವಳಿಯನ್ನು ಯಶಸ್ವಿಗೊಳಿಸಿದರು.

ಕಾಗೋಡು ಚಳುವಳಿ ಸ್ವಾಂತಂತ್ರ್ಯ ನಂತರದ ಕರ್ನಾಟಕದ ಬಹುಮುಖ್ಯ ರೈತ ಹೋರಾಟವಾಗಿದೆ.[೧] ಗೇಣಿಯ ವಿಷಯದಲ್ಲಿ ರೈತರು ಹಾಗೂ ಭೂಮಾಲೀಕರ ನಡುವೆ ಉಂಟಾಗಿದ್ದ ವಿರಸ ಚಳುವಳಿ ರೂಪ ಪಡೆದುಕೊಂಡಿತ್ತು. ಇದರ ನೇತೃತ್ವವನ್ನು ಸಮಾಜವಾದಿ ಲೋಹಿಯಾವಾದಿ ಗೋಪಾಲಗೌಡರು ವಹಿಸಿಕೊಂಡಿದ್ದರು.[೨] ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಕಾಗೋಡು ಗ್ರಾಮದಲ್ಲಿ ಶೇ. ೭೦ರಷ್ಟು ದೀವರ ಜಾತಿಯವರೇ ಬಹುಸಂಖ್ಯಾತರಾಗಿದ್ದರು. ಇವರೆಲ್ಲರೂ ಅನಕ್ಷರಸ್ಥರು. ಇವರಿಗೆ ಕೃಷಿಯೇ ಮುಖ್ಯ ಉದ್ಯೋಗವಾಗಿತ್ತು. ಇದನ್ನು ಹೊರತುಪಡಿಸಿದರೆ ಕಳ್ಳಭಟ್ಟಿ, ಸಾರಾಯಿ ಉಪ ಉದ್ಯೋಗವಾಗಿತ್ತು. ಇವರಿಗೆ ೨ ½ ಹೆಕ್ಟೇರ್‌ಗಿಂತಲೂ ಹೆಚ್ಚಿನ ಭೂಮಿಯಿರಲಿಲ್ಲವಾದ್ದರಿಂದ ಗ್ರಾಮದ ಭೂಮಾಲೀಕರ ಜಮೀನಿನಲ್ಲಿ ಗೇಣಿಯಲ್ಲಿ ನಿರತರಾಗಿದ್ದರು. ದೀವರು ಮತ್ತು ಗ್ರಾಮದ ಭೂಮಾಲೀಕರ ಸಂಬಂಧವು ಕೇವಲ ಆರ್ಥಿಕ ಸಂಬಂಧವೆನಿಸದೇ ಒಕ್ಕಲಿನ ಮಟ್ಟಿಗೆ ಒಂದು ಋಣದ ಸಂಬಂಧ ಆಗಿತ್ತೆನ್ನಲಾಗಿದೆ.[೩]

ಕೆಲವು ವರ್ಷಗಳ ನಂತರ ಭೂಮಾಲೀಕರು ಮತ್ತು ಗೇಣಿದಾರರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಭೂಮಾಲೀಕರು ಗೇಣಿದಾರರನ್ನು ನಿಯಮಿತ ಗೇಣಿಯ ವಿರುದ್ಧ ಗೇಣಿದಾರರಿಂದ ಭೂಮಿಯನ್ನು ಬಿಡಿಸುವ ಉದ್ದೇಶ ಹೊಂದಿದ್ದರು.[೪] ಭೂಮಾಲೀಕರ ಈ ಶೋಷಣೆಯು ದೀವರ ಸ್ಥಿತಿ ಗತಿಯು ಸ್ವಾತಂತ್ರ್ಯ ನಂತರವೂ ಬದಲಾಗದೇ ಇದ್ದುದನ್ನು ಕಂಡು ಈ ಜನಾಂಗದ ಸ್ವಾತಂತ್ರ್ಯ ಹೋರಾಟಗಾರರಾದ ಎಚ್. ಗಣಪತಿಯಪ್ಪ, ಡಿ.

ಮಾರಪ್ಪ ಆತಂಕಗೊಂಡರು. ಹೊಲ ಉಳುವವರು ಗೇಣಿದಾರರಾದರೂ ಭೂಮಿಯ ಹಕ್ಕು ಅದರ ಮಾಲೀಕರಲ್ಲಿತ್ತು. ಉಳುವವರಿಗೆ ಭೂ ಒಡೆತನ ಸಿಕ್ಕರೆ ಗುಲಾಮಗಿರಿ ಕೊನೆಯಾಗಬಹುದು ಎಂದು ಭಾವಿಸಿ ಹೋರಾಟಕ್ಕೆ ಗೇಣಿದಾರರನನ್ನು ಸಂಘಟಿಸಿದರು.

೧೯೪೮ರ ಜನವರಿಯಲ್ಲಿ ಸಾಗರದ ಮುರತ್ತೂರು ಗ್ರಾಮದಲ್ಲಿ ಗೇಣಿದಾರರ ಭಾರೀ ಸಭೆ ನಡೆಯಿತು. ಸಭೆಯಲ್ಲಿ ಸಾಗರ ತಾಲ್ಲೂಕು ರೈತ ಸಂಘ ಸ್ಥಾಪಿಸುವ ನಿರ್ಧಾರವಾಯಿತು. ಮೂಕಪ್ಪ ಅಧ್ಯಕ್ಷರಾಗಿ ಗಣಪತಿಯಪ್ಪ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾದರು. ಈ ಸಂಘದ ಬೇಡಿಕೆಗಳು ಈ ರೀತಿಯಲ್ಲಿದ್ದವು.

೧. ಬಲವಂತ ಗೇಣಿ ವಸೂಲು ಮಾಡಬಾರದು.

೨. ತೂಕದಲ್ಲಿ ಮೋಸ ಮಾಡಬಾರದು.

೩. ಪಡೆದ ಗೇಣಿಗೆ ರಸೀದಿ ಕೊಡಬೇಕು.

೪. ಪದೇ ಪದೇ ಗೇಣಿದಾರರನ್ನು ಬದಲಾಯಿಸಬಾರದು ಮೊದಲಾದವು ರೈತ ಸಂಘದ ಬೇಡಿಕೆಗಳಾಗಿದ್ದವು. ಆದರೆ ಭೂಮಾಲೀಕರು ಈ ಬೇಡಿಕೆಗಳ ಬಗ್ಗೆ ನಿಷ್ಠುರವಾಗಿದ್ದರು.[೫]

ಹೋರಾಟದ ನಡೆ

೧೯೫೧ರ ಏಪ್ರಿಲ್ ೧೬ರಂದು ಕಾಗೋಡು ಸಮೀಪದ ತಡಗಳಲೆಯಲ್ಲಿ ಭೂಮಾಲೀಕರು ತಮ್ಮ ಭೂಮಿಯನ್ನು ಉಳಲು ಬಂದ ಗೇಣಿದಾರನ್ನು ತಡೆದು ಅವರ ನೊಗ-ನೇಗಿಲುಗಳನ್ನು ಕಸಿದು ಕೊಚ್ಚಿ ಹಾಕಿದರು. ಮಾರನೇಯ ದಿನ ತುಂಡಾದ ನೇಗಿಲುಗಳನ್ನು ಹಿಡಿದು ರೈತ ಗೇಣಿದಾರರು ಸಾಗರದ ಪೇಟೆಯಲ್ಲಿ ಬೃಹತ್ ಮೆರವಣಿಗೆ ನಡೆಸಿದರು.

ಆ ಕಾಲದಲ್ಲಿ ಭೂ ಒಡೆಯರಾಗಿದ್ದ ಕಾಗೋಡಿನ ಕೆ.ಜಿ. ಒಡೆಯರ್ ಅವರ ಜಮೀನಿನಲ್ಲಿಯೇ ಚಳವಳಿ ಪ್ರಾರಂಭಿಸಿದರು. ಗಣಪತಿಯಪ್ಪ ಅವರ ನೇತೃತ್ವದಲ್ಲಿ ೧೯೫೧ ಏಪ್ರಿಲ್ ೧೮ರಂದು ಸಾವಿರಾರು ಗೇಣಿದಾರರು ಮೆರವಣಿಗೆಯಲ್ಲಿ ಬಂದು ಒಡೆಯರ್ ಅವರ ಜಮೀನಿಗೆ ನುಗ್ಗಿದರು. ಘೋಷಣೆ ಕೂಗಿದರು. ಬೇಲಿ ಕಿತ್ತೆಸೆದು ನೆಲ ಉತ್ತರು. ಆದರೆ ಹಿಂಸೆಗೆ ಇಳಿಯಲಿಲ್ಲ.

ಸರ್ಕಾರ ಒಡೆಯರ ಪರ ನಿಂತಿತು. ಪೊಲೀಸರು ಗೇಣಿದಾರರ ಮೇಲೆ ಲಾಠಿ ಬೀಸಿದರು. ಬಂಧನ ನಿತ್ಯದ ಮಾತಾಯಿತು. ಜೈಲು ಸೇರುವವರ ಸಂಖ್ಯೆಯು ಹೆಚ್ಚಾಯಿತು. ಆಗಷ್ಟೇ ಆರಂಭವಾಗಿದ್ದ ಸಮಾಜವಾದಿ ಪಕ್ಷದ ಮುಖಂಡರಾದ ಶಾಂತವೇರಿ ಗೋಪಾಲಗೌಡರು, ಗರುಡ, ಶರ್ಮ ಸೀತಾರಾಮ ಅಯ್ಯಂಗಾರ್, ಜಿ.ಆರ್.ಜಿ. ನಗರ್, ಜಿ. ಸದಾಶಿವರಾವ್, ಕೆ.ಜಿ. ಮಹೇಶ್ವರಪ್ಪ, ವೈ.ಆರ್. ಪರಮೇಶ್ವರಪ್ಪ ಮುಂತಾದವರು ಹೋರಾಟಕ್ಕೆ ದುಮುಕಿದರು.[೬] ಈ ಹೋರಾಟ ಲೋಹಿಯಾ ಅವರ ಗಮನ ಸೆಳೆಯಿತು. ೧೯೫೧ರ ಜೂನ್ ೧೩ರಂದು ಸಾಗರಕ್ಕೆ ಬಂದ ಲೋಹಿಯಾ ಸತ್ಯಾಗ್ರಹಿಗಳಿದ್ದ ಜೈಲಿಗೆ ಭೇಟಿ ಕೊಟ್ಟರು. ಅಂದೇ ಸಾಗರದ ಗಾಂಧಿ ಮೈದಾನದಲ್ಲಿ ಭಾಷಣ ಮಾಡಿ ಸರ್ಕಾರ ಮತ್ತು ಭೂ ಮಾಲೀಕರ ನಿಲುವನ್ನು ಖಂಡಿಸಿದರು. ಮರುದಿನ ಕಾಗೋಡಿಗೆ ಹೋಗಿ ಸರ್ಕಾರದ ಆದೇಶ ಉಲ್ಲಂಘಿಸಿ ಭೂಮಿ ಪ್ರವೇಶಿಸಿದರು. ಮಧ್ಯರಾತ್ರಿ ಸಾಗರ ರೈಲು ನಿಲ್ದಾಣದಲ್ಲಿ ಲೋಹಿಯಾ

ಅವರನ್ನು ಬಂಧಿಸಿದರು.[೬] ಅವರ ಜೊತೆಯಲ್ಲಿದ್ದ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಈಶ್ವರಪ್ಪ ಅವರು ಬಂಧನಕ್ಕೆ ಒಳಗಾದರು. ನಂತರ ಕಾಗೋಡಿನಲ್ಲಿ ಧರಣಿನಿರತ ಗೇಣಿದಾರರು ಮತ್ತು ಪೊಲೀಸರು ರೈತರ ಮೇಲೆ ಹಲ್ಲೆ ಮಾಡಿದರು.

ಈ ಗೇಣಿದಾರರು ನಡೆಸುತ್ತಿರುವ ಹೋರಾಟಕ್ಕೆ ರಾಜ್ಯದಾದ್ಯಂತ ವ್ಯಾಪಕ ಬೆಂಬಲ ವ್ಯಕ್ತವಾಯಿತು. ದಾವಣಗೆರೆ, ಕೋಲಾರ, ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ತೀರ್ಥಹಳ್ಳಿ, ದಕ್ಷಿಣಕನ್ನಡ ಜಿಲ್ಲೆಗಳಿಂದ ಸಮಾಜವಾದಿ ಪಕ್ಷದ ಕಾರ್ಯಕರ್ತರು ಮತ್ತು ರೈತರು ಕಾಗೋಡು ಚಳುವಳಿದಾರರಿಗೆ ಬೆಂಬಲ ನೀಡಿ ಕಾಗೋಡಿಗೆ ಬಂದು ಸತ್ಯಾಗ್ರಹ ಮಾಡಿದರು.[೭]

ಸಮಾಜವಾದಿ ನೇತಾರರಾಗಿದ್ದ ಜಯಪ್ರಕಾಶ್ ನಾರಾಯಣ ಅವರು ೧೯೫೧ ಸೆಪ್ಟೆಂಬರ್ ೧೦ರಂದು ಸಾಗರಕ್ಕೆ ಬಂದು ಭಾಷಣ ಮಾಡಿ ಕಾಗೋಡು ಚಳುವಳಿಯನ್ನು ಬೆಂಬಲಿಸಿದರು.[೮] ಹೋರಾಟವು ಶಾಂತವೇರಿ ಗೋಪಾಲಗೌಡರ ಬಂಧನವಾದ ನಂತರ ನಿಂತಿತು. ಆದರೂ ಸುತ್ತಲಿನ ರೈತರನ್ನೆಲ್ಲ ಭಾಗವಹಿಸುವಂತೆ ಮಾಡಿದ ಈ ರೈತ ಹೋರಾಟ ಚರಿತ್ರಾರ್ಹ ಘಟನೆಯಾಗಿದೆ.

ಕಾಗೋಡು ಚಳುವಳಿ ಗೇಣಿದಾರರಿಗೆ ಯಾವುದೇ ಲಾಭ ತರದೇ ವಿಫಲವಾದರೂ ಮುಂದಿನ ಭೂಸುಧಾರಣೆ ಕಾನೂನುಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಮುಂದೆ ಬಂದ ೧೯೫೪, ೧೯೬೧ ಮತ್ತು ೧೯೭೪ರ ಭೂ ಸುಧಾರಣೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಜಾರಿಗೆ ತರಲಾಯಿತು. ಅನಂತರ ಕರ್ನಾಟಕದಲ್ಲಿ ಗೇಣಿಪದ್ಧತಿ ಸಂಪೂರ್ಣವಾಗಿ ತೊಡೆದು ಹಾಕಿ ಉಳುವವನೇ ನೆಲದೊಡೆಯನಾದನು.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತ ಹೋರಾಟ

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಹೋರಾಟವು ಸಹ ದಾವಣಗೆರೆ ಪ್ರದೇಶಕ್ಕೆ ನೇರವಾಗಿ ಸಂಬಂಧಿಸಿಲ್ಲವಾದರೂ ಅಲ್ಲಿನ ರೈತ ಹೋರಾಟಕ್ಕೆ ಈ ಪ್ರದೇಶದ ರೈತರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಮಲಪ್ರಭಾ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಹುಟ್ಟಿ ಸವದತ್ತಿ, ರಾಮದುರ್ಗ, ನರಗುಂದ ತಾಲ್ಲೂಕುಗಳಲ್ಲಿ ಹರಿದು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮದಲ್ಲಿ ಕೃಷ್ಣಾನದಿಗೆ ಸೇರುತ್ತದೆ. ಮಲಪ್ರಭಾ ಜಲಾಶಯ ಯೋಜನೆಗೆ ೧೯೬೦ರಲ್ಲಿಯೇ ಶಂಕುಸ್ಥಾಪನೆಯಾಗಿ ನಿರ್ಮಾಣ ಪ್ರಾರಂಭವಾಯಿತು. ೧೯೬೭ರಲ್ಲಿ ಪ್ರತ್ಯೇಕ ಉತ್ತರ ಕರ್ನಾಟಕ ನೀರಾವರಿ ವಿಭಾಗವನ್ನು ತೆರೆಯುವವರೆಗೆ ಈ ನಿರ್ಮಾಣ ಕಾರ್ಯ ನಿಧಾನಗತಿಯಲ್ಲಿ ಸಾಗಿ ಬಂದಿತು. ಮಲಪ್ರಭಾ ಅಚ್ಚುಕಟ್ಟು ಪ್ರದೇಶ ನಿರಂತರ ಮಳೆ ಅಭಾವದ ಬರಪೀಡಿತ ಪ್ರದೇಶವಾಗಿತ್ತು. ಇಲ್ಲಿನ ರೈತರು ಸಾಂಪ್ರದಾಯಿಕವಾಗಿ ವರ್ಷದ ಒಂದು ಬೆಳೆಯಾಗಿ ಜೋಳ ಮತ್ತು ಹತ್ತಿ ಹಾಗೂ ಅವೆರಡರ ಮಿಶ್ರ ಬೆಳೆಯನ್ನು ಬಹುತೇಕ ಸ್ವಂತ ಸಂಪನ್ಮೂಲದಿಂದ ಪಡೆಯುತ್ತಿದ್ದರು. ಈ ಪ್ರದೇಶ ಕಪ್ಪು ಮಣ್ಣಿನ ಪ್ರದೇಶವಾಗಿ ಹತ್ತಿ ಬೆಳೆಯಲು ಕೆಲಮಟ್ಟಿಗೆ ಸಕಾಲಿಕ ಮಳೆಯನ್ನಷ್ಟೇ ಬಯಸುತ್ತಿದ್ದ ರೈತರ ನೆಲೆಯಾಗಿತ್ತು. ೫-೧೦ ಎಕರೆಯಷ್ಟು ಹಿಡುವಳಿಯು ಸಣ್ಣದೆನ್ನುವಷ್ಟು ಇಲ್ಲಿನ ಬಹುತೇಕ ದೊಡ್ಡ ಹಿಡುವಳಿ ವಿಸ್ತಾರವಿತ್ತು.

ಮಲಪ್ರಭಾ ಯೋಜನೆಯಿಂದ ನರಗುಂದ, ನವಲುಗುಂದ, ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳ ಕೆಲವು ಹಳ್ಳಿಗಳಿಗೆ ನೀರಾವರಿ ಸೌಲಭ್ಯವಾಯಿತು. ಈ ಮೂರು ಜಿಲ್ಲೆಗಳ ಬರಗಾಲ ಪೀಡಿತ ತಾಲ್ಲೂಕುಗಳಿಗೆ ವರದಾನವಾಗುವುದೆಂದು ಹಿಂದೆ ನಂಬಿದ್ದರೂ ಈಗ ಈ ಯೋಜನೆ ವರದಾನಕ್ಕಿಂತ ಹೆಚ್ಚಾಗಿ ಶಾಪವಾಗಿದೆ ಎಂದು ತಿಳಿದು ರೈತರು ೧೯೮೦ರಲ್ಲಿ ಹೋರಾಟ ನಡೆಸಿದರು.

ಮಲಪ್ರಭಾ ರೈತರ ಚಳುವಳಿಯು ಮುಖ್ಯವಾಗಿ ಹೊಸದಾಗಿ ನಾಲೆಗೆ ಮಾಡಲಾದ ವೆಚ್ಚವನ್ನು 'ಅಭಿವೃದ್ಧಿ ಕಂದಾಯ'ವನ್ನು (ಬೆಟರ್‌ಮೆಂಟ್ ಲೆವಿ) ನಾಲೆ ಚಾಲ್ತಿಗೆ ಬಂದ ವರ್ಷದ ಹಿಂದಿನ ಅವಧಿಗೂ ವಿಸ್ತರಿಸಿದ ಸಂದರ್ಭದಲ್ಲಿ ಹೆಚ್ಚು ತೀವ್ರಗೊಂಡಿತ್ತು.

ಎಂ.ವಿ. ನಾಡಕರ್ಣಿಯವರು ವಿವರಿಸಿದ ಹಾಗೆ ರೈತರಿಗೆ "ವರಲಕ್ಷ್ಮೀ" ಎನ್ನುವ ಹೆಚ್ಚುವರಿ ಇಳುವರಿ (ಹೈಬ್ರಿಡ್) ಬೀಜವನ್ನು ಉಪಯೋಗಿಸಲು ೧೯೭೦ರ ದಶಕದಲ್ಲಿ ಪ್ರೋತ್ಸಾಹಿಸಲಾಯಿತು. ಈ ಕಾರಣಕ್ಕಾಗಿಯೇ ರೈತರು ದುಬಾರಿ ಬೆಲೆಯ ಗೊಬ್ಬರಗಳನ್ನು ಹಾಗೂ ಕೀಟನಾಶಕಗಳನ್ನು ಉಪಯೋಗಿಸಬೇಕಾಯಿತು. ಆರಂಭದಲ್ಲಿ ಈ ಹತ್ತಿಗೆ ಒಳ್ಳೆಯ ಬೆಲೆ ಬಂದಾಗ ಹೆಚ್ಚಿನ ರೈತರು 'ವರಲಕ್ಷ್ಮಿ' ಹತ್ತಿಯನ್ನೇ ಬೆಳೆಯಲಾರಂಭಿಸಿದರು. ಆದರೆ ದುರಂತ ಆರಂಭವಾದದ್ದೇ ಹತ್ತಿಯ ಬೆಲೆ ವಿಪರೀತವಾಗಿ ಕುಸಿಯಲು ಶುರುವಾದಾಗ. ೧೯೭೪-೭೫ರಲ್ಲಿ ಒಂದು ಕ್ವಿಂಟಾಲ್ ವರಲಕ್ಷ್ಮಿ ಹತ್ತಿಗೆ ರೂ ೧.೦೦೦ರೂ ಇದ್ದರೆ ೧೯೭೯-೮೦ಕ್ಕೆ ಅದು ರೂ ೩೫೦ರೂಗಳಿಗೆ ಇಳಿಯಿತು.[೧೦] ಇದರಿಂದಾಗಿ ರೈತರ ಜಂಘಾಬಲವೇ ಉಡುಗಿ ಹೋಯಿತು.

ಹೋರಾಟದ ಆರಂಭ

ಈ ಹೋರಾಟ ಆರಂಭವಾದದ್ದು ಪೊಲೀಸ್ ಗೋಲಿಬಾರ್‌ನಿಂದ. ಜುಲೈ ೨೧, ೧೯೮೦ರಂದು ನವಲುಗುಂದ ಮತ್ತು ನರಗುಂದದ ರೈತರು ತಹಶೀಲ್ದಾರರಿಗೆ ಮನವಿ ಸಲ್ಲಿಸಲು ಹೋಗಿದ್ದ ಸಮಯದಲ್ಲಿ ಪೊಲೀಸರು ನಡೆಸಿದ ದೌರ್ಜನ್ಯ ಮತ್ತು ಗೋಲಿಬಾರ್‌ನೊಂದಿಗೆ ರೈತ ಹೋರಾಟ ಅಂಕುರಿಸಿತ್ತು.[೧೧] ರೈತರ ಈ ಘಟನೆಯು ಬಹುಶಃ ಎಂದೂ ಕಾಣದ ರೀತಿಯಲ್ಲಿ ಪ್ರಾದೇಶಿಕ ಬೇಡಿಕೆಗಳನ್ನು ಸದೃಶ ರೀತಿಯಲ್ಲಿ ಒಟ್ಟುಗೂಡಿಸಿ ನಿರಂತರ ಪ್ರತಿಕ್ರಿಯೆಯನ್ನುಂಟುಮಾಡಿತ್ತು. ರೈತರ "ವರ್ಗಕ್ಕಾಗಿ ವರ್ಗ" ಪ್ರಜ್ಞೆಯ ಈ ಹೋರಾಟವು ಕೆಲವು ದಿನಗಳ ಮೊದಲೇ ಮಾಡಿತ್ತು. ಏಪ್ರಿಲ್ ೧೯೮೦ರಲ್ಲಿ ನವಲುಗುಂದ ರೈತರು ಮಲಪ್ರಭಾ ಸಮನ್ವಯ ಸಮಿತಿಯಡಿಯಲ್ಲಿ ಅಂದಿನ ಮುಖ್ಯಮಂತ್ರಿಗಳಿಗೆ ಮನವಿಯ ಪಟ್ಟಿಯನ್ನು ಸಲ್ಲಿಸಿದರು. ಇದರಲ್ಲಿ ಬೆಟರ್‌ಮೆಂಟ್‌ಲೆವಿ (ಅಭಿವೃದ್ಧಿ ತೆರಿಗೆ) ಹಾಗೂ ನೀರಿನ ಕಂದಾಯ ಮುಖ್ಯವಾಗಿದ್ದವು.

ರೈತರ ಹೋರಾಟದ ಪ್ರಥಮ ಹಂತವು ರೈತರ ಸಮಸ್ಯೆಗಳನ್ನು ಅಭ್ಯಸಿಸಲು ತಜ್ಞರ ಸಮಿತಿಯನ್ನು ನೇಮಿಸುವ ಮುಖ್ಯಮಂತ್ರಿಗಳ ಆಶ್ವಾಸನೆಯೊಂದಿಗೆ ಮುಕ್ತಾಯವಾಯಿತು.[೧೨]

ಎರಡನೇ ಹಂತದ ಹೋರಾಟವು ಅಸಹಕಾರ ಚಳುವಳಿ, ನೀರಿನ ತೆರಿಗೆ ಹಾಗೂ ಸರಕಾರಕ್ಕೆ ನೀಡುವ ತೆರಿಗೆಯನ್ನು ನಿರಾಕರಿಸುವುದರೊಂದಿಗೆ ಆರಂಭವಾಯಿತು. ಈ ಹಂತದಲ್ಲಿ ಅಭಿವೃದ್ಧಿ ತೆರಿಗೆ ಮತ್ತು ನೀರಿನ ಕರ ಬೇಡಿಕೆಗಿಂತಲೂ ಭೂ ಕಂದಾಯ ವಿಷಯಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಜೂನ್ ೨೦, ೨೧ ಮತ್ತು

೨೪, ೧೯೮೦ರಂದು ಬೃಹತ್ ರ್‍ಯಾಲಿಗಳು ನಡೆದವು. ಇದರಲ್ಲಿ ೧೩.೦೦೦ ರೈತರು ಭಾಗವಹಿಸಿದ್ದರು.[೧೩] ಇದೇ ಕಾಲದಲ್ಲಿ ನರಗುಂದ ರೈತರು ರೈತ ಮತ್ತು ಕೂಲಿಕಾರರ ಸಂಘವನ್ನು ರಚಿಸಿ ಹೋರಾಟಕ್ಕಿಳಿದರು.[೧೪] ಈ ಸಂಘಟನೆಯನ್ನು ನವಲುಗುಂದ ರೈತ ಸಂಘಟನೆಯಂತೆಯೇ ಮಾಡಲಾಗಿತ್ತು. ಕೃಷಿ ಕಾರ್ಮಿಕರ ಯಾವ ಬೇಡಿಕೆಯನ್ನು ಕೂಡ ಮುಂದಿಡಲಿಲ್ಲ. ಈ ನರಗುಂದದ ರೈತರು ನವಲುಗುಂದದ ರೈತರ ಪರವಾಗಿ ಉಪವಾಸ ಸತ್ಯಾಗ್ರಹವನ್ನು ಹೂಡಿದರು. ನವಲುಗುಂದದಲ್ಲಿ ಉಪವಾಸ ಸತ್ಯಾಗ್ರಹ, ಮೆರವಣಿಗೆ, ಬಂದ್ ಪಾದಯಾತ್ರೆ, ರಸ್ತೆ ತಡೆ ಮೊದಲಾದವುಗಳ ಮೂಲಕ ಚಳುವಳಿ ಉಗ್ರ ಸ್ವರೂಪ ಪಡೆಯಿತು. ಇದಕ್ಕೆ ಸರಿಯಾಗಿ ಸವದತ್ತಿ, ರಾಮದುರ್ಗದ ರೈತರು ಚಳುವಳಿಯನ್ನು ಆರಂಭಿಸಿದರು. ತದನಂತರ ಈ ನಾಲ್ಕು ತಾಲ್ಲೂಕುಗಳನ್ನೊಳಗೊಂಡ ಕೇಂದ್ರ ಸಮಿತಿಯ ಉದ್ಘಾಟನೆಯೊಂದಿಗೆ ಹೋರಾಟಕ್ಕೆ ಹೊಸ ಆಯಾಮ ಸಿಕ್ಕಿತು. ಜುಲೈ ೨೧, ೧೯೮೦ರಲ್ಲಿ ನರಗುಂದ, ನವಲುಗುಂದ ಮತ್ತು ಸವದತ್ತಿ ಬಂದ್‌ಗೆ ಕರೆ ಕೊಡಲಾಯಿತ್ತು.

ಸಾವಿರಾರು ಜನರು ತಹಶೀಲ್ದಾರರ ಕಛೇರಿಯನ್ನು ಜುಲೈ ೨೧ರಂದು ಮುಚ್ಚಲು ಒತ್ತಾಯಿಸುತ್ತಿದ್ದರು. ತಹಶೀಲ್ದಾರ್ ರೈತರ ಒತ್ತಾಯಕ್ಕೆ ಕಿವಿಗೊಡಲಿಲ್ಲ. ಅವರ ಕಛೇರಿಗೆ ಹೋಗುವ ರಸ್ತೆಯಲ್ಲೆಲ್ಲ ರೈತರು ಉದ್ದಕ್ಕೆ ಮಲಗಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದರೆ ತಹಶೀಲ್ದಾರ್ ಅವರನ್ನೆಲ್ಲ ತನ್ನ ಬೂಟುಗಾಲಿನಿಂದ ತುಳಿದು ಕಛೇರಿಗೆ ಹೋಗಲು ಪ್ರಯತ್ನಿಸಿದ. ಆಗ ಸಹನೆ ಕಳೆದುಕೊಂಡ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ರೈತರನ್ನು ಹೆದರಿಸಿ, ಚದುರಿಸಲು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಒಬ್ಬ ಯದ್ವಾ ತದ್ವಾ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಿದ. ಈರಪ್ಪ ಬಸಪ್ಪ ಕಡ್ಡಿಕೊಪ್ಪ ಎಂಬ ೨೪ ವರ್ಷದ ರೈತ[೧೫] ಸ್ಥಳದಲ್ಲೇ ಪೊಲೀಸ್ ಗೋಲಿಬಾರ್‌ನಿಂದ ಮರಣ ಹೊಂದಿದ.

ನವಲುಗುಂದದಲ್ಲಿ ಸಹ ಇದೇ ದಿನ ತಹಶೀಲ್ದಾರರು ತಮ್ಮ ಕಛೇರಿಯ ಮುಂದೆಯೇ ರೈತರ ಸಭೆ ನಡೆಸಲು ಅವಕಾಶ ಮಾಡಿಕೊಟ್ಟರು. ಸಭೆ ನಡೆಯುತ್ತಿರುವಾಗ ಯಾರೋ ಕಿಡಿಗೇಡಿಗಳು ರೈತರ ಟ್ರ್ಯಾಕ್ಟರ್‌ಗಳನ್ನು ಹಾಳು ಮಾಡುತ್ತಿದ್ದಾರೆಂಬ ಸುದ್ದಿ ಹರಡಿದ ಕಾರಣ ರೈತರು ತಮ್ಮ ಟ್ರ್ಯಾಕ್ಟರ್‌ಗಳಿದ್ದ ಕಡೆ ನುಗ್ಗಿದ್ದರು. ಅವರ ರೋಷ ನೀರಾವರಿ ಇಲಾಖೆ ಕಛೇರಿಯತ್ತ ತಿರುಗಿ ಕಛೇರಿಯನ್ನು ಧ್ವಂಸ ಮಾಡಿದರು. ಪೊಲೀಸರು ಆಗ ಮಾಡಿದ ಲಾಠಿಚಾರ್ಜ್ ಹಾಗೂ ಆಶ್ರುವಾಯು ಪ್ರಯೋಗ ಕೂಡ ರೈತರನ್ನು ಚದುರಿಸಲು ವಿಫಲವಾದಾಗ ಪೊಲೀಸರು ಗುಂಡು ಹಾರಿಸಿದರು. ಆಗ ಬಸಪ್ಪ ಲಕ್ಕುಂಡಿ ಎಂಬ ಯುವಕ[೧೬] ಗೋಲಿಬಾರ್‌ನಿಂದ ಮರಣ ಹೊಂದಿದ.

ಈ ಗೋಲಿಬಾರ್ ಘಟನೆಗಳ ನಂತರ ಚಳುವಳಿ ಹೆಚ್ಚು ಹಿಂಸಾತ್ಮಕ ರೂಪ ಪಡೆಯಿತು. ೧೯೮೦ ಜುಲೈ ೨೧ರಿಂದ ೨೪ರ ನಡುವೆ ಪೊಲೀಸರ ಗೋಲಿಬಾರ್‌ನಿಂದ ೧೮ ಮಂದಿ ರೈತರು[೧೭] ಮರಣ ಹೊಂದಿದರು.

ಈ ಹೋರಾಟ ಕರ್ನಾಟಕದ ರೈತ ವಲಯ ಹಾಗೂ ರಾಜಕೀಯ ವಲಯದಲ್ಲಿ ಕ್ರಾಂತಿಕಾರಕ ಪ್ರಭಾವವನ್ನುಂಟುಮಾಡಿತ್ತು. ದಾವಣಗೆರೆ ಪ್ರದೇಶದಲ್ಲಿ ರೈತರ ಮೇಲಿನ ಗೋಲಿಬಾರ್, ಗೊಬ್ಬರ ಬೆಲೆ ಏರುತ್ತಿರುವ ಬೆಲೆಗಳು ರೈತ ವಿರೋಧಿ ನೀತಿಯನ್ನು ಖಂಡಿಸಿ ಪ್ರದೇಶ ರೈತ ಸಂಘವು ಎಂ.ಎಸ್. ಕುಮಾರ ಶಾಸ್ತ್ರಿಯವರ ನೇತೃತ್ವದಲ್ಲಿ ತಹಶೀಲ್ದಾರ ಕಛೇರಿಗೆ ಮನವಿ ಪತ್ರ ಕೊಡುವುದರ ಮೂಲಕ ದಾವಣಗೆರೆ ಬಂದ್‌ಗೆ

ಕರೆ ನೀಡಲಾಯಿತು.[೧೮] ಈ ರೀತಿ ದಾವಣಗೆರೆ ಪ್ರದೇಶದ ನರಗುಂದ ಮತ್ತು ನವಲುಗುಂದ ಪ್ರದೇಶದ ರೈತರಿಗೆ ಸಹಕಾರ ನೀಡಿದರು. ದಾವಣಗೆರೆ ಪ್ರದೇಶದ ಜೊತೆಗೆ ಗದಗ, ಬೆಟಗೇರಿ, ಬಿಜಾಪುರ, ಕೊಪ್ಪಳ, ಚಿತ್ರದುರ್ಗ, ಅಂಕೋಲ, ಕುಮಟಾ, ಶಿರಸಿ ಮತ್ತು ರಾಯಚೂರು ಮುಂತಾದ ನಗರಗಳಲ್ಲಿ ಚಳುವಳಿ ಹರಡಿತು.[೧೯] ಈ ರೀತಿಯ ರೈತರ ತೀವ್ರ ಪ್ರತಿಭಟನೆಗೆ ಮಣಿದು ಸರ್ಕಾರವು ೧೯೮೦ರ ಜುಲೈ ೩೦ರಂದು ೮೫ ಕೋಟಿ ರೂಪಾಯಿಗಳ ಮಧ್ಯಂತರ ಪರಿಹಾರವನ್ನು ನೀಡಲು ಒಪ್ಪಿತ್ತು. ಅಲ್ಲದೇ ಮುಂದಿನ ವರದಿ ಬರುವವರೆಗೆ ಅಭಿವೃದ್ಧಿ ಕಂದಾಯ ಹಾಗೂ ನೀರಿನ ಕಂದಾಯಗಳನ್ನು ತಾತ್ಕಾಲಿಕವಾಗಿ ಮನ್ನಾ ಮಾಡಲಾಯಿತು. ಗೊಬ್ಬರಗಳ ಮೇಲಿನ ಮಾರಾಟ ತೆರಿಗೆಯನ್ನು ಶೇ. ೭ರಿಂದ ಶೇ. ೨ಕ್ಕೆ ಇಳಿಸಲಾಯಿತು. ಇದರೊಂದಿಗೆ ರೈತರ ಸಮಸ್ಯೆಗಳನ್ನು ಶೀಘ್ರವೇ ಪರಿಹಾರ ಮಾಡಲು ವಿವಿಧ ಸಮಿತಿಗಳ ನೇಮಕ ಮಾಡಲಾಯಿತು.

"ಪ್ರೋಗ್ರೆಸಿವ್ ಡೆಮಾಕ್ರೆಟಿಕ್ ಫ್ರಾಂಟ್" (ಪಿ.ಡಿ.ಎಫ್) ಎನ್ನುವ ಸಂಘಟನೆಯು ೧೨ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನರಗುಂದದಿಂದ ಬೆಂಗಳೂರಿನವರೆಗೆ (ಅಂದರೆ ೫೫೦ ಕಿ.ಮೀ. ವರೆಗೆ) ಸುದೀರ್ಘ ಪಾದಯಾತ್ರೆಯನ್ನು "ಮಲಪ್ರಭಾ ಹುತಾತ್ಮರ ದೀವಟಿಗೆ"ಯೊಂದಿಗೆ ೧೯೮೧ರ ಜನವರಿ ೧೬ರಂದು ಆರಂಭಿಸಿತು.[೨೦] ಈ ಜಾಥಾದಲ್ಲಿ ರೈತರು ಮತ್ತು ಕೃಷಿಕಾರ್ಮಿಕರು ಭಾಗವಹಿಸಿದ್ದರು. ಕೈಗಾರಿಕಾ ವಲಯಗಳಲ್ಲಿ ಕಾರ್ಮಿಕರು ರೈತರಿಗೆ ಊಟದ ವ್ಯವಸ್ಥೆ ಮಾಡಿದರು. ನರಗುಂದದಿಂದ ಬೆಂಗಳೂರು ಮಾರ್ಗದಲ್ಲಿ ರಾಣೆಬೆನ್ನೂರು ಹರಿಹರ, ದಾವಣಗೆರೆ, ಆನಗೋಡು, ಭರಮಸಾಗರ, ಚಿತ್ರದುರ್ಗ ಇವು ಜಾಥಾ ಹೋಗುವ ಮಾರ್ಗಗಳಾಗಿದ್ದವು. ಈ ಜಾಥಾವು ದಾವಣಗೆರೆ ಪ್ರದೇಶದ ಹರಿಹರ, ದಾವಣಗೆರೆ, ಆನಗೋಡು ಮಾರ್ಗಗಳಲ್ಲಿ ಸಭೆ, ರ್‍ಯಾಲಿಗಳನ್ನು ನಡೆಸಿ ರೈತರಲ್ಲಿ ಜಾಗೃತಿ ಮೂಡಿಸಿದವು. ರೈತರು ಭಾಗವಹಿಸಿದ ಜಾಥಾವು ೧೯೮೧ರ ಫೆಬ್ರವರಿ ೫ರಂದು ಬೆಂಗಳೂರಿಗೆ ತಲುಪಿತು.

೧೯೮೦ ದಶಕದಿಂದ ನಡೆದ ಹೋರಾಟಗಳು

೫.೩.೧ ೧೯೮೧ರ ರಸ್ತೆ ತಡೆ ಚಳುವಳಿ

ಕರ್ನಾಟಕ ರಾಜ್ಯರೈತ ಸಂಘವು ದಾವಣಗೆರೆ ಪ್ರದೇಶದ ರೈತರ ವಿವಿಧ ಬೇಡಿಕೆಗಳಾದ ಕೆಳ ಹಾಗೂ ಮಧ್ಯಮ ವರ್ಗದ ರೈತರ ಸಾಲ ಮನ್ನಾ, ಶೇ. ೬ರಂತೆ ಕೃಷಿಕರಿಗೆ ಸಾಲ, ಕೃಷಿ ಕಾರ್ಮಿಕರಿಗೆ ರೂ. ೧೦ ಕನಿಷ್ಠ ವೇತನ, ಕಬ್ಬಿನ ಬೆಂಬಲ ಬೆಲೆ, ಭತ್ತ, ಶೇಂಗಾ, ಹತ್ತಿ ಬೆಳೆಗಳ ಬೆಲೆ ಏರಿಕೆ ಮಾಡುವಂತೆ ಆಗ್ರಹಿಸಿ ೧೯೮೧ ಏಪ್ರಿಲ್ ತಿಂಗಳಲ್ಲಿ ದಾವಣಗೆರೆಯಲ್ಲಿ ರಸ್ತೆ ತಡೆಗಟ್ಟಿದರು.[೨೧] ಬೆಂಗಳೂರು, ಹುಬ್ಬಳ್ಳಿ ಶಿವಮೊಗ್ಗದ ಕಡೆಗಳಿಂದ ಬರುವ ಬಸ್ಸು, ಲಾರಿ, ವಾಹನಗಳನ್ನು ತಡೆಯುವುದರ ಮೂಲಕ ಹೋರಾಟ ಮಾಡಿದರು. ರಸ್ತೆ ತಡೆ ನಡೆದಿದ್ದರಿಂದ ನಗರದ ಜನಜೀವನದ ಮೇಲೆ ಪರಿಣಾಮ ಉಂಟಾಯಿತು. ತರಕಾರಿ ಮುಂತಾದ ತೀರಾ ಅವಶ್ಯಕವಾದ ವಸ್ತುಗಳು ನಗರಕ್ಕೆ ಬರಲಿಲ್ಲ. ಈ ಹೋರಾಟದ ಬಿಸಿ ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಿಗೆ ವ್ಯಾಪಿಸಿತು.

ಅಂದು ಬಳ್ಳಾರಿ ಜಿಲ್ಲೆಗೆ ಸೇರಿದ್ದ ಹರಪನಹಳ್ಳಿ ಇಂದು ದಾವಣಗೆರೆ ಪ್ರದೇಶಕ್ಕೆ ಸೇರಿದೆ. ೧೯-೯-೧೯೮೩ರಂದು ರೈತರ ಜಾಥಾ ಕೋಮಾರ್ನಹಳ್ಳಿ ತಾಂಡಾದಲ್ಲಿ ಭೂ ಆಕ್ರಮಣ ಮಾಡಿದರು. ಆಗ ೧೦೦ ಜನರ ಬಂಧನವಾಯಿತು.

ಇದರ ವಿರುದ್ಧ ೩-೬-೮೩ರಂದು ಹೂವಿನ ಹಡಗಲಿಯಿಂದ ಬಂದ ಲಂಬಾಣಿಗಳು ೬೦ ಕಿ.ಮೀ. ಕಾಲು ನಡಿಗೆ ಜಾಥಾದಲ್ಲಿ ಪ್ರತಿಭಟನೆ ನಡೆಸಲು ಬಂದರು. ೪೦೦ ಜನ ರೈತರು ಸರ್ಕಾರದ ವಿರುದ್ಧ ಹರಪನಹಳ್ಳಿಯಲ್ಲಿ ಜಾಥಾ ನಡೆಸಿದರು.[೨೨] ಈ ಜಾಥಾದ ನೇತೃತ್ವನ್ನು ವೆಂಕಟೇಶ, ಹಳಕಟ್ಟಿ, ಪರಶುರಾಂ ವಹಿಸಿಕೊಂಡಿದ್ದರು.

೧೯೮೨ರ ಕರ್ನಾಟಕದ ಮೊಟ್ಟಮೊದಲ ರೈತ ಸಮ್ಮೇಳನ

ಕರ್ನಾಟಕ ರಾಜ್ಯ ರೈತ ಸಂಘದ ಹೋರಾಟ ಸಮಿತಿಯ ಸಂಚಾಲಕರಾಗಿದ್ದ ನಂಜುಂಡಸ್ವಾಮಿ ಅವರು ೧೯೮೨ರಲ್ಲಿ ರಾಜ್ಯದಾದ್ಯಂತ ರೈತರನ್ನು ಸಂಘಟನೆ ಮಾಡಲು ಪ್ರಯತ್ನಿಸಿದರು. ಈ ಬಗೆಯಲ್ಲಿ ಅದನ್ನು ಐತಿಹಾಸಿಕ ರ್‍ಯಾಲಿಯಂದೇ ಗುರುತಿಸಲಾಗಿದೆ. ಅದು ಕರ್ನಾಟಕದ ಮೊಟ್ಟ ಮೊದಲ ಬೃಹತ್ ರೈತ ಸಮಾವೇಶ ಆಗಿತ್ತು. ಈ ಸಮಾವೇಶದಲ್ಲಿ ದಾವಣಗೆರೆ ಪ್ರದೇಶದಿಂದ ಕರ್ನಾಟಕ ರೈತ ಸಂಘದ ಎಂ.ಎಸ್.ಕೆ. ಶಾಸ್ತ್ರಿ, ಆನಗೋಡು ನಂಜುಂಡಪ್ಪ ಸೇರಿದಂತೆ ಹಲವರು ಹೋರಾಟಗಾರರು ಭಾಗವಹಿಸಿದ್ದರು.[೨೩] ಇದರಲ್ಲಿ ರೈತ ಸಂಘದ ಆಶೋತ್ತರಗಳನ್ನು ಬಿಂಬಿಸಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಜನ ೧೯೮೨ ಅಕ್ಟೋಬರ್ ೨ ಗಾಂಧೀ ಜಯಂತಿಯಂದು "ಹೊಸ ಕರ್ನಾಟಕ ಕಟ್ಟಲು" ಎಂಬ ಘೋಷಣೆಯೊಂದಿಗೆ ಪ್ರತಿಜ್ಞೆ ಮಾಡಿದರು. ೩೫.೦೦೦ ರೈತರನ್ನು ಈ ಸಮಾವೇಶದಲ್ಲಿ ಬಂಧಿಸಲಾಗಿತ್ತು.[೨೪] ಹೊಸ ಕರ್ನಾಟಕ ಕಟ್ಟಲು ಅಂದರೆ ಗ್ರಾಮೀಣ ಪ್ರದೇಶದ ಬಡವರ ಹಾಗೂ ರೈತರ ಆಶೋತ್ತರಗಳನ್ನು ಪ್ರತಿನಿಧಿಸಲು ಸರ್ಕಾರವನ್ನು ರಚಿಸುವುದು ಎಂದರ್ಥ.

ಕರ್ನಾಟಕದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷಾತೀತವಾದ ಮತದಾರರ ವೇದಿಕೆಯನ್ನು ಸ್ಥಾಪಿಸಬೇಕೆಂಬುದು ಈ ಸಮ್ಮೇಳನದ ಉದ್ದೇಶವಾಗಿತ್ತು.

೧೯೮೮ರ ಪಿಕೆಟಿಂಗ್ ಚಳುವಳಿ

೧೯೮೮ ಜೂನ್ ೧೮ರಂದು ಪ್ರಾಂತ ರೈತ ಸಂಘವು ರಾಜ್ಯಾದ್ಯಂತ ಪಿಕೆಟಿಂಗ್ ಚಳುವಳಿ ನಡೆಸಿತ್ತು.[೨೫] ರೈತ ಬೇಡಿಕೆಗಳಾದ ಅಕ್ರಮ ಸಾಗುವಳಿ ಮಾಡಿದವರಿಗೆ ಭೂಮಿ ಸಕ್ರಮಗೊಳಿಸುವುದು. ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿ, ಬಂಜರು ಭೂಮಿ ವಿತರಣೆ, ಅರಣ್ಯ ಭೂಮಿ ಬಿಡುಗಡೆ, ಸಾಲ ತೀರುವಳಿ ಮುಂತಾದ ಬೇಡಿಕೆಗಳ ಮುಂದಿಟ್ಟುಕೊಂಡು ಪಿಕೆಟಿಂಗ್ ಚಳುವಳಿ ಪ್ರಾರಂಭಿಸಿತ್ತು. ಪಿಕೆಟಿಂಗ್ ಅಂದರೆ ಮುಷ್ಕರ ಮಾಡುವುದು ಎಂದರ್ಥ. ದಾವಣಗೆರೆಯಲ್ಲಿ ಅಂಗಡಿಗಳ ಮುಂದೆ ರೈತರು ಮುಷ್ಕರ ಮಾಡಿದರು. ಇದರಿಂದಾಗಿ ಅಂಗಡಿಗಳಿಗೆ ನಷ್ಟವುಂಟಾಯಿತು.

೧೯೯೨ರ ರಸ್ತೆ ತಡೆ ಮತ್ತು ರೈತ ಗೋಲಿಬಾರ್ ಘಟನೆ

೧೯೯೧ರಲ್ಲಿ ಕೇಂದ್ರ ಸರಕಾರವು "ಉದಾರವಾದ"ವನ್ನು ತನ್ನ ಆರ್ಥಿಕ ನೀತಿಯಾಗಿ ರೂಪಿಸಿಕೊಂಡ ಹಿನ್ನೆಲೆಯಲ್ಲಿ ಗೊಬ್ಬರದ ಮೇಲಿನ ಸಬ್ಸಿಡಿಯನ್ನು ನಿಲ್ಲಿಸಿತ್ತು. ಇದರಿಂದಾಗಿ ಗೊಬ್ಬರದ ಬೆಲೆ ಹೆಚ್ಚಾಯಿತು. ಈ ಗೊಬ್ಬರದ ಸಲುವಾಗಿ ರಾಷ್ಟ್ರಾದ್ಯಂತ ರಸ್ತೆ ತಡೆ ಚಳುವಳಿ ಆರಂಭವಾದವು. ಇದರ ಬಿಸಿ ದಾವಣಗೆರೆ ಪ್ರದೇಶದಲ್ಲಿ ಕಂಡುಬಂದಿತ್ತು. ಈ ಪ್ರದೇಶದ ದಾವಣಗೆರೆ, ಹರಿಹರ, ಆನಗೋಡು, ಕೊಂಡಜ್ಜಿ, ಜಗಳೂರು

ಪ್ರದೇಶದಲ್ಲಿ ರಸ್ತೆ ತಡೆ ಚಳುವಳಿ ಆರಂಭವಾದವು. ದಾವಣಗೆರೆ, ಹರಿಹರ ನಗರಗಳಲ್ಲಿ ರಸ್ತೆ ತಡೆ ಚಳುವಳಿಯಿಂದ ಬಂದ್ ಆಚರಿಸಿದರು. ಇದರಿಂದಾಗಿ ನಗರಗಳ ಜನಜೀವನ ಅಸ್ತವ್ಯಸ್ತವಾಯಿತು. ರೈತರ ಹೋರಾಟದ ನೇತೃತ್ವವನ್ನು ಎಂ.ಎಸ್.ಕೆ. ಶಾಸ್ತ್ರಿ, ಎನ್.ಜಿ. ಪುಟ್ಟೇಸ್ವಾಮಿ, ಆವರೆಗೆರೆ ರುದ್ರಮುನಿ ವಹಿಸಿಕೊಂಡಿದ್ದರು.[೨೬]

ಸೆಪ್ಟೆಂಬರ್ ೧೧ರಂದು ಬೆಳಗ್ಗೆ ೯ ಗಂಟೆಯಿಂದ ಪ್ರಾರಂಭವಾದ ರಸ್ತೆ ತಡೆ ಹೋರಾಟವು ಪೂನಾ-ಬೆಂಗಳೂರು ಹೆದ್ದಾರಿ ಸೇರಿದಂತೆ ನಗರಕ್ಕೆ ಬರುವ ಜಗಳೂರು, ಚನ್ನಗಿರಿ, ಹರಿಹರ, ಮಾರ್ಗಗಳಿಂದ ಬರುವ ವಾಹನಗಳನ್ನು ರಸ್ತೆಗಳಲ್ಲಿ ತಡೆದು ರಸ್ತೆಗಳನ್ನು ಬಂದ್ ಮಾಡಿದರು. ಈ ಪ್ರದೇಶದ ರೈತ ಸಮೂಹ ಈ ಮೂಲಕ ಕೇಂದ್ರ ಸರ್ಕಾರ ಒಂದಕ್ಕೆ ಮೂರು ಪಟ್ಟು ರಸಗೊಬ್ಬರ ಬೆಲೆಯೇರಿಸಿದ್ದನ್ನು ವಿರೋಧಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗೆ ವಿರೋಧ ವ್ಯಕ್ತಪಡಿಸಿ ಹೋರಾಟ ಮಾಡಿದರು.[೨೭]

ಆನಗೋಡು ರೈತರ ಗೋಲಿಬಾರ್

ಒಂದು ವಾರದಿಂದ ನಡೆಯುತ್ತಿದ್ದ ರಸ್ತೆ ತಡೆ ಚಳುವಳಿಯು ೧೪-೯-೧೯೯೨ರಂದು ತೀವ್ರತರವಾದ ಸ್ವರೂಪವನ್ನು ಪಡೆದುಕೊಂಡಿತು. ಅಂದು ಬೆಳಗ್ಗೆ ೯.೦೦ ಘಂಟೆಗೆ ರಸ್ತೆ ತಡೆ ಮಾಡುವ ಸಲುವಾಗಿ ಸುತ್ತಮುತ್ತಲಿನ ಗ್ರಾಮಗಳಿಂದ ಸುಮಾರು, ೪ ಸಾವಿರಕ್ಕೂ ಹೆಚ್ಚು ರೈತರು ಪ್ರತಿಭಟನೆಯಲ್ಲಿ ಭಾಗವಹಿಸುವುದರ ಮೂಲಕ ಹೋರಾಟವನ್ನು ತೀವ್ರಗೊಳಿಸಿದರು.

ಅಂದು ಮಧ್ಯಾಹ್ನ ೧೨.೩೦ರ ಸುಮಾರಿಗೆ ಬೆಂಗಳೂರಿನಿಂದ ದಾವಣಗೆರೆಗೆ ಬರುತ್ತಿದ್ದ ದಾವಣಗೆರೆ ಕ್ಷೇತ್ರದ ಶಾಸಕ ಮೋತಿ ವೀರಣ್ಣನವರ ಕಾರನ್ನು ಪ್ರತಿಭಟನೆ ನಿರತ ರೈತರು ತಡೆದರು. ಅಲ್ಲದೆ ಅಲ್ಲಿದ್ದ ಕೆಲ ಕಿಡಗೇಡಿಗಳು ಮೋತಿ ವೀರಣ್ಣನವರ ಕಾರಿಗೆ ಕಲ್ಲು ಹೊಡೆದರು. ಇದರಿಂದ ಕಾರಿನ ಗ್ಲಾಸುಗಳು ಹಾಗೂ ಇತರ ಕಡೆ ಹಾನಿಯಾಯಿತು. ಶಾಸಕರನ್ನು ಸುರಕ್ಷಿತವಾಗಿ ರಕ್ಷಣೆ ಮಾಡಲಾಯಿತು.[೨೭] ಶಾಸಕರ ಮುತ್ತಿಗೆಯನ್ನು ತಡೆದ ಪೊಲೀಸರ ಕ್ರಮದಿಂದಾಗಿ ರೈತರು ಮತ್ತಷ್ಟು ಉಗ್ರವಾಗಿ ಕೋಪಗೊಂಡಿದ್ದರಿಂದ ಪೊಲೀಸರ ಮೇಲೆ ಹಲ್ಲೆ ಮಾಡುವುದಕ್ಕೆ ಪ್ರಾರಂಭಿಸಿದರು. ಸಹನೆ ಕಳೆದುಕೊಂಡ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ರೈತರನ್ನು ಹೆದರಿಸಿ, ಚದುರಿಸಲು ಪೊಲೀಸ್ ಒಬ್ಬ ಯದ್ವಾತದ್ವಾ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಿದ. ಕಲ್ಲಿಂಗಪ್ಪ ಎಂಬ ೫೦ ವರ್ಷದ ರೈತ ಸ್ಥಳದಲ್ಲೇ ಪೊಲೀಸನ ಗುಂಡಿಗೆ ಆಹುತಿಯಾದ.[೨೮] ತೀವ್ರ ಗಾಯಗಳಾದ ನಾಗರಾಚಾಚಾರ್ ಮತ್ತು ತಿಪ್ಪೇರುದ್ರಪ್ಪ ಎಂಬುವವರನ್ನು ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲಿ ೧೬-೦೯-೧೯೯೨ರಂದು ನಾಗರಾಜಾಚಾರ್ ಮರಣ ಹೊಂದಿದನು.[೨೯] ಇವರಿಬ್ಬರನ್ನು ಆನಗೋಡು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಮಾಧಿ ಮಾಡಲಾಯಿತು. ಇವರ ಸ್ಮಾರಕಗಳು ಈಗಲೂ ಆನಗೋಡು ಗ್ರಾಮದಲ್ಲಿವೆ.

ನಂತರ ರೈತರ ಗೋಲಿಬಾರ್‌ನಿಂದಾಗಿ ಪ್ರತಿಭಟನೆ ಶಾಂತವಾಯಿತು. ವಿದ್ವಾಂಸರು ಒಪ್ಪುವ ಹಾಗೆ ಆನಗೋಡು ಘಟನೆಯು ಜರುಗಿದ್ದು ಆಕಸ್ಮಿಕ. ಇದೊಂದು ಪೂರ್ವ ನಿಯೋಜಿತ ಯೋಜನೆ ಏನಲ್ಲ. ಕೆಲವು ಕಿಡಿಗೇಡಿಗಳು ಪರಿಸ್ಥಿತಿಯ ದುರ್ಲಾಭ ಪಡೆದದ್ದು, ನಾಯಕರಿಗೆ ಸಮೂಹದ ಮೇಲೆ ಹತೋಟಿಯಿಲ್ಲದಿರುವುದು ಚಳುವಳಿ

ಹಿಂಸೆಗೆ ತಿರುಗಲು ಕಾರಣವಾಯಿತು. ಹಾಗೆಯೇ ದೂರದರ್ಶಿತ್ವ ಇಲ್ಲದ ರಾಜಕಾರಣಿಗಳು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಪರಿಸ್ಥಿತಿಯನ್ನು ನಿಭಾಯಿಸಲು ವಿಫಲವಾದದ್ದು ಮುಖ್ಯ ಕಾರಣವೆಂದು ಹೇಳಬಹುದು. ತಾ. ೧೦.೯.೧೯೯೨ ರಿಂದ ೧೩.೯.೧೯೯೨ರವರೆಗೆ ರಸ್ತೆ ತಡೆ ಬಂದ್‌ಗಳನ್ನು ಮಾಡುವಾಗ ಸುಮಾರು ಇಬ್ಬರು ರೈತರ ಮರಣದ ಜೊತೆಗೆ ಮತ್ತು ೨೦ಕ್ಕಿಂತಲೂ ಹೆಚ್ಚು ರೈತರು ಗಾಯಗೊಂಡರು. ಗೊಬ್ಬರದ ಜೊತೆಗೆ ಏರುತ್ತಿರುವ ಬೆಲೆಗಳ ವಿರುದ್ಧವೂ ರೈತರ ಆಕ್ರೋಶವಿತ್ತೆಂದು ಹೇಳಲಾಗಿದೆ.

ಮೆಕ್ಕೆಜೋಳ ಬೆಂಬಲ ಬೆಲೆಗೆ ಆಗ್ರಹಿಸಿ ರೈತ ಹೋರಾಟ

ಒಂದು ಕಾಲದಲ್ಲಿ ಹತ್ತಿಯ ಕಣಜವಾಗಿದ್ದ ದಾವಣಗೆರೆ ಪ್ರದೇಶವು ಈಗ ಮೆಕ್ಕೆಜೋಳದ ಕಣಜವಾಗಿದೆ. ಈ ಪ್ರದೇಶದಲ್ಲಿ ಸರಿಸುಮಾರು ೧.೮೬.೮೨೩, ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳವನ್ನು ಬೆಳೆಯಲಾಗುತ್ತದೆ. ಮೆಕ್ಕೆಜೋಳದ ಇಳುವರಿಯು ಅಧಿಕವಾಗಿ ಬೆಲೆಯ ಕುಸಿತದ ಪರಿಣಾಮವಾಗಿ ೧೮-೧೦-೨೦೦೦ರಂದು ದಾವಣಗೆರೆ ಪ್ರದೇಶದ ರೈತರು ಹೋರಾಟಕ್ಕೆ ಕರೆ ನೀಡಿದರು. ಜಿಲ್ಲಾಡಳಿತವು ರೈತರಿಗೆ ಸುಳ್ಳು ಭರವಸೆ ನೀಡಿ ೧೫ ದಿನಗಳಿಂದ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲಾಗಿದೆ[೩೦] ಎಂಬ ಭೋಗಸ್ ನಾಮಫಲಕ ಹಾಕಿದ್ದರಿಂದ ಸಿಟ್ಟುಗೊಂಡ ರೈತರು ಜಿಲ್ಲಾಡಳಿತದ ವಿರುದ್ಧ ಪ್ರತಿಭಟನೆಯನ್ನು ಹಾಕಿಕೊಂಡರು.

ದಾವಣಗೆರೆ ಗಾಂದೀ ಸರ್ಕಲ್‌ನಿಂದ ಪ್ರಾರಂಭವಾದ ಪ್ರತಿಭಟನೆಯಲ್ಲಿ ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.[೩೧] ಸರ್ಕಾರದ ವಿರುದ್ಧ ಆಕ್ರೋಶಗೊಂಡ ರೈತರು ಜಿಲ್ಲಾಧಿಕಾರಿಗಳ ಬ್ಯಾನರ್ ಮತ್ತು ನಾಮಫಲಕಗಳನ್ನು ಬೆಂಕಿಗೆ ಆಹುತಿ ಮಾಡಲು ಮುಂದಾದಾಗ ಮಧ್ಯ ಪ್ರವೇಶ ಮಾಡಿದ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರಿಂದ ಹೋರಾಟವನ್ನು ಸ್ಥಗಿತಗೊಳಿಸಲಾಯಿತು. ಒಂದು ವೇಳೆ ಖರೀದಿ ಕೇಂದ್ರ ತೆರೆಯದಿದ್ದರೆ ಕಾನೂನುಭಂಗ ಚಳುವಳಿಯನ್ನು ನಡೆಸುವ ಕುರಿತು ಜಿಲ್ಲಾಧಿಕಾರಿಗಳಿಗೆ ರೈತರು ಎಚ್ಚರಿಕೆ ನೀಡಿದರು.

ವಿದ್ಯುತ್‌ದರ ಏರಿಕೆ ವಿರುದ್ಧ ಪ್ರತಿಭಟನೆ

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್‌ದರ ಏರಿಕೆ, ಬೆಂಬಲ ಬೆಲೆಯಲ್ಲಿ ವಿಳಂಬ, ಕೃಷಿ ಉತ್ಪನ್ನಗಳ ಖರೀದಿಯಲ್ಲಿ ಆಗುತ್ತಿರುವ ವಿಳಂಬಕ್ಕೆ ರಾಜ್ಯ ಭಾರತೀಯ ಜನತಾ ಪಕ್ಷದ ರೈತ ಮೋರ್ಚವು ೨೦.೧೨.೨೦೦೦ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿತ್ತು. ದಾವಣಗೆರೆ ಪ್ರದೇಶದಲ್ಲಿ ಮಾಯಕೊಂಡ ಕ್ಷೇತ್ರದ ಶಾಸಕರಾದ ಎಸ್.ಎ. ರವೀಂದ್ರನಾಥ ಅವರ ಮುಂದಾಳತ್ವದಲ್ಲಿ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ಪ್ರತಿಭಟನೆಯನ್ನು ನಡೆಸಿತು.[೩೨] ಈ ಪ್ರತಿಭಟನೆಯಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು. ರೈತರ ಬೇಡಿಕೆಗಳಾದ ಸಹಕಾರ ಸಂಘಗಳ ಮೂಲಕ ರೈತರು ಪಡೆದ ಸಾಲದ ಮೇಲಿನ ಬಡ್ಡಿ ಮನ್ನಾ, ಅತಿವೃಷ್ಟಿಯಿಂದ ಆದ ಬೆಳೆ ಹಾನಿಗೆ ಪರಿಹಾರ ನೀಡಬೇಕು, ಕೃಷಿ ಪಂಪಸೆಟ್‌ಗಳ ಮೇಲೆ ವಿದ್ಯುತ್ ದರ ಏರಿಕೆ ಬೇಡ, ಬೆಂಬಲ ಬೆಲೆಗೆ ಕೃಷಿ ಉತ್ಪನ್ನಗಳ ಖರೀದಿಗೆ ೫೦೦ ಕೋಟಿ ರೂ. ಆವರ್ತನ ನಿಧಿ ಸ್ಥಾಪಿಸಬೇಕು ಎಂದು ಒತ್ತಾಯಿಸುವ ಭಿತ್ತಿಪತ್ರಗಳನ್ನು ಪ್ರತಿಭಟನೆಕಾರರು ಹಿಡಿದಿದ್ದರು.[೩೩] ಈ ಪ್ರತಿಭಟನೆಯೂ ಕರ್ನಾಟಕ ರಾಜ್ಯದಾದ್ಯಂತ ಒಂದು ದಿನ ನಡೆಯಿತು.

ಅಂದಿನ ಮುಖ್ಯಮಂತ್ರಿಯಾದ ಎಸ್.ಎಂ. ಕೃಷ್ಣ ಅವರ ಸರ್ಕಾರಕ್ಕೆ ಮನವಿ ಸಲ್ಲಿಸುವ ಮೂಲಕ ಬೇಡಿಕೆಯ ಈಡೇರಿಕೆಗೆ ಒತ್ತಾಯ ಮಾಡಲಾಯಿತು.

ಕೆ.ಪಿ.ಟಿ.ಸಿ.ಎಲ್. ಕಛೇರಿಗೆ ಮುತ್ತಿಗೆ

ಬೆಸ್ಕಾಂ ಇಲಾಖೆಯು ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಎಲ್.ಟಿ -೪ 'ಏ' ವರ್ಗಕ್ಕೆ, ೨೦೦ರಿಂದ ೪೫೦ರೂ, ಎಲ್.ಟಿ. ೪ ಬಿ. ವರ್ಗದ ಕೃಷಿ ಪಂಪಸೆಟ್‌ಗಳಿಗೆ ೬೦೦ರಿಂದ ೬೪೦ ರೂ.ಗಳಿಗೆ ಹೆಚ್ಚಳ ಮಾಡಿದ್ದರಿಂದ ಆಕ್ರೋಶಗೊಂಡ ರೈತರು ೨೦೦೧ರಲ್ಲಿ ಹದಡಿ ರೋಡ್‌ನಲ್ಲಿರುವ ಕೆ.ಪಿ.ಟಿ.ಸಿ.ಎಲ್. ಕಛೇರಿಗೆ ಮುತ್ತಿಗೆ ಹಾಕುವ ಮುಖಾಂತರ ಪ್ರತಿಭಟನೆ ಮಾಡಿದರು.[೨೪]

ಮಾನ್ಸಾಂಟೋ ಬೀಜ ಕಂಪನಿಯ ವಿರುದ್ಧ ಹೋರಾಟ

ಮಾನ್ಸಾಂಟೋ ಬಹುರಾಷ್ಟ್ರೀಯ ಬೀಜ ಕಂಪನಿಯ ಬಿ.ಟಿ. ಹತ್ತಿ ಅಂದರೆ ಕೀಟ ನಿರೋಧಕ ತಳಿ, ಬಿ.ಟಿ. ತಂತ್ರಜ್ಞಾನದ ತಳಿ. ಅಂದರೆ ಬ್ಯಾನಿಲಸ್ ತುರಿಂಗಿಮೆನ್ಸಿಸ್ ಇದು ಒಂದು ಸೂಕ್ಷ್ಮ ಜೀವಿ. ಇದು ಜೀವಿ ಕೀಟಗಳನ್ನೇ ನಾಶ ಮಾಡುವ ವಿಷವನ್ನು ಹೊಂದಿರುವ ಸೂಕ್ಷ್ಮ ಜೀವಿ.[೨೫] ಇದನ್ನು ಹತ್ತಿ ಬೀಜದೊಳಗೆ ಜೈವಿಕ ತಂತ್ರಜ್ಞಾನದ ಮೂಲಕ ಅಳವಡಿಸುವುದರಿಂದ ಹತ್ತಿಯ ಗಿಡ ಬೆಳೆಯುತ್ತಾ ತನ್ನ ಎಲ್ಲ ಭಾಗಗಳಲ್ಲಿ ಕೀಟನಾಶಕ ವಿಷವನ್ನು ಉತ್ಪಾದಿಸುತ್ತದೆ. ಆದ್ದರಿಂದ ಇಂಥ ಗಿಡದ ಯಾವುದೇ ಭಾಗವನ್ನು ಹತ್ತಿಯ ಕಾಯಿ ಕೊರೆಯುವ ಹುಳ ತಿಂದ ಕೂಡಲೇ ಸಾಯುತ್ತದೆ. ರೈತರು ಈ ಕೀಟವನ್ನು ನಾಶ ಮಾಡಲು ಯಾವುದೇ ಖರ್ಚು ಮಾಡಬೇಕಾಗಿಲ್ಲ. ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಬರುವ ಹತ್ತಿ ತಳಿ ಇದೆಂದು ಹತ್ತಿ ಕಂಪನಿಯವರ ಪ್ರಚಾರ. ಆದರೆ ವಾಸ್ತವವೇ ಬೇರೆಯಾಗಿತ್ತು. ಈ ಹತ್ತಿಕಾಯಿ ಕೊರೆಯುವ ಹುಳುಗಳು ಈ ಗಿಡದಲ್ಲಿರುವ ವಿಷಕ್ಕೆ ನಿರೋಧಕ ಶಕ್ತಿ ಬೆಳೆಸಿಕೊಂಡು ಬಿಡುತ್ತದೆ. ಅನಂತರ ಅವು ಸಾಯುವುದೇ ಇಲ್ಲ. ಜೊತೆಗೆ ಬೇರೆ ಕೀಟಗಳೊಂದಿಗೆ ಲೈಂಗಿಕ ಸಂಪರ್ಕ ಪಡೆದು ಕೀಟನಾಶಕ ನಿರೋಧಕ ಶಕ್ತಿಯಿರುವ ಮರಿಗಳನ್ನು ಹುಟ್ಟಿಸುತ್ತದೆ. ಈ ಕೀಟನಾಶಕ ನಿರೋಧಕ ಶಕ್ತಿಯಿರುವ ಸಂತಾನಾಭಿವೃದ್ಧಿಯಿಂದ ನಂತರ ಎಷ್ಟೇ ಕೀಟನಾಶಕ ಬಳಸಿದರೂ ಬೆಳೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಬಿ.ಟಿ ಹತ್ತಿಯ ಗಿಡದ ಭಾಗಗಳು ಬೇರುಗಳ ಮೂಲಕ ಹಾಗೂ ನೆಲಕ್ಕೆ ಉದುರುವ ಎಲೆಗಳಲ್ಲಿರುವ ವಿಷ ಮಣ್ಣಿನೊಂದಿಗೆ ಬೆರೆತು ಜೀವಿಗಳನ್ನು ಮತ್ತು ಎಲ್ಲ ರೀತಿಯ ಬೂಷ್ಟು(Fungi)ಗಳನ್ನು ಸಾಯಿಸುತ್ತದೆ. ಇದರಿಂದಾಗಿ ಭೂಮಿಯ ಫಲವತ್ತತೆ ಬಹುಬೇಗ ನಾಶವಾಗುತ್ತದೆ. ಇದರಿಂದ ಆಕ್ರೋಶಗೊಂಡ ರೈತ ಮುಖಂಡರಾದ ನಂಜುಂಡಸ್ವಾಮಿಯವರು ಬಿ.ಟಿ. ತಂತ್ರಜ್ಞಾನದಿಂದ ಮಾನವ ಹಾಗೂ ನಿಸರ್ಗದ ಮೇಲಾಗುವ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ೨೦೦೨ರಲ್ಲಿ ದಾವಣಗೆರೆ ಪ್ರದೇಶದ ಕಂಚಿಕೇರಿ ಗ್ರಾಮದ ಮಾನ್ಸಾಂಟೋ ಕಂಪನಿ ಬಿ.ಟಿ. ಹತ್ತಿಯ ಪರೀಕ್ಷೆ ಹಾಗೂ ಸಂಶೋಧನೆ ನಡೆಸುತ್ತಿದ್ದ ಜಮೀನಿನ ಮೇಲೆ ಸಾವಿರಾರು ರೈತರೊಂದಿಗೆ ದಾಳಿ ನಡೆಸಿ ಬೆಳೆ ಸುಟ್ಟುಹಾಕುವ ಮೂಲಕ ಹೋರಾಟ ಮಾಡಿದರು. ಆದರೂ ಸಹ ಮಾನ್ಸಾಂಟೋ ಬಿ.ಟಿ. ಹತ್ತಿ ತಳಿಯನ್ನು ಸಂಪೂರ್ಣವಾಗಿ ನಾಶ ಮಾಡುವುದಕ್ಕೆ ಆಗಲಿಲ್ಲ.

೨೨ ಕೆರೆ ನೀರು ತುಂಬಿಸುವುದಕ್ಕೆ ಆಗ್ರಹಿಸಿ ಹೋರಾಟ

ದಾವಣಗೆರೆ ಪ್ರದೇಶದ ದಾವಣಗೆರೆ, ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕಿನ ಭಾಗವು ಬರಪೀಡಿತ ಪ್ರದೇಶವಾಗಿದೆ. ೭೬°.೦°೦೦"ಯಿಂದ ೭೬°೧೦°೦೦"ವರೆಗೆ ಅಕ್ಷಾಂಶ ಮತ್ತು ೧೪°೨೦°೦೦"ಯಿಂದ ೧೫°೦°೦೦" ವರೆಗೆ ರೇಖಾಂಶವಿದ್ದು, ಅಂದಾಜು ೭೫x೧೮=೧೩೫೦ ಚ.ಕಿ.ಮೀ. ಪ್ರದೇಶಗಳ ಭೂಮಿಯು ಯಾವಾಗಲೂ ಮಳೆಯ ಕೊರತೆಯನ್ನು ಎದುರಿಸುತ್ತದೆ.

ಭೌಗೋಳಿಕ ಲಕ್ಷಣಗಳು ಮತ್ತು ಮಳೆ ದಾಖಲೆಗಳ ವರದಿಯಂತೆ ಈ ಪ್ರದೇಶದಲ್ಲಿ ಮಳೆಯು ಯಾವಾಗಲೂ ಕಡಿಮೆ ಪ್ರಮಾಣದಲ್ಲಿ ಬೀಳುತ್ತದೆ. ಈ ಪ್ರದೇಶದಲ್ಲಿ ನೂರಾರು ಕೆರೆಗಳು, ಕುಂಟೆಗಳು, ನೀರಾವರಿ ಯೋಜನೆಗಳು, ಸಾವಿರಾರು ನೀರಾವರಿ ಕೊಳವೆ ಬಾವಿಗಳಿವೆ. ಕಡಿಮೆ ಮಳೆಯ ಸಲುವಾಗಿ ಈ ಎಲ್ಲ ಕುಡಿಯುವ ನೀರಿನ ಮೂಲ ಸೌಕರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ಮಾಡುತ್ತಿಲ್ಲ.

ಹೀಗಾಗಿ ಇದರ ಸರಣಿಯಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಸ್ತಾಪವನ್ನು ರೈತರು, ಮುಖಂಡರು ಸರ್ಕಾರಕ್ಕೆ ವರದಿ ಸಲ್ಲಿಸಿದಾಗ ಬೇಡಿಕೆಯನ್ವಯವಾಗಿ ೧೯೯೭-೯೮ ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯ ಆಯವ್ಯಯ ಪಟ್ಟಿಯಲ್ಲಿ ರೂ. ೩೦ ಕೋಟಿಗಳಿಗೆ ಯೋಜನೆ ಸೇರ್ಪಡೆಯಾಗಿತ್ತು. ಆ ವರ್ಷಕ್ಕೆ ಕೇವಲ ೧೦೦ ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು. ಆದ್ದರಿಂದ ಸದರಿ ಕಾಮಗಾರಿಯ ಪೈಪ್‌ಲೈನ್‌ನ ಪಂಕ್ತೀಕರಣದ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಲು ಹರಿಹರ ತಾಲೂಕು ತುಂಗಭದ್ರಾ ನದಿಯಿಂದ ದಾವಣಗೆರೆ ತಾಲೂಕು ಹೆಬ್ಬಾಳು ಗ್ರಾಮದವರಿಗೆ ೪೧ ಕಿ.ಮೀ. ದೂರಕ್ಕೆ ಸರ್ವೆ ಕಾರ್ಯವನ್ನು ಕೈಗೊಂಡು ರೇಖಾ ಅಂದಾಜು ಪಟ್ಟಿಯನ್ನು ತೋರಿಸುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರಲ್ಲಿ ಸದರಿ ಕಾಮಗಾರಿಯ ವಿವರಗಳನ್ನು ತಯಾರಿಸಿ ಬೋರ್ಡುಗಳನ್ನು ಹಾಕಲಾಗಿತ್ತು.

ಆದರೆ ಈ ಅಂದಾಜು ಪಟ್ಟಿ ಮಂಜೂರಾಗಲು ಆಯವ್ಯಯದಲ್ಲಿ ಕನಿಷ್ಠ ಶೇ. ೩೦ ರಷ್ಟು, ಅಂದರೆ ರೂ. ೧೦ ಕೋಟಿ ಅನುದಾನ ಲಭ್ಯವಿದ್ದಲ್ಲಿ ಮಾತ್ರ ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗುತ್ತಿತ್ತು. ಆ ವರ್ಷಕ್ಕೆ ಕೇವಲ ೧ ಲಕ್ಷ ಮಾತ್ರ ಅನುದಾನ ನಿಗದಿಪಡಿಸಿದ್ದರಿಂದ ಅಂದಾಜು ಪಟ್ಟಿ ಮಂಜೂರಾತಿ ಆಗಲಿಲ್ಲ. ತದನಂತರ ೨೦೦೪-೦೫ನೇ ಸಾಲಿನಿಂದ ಈ ಕಾಮಗಾರಿಯ ಬಗ್ಗೆ ಈ ಪ್ರದೇಶದ ರೈತರು, ಶಾಸಕರು, ರೈತ ಸಂಘಟನೆಗಳು ಸರ್ಕಾರವನ್ನು ಒತ್ತಾಯಪಡಿಸಿ ಹೋರಾಟವನ್ನು ಪ್ರಾರಂಭಿಸಿದರು.

ಈ ಯೋಜನೆ ಭಾಗದ ರೈತರು ೨೨ ಕೆರೆ ನೀರಾವರಿ ಹೋರಾಟ ಸಮಿತಿಯನ್ನು ಸಂಘಟನೆ ಮಾಡುವುದರ ಮೂಲಕ ಡಾ.ಜಿ.ಮಂಜುನಾಥಗೌಡರ ನೇತೃತ್ವದಲ್ಲಿ ಹೋರಾಟದ ರೂಪರೇಷೆಯನ್ನು ತಯಾರಿಸುವ ಮೂಲಕ ಹೋರಾಟ ಪ್ರಾರಂಭವಾಯಿತು. ೨೦೦೫ ಏಪ್ರಿಲ್ ೨೦ರಂದು ೨೨ ಕೆರೆ ನೀರಾವರಿ ಹೋರಾಟ ಸಮಿತಿ ಮತ್ತು ಸಾವಿರಾರು ರೈತರು ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಇಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಕೊಡುವುದರ ಮೂಲಕ ಹೋರಾಟವನ್ನು ಪ್ರಾರಂಭಿಸಲಾಯಿತು.[೩೬] ೨೧ರಂದು ಅಂದಿನ ನೀರಾವರಿ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿ ವಾಸ್ತವಾಂಶಗಳ ಕುರಿತು ಮಾತುಕತೆ ನಡೆಸಿದರು.

ಏಪ್ರಿಲ್ ೨೬ರಲ್ಲಿ ಮುಖ್ಯ ಅಭಿಯಂತರ ವೆಂಕಟಸುಬ್ಬಯ್ಯನವರ ಜೊತೆ ಮಾತುಕತೆ ನಡೆಸಿದರು. ಆದರೂ ಪ್ರಯೋಜನವಾಗಲಿಲ್ಲ. ನಂತರ ಮೇ ೧೩ರಂದು, ಚಿತ್ರದುರ್ಗ ನೀರಾವರಿ ಇಲಾಖೆಗೆ ಎರಡನೇ ಬಾರಿ ಭೇಟಿ ಮಾಡಲಾಯಿತು. ನಂತರ ೨೫-೫-೨೦೦೫ರಂದು ಆಗಿನ ಮುಖ್ಯಮಂತ್ರಿಯಾದ ಧರಂಸಿಂಗ್‌ಗೆ ಮತ್ತೊಮ್ಮೆ ಮನವಿ ಕೊಡುವುದರ ಮೂಲಕ ಯೋಜನೆಯ ಕಾಮಗಾರಿಗೆ ಹಣ ದೊರಕಿಸಿಕೊಡುವಂತೆ ಆಗ್ರಹಿಸಲಾಯಿತು.[೩೭] ಆದರೂ ಸಹ ಧರಂಸಿಂಗ್ ಸರ್ಕಾರವು ಯೋಜನೆಗೆ ಹಣ ಮಂಜೂರಾತಿ ನೀಡಲಿಲ್ಲ. ಇದರಿಂದ ತೀವ್ರ ನಿರಾಶೆಯಾದ ೨೨ ಕೆರೆ ಹೋರಾಟ ಸಮಿತಿಯೂ ಮುಂದಿನ ಹಂತವಾಗಿ ಪ್ರದೇಶದ ೪೦ ಸಂಘ ಸಂಸ್ಥೆಗಳ ಬೆಂಬಲ ಪಡೆದು ೨೨ ಕೆರೆಗಳ ಗ್ರಾಮಸ್ಥರ ರೈತರೊಂದಿಗೆ ೨೦೦೬ರಲ್ಲಿ ಬೃಹತ್ ಹೋರಾಟ ಪ್ರಾರಂಭಿಸಿದರು.

ಅಕ್ಟೋಬರ್ ೩೦, ೨೦೦೬ರಂದು ತುಪ್ಪದ ಹಳ್ಳಿಯ ಕೆರೆಯಿಂದ ಸಾವಿರಾರು ರೈತರು ದಾವಣಗೆರೆ ನಗರಕ್ಕೆ ಪಾದಯಾತ್ರೆ ಕೈಗೊಂಡು ಅಕ್ಟೋಬರ್ ೩೧ ರಂದು ೨೨ ಕೆರೆಗಳ ವ್ಯಾಪ್ತಿ ಬರುವ ಎಲ್ಲ ಗ್ರಾಮ ಪಂಚಾಯಿತಿಗಳ ರೈತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸರದಿ ಧರಣಿ ಕಾರ್ಯಕ್ರಮ ಕೈಗೊಂಡರು.[೩೮] ಈ ಹೋರಾಟದಲ್ಲಿ ಭಾಗವಹಿಸಿದ ಗ್ರಾಮ ಪಂಚಾಯಿತಿಗಳೆಂದರೆ ಹೊನ್ನೂರು, ಆನಗೋಡು, ಆಲೂರು, ಐಗೂರು, ಕಂದನಕೋವಿ, ಅಣಜಿ, ಹುಲಿಕಟ್ಟೆ, ಹೆಮ್ಮನ ಬೇತೂರು, ಅಸಗೋಡು, ನೇರ್ಲಿಗೆ, ನರಗನಹಳ್ಳಿ, ಕೊಡಗನೂರು, ಹೆಬ್ಬಾಳು, ಗುಡಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರು ರಕ್ತದಾನ ಮಾಡುವ ಮೂಲಕ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಉಪವಾಸ ಸತ್ಯಾಗ್ರಹ ೧೩-೧೧-೨೦೦೬ರಿಂದ ಸತತ ಒಂದು ತಿಂಗಳ ಕಾಲ ಅಂದರೆ ೧೭-೧೭-೨೦೦೬ರವರೆಗೆ ನಡೆಯಿತ್ತು. ಈ ಸತ್ಯಾಗ್ರಹ ಧರಣಿ ನಡೆಯುವ ಸ್ಥಳಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ನೀರಾವರಿ ಸಚಿವರು ಆಗಮಿಸಿ ರೈತರನ್ನು ಸತ್ಯಾಗ್ರಹ ಕೈ ಬಿಡುವಂತೆ ಕೇಳಿಕೊಂಡರು. ಅದಕ್ಕೆ ರೈತರು ಬೇಡಿಕೆ ಈಡೇರುವವರೆಗೂ ಸತ್ಯಾಗ್ರಹ ನಿಲ್ಲಿಸಲಾಗುವುದಿಲ್ಲವೆಂದು ವ್ಯಕ್ತಪಡಿಸಿದರು.

ಸತ್ಯಾಗ್ರಹ ನಿರತ ಸ್ಥಳಕ್ಕೆ ಸಿರಿಗೆರೆ ಶ್ರೀಗಳು ಆಗಮಿಸಿ ಸರ್ಕಾರದೊಂದಿಗೆ ಮಾತುಕತೆ ನಡೆಸುವ ಇಂಗಿತ ವ್ಯಕ್ತಪಡಿಸಿದರು. ಆಗ ರೈತರಿಗೆ ಹೊಸ ಭರವಸೆ ಉಂಟಾಯಿತು.

ಸಿರಿಗೆರೆ ಶ್ರೀಗಳ ಮಧ್ಯ ಪ್ರವೇಶದಿಂದ ಸರ್ಕಾರದ ಮೇಲೆ ಒತ್ತಡ ತಂದು ಯೋಜನೆಯ ಕಾಮಗಾರಿಗೆ ಒತ್ತಡ ತಂದಾಗ ಸರ್ಕಾರವು ಬೇರೆ ದಾರಿಕಾಣದೇ ೧೪-೦೮-೨೦೦೭ರಂದು ದಾವಣಗೆರೆ ಜಿಲ್ಲೆಯ ೨೨ ಕೆರೆಗಳು ಹಾಗೂ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಜಲಾಶಯಕ್ಕೆ ನೀರು ತುಂಬಿಸುವ ೧೦೫ ಕೋಟಿ ರೂ. ಯೋಜನೆಗೆ ಅನುಮೋದನೆ ನೀಡಿತು.[೩೯]

ಈ ಹೋರಾಟದ ಸಂಪೂರ್ಣ ಯಶಸ್ಸು ರೈತರದಾಗಿದೆ. ಯೋಜನೆಯ ಅನುಷ್ಠಾನದಿಂದ ಪ್ರದೇಶದ ಶೇ.೧೦ರಷ್ಟು ಬೋರ್‌ವೆಲ್‌ನಿಂದ ನೀರಾವರಿ ಮಾಡಲಾಗಿದ್ದು, ಈ ಯೋಜನೆ ಅನುಷ್ಠಾನಗೊಂಡ ನಂತರ ಬೋರ್‌ವೆಲ್ ನೀರಾವರಿ ಶೇ.೨೦ರಷ್ಟು ಹೆಚ್ಚಾಗಲಿದೆ. ಅಲ್ಲದೆ ಅಂತರ್ಜಲ ಅಭಿವೃದ್ಧಿಯಾಗಿ ನೀರಿನ ಮಟ್ಟ ಏರಲಿದೆ. ಬಹುತೇಕ ಬೋರ್‌ವೆಲ್‌ಗಳಲ್ಲಿ ನೀರು ಲಭ್ಯವಾಗಲಿದೆ. ಕುಡಿಯುವ ನೀರಿನ ಬೋರುಗಳಿಗೂ ಅನುಕೂಲವಾಗಲಿದೆ. ಪ್ರತಿವರ್ಷ ಕುಡಿಯುವ ನೀರಿಗಾಗಿ ಖರ್ಚು ಮಾಡುವ ಕೋಟ್ಯಂತರ ರೂಪಾಯಿ ಸರಕಾರಕ್ಕೆ ಉಳಿತಾಯವಾಗಲಿದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಪುನರಾರಂಭಕ್ಕೆ ಆಗ್ರಹಿಸಿ ಹೋರಾಟ

ದಾವಣಗೆರೆ ಪ್ರದೇಶದ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯೂ ಸಹ ಒಂದು. ಇದು ೧೯೭೦ರ ದಶಕದಲ್ಲಿ ಸ್ಥಾಪನೆಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಕಾರ್ಖಾನೆಯ ಆಡಳಿತಾತ್ಮಕ ಭಿನ್ನಾಭಿಪ್ರಾಯ, ವೈಯಕ್ತಿಕ ಕಾರಣಗಳಿಂದಾಗಿ ೨೦೦೪ ಜೂನ್‌ನಲ್ಲಿ ಕಾರಣವಿಲ್ಲದೆ ತಾತ್ಕಾಲಿಕವೆಂದು ಮುಚ್ಚಿತ್ತು.[೪೦] ಆಗ ಅಲ್ಲಿನ ಕಾರ್ಮಿಕರು ವಿರೋಧ ವ್ಯಕ್ತಪಡಿಸಿ ಪುನರಾರಂಭಕ್ಕೆ ಆಗ್ರಹಿಸಿ ಹೋರಾಟ ಮಾಡಿದರು. ಆದರೆ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯು ಕಾರ್ಮಿಕರ ಹೋರಾಟಕ್ಕೆ ಬೆಲೆ ಕೊಡಲಿಲ್ಲ. ಇದರಿಂದಾಗಿ ಈ ಪ್ರದೇಶದಲ್ಲಿ ದಾವಣಗೆರೆ, ಹರಿಹರ ತಾಲ್ಲೂಕಿನ ಸುತ್ತಮುತ್ತಲಿನ ಕಬ್ಬು ಬೆಳೆಯುತ್ತಿದ್ದ ರೈತರಿಗೆ ತೀವ್ರವಾದ ನಷ್ಟವುಂಟಾಯಿತು. ಇದರಿಂದ ರೈತ ಸಂಘ ಮತ್ತು ಕಬ್ಬು ಬೆಳೆಗಾರರು ಹೋರಾಟದ ಹಾದಿ ಹಿಡಿಯಬೇಕಾಯಿತು. ರಾಜ್ಯ ಕಬ್ಬು ಬೆಳೆಗಾರರ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯವರ ನೇತೃತ್ವದಲ್ಲಿ ಹೋರಾಟವನ್ನು ಪ್ರಾರಂಭಿಸಲಾಯಿತು.

ಹೋರಾಟ ಪ್ರಥಮ ಹಾದಿಯಾಗಿ ದಾವಣಗೆರೆಯಿಂದ ರೈತರ ನಿಯೋಗ ೨೯ ಡಿಸೆಂಬರ್ ೨೦೦೮ರಲ್ಲಿ ಮುಖ್ಯಮಂತ್ರಿಗಳ ಗೃಹ ಕಚೇರಿಯ ಮುಂದೆ ಧರಣಿ ನಡೆಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಸಚಿವರು ಬಂದು ಮಾತುಕತೆ ನಡೆಸಿದ ನಂತರ ಧರಣಿಯನ್ನು ನಿಲ್ಲಿಸಲಾಯಿತು. ಆದರೆ ಈ ವಿಷಯದ ಬಗ್ಗೆ ಮೂರ್‍ನಾಲ್ಕು ದಿನಗಳಲ್ಲಿ ಚರ್ಚೆ ಮಾಡುತ್ತೇನೆ ಎಂದ ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ಸ್ಪಂದಿಸಲಿಲ್ಲ. ಅದಕ್ಕೆ ನಿರಾಶೆಯಾದ ರೈತರು ಮತ್ತು ರಾಜ್ಯಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು, ರೈತ ಸಂಘದ ನಾಯಕರು ಮುಖ್ಯಮಂತ್ರಿಗಳ ವಿಜಯ ಸಂಕಲ್ಪ ಯಾತ್ರೆ ಕೈಗೊಂಡ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಘೇರಾವ್ ಮಾಡುವ ತೀರ್ಮಾನಕ್ಕೆ ಬರಲಾಯಿತು.[೪೧] ಆದರೆ ಜಿಲ್ಲಾಡಳಿತ ಮಧ್ಯಸ್ಥಿಕೆ ವಹಿಸಿಕೊಂಡು ಘೇರಾವ್ ತಡೆಗಟ್ಟಲಾಯಿತು. ನಂತರ ಜಿಲ್ಲಾಡಳಿತ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಇತ್ತ ಗಮನ ಕೊಡದೇ ಇದ್ದದ್ದು ರೈತರ ಆಕ್ರೋಶಕ್ಕೆ ಕಾರಣವಾಯಿತು.

ರೈತರು ಹೋರಾಟವನ್ನು ತೀವ್ರಗೊಳಿಸಿ ಕಾರ್ಖಾನೆಯ ಆಡಳಿತ ಮಂಡಳಿಯನ್ನು ರದ್ದು ಮಾಡುವಂತೆ ಆಗ್ರಹಿಸಿದರು. ಇದರಿಂದ ಮುಖ್ಯಮಂತ್ರಿಗಳು ಸಹಕಾರಿ ಸಚಿವರಿಗೆ ೧೦ ದಿನಗಳಲ್ಲಿ ಸಭೆ ಕರೆದು ಆಡಳಿತ ಮಂಡಳಿ ರದ್ದತಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.[೪೨] ಆದರೆ ಜಿಲ್ಲಾ ಸಚಿವರು ಕಾರ್ಖಾನೆಯ ಸಾಧಕ ಬಾಧಕಗಳನ್ನು ಗಮನಿಸಿದ ಮೇಲೆ ಆಡಳಿತಮಂಡಳಿಯನ್ನು ರದ್ದು ಮಾಡದಂತೆ ತೀರ್ಮಾನ ತೆಗೆದುಕೊಂಡು ಸರ್ಕಾರ ಟೆಂಡರ್ ಕರೆಯಲು ಮುಂದಾಯಿತು. ಉತ್ತರ ಪ್ರದೇಶ ಮೂಲದ ಕೆ.ಎಂ. ಷುಗರ್ಸ್ ಎಂಬ ಕಂಪನಿ ಸುಮಾರು ೪೦ ಕೋಟಿ ರೂ. ನಮೂದಿಸಿ ಟೆಂಡರ್‌ನಲ್ಲಿ ಭಾಗವಹಿಸಿತು. ಆದರೆ ಸರ್ಕಾರವು ಈ ಟೆಂಡರನ್ನು ತಿರಸ್ಕರಿಸಿತು. ಇದರಿಂದ ರೈತರು ಹಾಗೂ ಕಾರ್ಮಿಕರು ಅಸಮಾಧಾನಗೊಂಡರು.

ಹೋರಾಟದ ಮುಂದಿನ ಹೆಜ್ಜೆಯ ಬಗ್ಗೆ ರಾಜ್ಯ ರೈತ ಸಂಘ ಮತ್ತು ಕಬ್ಬು ಬೆಳೆಗಾರರ ಸಂಘದ ಸಭೆ ಕರೆಯಲಾಯಿತು. ಸಭೆಯಲ್ಲಿ ಪಾದಯಾತ್ರೆ ಕೈಗೊಳ್ಳುವ ನಿರ್ಧಾರ ತೆಗೆದುಕೊಂಡರು.

ದಾವಣಗೆರೆಯಿಂದ ಬೆಂಗಳೂರಿಗೆ ಹೋಗುವ ಪಾದಯಾತ್ರೆಯನ್ನು ನವೆಂಬರ್ ೨೮ ಬೆಳಗ್ಗೆ ೧೧.೦೦ ಘಂಟೆಗೆ ದಾವಣಗೆರೆ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಿಂದ ಪ್ರಾರಂಭಿಸಲಾಯಿತು. ಪಾದಯಾತ್ರೆಯು ನವೆಂಬರ್ ೧೨ರಂದು ಬೆಂಗಳೂರಿಗೆ ತಲುಪಿತು. ರೈತರು ಮತ್ತು ಸಂಘದ ಮುಖಂಡರು ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲು ಹೊರಟಾಗ ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.[೪೩]

ಹೋರಾಟದ ಮುಂದಿನ ಹೆಜ್ಜೆಯಾಗಿ ಜೈಲುಭರೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಅದರಂತೆ ಡಿಸೆಂಬರ್ ೨೫ರಂದು ರೈತರು, ಕಬ್ಬು ಬೆಳೆಗಾರರ ಸಂಘದ ಮುಖಂಡರು ಜೈಲು ಭರೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಾಂತಿಯುತವಾಗಿ ಜೈಲುಭರೋ ನಡೆಸುತ್ತಿದ್ದ ರೈತರು, ಕಾರ್ಮಿಕರನ್ನು ಪೊಲೀಸರು ಬಂಧಿಸಿ ಧಾರವಾಡ, ಬಳ್ಳಾರಿ, ಚಿತ್ರದುರ್ಗ ಜೈಲುಗಳಲ್ಲಿ ಬಂಧಿಸಿಟ್ಟರು.

ತೇಜಸ್ವಿನಿ ಪಾಟೀಲ್, ವಾಸನದ ಓಂಕಾರಪ್ಪ ಹಾಗೂ ೧೮ ಮಹಿಳೆಯರು ಸೇರಿದಂತೆ ೨೫ ಜನರು ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಕೈಗೊಂಡರು. ಇದರಿಂದ ಅಸ್ವಸ್ಥರಾದ ರೈತರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರೈತರಿಗೆ ಕೈ ಕೋಳ ಹಾಕಲಾಯಿತು.[೪೪] ಇದರಿಂದ ರಾಜ್ಯಾದ್ಯಂತ ಪ್ರತಿಭಟನೆ ಪ್ರಾರಂಭವಾದಾಗ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಿ ಬೇಡಿಕೆ ಈಡೇರಿಸುವ ಭರವಸೆ ನೀಡಿದಾಗ ಸತ್ಯಾಗ್ರಹ ಹಿಂತೆಗೆದುಕೊಳ್ಳಲಾಯಿತು.

ಈ ಹೋರಾಟದಲ್ಲಿ ರೈತ ಮುಖಂಡರಾದ ಪ್ರಭುಗೌಡ, ನಿಟ್ಟುವಳ್ಳಿ ಕೆಂಗಪ್ಪ, ಮರಡಿನಾಗಣ್ಣ, ಮುರುಗೆಯ್ಯ, ಕಮಲಾಪುರದ ಕರಿಬಸಮ್ಮ, ಕಾರ್ಮಿಕ ಮುಖಂಡ ಕೊಟ್ರಯ್ಯ ಮತ್ತಿತರರು ಭಾಗವಹಿಸಿದ್ದರು.

ಮುಖ್ಯಮಂತ್ರಿಗಳ ಆದೇಶದಂತೆ ಕಾರ್ಖಾನೆ ಮರು ಆರಂಭಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕೆ. ಅಮರ ನಾರಾಯಣ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು. ಫೆಬ್ರವರಿ ೨೦೧೦ರಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಿದರು. ಟೆಂಡರ್‌ನಲ್ಲಿ ಧಾರವಾಡ ಮೂಲದ "ಗ್ಯಾನ್ಸ್ ಡೆವಲಪರ್ಸ್ ಕಂಪನಿ"ಯು ೨೦ ವರ್ಷ ಗುತ್ತಿಗೆಗೆ ೭೭.೭೭ಕೋಟಿ ರೂ. ನಮೂದಿಸಿ ಭಾಗವಹಿಸಿತ್ತು. ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಚರ್ಚಿಸಿ, ಒಂದೇ ಕಂತಿನಲ್ಲಿ ೨೧ ಕೋಟಿ ರೂ. ಪಾವತಿಸಲು ಒಪ್ಪಿಸಿ ಕಂಪನಿಯನ್ನು 'ಪ್ರಿಫರ್ಡ್ ಬಿಡ್ಡರ್ಸ್' ಎಂದು ಘೋಷಿಸಿದರು. ಇದರಿಂದಾಗಿ ರೈತ ಹೋರಾಟವು ನಿಂತಿತು. ಕಾರ್ಖಾನೆಯು ಈ ಋತುಮಾನದಲ್ಲಿ ಆರಂಭವಾಗಲಿದೆ. ಈ ಯಶಸ್ಸು ರೈತರು, ಕಾರ್ಖಾನೆಯ ಕಾರ್ಮಿಕರು ಮತ್ತು ರೈತ ಸಂಘ ಹಾಗೂ ಕಬ್ಬು ಬೆಳೆಗಾರ ಸಂಘದ ನಿರಂತರ ಹೋರಾಟಕ್ಕೆ ಸಂದ ಫಲವಾಗಿದೆ.

ದೊಡ್ಡಬಾತಿ ಭೂ ಸ್ವಾಧೀನ ವಿರೋಧಿಸಿ ಹೋರಾಟ

ದಾವಣಗೆರೆ ಮಹಾನಗರವು ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿರುವುದರಿಂದ ನಿವೇಶನ ರಹಿತರಿಗೆ ನಿವೇಶನ ದೊರಕಿಸಿ ಕೊಡುವ ಉದ್ದೇಶದಿಂದ ದೊಡ್ಡಬಾತಿ ಸರ್ವೆ ನಂ.೯೪ರಿಂದ ೧೪೫ರವರೆಗಿನ ಸುಮಾರು ೧೮೦ ಎಕರೆ ಜಮೀನನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಅಲ್ಲಿನ ೬೬ ಕುಟುಂಬಗಳಿಗೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ನೋಟೀಸ್ ನೀಡಿತ್ತು. ಇದರಿಂದ ವಿಚಲಿತರಾದ ಸಣ್ಣ ಭೂಹಿಡುವಳಿದಾರರು ಜೀವನಾಸರೆಯಾದ ಚಿಕ್ಕ ಜಮೀನನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಹೋರಾಟದ ಹಾದಿಯನ್ನು

ಹಿಡಿಯಬೇಕಾಯಿತು. ಹೋರಾಟದ ಬೆಂಬಲಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ರಾಜ್ಯ ಕಬ್ಬು ಬೆಳೆಗಾರರ ಸಂಘಗಳು ಬೆಂಬಲ ನೀಡಿದವು.

ಹೋರಾಟವು ಶಾಂತಿಯುತವಾಗಿ ಆರಂಭವಾಯಿತು. ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಎದುರು ಧರಣಿ ನಡೆಸುವುದಕ್ಕೆ ಪ್ರಾರಂಭಿಸಿತು. ಧರಣಿಯು ಸುಮಾರು ೧೦೦ ದಿನಗಳ ಕಾಲ ನಡೆದರೂ ಸಹ ಸರ್ಕಾರ ಗಮನ ಕೊಡಲಿಲ್ಲ. ಮುಂದೆ ಧರಣಿ ನಿಲ್ಲಿಸಿ ಜೈಲುಭರೋ ಕಾರ್ಯಕ್ರಮವನ್ನು ಆರಂಭಿಸಿದರು. ಇದಕ್ಕೆ ಪೂರಕವಾಗಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿ ಶಾಂತಯುತವಾಗಿ ಜೈಲುಭರೋ ಕಾರ್ಯಕ್ರಮ ನಡೆಸಿದರು. ಡಿಸೆಂಬರ್ ೩೫ರಂದು ೧೪೦ ರೈತರನ್ನು ಬಂಧಿಸಿ ಧಾರವಾಡ, ಬಳ್ಳಾರಿ, ಚಿತ್ರದುರ್ಗ ಜೈಲುಗಳಲ್ಲಿ ಬಂಧಿಸಲಾಯಿತು.

ರೈತರ ಮನವಿಯೆಂದರೆ ಭೂ ಸ್ವಾಧೀನ ಮಾಡಿಕೊಳ್ಳುವ ಮೊದಲು ರೈತರನ್ನು ಕೇಳಿ ಸ್ವಾಧೀನ ಮಾಡಿಕೊಳ್ಳಬೇಕು ಎಂಬುದಾಗಿತ್ತು. ಆದರೆ ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದವರು ಇದಕ್ಕೆ ಬೆಲೆ ಕೊಡಲಿಲ್ಲ. ಅಲ್ಲದೇ ಕೃಷಿ ಮಂತ್ರಿಯಾದ ರವೀಂದ್ರನಾಥ ಅವರು ಭೂ ಸ್ವಾಧೀನ ಯಾವುದೇ ಕಾರಣಕ್ಕೂ ಕೈ ಬಿಡುವುದಿಲ್ಲವೆಂದು ಹೇಳಿದರು.[೪೫] ಇದರಿಂದ ರೈತರು ಆಕ್ರೋಶಗೊಂಡರು. ಜಿಲ್ಲಾಧಿಕಾರಿಗಳೊಂದಿಗೆ ಎರಡು ಸುತ್ತಿನ ಮಾತುಕತೆಯು ಯಾವುದೇ ಪ್ರಯೋಜನವಾಗಲಿಲ್ಲ. ಜೈಲಿನಲ್ಲಿದ್ದ ರೈತರು ಉಪವಾಸ ಕೈಗೊಂಡರು. ಉಪವಾಸ ಸತ್ಯಾಗ್ರಹದಿಂದಾಗಿ ಅಸ್ವಸ್ಥರಾದ ರೈತರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ರೈತರಿಗೆ ಕೈ ಕೋಳ ತೊಡಿಸಲಾಯಿತು. ಈ ಕ್ರಮದಿಂದಾಗಿ ರಾಜ್ಯದಾದ್ಯಂತ ಪ್ರತಿಭಟನೆಯಾದವು. ಇದರಿಂದ ಸರ್ಕಾರವು ವಸತಿ ನಿವೇಶನ ಉದ್ದೇಶದಿಂದ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯನ್ನು ಕೈ ಬಿಟ್ಟಿತು.[೪೬]

ಕೆ.ಐ.ಎ.ಡಿ.ಬಿ. ವಿರುದ್ಧ ಭೂ ಸ್ವಾಧೀನ ಚಳುವಳಿ

ದಾವಣಗೆರೆ ಪ್ರದೇಶವು ಕೈಗಾರಿಕೆಗಳ ನಿರ್ಮಾಣಕ್ಕೆ ಪೂರಕವಾದ ಕಚ್ಚಾವಸ್ತುಗಳು ದೊರೆಯುವುದರಿಂದ ೨೦೦೨ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಬೆಂಗಳೂರು ಇವರು ಕರೂರು ಗ್ರಾಮದ ಸರ್ವೆ ನಂಬರ್ ೫ರಿಂದ ೨೦ರವರೆಗೆ ಒಟ್ಟು ೧೪೩ ಎಕರೆ, ೩೦ ಗುಂಟೆ ಭೂಮಿಗೆ ಸಂಬಂಧಪಟ್ಟ ೫೦ಕ್ಕೂ ಹೆಚ್ಚು ಕುಟುಂಬಗಳ ಜಮೀನನ್ನು 'ಜವಳಿ ಪಾರ್ಕ್' ನಿರ್ಮಿಸುತ್ತೇವೆ ಹಾಗೂ ನಿಮ್ಮ ಕುಟುಂಬಗಳ ಒಬ್ಬರಿಗೆ ಉದ್ಯೋಗ ಹಾಗೂ ಜಿಲ್ಲೆಯ ಜನರಿಗೆ ಉದ್ಯೋಗ ನೀಡುತ್ತೇವೆ[೪೭] ಎಂದು ಭರವಸೆ ನೀಡಿ ಜಮೀನನ್ನು ವಶಪಡಿಸಿಕೊಂಡಿತ್ತು. ಆದರೆ ಅಲ್ಲಿ ಜವಳಿ ಪಾರ್ಕ್ ಮಾಡುವ ಸರ್ಕಾರದ ಯೋಜನೆ ಜಾರಿಗೆ ಬರಲಿಲ್ಲ. ಆದುದರಿಂದ ಕೆ.ಐ.ಎ.ಡಿ.ಬಿ.ಯು ನಗರದ ಪ್ರಭಾವಿ ಜನಪ್ರತಿನಿಧಿಗಳಿಗೆ ಮತ್ತು ಬಂಡವಾಳಶಾಹಿಗಳಿಗೆ ಭೂಮಿಯನ್ನು ಪರಭಾರೆ ಮಾಡುವುದಕ್ಕೆ ಪ್ರಾರಂಭಿಸಿತು.

ಇದರಿಂದ ಆಕ್ರೋಶಗೊಂಡ ಭೂಮಿಯನ್ನು ಕಳೆದುಕೊಂಡ ರೈತರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಹಾಗೂ ಪ್ರಗತಿಪರ ಸಂಘಟನೆಗಳ ನಾಯಕರು ಹೋರಾಟ ಮಾಡಿ ಭೂಮಿ ಪಡೆಯುವುದಕ್ಕೆ ವೇದಿಕೆ ಸಿದ್ಧಪಡಿಸಿದರು. ಹೋರಾಟವು ಮುಖ್ಯವಾಗಿ ಮೂರು ಹಂತಗಳಲ್ಲಿ ನಡೆಯಿತು.

ಮೊದಲನೇ ಹಂತದ ಹೋರಾಟವು ಭೂಮಿಯನ್ನು ಕಳೆದುಕೊಂಡ ರೈತರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಹಾಗೂ ಇನ್ನಿತರ ಸಂಘಟನೆಗಳ ನಾಯಕರು ೫-೦೪-೨೦೧೧ರಂದು ಕರೂರು ಗ್ರಾಮದಿಂದ ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಗೆ ಪಾದಯಾತ್ರೆ ಮಾಡುವುದರ ಮೂಲಕ ಅವರಿಗೆ ಮನವಿ ಪತ್ರ ನೀಡುವುದರ ಮುಖಾಂತರ ಹೋರಾಟವನ್ನು ಪ್ರಾರಂಭಿಸಿದರು. ರೈತರು "ನಮ್ಮದೇ ತೀರ್ಮಾನ, ನಮ್ಮದೇ ತೀರ್ಪಿನಂತೆ" ಎಂಬ ನಿರ್ಣಯದೊಂದಿಗೆ ನಿರಂತರ ಸತ್ಯಾಗ್ರಹ ಪ್ರಾರಂಭಿಸಿದರು. ಇದಕ್ಕೆ ಜಿಲ್ಲಾಧಿಕಾರಿಗಳಾಗಲೀ ಸರ್ಕಾರವಾಗಲೀ ಗಮನ ಕೊಡಲಿಲ್ಲ.

ಎರಡನೇ ಹಂತದ ಮರುಜಪ್ತಿ ಭೂ ಸ್ವಾಧೀನ ಚಳುವಳಿಯನ್ನು ಹಮ್ಮಿಕೊಂಡಿತ್ತು. ಅದರಂತೆ ದಿನಾಂಕ ೨೩-೦೪-೨೦೧೧ರಂದು ಬೆಳಗ್ಗೆ ೧೨.೦೦ ಗಂಟೆಗೆ ಕೆ.ಐ.ಎ.ಡಿ.ಬಿ.ಗೆ ಎಚ್ಚರಿಕೆ ನೀಡಲು ಬಹಿರಂಗ ಸಭೆಯ ಮತ್ತು ಭೂಮಿಯ ಮರುಜಪ್ತಿ ನಾಮಫಲಕ ಉದ್ಘಾಟನೆ ಸತ್ಯಾಗ್ರಹ ಮಾಡಿದ ತರುವಾಯ ನೇರ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದಲ್ಲಿ ರೈತರು ಮತ್ತು ನಿವೇಶನದಾರರು ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೆ "ಪ್ರಾಣ ಕೊಟ್ಟಾದರೂ ಕರೂರು ಭೂಮಿಯನ್ನು ಮರುಜಪ್ತಿ ಮಾಡುವ ಮೂಲಕ ವಾಪಸ್ಸು ಪಡೆಯುತ್ತವೆ ಎಂದು ರಕ್ತ ಪ್ರತಿಜ್ಞೆ ಚಳುವಳಿ ಮಾಡುವ ಮುಖಾಂತರ ಮುಖ್ಯಮಂತ್ರಿಗಳಿಗೆ ಮತ್ತು ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೆ ರಕ್ತ ಪ್ರತಿಜ್ಞೆಯೊಂದಿಗೆ ಮನವಿ ಸಲ್ಲಿಸಿದರು.[೮೪]

ಮೂರನೇ ಹಂತದ ಚಳುವಳಿಯು ಕರ್ನಾಟಕ ರಾಜ್ಯರೈತ ಸಂಘದ ರಾಜ್ಯ ಕಾರ್ಯದರ್ಶಿ ಕೋಡಿಹಳ್ಳಿ ಚಂದ್ರಶೇಖರ, ಹೊನ್ನೂರು ಮುನಿಯಪ್ಪ, ಆವರೆಗೆರೆ ರುದ್ರಮುನಿ, ಮಂಜುಳ ಹಲಗೂರು, ಪ್ರೇಮ ಕಂದಗಲ್, ಅರುಣ್‌ಕುಮಾರ್ ಕುರುಡಿ, ಕೊಗ್ಗನೂರು ಹನುಮಂತಪ್ಪ ಮುಂತಾದವರ ನೇತೃತ್ವದಲ್ಲಿ ಕರೂರು ನಿವೇಶನದಾರರ ಮತ್ತು ಕೃಷಿ ಯೋಗ್ಯ ಭೂಮಿಯಲ್ಲಿ ಹಸಿರು ಬಾವುಟ ಧ್ವಜ ನೆಡಲು ಮುಂದಾದ ೪೦ ರೈತರನ್ನು ಪೊಲೀಸರು ಬಂಧಿಸಿ ರಾತ್ರಿ ವೇಳೆ ಬಿಡುಗಡೆ ಮಾಡಿದರು.[೪೯] ಇದಲ್ಲದೆ ನಿರ್ಮಾಣ ಹಂತದಲ್ಲಿರುವ ನೂತನ ಜಿಲ್ಲಾಧಿಕಾರಿ ಕಛೇರಿ ಕಟ್ಟಡದ ಕಾಪೌಂಡ್‌ಗೆ ರೈತರು ಹಸಿರು ಧ್ವಜ ಕಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

ಭೂ ಸ್ವಾಧೀನ ಹೋರಾಟವು ಇಷ್ಟಕ್ಕೆ ನಿಲ್ಲಲಿಲ್ಲ. ಟ್ರಾಕ್ಟರ್‌ನಲ್ಲಿ ಕರೂರು ಭೂಮಿ ಉಳುಮೆ ಮಾಡಲಾಯಿತು. ಆದರೆ ಸರ್ಕಾರವು ಭೂಮಿಯನ್ನು ಯಾವುದೇ ಕಾರಣಕ್ಕೂ ಕೊಡುವುದಿಲ್ಲವೆಂದು ಹೇಳುತ್ತಿದೆ. ಆದರೂ ಹೋರಾಟ ಮುಂದುವರಿದಿದ್ದು, ಫಲಿತಾಂಶಕ್ಕಾಗಿ ಕಾಯಬೇಕಾಗಿದೆ.

ಭತ್ತಕ್ಕೆ ವೈಜ್ಞಾನಿಕ ಬೆಲೆ ಆಗ್ರಹಿಸಿ ರೈತ ಹೋರಾಟ

ಸರ್ಕಾರವು ಡೀಸೆಲ್, ಪೆಟ್ರೋಲ್ ಬೆಲೆ, ಬಿತ್ತನೆ ಬೀಜದ ಬೆಲೆ, ರಸಗೊಬ್ಬರದ ಬೆಲೆ, ವಿದ್ಯುಚ್ಛಕ್ತಿ ಬೆಲೆ, ದಿನನಿತ್ಯ ಉಪಯೋಗಿಸುವ ವಸ್ತುಗಳ ಬೆಲೆ ಹೆಚ್ಚಳ ಮಾಡುತ್ತದೆ. ಆದರೆ ಭಾರತದ ಬೆನ್ನೆಲುಬಾಗಿರುವ ರೈತರು ಬೆಳೆದಂತಹ ಬೆಳೆಗಳಿಗೆ ಯಾವುದೇ ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡುತ್ತಿಲ್ಲ ಎಂದು ಆಗ್ರಹಿಸಿ ದಾವಣಗೆರೆ ಪ್ರದೇಶದ ಭತ್ತ ಬೆಳೆಯುವ ರೈತರು ಭತ್ತದ ವೈಜ್ಞಾನಿಕ ಬೆಲೆಗೆ ಒತ್ತಾಯಿಸಿ ಅಸಹಕಾರ ಚಳುವಳಿ ಪ್ರಾರಂಭಿಸಿದರು.

ಕೇಂದ್ರಸರ್ಕಾರವು ಪ್ರಸ್ತುತ ಸಾಲಿನಲ್ಲಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಿತು. ಕ್ವಿಂಟಾಲ್ ಸಣ್ಣ ಭತ್ತಕ್ಕೆ ರೂ. ೯೫೦ರಷ್ಟು ದಪ್ಪ ಭತ್ತಕ್ಕೆ ರೂ. ೯೪೦ರಷ್ಟು ನಿಗದಿಪಡಿಸಿತು. ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಹೇಳಿದ ರೈತರು ಹೋರಾಟದ ಹಾದಿ ಹಿಡಿಯಬೇಕಾಯಿತು. ಪ್ರಸ್ತುತ ಒಂದು ಎಕರೆ ಭತ್ತ ಬೆಳೆಯುವುದಕ್ಕೆ ಸುಮಾರು ೧೫ರಿಂದ ೨೦ ಸಾವಿರ ರೂ.ಗಳನ್ನು ಖರ್ಚು ಮಾಡುತ್ತಾರೆ.[೪೯] ಆದರೆ ಬರುವ ಆದಾಯ ಒಂದು ಎಕರೆಗೆ ೩೫ರಿಂದ ೩೭ ಚೀಲ ಭತ್ತ ಇಳುವರಿ ಬರುತ್ತದೆ. ಇದರಿಂದಾಗಿ ರೈತರಿಗೆ ನಷ್ಟವುಂಟಾಗುತ್ತದೆ.

ಕರ್ನಾಟಕ ಹೊರತುಪಡಿಸಿ ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳು ಭತ್ತ ಬೆಳೆಯುವ ರೈತರಿಗೆ ಸಹಾಯಧನ ನೀಡುತ್ತವೆ. ಆದರೆ ನಮ್ಮ ಕರ್ನಾಟಕ ರಾಜ್ಯವು ಯಾವುದೇ ಸಹಾಯಧನವನ್ನು ನೀಡುವುದಿಲ್ಲ.

ಭತ್ತಕ್ಕೆ ವೈಜ್ಞಾನಿಕ ಬೆಲೆ ನಿಗದಿಗೊಳಿಸಿ ಸರಕಾರದಿಂದ ನೇರ ಖರೀದಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯರೈತ ಸಂಘ ಹಾಗೂ ಹಸಿರುಸೇನೆ, ದಾವಣಗೆರೆ ಜಿಲ್ಲೆ ಭತ್ತ ಬೆಳೆಯುವ ರೈತರ ಹಿತರಕ್ಷಣಾ ಸಮಿತಿ ಮತ್ತು ಪ್ರಗತಿಪರ ಸಂಘಟನೆಗಳು ಹೋರಾಟವನ್ನು ಪ್ರಾರಂಭಿಸಿದವು.

ಮೇ ೩ರಿಂದ ಮೇ ೭ರವರಿಗೆ ದಾವಣಗೆರೆಯಲ್ಲಿ ರೈತರು ನಿರಂತರ ರಸ್ತೆ ತಡೆ ಚಳುವಳಿ ಮಾಡಿದರು. ದಿನಾಂಕ ೮ ಮತ್ತು ೯ರಂದು ಹಳ್ಳಿ ಹಳ್ಳಿಗಳಲ್ಲಿ ರೈತ ಜಾಗೃತಿ, ಜೀಪು ಜಾಥಾ ಮಾಡುವುದರ ಮುಖಾಂತರ ರೈತರನ್ನು ಹುರಿದುಂಬಿಸಿದರು. ಮೇ ೧೦ರಂದು ದಾವಣಗೆರೆಯಲ್ಲಿ ಬೃಹತ್ ಪ್ರತಿಭಟನೆ ಮಾಡುವ ಸಂದರ್ಭದಲ್ಲಿ ಪೊಲೀಸರು ರೈತರನ್ನು ಬಂಧಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನಂಜುಂಡಸ್ವಾಮಿ ಬಣವು ಜಿಲ್ಲಾಧಿಕಾರಿ ಕಛೇರಿಯ ಮುಂದೆ ಅಸಹಕಾರ ಚಳುವಳಿ ಆರಂಭಿಸಿತು. ಈ ಮಧ್ಯೆ ಜಿಲ್ಲಾಧಿಕಾರಿಗಳು ಧರಣಿ ನಿರತ ರೈತರ ಮನವಿಯನ್ನು ಸ್ವೀಕರಿಸಿ ಮಾತನಾಡುತ್ತಾ ಸರಕಾರ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ಸಣ್ಣ ಭತ್ತಕ್ಕೆ ರೂ. ೧೦೩೦ ರೂ. ಸಾಮಾನ್ಯ ಭತ್ತಕ್ಕೆ ರೂ.೧೦೦೦ ರೂ.ಗಳನ್ನು ನಿಗದಿಗೊಳಿಸಿ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುತ್ತೇವೆ ಎಂದು ತಿಳಿಸಿದರು. ಆದರೆ ರೈತರು ಈ ಬೆಂಬಲ ಬೆಲೆಯನ್ನು ತಿರಸ್ಕರಿಸಿ ಕ್ವಿಂಟಾಲ್‌ಗೆ ೧೫೦೦ ರೂ. ನಿಗದಿಗೊಳಿಸಬೇಕೆಂದು ಹೋರಾಟವನ್ನು ಮುಂದುವರಿಸಿತು.

ನಂತರ ಜಿಲ್ಲಾಧಿಕಾರಿಗಳ ಆವರಣದಲ್ಲಿ ರೈತರು ಆಮರಣಾಂತ ಉಪವಾಸ ಪ್ರಾರಂಭಿಸಿದರು. ಹೋರಾಟವು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಅಲ್ಲಲ್ಲಿ ಧರಣಿ, ಪ್ರತಿಭಟನೆ ವ್ಯಕ್ತವಾದವು. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿನಿರತ ರೈತರು ಅಸ್ವಸ್ಥಗೊಂಡರು. ಇವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪುಟ್ಟಣ್ಣಯ್ಯ ಮತ್ತು ನಂಜುಂಡಸ್ವಾಮಿ ಬಣದ ಎರಡು ರೈತ ಸಂಘಟನೆಗಳು ಸಹ ಉಪವಾಸ ಸತ್ಯಾಗ್ರಹ ಕೈಗೊಂಡವು. ನಂತರ ಕೋಡಿಹಳ್ಳಿ ಚಂದ್ರಶೇಖರ ಉಪವಾಸನಿರತ ರೈತರೊಂದಿಗೆ ಚರ್ಚಿಸಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿದರು. ನಂತರ ಬೆಂಗಳೂರಿಗೆ ಒಂದು ನಿಯೋಗ ಕಳುಹಿಸುವ ತೀರ್ಮಾನದಂತೆ ಬೆಂಗಳೂರು ಚಲೋವನ್ನು ಮೇ ೨೧ರಂದು ಆರಂಭಿಸಿದರು. ಇದಕ್ಕೆ ಸರಕಾರವು ಯಾವುದೇ ರೀತಿಯ ವೈಜ್ಞಾನಿಕ ಬೆಲೆಯನ್ನು ನಿಗದಿಪಡಿಸಲಿಲ್ಲ. ಆದರೆ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಏರಿಕೆಯಾಗುವುದರ ಮುಖಾಂತರ ಹೋರಾಟದ ಕಾವು ಕಡಿಮೆಯಾಯಿತು.

ರಸಗೊಬ್ಬರಕ್ಕಾಗಿ ಹೋರಾಟ

ಯಾವುದೇ ರೈತ ಸಂಘಟನೆಗಳ ನೆರವಿಲ್ಲದೆ, ಸಾಮೂಹಿಕವಾಗಿ ಯಾವುದೇ ನಿರ್ದಿಷ್ಟ ಬಗೆಯ ಸೈದ್ಧಾಂತಿಕ ಹಿನ್ನೆಲೆಗಳಿಲ್ಲದೇ ಗೊಬ್ಬರದ ಅಭಾವದಿಂದಾಗಿ ಸರ್ಕಾರದ ಬೇಜವಾಬ್ದಾರಿ ನೀತಿಯನ್ನು ಹಿಂಸಾತ್ಮಕವಾಗಿ ಸ್ವಯಂಪ್ರೇರಣೆಯಿಂದ ೨೦೦೯ರ ಜೂನ್ ತಿಂಗಳಿನಲ್ಲಿ ದಾವಣಗೆರೆ ಪ್ರದೇಶದ ರೈತರು ಪ್ರತಿಭಟಿಸಿದರು.

೨೦೦೯ರ ಜೂನ್ ತಿಂಗಳಿನಲ್ಲಿ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದ್ದರಿಂದ ಬಿತ್ತನೆ ಕಾರ್ಯ ಚುರುಕುಗೊಂಡಿತು. ಬಿತ್ತನೆ ಮಾಡಿದ ಸಲುವಾಗಿ ರೈತರು ರಸಗೊಬ್ಬರಕ್ಕಾಗಿ ಪರದಾಡುವ ಸ್ಥಿತಿ ಉಂಟಾಯಿತು. ಅಲ್ಲದೇ ಸಬ್ಸಿಡಿಯಲ್ಲಿ ಸಿಗಬೇಕಾದ ಗೊಬ್ಬರ ಖಾಸಗಿ ಮಾರಾಟದ ಅಂಗಡಿಗಳಲ್ಲಿ, ಕಾಳ ಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿತ್ತು. ಇದರಿಂದ ಉದ್ರಿಕ್ತಗೊಂಡ ಈ ಪ್ರದೇಶದ ರೈತರು ಗೊಬ್ಬರದ ಅಂಗಡಿಗಳ ಮೇಲೆ ಕಲ್ಲು ತೂರಾಟ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.[೯೦]

ನಗರದ ಜಗಳೂರು ಬಸ್ ನಿಲ್ದಾಣದ ಬಳಿಯ ಗೊಬ್ಬರದ ಅಂಗಡಿಯ ಮುಂದಿನ ಪೊಲೀಸ್ ಚೌಕಿಯನ್ನು ರೈತರು ಧ್ವಂಸಗೊಳಿಸಿ ಪೊಲೀಸ್‌ವಾಹನ ಕದಂಬವನ್ನು ಜಖಂಗೊಳಿಸಿದರು.[೯೧] ಅಲ್ಲದೇ ರೈಲು ತಡೆ, ರಸ್ತೆತಡೆ ಚಳುವಳಿ ಮಾಡುವುದರ ಮುಖಾಂತರ ಹೋರಾಟವನ್ನು ತೀವ್ರಗೊಳಿಸಿದರು. ರೈತರ ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿದ ಆಗಿನ ಜಿಲ್ಲಾಧಿಕಾರಿ ಕೆ.ಅಮರನಾರಾಯಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂದೀಪ್ ಪಾಟೀಲ್, ಉಪವಿಭಾಗಾಧಿಕಾರಿ ಶ್ರೀಮತಿ ಕೆ.ಎಂ. ಜಾನಕಿ ಮಧುಸೂದನ್, ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಆರ್.ಜಿ.ಗೊಲ್ಲರ್, ತಹಶೀಲ್ದಾರ್ ಷಣ್ಮುಖಪ್ಪ ಅವರು ಸ್ಥಳಕ್ಕೆ ಧಾವಿಸಿ ಮನವಿ ಮಾಡಿಕೊಂಡರು. ಆದರೆ ಉದ್ರಿಕ್ತಗೊಂಡ ರೈತರು ತಮ್ಮ ಪ್ರತಿಭಟನೆ ಮುಂದುವರಿಸಿದರು. ಈ ಪ್ರತಿಭಟನೆಯಲ್ಲಿ ಈ ಪ್ರದೇಶದ ಆಲೂರು, ಮೆಳ್ಳೆಕಟ್ಟೆ, ಕಂಚಿಕೆರೆ, ಮಾಗಾನಹಳ್ಳಿ, ಕಾಡಜ್ಜಿ, ರಾಂಪುರ, ಕಂಭತ್ತಹಳ್ಳಿ, ಉಚ್ಚಂಗಿದುರ್ಗ ಸೇರಿದಂತೆ ಇತರೇ ಹಳ್ಳಿಗಳಿಂದ ಬಂದ ಸಾವಿರಾರು ರೈತರು ಭಾಗವಹಿಸಿದ್ದರು.

ಸ್ವಾತಂತ್ರ್ಯೋತ್ತರ ಸಂದರ್ಭದ ರೈತ ಹೋರಾಟಗಳು ಒಂದು ಸೈದ್ಧಾಂತಿಕ ದೃಷ್ಟಿಕೋನವಿಟ್ಟುಕೊಂಡು ಹೋರಾಟ ಮಾಡಿದಂತಹವುಗಳಾಗಿವೆ. ಈ ಹೋರಾಟಗಳಲ್ಲಿ ಶ್ರೀಮಂತ ರೈತ ವರ್ಗದ ವಿರುದ್ಧ ಕೃಷಿ ಕಾರ್ಮಿಕರು ಹೋರಾಟ ನಡೆಸಿದ್ದಾರೆ. ಪ್ರಜಾಪ್ರಭುತ್ವ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ಶ್ರೀಮಂತ ರೈತರು ಮತ್ತು ಸಾಮಾನ್ಯ ರೈತರು ಹೋರಾಟವನ್ನು ಮಾಡಿದ್ದಾರೆ. ರೈತರ ಹೋರಾಟಗಳು ತುಲನಾತ್ಮಕ ಬೆಲೆಯನ್ನು ಆಗ್ರಹಿಸಿ, ಸಾಲವನ್ನು ಕುರಿತು, ಕೈಗಾರಿಕೆ, ಬಂಡವಾಳ ಭೂ ಸ್ವಾಧೀನ ವಿರೋಧಿಸಿ, ರಸಗೊಬ್ಬರ ಮುಂತಾದ ಸಮಸ್ಯೆಗಳನ್ನು ಕುರಿತು ಹೋರಾಟ ನಡೆಸಿವೆ. ಆದರೆ ರೈತರ ಮೂಲ ಸಮಸ್ಯೆಗಳ ಕುರಿತಾಗಲಿ, ಕೃಷಿ ಕೂಲಿಕಾರರ ಪ್ರಶ್ನೆಗಳಿಗಾಗಲಿ, ಬರಗಾಲದಿಂದ ರೋಸಿ ಹೋದ ರೈತರ ಬಗ್ಗೆಯಾಗಲಿ, ನೆರೆಹಾವಳಿ ಬಗ್ಗೆಯಾಗಲಿ ಹೋರಾಟ ಮಾಡಿರುವುದು ಕಂಡುಬಂದಿಲ್ಲ. ಬೆಂಬಲ ಬೆಲೆ, ವೈಜ್ಞಾನಿಕ ಬೆಲೆ ಕುರಿತು ಮತ್ತು ಭೂ ಸ್ವಾಧೀನ ವಿರೋಧಿಸಿ ವಿಭಿನ್ನ ಮಾದರಿಯ ಗಾಂಧಿಯವರ ತಂತ್ರಗಳನ್ನು ಬಳಸಿಕೊಂಡು ಹೋರಾಟ ನಡೆಸಿ ಸಫಲತೆಯನ್ನು ಕಂಡಿರುವ ದಾವಣಗೆರೆ ರೈತ ಹೋರಾಟಗಳತ್ತ ರಾಜ್ಯದ ಗಮನ ಸೆಳೆದಿದೆಯಲ್ಲದೆ ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ.

ಟಿಪ್ಪಣಿಗಳು

೧. ತಂಬಂಡ ವಿಜಯ್ ಪೂಣಚ್ಚ, ರೈತ ಚಳವಳಿ, ೧೯೯೯, ಪು. ೯

೨. ಎಂ.ಜಿ. ನಾಗರಾಜ್, ಕರ್ನಾಟಕ ರೈತ ಚಳುವಳಿ ಸತ್ಯಾಗ್ರಹಗಳು, ೨೦೦೬, ಪು. ೧೨೦

೩. ಅದೇ, ಪು, ೧೨೪

೪. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ೨೦೦೯, ಪು. ೬೭

೫. ಅದೇ, ಪು. ೬೮

೬. ಎಂ.ಜಿ. ನಾಗರಾಜ್, ಪೂರ್ವೋಕ್ತ, ಪು. ೧೨೬-೧೨೭

೭. ಅದೇ, ಪು. ೧೨೯

೮. ಅದೇ, ಪು. ೧೨೯

೯. ಡಿ.ಕೆ. ಕುಲಕರ್ಣಿ, ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಸಂಘಟನೆ ಮತ್ತು ಚಳುವಳಿ (ಇತಿಹಾಸ ದರ್ಶನ ಸಂಪುಟ, ೫) ೧೯೯೦, ಪು. ೧೮೯

೧೦. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೨೧

೧೧. ಮುಜಾಫರ್ ಅಸ್ಸಾದಿ, ಪೂರ್ವೋಕ್ತ, ಪು. ೮೫

೧೨. ಎಂ.ಜಿ. ನಾಗರಾಜ್, ಪೂರ್ವೋಕ್ತ, ಪು. ೨೮೪

೧೩. ಮುಜಾಫರ್ ಅಸ್ಸಾದಿ, ಪೂರ್ವೋಕ್ತ, ಪು. ೮೬

೧೪. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೨೩

೧೫. ಅದೇ, ಪು. ೨೪

೧೬. ಎಂ.ಜಿ. ನಾಗರಾಜ್, ಪೂರ್ವೋಕ್ತ, ಪು. ೨೮೬

೧೭. ಮುಜಾಫರ್ ಅಸ್ಸಾದಿ, ಪೂರ್ವೋಕ್ತ ಪು. ೮೬

೧೮. ಎಂ.ಎಸ್.ಕೆ. ಶಾಸ್ತ್ರಿಯವರ ಸಂದರ್ಶನದ ಮಾಹಿತಿ

೧೯. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೨೫

೨೦. ಅದೇ, ಪು. ೨೦

೨೧. ಅದೇ, ಪು. ೪೦

೨೨. ಅದೇ, ಪು. ೧೬

೨೩. ಎಂ.ಎಸ್.ಕೆ. ಶಾಸ್ತ್ರಿಯವರೊಂದಿಗೆ ನಡೆಸಿದ ಸಂದರ್ಶನ ಮಾಹಿತಿ

೨೪. ಸವಿತ, ಬಿ.ಸಿ. ರೈತ ಹೋರಾಟಗಾರ ಪ್ರೊ. ಎಂ.ಡಿ. ನಂಜುಡಸ್ವಾಮಿ ಚಿಂತನೆಗಳ ವಿಶ್ಲೇಷಣೆ, (ಅಪ್ರಕಟಿತ) ಎಂ.ಫಿಲ್ ನಿಬಂಧ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪು. ೨೫೯

೨೫. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೧೯

೨೬. ಜನತಾವಾಣಿ ದಿನಪತ್ರಿಕೆ, ೨೦ ಸೆಪ್ಟಂಬರ್, ೧೯೯೨, ಪು. ೧

೨೭. ಜನತಾವಾಣಿ ದಿನಪತ್ರಿಕೆ ೧೨-೯-೧೯೯೨, ಪು. ೧

೨೮. ಜನತಾವಾಣಿ ದಿನಪತ್ರಿಕೆ ೧೪-೯-೧೯೯೨, ಪು. ೧

೨೯. ಜನತಾವಾಣಿ ದಿನಪತ್ರಿಕೆ ೧೭-೯-೧೯೯೨, ಪು. ೧

೩೦. ಎಂ.ಜಿ. ನಾಗರಾಜ್, ಪೂರ್ವೋಕ್ತ, ಪು. ೪೪೫

೩೧. ಜನತಾವಾಣಿ ದಿನಪತ್ರಿಕೆ, ೧೯-೧೦-೨೦೦೦ ಪು. ೧

೩೨. ಜನತಾವಾಣಿ ದಿನಪತ್ರಿಕೆ, ೨೧-೧೨-೨೦೦೦ ಪು. ೧

೩೩. ಎಂ.ಜಿ. ನಾಗರಾಜ್, ಪೂರ್ವೋಕ್ತ, ಪು. ೪೬೪-೪೬೫

೩೪. ಅದೇ, ಪು. ೫೬೩

೩೫. ಸವಿತ, ಬಿ.ಸಿ. ಪೂರ್ವೋಕ್ತ, ಪು. ೮೮

೩೬. ಜನತಾವಾಣಿ ದಿನಪತ್ರಿಕೆ, ೨೧-೦೪-೨೦೦೫

೩೭. ಜನತಾವಾಣಿ ದಿನಪತ್ರಿಕೆ, ೨೬-೦೫-೨೦೦೫

೩೮. ಜನತಾವಾಣಿ ದಿನಪತ್ರಿಕೆ, ೩೧-೧೦-೨೦೦೫

೩೯. ಜನತಾವಾಣಿ ದಿನಪತ್ರಿಕೆ, ೧೫-೦೮-೨೦೦೬

೪೦. ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕರಪತ್ರ.

೪೧. ತೇಜಸ್ವಿ ಪಾಟೀಲ್ (ರಾಜ್ಯ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ) ಅವರೊಂದಿಗೆ ನಡೆಸಿದ ಸಂದರ್ಶನದ ಮಾಹಿತಿ.

೪೨. ತೇಜಸ್ವಿ ಪಾಟೀಲ್ (ರಾಜ್ಯ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ) ಅವರೊಂದಿಗೆ ನಡೆಸಿದ ಸಂದರ್ಶನದ ಮಾಹಿತಿ.

೪೩. ಪ್ರಜಾವಾಣಿ ದಿನಪತ್ರಿಕೆ, ೧೩-೧೧-೨೦೦೯, ಪು. ೫

೪೪. ಅಗ್ನಿ, ವಾರಪತ್ರಿಕೆ, ೧೨ ಜೂನ್, ೨೦೧೦, ಪು. ೫

೪೫. ರಾಜ್ಯ ಕಬ್ಬು ಬೆಳೆಗಾರರ ಸಂಘದ ಕರಪತ್ರದ ಮಾಹಿತಿ.

೪೬. ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಇಲಾಖೆಯ ಪತ್ರ.

೪೭. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕರಪತ್ರದ ಮಾಹಿತಿ ಮನವಿ ಸಾರ.

ದಾವಣಗೆರೆ ತಾಲ್ಲೂಕು ಕರೂರು ಗ್ರಾಮದ ರಿ.ಸ.ನಂ. ೫ರಿಂದ ೨೦ರವರೆಗಿನ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರವೇಶಾಭಿವೃದ್ಧಿ ಮಂಡಳಿಯವರು ಜವಳಿಪಾರ್ಕು (ಟೆಕ್ಸ್‌ಟೈಲ್ಸ್) ನಿರ್ಮಿಸುವ ಉದ್ದೇಶಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿದ್ದು. ಭೂ ಸ್ವಾಧೀನಪಡಿಸಿಕೊಂಡಿರುವ ಕೃಷಿ ಯೋಗ್ಯ ಭೂಮಿಯನ್ನು ಈವರೆಗೂ ಉದ್ದೇಶಿಸಿದ ಯೋಜನೆಗೆ ಬಳಕೆ ಮಾಡಿಕೊಂಡಿರದ ಕಾರಣ ರೈತರಿಂದ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ರೈತರಿಗೆ ಹಿಂದಿರುಗಿಸಬೇಕೆಂದು ಹಾಗೂ ಒಂದು ವೇಳೆ ಹಿಂದಿರುಗಿಸದಿದ್ದರೆ ರೈತರು ಸವರಿ ಜಮೀನುಗಳನ್ನು ಮರುಜಪ್ತಿ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರು.

೪೮. ವಿಜಯಕರ್ನಾಟಕ ದಿನಪತ್ರಿಕೆ, ೨೬.೦೪.೨೦೧೦, ಪು. ೫

೪೯. ಭತ್ತ ಬೆಳೆಯುವ ರೈತರ ಸಂದರ್ಶನದ ಮಾಹಿತಿ

೫೦. ಜನತಾವಾಣಿ ದಿನಪತ್ರಿಕೆ, ೧೮ ಜುಲೈ ೨೦೦೯ ಪು. ೧

೫೧. ನಗರವಾಣಿ ದಿನಪತ್ರಿಕೆ, ೧೮ ಜುಲೈ ೨೦೦೯ ಪು. ೧

* * *

ಅಧ್ಯಾಯ ಆರು

ದಾವಣಗೆರೆ ಪ್ರದೇಶದ ರೈತ ಸಂಘಟನೆಗಳು

೬.೧. ಅಖಿಲ ಭಾರತ ಕಿಸಾನ್ ಸಭಾ

೬.೨. ಭಾರತೀಯ ಕಮ್ಯುನಿಸ್ಟ್ ಪಕ್ಷ

೬.೩. ಕರ್ನಾಟಕ ಪ್ರಾಂತ್ಯ ರೈತ ಸಂಘ

೬.೪. ಕರ್ನಾಟಕ ರಾಜ್ಯ ರೈತ ಸಂಘ

೬.೫. ರಾಜ್ಯ ಕಬ್ಬು ಬೆಳೆಗಾರರ ಸಂಘ

೬.೬. ೨೨ ಕೆರೆಗಳ ಏತ ನೀರಾವರಿ ಹೋರಾಟ ಸಮಿತಿ

೬.೭. ರೈತ ಸಂಘಟನೆಗಳ ಸಮಸ್ಯೆಗಳು

ದಾವಣಗೆರೆ ಪ್ರದೇಶದ ರೈತ ಸಂಘಟನೆಗಳು

ಭಾರತ ಕೃಷಿ ಪ್ರಧಾನವಾದ ದೇಶ. ಈ ದೇಶದ ಬೆನ್ನೆಲುಬು ರೈತ. ಆದರೆ ನಮ್ಮಲ್ಲಿ ಮೊದಲಿನಿಂದಲೂ ವಂಶಪಾರಂಪರ್ಯವಾದ ಆಡಳಿತ ವ್ಯವಸ್ಥೆ ಇದ್ದುದರಿಂದ ಅದಕ್ಕೆ ತಕ್ಕಂತೆ ಜಮೀನ್ದಾರಿ ಪದ್ಧತಿ ಬೇರೂರಿಕೊಂಡು ಬಂದಿದೆ. ಕೃಷಿಯಲ್ಲಿ ನಿಜವಾಗಿ ದುಡಿಯುವ ರೈತನಿಗೆ ಎಷ್ಟು ಮಹತ್ವ ಸಿಗಬೇಕೋ ಅಷ್ಟು ಸಿಗಲಿಲ್ಲ. ಭಾರತೀಯ ಸಮಾಜದಲ್ಲಿ ಅಸಂಘಟಿತರಾಗಿದ್ದ ರೈತರಲ್ಲಿ ಆತ್ಮಾಭಿಮಾನ ಹುಟ್ಟಿಸಿ ಅನ್ಯಾಯದ ವಿರುದ್ಧ ಹೋರಾಡುವಂತೆ ಪ್ರೇರೇಪಿಸಿ ಎಚ್ಚರಿಕೆಯನ್ನು ನೀಡಲೆಂದು ರೈತ ಸಂಘಟನೆಗಳು ಜನ್ಮ ತಾಳಿದವು.

ಸ್ವಾತಂತ್ರ್ಯ ಪೂರ್ವದಲ್ಲಿ ರೈತರನ್ನು ರಾಷ್ಟ್ರೀಯ ನಾಯಕರು ಹಾಗೂ ಸ್ಥಳೀಯ ಹೋರಾಟಗಾರರು ಸಂಘಟಿಸುತ್ತಿದ್ದರು. ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಅದರಲ್ಲೂ ೧೯೬೦ರ ನಂತರ ತುಲನಾತ್ಮಕ ಬೆಲೆಗಳ ಬಗ್ಗೆ ಕಾಳಜಿ ವ್ಯಕ್ತವಾದದ್ದು ಕಂಡುಬರುತ್ತದೆ. ಇವು ೧೯೬೦ರ ದಶಕದ ಅಂತ್ಯದಲ್ಲಿ ತಮಿಳುನಾಡಿನ ರೈತರು 'ತಮಿಳು ವ್ಯವಸಾಯಗಳ್ ಸಂಘಂ' ಪಂಜಾಬಿನ ರೈತರು ಖೇತಬಾರಿ ಜಮೀನ್ದಾರಿ ಯೂನಿಯನ್ ಸಂಘಟನೆಗಳು ರೈತರನ್ನು ಸಂಘಟಿಸುವಲ್ಲಿ ಪ್ರಧಾನ ಪಾತ್ರ ವಹಿಸಿದವು. ರೈತ ಸಂಘಟನೆಗಳಿಗೆ ಮೂಲ ಪ್ರೇರೇಣೆಗಳೆಂದರೆ ಆ ಸಂದರ್ಭದಲ್ಲಿನ ಸಮಾಜವಾದಿ ಚಳುವಳಿಗಳು, ಜೆ.ಪಿ. ಚಳುವಳಿಗಳು, ಈ ಚಳುವಳಿಗಳಿಂದ ಸ್ಫೂರ್ತಿ ಪಡೆದ ರೈತರು ತಮ್ಮದೇ ಆದಂತಹ ಪ್ರಾದೇಶಿಕ ರೈತ ಸಂಘಟನೆಗಳ ಸ್ಥಾಪನೆಗೆ ಅಡಿಗಲ್ಲು ಹಾಕಿದರು.

ದಾವಣಗೆರೆ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆಯ ಪೂರ್ವದಲ್ಲಿ ರಾಜಕೀಯ ಪಕ್ಷಗಳು ರೈತರನ್ನು ಸಂಘಟಿಸುವ ಮೂಲಕವಾಗಿ ಮತ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದವು. ೧೯೮೦ರ ದಶಕದಲ್ಲಿ ರೈತರ ಜೀವನಾಡಿಯಾಗಿ ಅರಳಿದಂತಹ ಕರ್ನಾಟಕ ರಾಜ್ಯ ರೈತ ಸಂಘವು ಈ ಪ್ರದೇಶದ ರೈತರ ಸಮಸ್ಯೆಗಳಿಗೆ ಪೂರಕವಾಗಿ ರೈತ ಸಂಘಟನೆ ಮಾಡುವುದರ ಮೂಲಕ ರೈತವಿರೋಧಿ ಸರ್ಕಾರಗಳಿಗೆ ಸಿಂಹಸ್ವಪ್ನವಾಗಿದೆ. ಕರ್ನಾಟಕ ರಾಜ್ಯ ರೈತ ಸಂಘದ ಮೂಲಕ ಈ ಪ್ರದೇಶದ ರೈತರು ಬೆಂಬಲ ಬೆಲೆ, ಸರ್ಕಾರದ ಭೂ ಸ್ವಾಧೀನ ವಿರೋಧಿಸಿ ಹೋರಾಟ, ರಸಗೊಬ್ಬರಕ್ಕಾಗಿ ಮುಂತಾದ ಸಮಸ್ಯೆಗಳಿಗೆ ಗಾಂಧಿಯವರ ಅಹಿಂಸೆ, ಉಪವಾಸ ಸತ್ಯಾಗ್ರಹ, ಪಾದಯಾತ್ರೆ, ಜೈಲ್‌ಭರೋ ಮುಂತಾದ ವಿಶಿಷ್ಟ ರೀತಿಯ ಚಳವಳಿಯನ್ನು ಮಾಡುವುದರ ಮುಖಾಂತರ ರಾಜ್ಯದ ಗಮನ ಸೆಳೆಯುವಲ್ಲಿ ಪ್ರಧಾನ ಪಾತ್ರ ವಹಿಸಿವೆ.

೬.೧. ಅಖಿಲ ಭಾರತ ಕಿಸಾನ್ ಸಭಾ

ಅಖಿಲ ಭಾರತ ಮಟ್ಟದಲ್ಲಿ ರೈತ ಸಂಘಟನೆಯ ದೃಷ್ಟಿಯಲ್ಲಿ ಜನ್ಮ ತಾಳಿದ ಸಂಘಟನೆಯಲ್ಲಿ 'ಕಿಸಾನ್ ಸಭಾ' ಸಹ ಒಂದಾಗಿದೆ. ಮೂಲತಃ ಭಾರತೀಯ ಕಮ್ಯುನಿಷ್ಟ್ ಪಕ್ಷದ ಅಂಗ ಸಂಸ್ಥೆಯಾಗಿದೆ.[೧] ಕಿಸಾನ್ ಎಂದರೆ ರೈತ ಎಂಬ ಅರ್ಥವಿದೆ. ೧೯೩೬ರಲ್ಲಿ ಜನ್ಮ ಪಡೆದ ಕಿಸಾನ್ ಸಭಾದ ಉದ್ದೇಶಗಳೆಂದರೆ,

೧. ಭೂಮಾಲೀಕ ಬಂಡವಾಳಶಾಹಿ ಪದ್ಧತಿಯನ್ನು ನಾಶ ಮಾಡಲು

೨. ಸ್ವಾತಂತ್ರ್ಯ ಹೋರಾಟದೊಡನೆ ರೈತ ಹೋರಾಟವನ್ನು ಬೆಸೆಯುತ್ತಾ ಭಾರತದ ರೈತಾಪಿ ವರ್ಗವನ್ನು ಒಂದು ಗೂಡಿಸಲು "ಸಿದ್ಧಾಂತ-ಸಂಘಟನೆ-ಹೋರಾಟ" ಎಂಬ ಮಾದರಿ ಅಂಶಗಳನ್ನು ಹಮ್ಮಿಕೊಂಡಿತು. ಶೋಷಣಾರಹಿತ ಸಮಾಜದ ಗುರಿಯನ್ನಿಟ್ಟುಕೊಂಡು, ಸಮಕಾಲೀನ ಗ್ರಾಮೀಣ ಸಮಸ್ಯೆಗಳಿಗೆ ಹೋರಾಟದ ಮೂಲಕ ಪರಿಹಾರವನ್ನು ಕಾಣಿಸುವ ಉದ್ದೇಶವನ್ನು ಈ ಸಂಘಟನೆಯು ಹೊಂದಿದೆ.[೨]

ಕಿಸಾನ್ ಸಭಾಗೆ ಅಖಿಲ ಭಾರತ ಕಿಸಾನ್ ಸಭಾ ಎಂಬ ನಾಮಕರಣವನ್ನು ಕಿಸಾನ್ ಸಭಾದ ಎರಡನೇ ಸಮ್ಮೇಳನದಲ್ಲಿ ಸೂಚಿಸಲಾಯಿತು. ಕಿಸಾನ್ ಸಭಾ ಅಧಿವೇಶನದಲ್ಲಿ ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರು ಅವರು ಶುಭಾಶಯ ಕೋರಿದರು.

ಅಖಿಲ ಭಾರತ ಕಿಸಾನ್ ಸಭಾ ಬೆಳವಣಿಗೆ

೧೯೨೦ರ ದಶಕದಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಉಂಟಾಯಿತು. ಬ್ರಿಟಿಷರು ಭಾರತೀಯ ಗೃಹ ಕೈಗಾರಿಕೆಗಳನ್ನು ನಾಶ ಮಾಡಿದರು. ಎಲ್ಲೆಲ್ಲೂ ನಿರುದ್ಯೋಗ ಹೆಚ್ಚಾಯಿತು. ರೈತಾಪಿ ಸಮುದಾಯ ಕಷ್ಟಕ್ಕೀಡಾಯಿತು. ಕೃಷಿಯೇ ಮುಖ್ಯ ಉತ್ಪಾದನೆಯಾದರೂ ಆಹಾರದ ಕೊರತೆ ಉಂಟಾದರೂ ಧಾನ್ಯಗಳ ಬೆಲೆ ಕುಸಿಯಿತು. ಅದೇ ಸಮಯದಲ್ಲಿ ತೆರಿಗೆ ಹೆಚ್ಚಳ, ಸಾಲದ ಬಾಧೆ, ಅತೀವ ಬಡ್ಡಿ, ಲೇವಾದೇವಿಯವರ ಕಾಟ, ಸರಕಾರ ಇದರ ಪರವಾಗಿದ್ದರಿಂದ ಕಾನೂನು ಕ್ರಮಗಳಿಂದ ಉಂಟಾದ ಸಂಕಷ್ಟಗಳು ಹೇಳತೀರದಾದವು. ಇದರಿಂದ ರೈತ ಹೋರಾಟಗಳ ಅಲೆಗಳು ಉಂಟಾಗಿ ಅಖಿಲ ಭಾರತ ಕಿಸಾನ್ ಸಭಾ ವ್ಯಾಪಕವಾಗಿ ಬೆಳೆಯಲು ಸಾಧ್ಯವಾಯಿತು.[೩]

ದಾವಣಗೆರೆ ಪ್ರದೇಶದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸಂಘಟನೆಯು ರೈತರ ಪರವಾಗಿ ಹೋರಾಟ ನಡೆಸುತ್ತಾ ಬಂದಿದೆ. ಈ ಪ್ರದೇಶದ ಅನೇಕ ರೈತ ಹೋರಾಟದಲ್ಲಿ ಭಾಗವಹಿಸುವುದರೊಂದಿಗೆ ರೈತರನ್ನು ಸಂಘಟನೆ ಮಾಡುತ್ತದೆ. ಈ ಪ್ರದೇಶದ ಪ್ರತಿ ತಾಲ್ಲೂಕುಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಕಛೇರಿಗಳಿವೆ. ಈ ಸಂಘಟನೆ ರೈತರ ರಸಗೊಬ್ಬರ, ಬಿತ್ತನೆ ಬೀಜ, ಭೂ ಸ್ವಾಧೀನ ಚಳುವಳಿ, ವೈಜ್ಞಾನಿಕ ಬೆಲೆ ನಿಗದಿ ಮುಂತಾದ ಹೋರಾಟಗಳಲ್ಲಿ ರೈತ ಸಂಘಟನೆ ಮಾಡುವುದರ ಮೂಲಕ ಧರಣಿ, ಸತ್ಯಾಗ್ರಹ, ಅನಿರ್ದಿಷ್ಟ ಧರಣಿ ನಡೆಸುವ ಮೂಲಕ[೪] ರೈತ ಸಂಘಟನೆ ಮಾಡುವ ಕೆಲಸದಲ್ಲಿ ನಿರತವಾಗಿದೆ.

ಈ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿ ಹೊಸಳ್ಳಿ ಮಲ್ಲೇಶ, ಸಹ ಕಾರ್ಯದರ್ಶಿಯಾಗಿ ಗುಡಿಹಳ್ಳಿ ಹಾಲೇಶ್, ಜಿಲ್ಲಾಧ್ಯಕ್ಷರಾಗಿ ಆವರಗೆರೆ ವಾಸು, ಜಿಲ್ಲಾ ಸಂಚಾಲಕರಾಗಿ ಹೆಚ್. ಸಂತೋಷ ಇದ್ದಾರೆ. ಅವರ ನಾಯಕತ್ವದಲ್ಲಿ[೫] ಅಖಿಲ ಭಾರತ ಕಿಸಾನ್ ಸಭಾ ರೈತರಲ್ಲಿ ಮತ್ತು ಈ ಪ್ರದೇಶದಲ್ಲಿ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ.

೬.೨. ಭಾರತೀಯ ಕಮ್ಯುನಿಸ್ಟ್ ಪಕ್ಷ

ಕಾರ್ಮಿಕ ಸಂಘಟನೆಯ ಪಕ್ಷವಾದ ಭಾರತೀಯ ಕಮ್ಯುನಿಸ್ಟ್ ಪಕ್ಷವು ರೈತ ಕಾರ್ಮಿಕರ ಸಂಘಟನೆಯಲ್ಲಿಯೂ ಪ್ರಧಾನ ಪಾತ್ರ ವಹಿಸಿದೆ. ದಾವಣಗೆರೆ ನಗರದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು, ಕಾರ್ಮಿಕ ರೈತ ಸಂಘಟನೆಯನ್ನು ಕಟ್ಟಲು ಪ್ರಕ್ರಿಯೆಗಳು ವಿವಿಧ ಮಜಲುಗಳನ್ನು ಪಡೆದುಕೊಂಡಿತು.

ಜಗತ್ತಿನ ಇತರ ಭಾಗಗಳಲ್ಲಿ ಮಾರ್ಕ್ಸ್‌ನ ತತ್ವಗಳು ಜನಪ್ರಿಯವಾಗುತ್ತಿದ್ದಂತಹ ಸಂದರ್ಭವಿದಾಗಿತ್ತು. ಮಾರ್ಕ್ಸ್‌ನ ಶ್ರಮಕ್ಕೆ ತಕ್ಕ ಪ್ರತಿಫಲ ತತ್ವಗಳು ಕಾರ್ಮಿಕರನ್ನು ಸೆಳೆದವು. ದಾವಣಗೆರೆಯಲ್ಲಿ ಬಿ.ವಿ.ಕಕ್ಕಿಲಾಯ, ಎನ್.ಡಿ. ಶಂಕರ್ ಮುಂತಾದವರು ಕಮ್ಯುನಿಸ್ಟ್ ಸಂಘಟನೆಯ ಬೆಳವಣಿಗೆಗೆ ಕಾರಣೀಭೂತರಾದರು.[೬] ದಾವಣಗೆರೆಯಲ್ಲಿ ಪುಡಾರಿ ಮುರಿಗೆಯ್ಯನವರು ಕಮ್ಯುನಿಸ್ಟ್ ಪಕ್ಷದ ಉದಯಕ್ಕೆ ಕಾರಣರಾದರು.[೭] ೧೯೪೨ರಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಪಕ್ಷ ೧೯೬೬ರವರೆಗೂ ಭದ್ರವಾದ ನೆಲೆಗಟ್ಟಿನ ಮೇಲೆ ನಿಲ್ಲಲು ಬಹಳಷ್ಟು ಹೋರಾಟಗಳನ್ನು ನಡೆಸಿತು.

ದಾವಣಗೆರೆ ಪ್ರದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ರೈತ ಪರ ಹೋರಾಟದಲ್ಲಿ ಭಾಗವಹಿಸುವುದರ ಮೂಲಕ ರೈತರ ಒಲವನ್ನು ಗಳಿಸಿಕೊಂಡಿತು. ತುರ್ತು ಪರಿಸ್ಥಿತಿ ಸಂದರ್ಭದ ೨೦ ಅಂಶಗಳ ಕಾರ್ಯಕ್ರಮದಡಿ ಉಳುವವನಿಗೇ ಭೂಮಿ ದೊರಕಿಸಿಕೊಡಲು ಹೋರಾಟ ಆರಂಭಿಸಲಾಯಿತು. ಈ ಹೋರಾಟದ ನೇತೃತ್ವದಲ್ಲಿ ಕೃಷಿ ಕಾರ್ಮಿಕ ಮುಖಂಡ ಹಾಗೂ ನಗರದ ಕಾರ್ಮಿಕ ಮುಖಂಡರು ಆದ ಆನಗೋಡು ರಾಮಚಂದ್ರಪ್ಪನವರು ವಹಿಸಿದ್ದರು.[೮] ನಮ್ಮ ರಾಷ್ಟ್ರದಲ್ಲಿ ಭೂರಹಿತ ಕಾರ್ಮಿಕರನ್ನು ಸುಧಾರಿಸುವ ಪ್ರಯತ್ನ ವಿಳಂಬವೂ ಆಗಿತ್ತು. ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಬಹಳಷ್ಟು ಹಿಂದೆಯೇ ಕಾರ್ಮಿಕ ಚಳುವಳಿಯು ಕೃಷಿ ಕಾರ್ಮಿಕರನ್ನೊಳಗೊಂಡಿತ್ತು.[೯] ಈ ನಿಟ್ಟಿನಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಹಮ್ಮಿಕೊಂಡ ಈ ಹೋರಾಟ ಅರ್ಥಪೂರ್ಣವಾಗಿದೆ.

ದಾವಣಗೆರೆಯಿಂದ ೧೬ ಕಿ.ಮೀ. ದೂರದಲ್ಲಿರುವ ಆನಗೋಡು ಹೋಬಳಿಯ ಹತ್ತಾರು ಹಳ್ಳಿಗಳಲ್ಲಿ ಭೂಮಾಲೀಕರ ವಿರುದ್ಧ ಹೋರಾಟವನ್ನು ಸಂಘಟಿಸಿದರು. ಆನಗೋಡು ಹೋಬಳಿಯ ಕೊಗ್ಗನೂರು, ಆನಗೋಡು, ಆಲೂರು, ಹಟ್ಟಿ ಮುಂತಾದ ಗ್ರಾಮಗಳಲ್ಲಿ ಕೃಷಿ ಕಾರ್ಮಿಕರಿಗೆ ಬಲ ಬಂದಿತ್ತು. ಕಮ್ಯುನಿಸ್ಟ್ ಪಕ್ಷವೂ ಭೂಮಾಲೀಕರ ವಿರುದ್ಧ ಕೃಷಿ ಕಾರ್ಮಿಕರನ್ನು ಸಂಘಟಿಸಿತು. ಜೊತೆಗೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್, ಅಕ್ಕಿ, ಗೋಧಿ ಬೆಲೆಗಳನ್ನು, ರಾಜ್ಯ ಸರ್ಕಾರವು ಬಸ್ ಪ್ರಯಾಣದರ ಹಾಗೂ ಆಹಾರ ಸಾಮಗ್ರಿಗಳ ಬೆಲೆ ಏರಿಸುವುದರ ವಿರುದ್ಧ ಹೋರಾಟ ನಡೆಸಿದೆ.

ದಾವಣಗೆರೆ ಜಿಲ್ಲಾ ಕಮ್ಯುನಿಸ್ಟ್ ಪಕ್ಷವನ್ನು ಇಂದು ಹೆಚ್.ಕೆ. ರಾಮಚಂದ್ರಪ್ಪ, ಜಿ.ಎಂ. ಹನುಮಂತಪ್ಪ ಮುಂತಾದವರ ಮುಖಂಡತ್ವದಲ್ಲಿ ರೈತಪರ ಆರ್ಥಿಕ ಚಿಂತನೆಗಳಿಂದ ಮುನ್ನಡೆಸುತ್ತಿದ್ದಾರೆ.

೬.೩. ಕರ್ನಾಟಕ ಪ್ರಾಂತ್ಯ ರೈತ ಸಂಘ

೧೯೫೬ರಲ್ಲಿ ಕರ್ನಾಟಕದ ಏಕೀಕರಣವಾದ ಮೇಲೆ ಮೈಸೂರು ರಾಜ್ಯದ ಕಿಸಾನ್ ಸಭಾದ ರೈತರು ತಮ್ಮ ನೂತನ ರೈತ ಸಂಘಟನೆಗೆ ಕರ್ನಾಟಕ ಪ್ರಾಂತ್ಯ ರೈತ ಸಂಘ ಎಂದು ಕರೆದರು. ರೈತನನ್ನೇ ಹೊಲದೊಡೆಯನನ್ನಾಗಿಸುವ, ಭೂರಹಿತರಿಗೆ ಭೂಮಿ ಕೊಡಿಸುವ, ವೈಜ್ಞಾನಿಕ ಬೆಲೆ, ಮುಂತಾದ ಉದ್ದೇಶಗಳಿಂದ ಜನ್ಮತಾಳಿದ ಕರ್ನಾಟಕ ಪ್ರಾಂತ್ಯ ರೈತ ಸಂಘವು ದಾವಣಗೆರೆ ಪ್ರದೇಶದಲ್ಲಿ ಎ.ಎಸ್.ಕೆ. ಶಾಸ್ತ್ರಿಯವರ ಮುಖಂಡತ್ವದಲ್ಲಿ ರೈತಪರವಾದ ಹೋರಾಟ ನಡೆಸಿತು.[೧೦]

ದಾವಣಗೆರೆ ಪ್ರದೇಶದ ಸುತ್ತಮುತ್ತಲಿನ ಪ್ರದೇಶಗಳಾದ ಆನಗೋಡು, ಆಲೂರು, ಮಾಯಕೊಂಡ, ಹೆಬ್ಬಾಳು, ಮುಂತಾದ ಕಡೆ ಆ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದ ಹೊಗೆಸೊಪ್ಪು ಕಂಪನಿಗೆ ಕೊಂಡುಕೊಳ್ಳುತ್ತಿತ್ತು. ಈ ಕಂಪನಿಯು ರೈತರಿಗೆ ಸೂಕ್ತವಾದ ಬೆಲೆಯನ್ನು ಕೊಡದೇ ವಂಚನೆ ಮಾಡುತ್ತಿತ್ತು. ಇದನ್ನು ಮನಗಂಡ ಕರ್ನಾಟಕ ಪ್ರಾಂತ್ಯ ಸಂಘಟನೆಯ ಮುಖಂಡರಂತಹ ಎಂ.ಎಸ್.ಕೆ. ಶಾಸ್ತ್ರಿಯವರು ರೈತರನ್ನು ಸಂಘಟನೆ ಮಾಡಿ Tobacco ಕಂಪನಿಯ ವಿರುದ್ಧ ರೈತರನ್ನು ಸಂಘಟಿಸಿ ಹೋರಾಟ ನಡೆಸಿದರು. ಅಲ್ಲದೆ, ೧೯೭೦-೮೦ರ ದಶಕದಲ್ಲಿ ಪಿ.ಎಲ್.ಡಿ. ಬ್ಯಾಂಕ್‌ನವರು ರೈತರಿಗೆ ಬಾವಿಯ ಸಾಲವನ್ನು ನೀಡಿ ಸಾಲದ ಮರುಪಾವತಿಗಾಗಿ ಜಪ್ತಿ ಕಾರ್ಯವನ್ನು ಹಮ್ಮಿಕೊಂಡಾಗ ಅದರ ವಿರುದ್ಧ ರೈತರನ್ನು ಸಂಘಟಿಸಲಾಯಿತು.[೧೧]

ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆಯಾಗುವವರೆಗೆ ಕರ್ನಾಟಕ ಪ್ರಾಂತ್ಯ ರೈತ ಸಂಘ ದಾವಣಗೆರೆ ಪ್ರದೇಶದ ರೈತರನ್ನು ಸಂಘಟಿಸುವಲ್ಲಿ ಪ್ರಧಾನವಾದ ಪಾತ್ರ ವಹಿಸಿತ್ತು.

೬.೪. ಕರ್ನಾಟಕ ರಾಜ್ಯ ರೈತ ಸಂಘ

ರೈತ ಸಂಘದ ಹುಟ್ಟು ಮತ್ತು ಬೆಳವಣಿಗೆ

೧೯೮೦ರಲ್ಲಿ ರೈತರಿಗೆ ಪ್ರಾಂತೀಯ ಮಟ್ಟದಲ್ಲಿದ್ದ ರೈತ ಸಂಘಟನೆಗಳು ಒಂದಾಗಿ ಸೇರಿ ಒಂದು ಸಂಘಟನೆ ರೂಪಿಸಬೇಕೆಂಬ ಯೋಜನೆ ಉಂಟಾಯಿತು. ಇದು ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಹೋರಾಟದ ಪ್ರೇರಣೆಯಿಂದಾಗಿ ರೂಪುಗೊಂಡಿತು. ಶಿವಮೊಗ್ಗದ "ಶಿವಮೊಗ್ಗ ರೈತ ಸಂಘ"ವು ಶಿವಮೊಗ್ಗದ ಕಬ್ಬು ಬೆಳೆಗಾರರ ಸಂಘದ ಒಂದು ಭಾಗವಾಗಿತ್ತು. ಮೂಲತಃ ರೈತ ಸಂಘದ ನಾಯಕತ್ವ ಕಬ್ಬು ಬೆಳೆಗಾರರ ಸಂಘದಿಂದ ಬಂದಿತ್ತು.[೧೨]

೧೯೮೦ರ ಸೆಪ್ಟೆಂಬರ್ ೧ರಂದು ಶಿವಮೊಗ್ಗ ಜಿಲ್ಲಾ ರೈತ ಸಂಘ ಸುಮಾರು ೨೫,೦೦೦ ರೈತರ ಸಂಘಟನೆಗಾಗಿ ಸಮಾವೇಶ ನಡೆಸಿತ್ತು. ತಮಿಳುನಾಡಿನ ಖ್ಯಾತ ರೈತ ಹೋರಾಟಗಾರ ನಾರಾಯಣಸ್ವಾಮಿ ರೈತರನ್ನುದ್ದೇಶಿಸಿ ಮಾತನ್ನಾಡುತ್ತಾ ಎಲ್ಲ ರೈತರು ಹಸಿರು ಶಾಲು-ಟೋಪಿಯನ್ನು ಬಳಸಬೇಕೆಂದು ಕರೆ ನೀಡಿದರು.[೧೩] ಹಸಿರು ಶಾಲು-ಸಮೃದ್ಧಿಯ ಸಂಕೇತವೆಂಬುದಾಗಿ ರೈತ ನಾಯಕರ ಅಭಿಪ್ರಾಯ. ಇದರಿಂದಾಗಿ ಹಸಿರು-ಶಾಲು-ಟೋಪಿ ರೈತರ ಮಧ್ಯೆ ಬಹಳ ಪ್ರಸಿದ್ಧವಾಗಿದೆ.

ರೈತರು ೧೯೮೦ರ ಅಕ್ಟೋಬರ್ ೨ರಂದು ಗಾಂಧಿ ಜಯಂತಿಯಂದು ಶಿವಮೊಗ್ಗದಲ್ಲಿ ರಸ್ತೆ ತಡೆ ಮಾಡುವ, ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸುವ ಹಾಗೂ ವಿದ್ಯಾರ್ಥಿಗಳು ಬೀದಿಗಿಳಿಯುವ ಮೂಲಕ ರೈತ ಹೋರಾಟವನ್ನು ಬಲಿಷ್ಠಗೊಳಿಸಿದರು. ಸಹಜವಾಗಿಯೇ ಈ ಚಳುವಳಿ ವ್ಯಾಪಕವಾಗಿ ರಾಜ್ಯದಾದ್ಯಂತ ಪ್ರಬಲವಾಗಿ ಬೆಳೆಯಿತು. ಚಿತ್ರದುರ್ಗ ಪ್ರದೇಶದ ದಾವಣಗೆರೆ ಸೇರಿದಂತೆ ಹಾಸನ, ಬೆಳಗಾಂ, ಭದ್ರಾವತಿ, ಧಾರವಾಡ, ರಾಯಚೂರು ಮುಂತಾದ ಜಿಲ್ಲೆಗಳಿಂದ ಶಿವಮೊಗ್ಗ ರೈತ ಸಂಘಕ್ಕೆ ಬೆಂಬಲ ವ್ಯಕ್ತವಾಯಿತು.[೧೪]

ಶಿವಮೊಗ್ಗದಲ್ಲಿ ಸಭೆ ಸೇರಿದ ಬೇರೆ ಬೇರೆ ಜಿಲ್ಲೆಗಳ ಪ್ರಾಂತ್ಯ ರೈತ ಸಂಘಗಳು ತಮ್ಮ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒಂದಾಗಿ ಹೋರಾಡುವ ಇಂಗಿತವನ್ನು ತೆಗೆದುಕೊಂಡವು. ಈ ಸಭೆಯಲ್ಲಿ ಚನ್ನಗಿರಿ ರೈತರು ಸರಕಾರಿ ನೌಕರರಿಗೆ ಸಿಗುವ ಎಲ್ಲ ಸೌಲಭ್ಯಗಳು ರೈತರಿಗೆ ಸಿಗುವಂತೆ ಬೇಡಿಕೆ ಮುಂದಿಟ್ಟರು.[೧೫] ಚಿತ್ರದುರ್ಗ,

ದಾವಣಗೆರೆ ಪ್ರದೇಶದಿಂದ ಎಂ.ಎಸ್.ಕೆ. ಶಾಸ್ತ್ರಿಯವರು ಈ ಸಭೆಯಲ್ಲಿ ಭಾಗವಹಿಸಿದ್ದರು.[೧೬] ಇದರಿಂದ ೧೯೮೦ ಅಕ್ಟೋಬರ್ ೧೭ರಂದು ರಾಜ್ಯದ ವಿವಿಧ ಕಡೆಗಳಿಂದ ಬಂದಿದ್ದ ರೈತ ನಾಯಕರೆಲ್ಲ ಬೆಂಗಳೂರಿನಲ್ಲಿ ಒಟ್ಟಾಗಿ ಸೇರಿ ೧೯ ಮುಖ್ಯ ಬೇಡಿಕೆಗಳನ್ನು ಸರಕಾರದ ಮುಂದಿಟ್ಟರು. ಆ ದಿನವೇ "ಕರ್ನಾಟಕ ರಾಜ್ಯ ರೈತ ಸಂಘ"ದ ಸ್ಥಾಪನೆಯಾಯಿತು.[೧೭] ರೈತ ಸಂಘದ ಅನೇಕ ಬೇಡಿಕೆಗಳನ್ನು ಈಡೇರಿಸಲು ಸರಕಾರ ಒಪ್ಪಿಕೊಂಡಿತು. ಮತ್ತೆ ಕೆಲವು ಬೇಡಿಕೆಗಳನ್ನು ಪರಿಶೀಲಿಸುವುದಾಗಿ ತಿಳಿಸಿತು. ಮುಜಾಫರ್ ಅಸ್ಸಾದಿಯವರು ಅಭಿಪ್ರಾಯಪಡುವ ಹಾಗೆ ಸರಕಾರವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿತು. ರೈತ ಸಂಘದ ಹೋರಾಟ ನ್ಯಾಯ ಸಮ್ಮತಗೊಂಡಿತು.[೧೮]

ರೈತ ಸಂಘದ ೧೯ ಬೇಡಿಕೆಗಳು

೧. ಬೇರೆ ಬೇರೆ ಕಾರಣಗಳಿಂದಾಗಿ ರೈತರ ಮೇಲೆ ದಾಖಲಿಸಿದ ಆರೋಪಗಳನ್ನು ವಾಪಸ್ಸು ಪಡೆಯುವುದು ಮತ್ತು ಬೇಷರತ್ತಾಗಿ ಬಿಡುಗಡೆಗೊಳಿಸುವುದು.

೨. ಬ್ಯಾಂಕ್ ಹಾಗೂ ಸರಕಾರದಿಂದ ಪಡೆದ ಸಾಲಗಳನ್ನು ಮನ್ನಾ ಮಾಡಬೇಕು.

೩. ಸಾಲಗಾರರಿಂದ ವಶಪಡಿಸಿಕೊಳ್ಳಲಾದ ಆಸ್ತಿಯನ್ನು ವಾಪಸ್ಸು ಮಾಡುವುದು.

೪. ಕೃಷಿ ವೆಚ್ಚಗಳನ್ನು ಪರಿಗಣಿಸಿ ಸಾಲ ನೀಡಿಕೆಯನ್ನು ಹೆಚ್ಚಿಸುವುದು.

೫. ಉತ್ಪಾದನೆ ಆಧಾರದ ಮೇಲೆ ತೆರಿಗೆ, ಅಭಿವೃದ್ಧಿ ತೆರಿಗೆ ರದ್ದತಿ, ನೀರಿನ ಕಂದಾಯವನ್ನು ೧೯೭೬-೭೩ ಕಡಿಮೆ ಮಾಡುವುದು. ನೀರಾವರಿ ರಹಿತ ಅಥವಾ ಒಣಭೂಮಿಗೆ ತೆರಿಗೆಯನ್ನು ಹಾಕದಿರುವುದು, ಅಶಕ್ತ ರೈತರ ಮೇಲೆ ತೆರಿಗೆಯನ್ನು ಹಾಕದಿರುವುದು.

೬. ಮಾನವ ತಾಸು ವ್ಯಯವಾಗಿದ್ದನ್ನು ಪರಿಗಣಿಸಿ ಅಥವಾ ಆಧರಿಸಿ ವಾಸ್ತವಿಕ ಬೆಲೆಯನ್ನು ನಿಶ್ಚಯಿಸಬೇಕು. ಕೈಗಾರಿಕಾ ಉತ್ಪಾದನೆಗಳ ಬೆಲೆ ಕಚ್ಚಾ ಸಾಮಗ್ರಿ ಮತ್ತು ಉತ್ಪಾದನಾ ಕಾರಣಗಳೂ ಸೇರಿದಂತೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟಿಗಿಂತಲೂ ಹೆಚ್ಚಾಗಲು ಬಿಡಬಾರದು. ರಾಸಾಯನಿಕ ಗೊಬ್ಬರವನ್ನು ೧೯೭೩ರ ಬೆಲೆಯಲ್ಲಿ ಪೂರೈಸಬೇಕು.

೭. ಮಾನವ ದಿನದ ಆಧಾರದ ಮೇಲೆ ವೈಜ್ಞಾನಿಕ ಬೆಲೆ ನೀತಿಯನ್ನು ಜಾರಿಗೊಳಿಸುವುದು. ಈ ಕೆಳಗಿನ ನಿಶ್ಚಿತ ದರಗಳ ಮೇಲೆ ಕೃಷಿ ಪದಾರ್ಥಗಳನ್ನು ಸರ್ಕಾರ ಖರೀದಿಸಬೇಕು.

೮. ಕೃಷಿಯನ್ನು ಕೈಗಾರಿಕೆ ಎಂದು ಘೋಷಿಸಿ ಸಮಾಜ ಸೌಲಭ್ಯವನ್ನು ಕೃಷಿಗೆ ಒದಗಿಸಬೇಕು.

೯. ಪ್ರತಿಯೊಬ್ಬ ರೈತ ಮತ್ತು ಕೃಷಿ ಕಾರ್ಮಿಕನಿಗೆ ನಿವೃತ್ತಿವೇತನ ನೀಡಬೇಕು.

೧೦. ಕೃಷಿ ಕಾರ್ಮಿಕರಿಗೆ ಕೈಗಾರಿಕಾ ಕಾರ್ಮಿಕರಿಗೆ ನೀಡುವ ವೇತನವನ್ನು ನೀಡಬೇಕು.

೧೧. ಪ್ರೀಮಿಯಂ ಇಲ್ಲದೇ ರೈತರ ಬೆಳೆಗಳಿಗೆ ವಿಮೆ.

೧೨. ಗೇಣಿದಾರನಿಗೆ ನೀಡಿದ ಭೂಮಿಗೆ ಯಾವುದೇ ಶುಲ್ಕವನ್ನು ವಿಧಿಸದೇ ಹಕ್ಕು ಪತ್ರವನ್ನು ನೀಡಬೇಕು. ಭೂ ಮಾಲೀಕನಿಗೆ ಒಂದೇ ಕಂತಿನಲ್ಲಿ ಹಣವನ್ನು ನೀಡಬೇಕು.

೧೩. ಯೋಜನಾ ವೆಚ್ಚದಲ್ಲಿ ಶೇಕಡಾ ೮೦ನ್ನು ಹಳ್ಳಿಗಳ ಅಭಿವೃದ್ಧಿಗೆ ತೆಗೆದಿರಿಸಬೇಕು.

೧೪. ಸರಕಾರದ ಭೂಮಿಯನ್ನು ರೈತರಿಗೆ ನೀಡಬೇಕಲ್ಲದೇ ಜನರ ಬೆಳವಣಿಗೆಗೆ ಸರಕಾರ ಸಹಾಯ ಮಾಡಬೇಕು. ಕೃಷಿ ಕಾರ್ಮಿಕರಿಗೆ ಉಚಿತ ನಿವೇಶನ, ಶಿಕ್ಷಣ, ವೈದ್ಯಕೀಯ ಸೌಲಭ್ಯ ನೀಡುವುದರ ಜೊತೆಗೆ ಬಡ ಜನತೆಯ ಸಲುವಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು.

೧೫. ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ೫೦ರಷ್ಟು ಸ್ಥಾನವನ್ನು ರೈತ ಮಕ್ಕಳಿಗೆ ಮೀಸಲಿಡಬೇಕು.

೧೬. ಗ್ರಾಮೀಣ ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಬೇಕು. ಆರ್.ಎಂ.ಸಿ. ಮತ್ತು ಕಬ್ಬು ತೆರಿಗೆಯನ್ನು ರೈತರ ಅಬಿವೃದ್ಧಿ ನಿಧಿಗೆ ಉಪಯೋಗಿಸಬೇಕು.

೧೭. ರೈತರ ಟ್ರ್ಯಾಕ್ಟರ್‌ಗಳ ಮೇಲೆ ಎಲ್ಲ ವಿಧದ ತೆರಿಗೆ ಮತ್ತು ಸುಂಕಗಳನ್ನು ಹಾಗೂ ಇತರ ನಿರ್ಬಂಧಗಳನ್ನು ತೆಗೆದು ಹಾಕಬೇಕು.

೧೮. ಪರ್ಚೇಸ್ ಟ್ಯಾಕ್ಸ್ ಮತ್ತು ಸಕ್ಕರೆ ಮೇಲೆ ವಿಧಿಸಿದ ಲೆವಿ ಟ್ಯಾಕ್ಸ್ (೧೯೭೯-೮೦) ರದ್ದುಗೊಳಿಸಬೇಕು.

೧೯. ಅಲ್ಯೂಮಿನಿಯಂ ಕಾರ್ಖಾನೆಗಳಂತೆ ಕೃಷಿಗೆ ಸರಬರಾಜು ಮಾಡುವ ವಿದ್ಯುತ್ತಿಗೆ ಸರಕಾರ ಯುನಿಟಿಗೆ ೬.೫ ಪೈಸೆಯಂತೆ ತೆಗೆದುಕೊಳ್ಳಬೇಕು. ರೈತನು ಉಪಯೋಗಿಸಿದ ವಿದ್ಯುತ್ತಿಗೆ ಮಾತ್ರ ದರ ನಿಗದಿ ಮಾಡಬೇಕು. ಕನಿಷ್ಠ ದರವನ್ನು ನಿಗದಿಪಡಿಸಬಾರದು. ಬೇಡಿಕೆ ದರವನ್ನು ರದ್ದು ಮಾಡಬೇಕು.

ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸುವುದರ ಮುಖಾಂತರ ಕರ್ನಾಟಕ ರಾಜ್ಯ ರೈತ ಸಂಘ ಅಕ್ಟೋಬರ್ ೧೭, ೧೯೮೦ರಂದು ಅಸ್ತಿತ್ವಕ್ಕೆ ಬಂದಿತು. ಇದರ ಸಂಸ್ಥಾಪಕ ಅಧ್ಯಕ್ಷರಾಗಿದ್ದವರು ಹಿಂದಿನ ಕೃಷಿ ಮಂತ್ರಿ ಹಾಗೂ ಸ್ಪೀಕರ್ ಆಗಿದ್ದ ಹೆಚ್.ಎಸ್. ರುದ್ರಪ್ಪ. ಹೋರಾಟ ಸಮಿತಿಯ ಸಂಚಾಲಕರಾಗಿದ್ದ ಎಂ.ಡಿ. ನಂಜುಂಡಸ್ವಾಮಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡರು. ಕಡಿದಾಳು ಶಾಮಣ್ಣ, ರೇವಣಸಿದ್ಧಯ್ಯ ಮುಂತಾದವರು ಸಂಘದ ಸದಸ್ಯರಾಗಿದ್ದರು.

ಗುಂಡೂರಾವ್ ಸರಕಾರ ೧೯ ಬೇಡಿಕೆಗಳಲ್ಲಿ ೧೨ ಬೇಡಿಕೆಗಳನ್ನು ಈಡೇರಿಸುವುದಾಗಿ ಘೋಷಿಸಿತು. ಈ ಬೇಡಿಕೆಯ ಸನ್ನದು ಆಗಿ ಪರಿವರ್ತಿತವಾಯಿತಲ್ಲದೇ ರೈತ ಹೋರಾಟ ಈ ಬೇಡಿಕೆಗಳ ಸುತ್ತ ಕೇಂದ್ರೀಕೃತವಾಯಿತು. ರೈತ ಹೋರಾಟ ಬೆಳೆದಂತೆಲ್ಲ ಈ ಬೇಡಿಕೆ ಪಟ್ಟಿಯಲ್ಲಿ ಬದಲಾವಣೆಗಳಾದವು. ಈ ಬೇಡಿಕೆಗಳೊಂದಿಗೆ ರೈತ ಹೋರಾಟಕ್ಕೆ ಹೊಸ ಆಯಾಮ ದೊರಕಿತು. ಸರ್ಕಾರದ ಈ ಘೋಷಣೆ ಕರ್ನಾಟಕ ರಾಜ್ಯ ರೈತ ಸಂಘದ ವಿಜಯ ಎಂದೇ ಭಾವಿಸಲಾಗಿದೆ.

ದಾವಣಗೆರೆ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಸ್ಥಾಪನೆಯ ಕಾಲದಿಂದ ರೈತರ ಸಂಘಟನೆ ಮಾಡುತ್ತ ಹಲವು ರೈತಪರ ಹೋರಾಟ ಮಾಡಿತು. ಆದರೆ ರಾಜ್ಯ ಕರ್ನಾಟಕ ರೈತ ಸಂಘವು ರಾಜಕೀಯ ರಹಿತವಾಗಿದ್ದು, ನಂತರದಲ್ಲಿ ರಾಜಕೀಯ ಸ್ಪರ್ಧೆಯಿಂದಾಗಿ ರಾಜ್ಯ ನಾಯಕರ ಭಿನ್ನಾಭಿಪ್ರಾಯದಿಂದಾಗಿ ಕರ್ನಾಟಕ ರಾಜ್ಯ ರೈತ ಸಂಘ ಎರಡು ಬಣಗಳಾಗಿವೆ. ದಾವಣಗೆರೆಯಲ್ಲಿ ನಡೆದ ರಾಜ್ಯ ರೈತ ಸಂಘದ ಸಭೆಯಲ್ಲಿ ನಂಜುಂಡಸ್ವಾಮಿಯವರನ್ನು ಪಕ್ಷದಿಂದ ಹೊರ ಹಾಕುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಪುಟ್ಟಣ್ಣಯ್ಯ ವಹಿಸಿಕೊಂಡಿದ್ದರು.[೧೯] ಈ ಸಭೆಯ ನಂತರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಎಂದೂ ಸಂಘದ ಹೆಸರನ್ನು ಬದಲಾವಣೆ ಮಾಡಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ಎರಡು ಬಣಗಳಿಂದಾಗಿ ದಾವಣಗೆರೆ ಜಿಲ್ಲಾ ರೈತ ಸಂಘದ ಮೇಲೆಯೂ ಪರಿಣಾಮ ಬೀರಿ ಇಲ್ಲಿಯೂ ಎರಡು ಬಣಗಳಾಗಿದವು. ಮೊದಲನೆಯ ಬಣದಲ್ಲಿ ಪುಟ್ಟಣ್ಣಯ್ಯ ಬಣದ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯಲ್ಲಿ ಆವರೆಗೆರೆ ರುದ್ರಮುನಿ, ಹೊನ್ನೂರು ಮುನಿಯಪ್ಪ, ಅರುಣಕುಮಾರ್ ಕುರುಡಿ ಇವರ ನಾಯಕತ್ವವಿದ್ದು ಈ ಸಂಘಟನೆಯೂ ರೈತರ ಸಾಲ ಮನ್ನಾ, ಭೂ ಸ್ವಾಧೀನ ವಿರೋಧ, ರಸಗೊಬ್ಬರ, ಭತ್ತಕ್ಕೆ ವೈಜ್ಞಾನಿಕ ಬೆಲೆ ನಿಗದಿ, ಸಮರ್ಪಕ ವಿದ್ಯುತ್‌ಗೆ ಆಗ್ರಹಿಸಿ ಹೋರಾಟ ಮಾಡುವುದರ ಮೂಲಕ ರೈತ ಸಂಘಟನೆಯ ಜೊತೆಗೆ ರಾಜ್ಯ ಮಟ್ಟದಲ್ಲಿ ಗಮನ ಸೆಳೆಯುವಲ್ಲಿ ಪ್ರಧಾನ ಪಾತ್ರ ವಹಿಸಿದೆ.

ಎರಡನೇ ಬಣವಾದ ನಂಜುಂಡಸ್ವಾಮಿ ಬಣವೂ ಹುಚ್ಚವ್ವನಹಳ್ಳಿ ಮುಂಜುನಾಥ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ದಾವಣಗೆರೆ ಜಿಲ್ಲಾ ಘಟಕವು ಸಾವಿರಾರು ರೈತರನ್ನು ಸಂಘಟಿಸುವುದರ ಮೂಲಕ ಭೂ ಸ್ವಾಧೀನ ವಿರೋಧಿಸಿ ಹೋರಾಟ, ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ಹೋರಾಟ, ಮೆಕ್ಕೆಜೋಳ ಬೆಂಬಲಕ್ಕೆ ಆಗ್ರಹಿಸಿ ಹೋರಾಟವನ್ನು ಮಾಡುತ್ತದೆ. ಅಲ್ಲದೇ ಜಿಲ್ಲೆಯ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಮ್ಮ ಸಂಘಟನೆಗಳ ಸಂಘವನ್ನು ಸ್ಥಾಪಿಸುವುದರ ಮುಖಾಂತರ ರೈತರ ಸಮಸ್ಯೆಗಳತ್ತ ಗಮನ ಹರಿಸುತ್ತದೆ.

ಚುಕ್ಕಿ ನಂಜುಂಡಸ್ವಾಮಿ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಎಂಬ ಮತ್ತೊಂದು ಸಂಘಟನೆಯಿದ್ದು ಇದರ ನೇತೃತ್ವವನ್ನು ನಿಟುವಳ್ಳಿ ಕೆಂಗಪ್ಪ, ವಾಸನದ ಓಂಕಾರಪ್ಪ, ಜಿ. ಪ್ರಭುಗೌಡ, ಪೂಜಾರ ಅಂಜಿನಪ್ಪ ವಹಿಸಿಕೊಂಡಿದ್ದಾರೆ. ಈ ಸಂಘಟನೆಯೂ ರೈತರ ಸಮಸ್ಯೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಜನ್ಮ ತಾಳಿದ ಸಂಘಟನೆಯಾಗಿದೆ. ಈ ಸಂಘಟನೆಯ ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿದೆ.

ಈ ಪ್ರದೇಶದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆಯು ಮೂರು ಬಣಗಳ ಉದ್ದೇಶ ಹೊಂದಿಯಾಗಿದ್ದರೂ ನೆಲೆಗಳು ಭಿನ್ನ ಭಿನ್ನವಾಗಿವೆ. ಈ ಸಂಘಟನೆಗಳು ಪ್ರತ್ಯೇಕವಾಗಿ ಹೋರಾಟ ನಡೆಸುವುದರಿಂದ ರೈತರಲ್ಲಿ ಗೊಂದಲವುಂಟಾಗುವ ಸಂಭವವಿದೆ. ಆದರೂ ಈ ಮೂರು ಸಂಘಟನೆಗಳ ಹೋರಾಟದಿಂದ ರಾಜ್ಯದ ಗಮನ ದಾವಣಗೆರೆ ಪ್ರದೇಶದತ್ತ ಕೇಂದ್ರೀಕೃತವಾಗಿದೆ.

೬.೫. ರಾಜ್ಯ ಕಬ್ಬು ಬೆಳಗಾರರ ಸಂಘ

ಕರ್ನಾಟಕದ ಪ್ರಾರಂಭದ ದಿನಗಳಲ್ಲಿ ರೈತರ ಹೋರಾಟವೆಂದರೆ ಕಬ್ಬು ಬೆಳೆಗಾರರ ಚಳುವಳಿಯೆಂದು ಅರ್ಥೈಸಲಾಗಿತ್ತು. ಇದು ಪ್ರಾರಂಭದಲ್ಲಿ ೧೯೭೦ರಲ್ಲಿ ಶಿವಮೊಗ್ಗದ ಕಬ್ಬು ಬೆಳೆಯುವ ರೈತರ ಶೋಷಣೆಯ ವಿರುದ್ಧ ವ್ಯವಸ್ಥೆ ಮಾಡಲಾಗಿತ್ತು. ಇದು ನಂತರ ರಾಜ್ಯದ ಇತರ ಭಾಗಗಳಿಗೂ ಹರಡಿತ್ತು. ನಂತರ ಇದೇ ಮುಂದೆ ಕರ್ನಾಟಕ ರಾಜ್ಯ ರೈತ ಸಂಘವಾಗಿ ಜನ್ಮ ತಾಳಿತು.[೨೦] ರಾಜ್ಯ ಕಬ್ಬು ಬೆಳೆಗಾರರ ಸಂಘ ೧೯೭೦ರಲ್ಲಿ ಉದಯವಾದರೂ ಅದು ನಿರ್ದಿಷ್ಟವಾಗಿ ೧೯೭೭ರಿಂದ ಕಬ್ಬು ಬೆಳೆಗಾರರಿಗಾಗಿ, ಒಟ್ಟಾರೆಯಾಗಿ ರಾಜ್ಯದ ರೈತರಿಗಾಗಿ ಹೋರಾಡುತ್ತಿದೆ.

ಈ ಸಂಘಟನೆಯ ಉದ್ದೇಶವೆಂದರೆ ಕಬ್ಬಿಗೆ ನಿರ್ದಿಷ್ಟವಾಗಿ ವೈಜ್ಞಾನಿಕ ಬೆಲೆ ಪಡೆಯುವುದು. ಇತರ ಕೃಷಿ ಸರಕುಗಳಿಗೆ ವೈಜ್ಞಾನಿಕ ಬೆಲೆ ಪಡೆಯುವುದು, ಕೃಷಿ ಸರಕುಗಳ ಅಂತರರಾಜ್ಯ ಚಲನೆಯ ಮೇಲಿನ ನಿಯಂತ್ರಣ ರದ್ದತಿ, ಕಬ್ಬಿನ ಸಹಾಯಧನ ಮುಂತಾದ ಉದ್ದೇಶ ಹೊಂದಿ ಜನ್ಮ ತಾಳಿದೆ.

ದಾವಣಗೆರೆ ಪ್ರದೇಶದಲ್ಲಿ ದಾವಣಗೆರೆ, ಹರಿಹರ, ಹರಪನಹಳ್ಳಿ, ಚನ್ನಗಿರಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಬ್ಬು ಬೆಳೆಗಾರರಿದ್ದಾರೆ. ಹಾಗೆಯೇ, ಈ ಪ್ರದೇಶದಲ್ಲಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ, ದಾವಣಗೆರೆ ಸಕ್ಕರೆ ಕಾರ್ಖಾನೆ, ಕುಕ್ಕವಾಡ, ಶಾಮನೂರು ಷುಗರ್ಸ್, ದುಗ್ಗಾವತಿ ಎಂಬ ಮೂರು ಕಬ್ಬು ಅರೆಯುವ ಕಾರ್ಖಾನೆಗಳಿವೆ. ಈ ಸಂಘಟನೆಯು ಇಲ್ಲಿನ ಬೆಳಗಾರರ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸುತ್ತಾ, ಕಬ್ಬಿನ ಬೆಲೆ ನಿಗದಿ, ಕಬ್ಬಿನ ಬಾಕಿ ಹಣದ ಬಗ್ಗೆ, ಕಬ್ಬಿನ ಸಾಲ ಮನ್ನಾ, ಕಾರ್ಖಾನೆಯ ಪುನರ್ ಸ್ಥಾಪನೆಗೆ ಹೋರಾಟ ನಡೆಸಿದೆ. ಭದ್ರಾ ಸಹಕಾರಿ ಕಾರ್ಖಾನೆಯ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದಾಗಿ ೨೦೦೪ರಲ್ಲಿ ಕಾರ್ಖಾನೆ ಸ್ಥಗಿತಗೊಂಡಾಗ ಇದರ ವಿರುದ್ಧ ರೈತರನ್ನು ಸಂಘಟಿಸಿ ಪುನರ್ ಸ್ಥಾಪನೆಗೆ ಒತ್ತಾಯಿಸಿ ಹೋರಾಟ ಮಾಡಿದೆ. ಈ ಭಾಗದ ಕಬ್ಬು ಬೆಳೆಗಾರರ ಸಂಘದ ನೇತೃತ್ವವನ್ನು ತೇಜಸ್ವಿ ವಿ. ಪಾಟೀಲ್ ವಹಿಸಿಕೊಂಡಿದ್ದಾರೆ.

೬.೬. ೨೨ ಕೆರೆಗಳ ಏತ ನೀರಾವರಿ ಹೋರಾಟ ಸಮಿತಿ

ದಾವಣಗೆರೆ ಪ್ರದೇಶದ ಮತ್ತೊಂದು ರೈತಪರವಾದ ಸಂಘಟನೆಯಾದ ೨೨ ಕೆರೆಗಳ ಏತ ನೀರಾವರಿ ಹೋರಾಟ ಸಮಿತಿಯು ೨೦೦೪ರಲ್ಲಿ ಜನ್ಮ ತಾಳಿತು. ಈ ಸಂಘಟನೆಯ ಅಧ್ಯಕ್ಷರಾಗಿ ಡಾ.ಜಿ ಮಂಜುನಾಥ ಗೌಡ, ಉಪಾಧ್ಯಕ್ಷರಾಗಿ ಕೊಟ್ರೇಶನಾಯ್ಕ, ಕಾರ್ಯದರ್ಶಿಯಾಗಿ ಟಿ.ವಿ.ಎಸ್. ರಾಜು ಅವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಈ ಸಂಘಟನೆಯು, ಕೆರೆ ನೀರಾವರಿ, ಅಂತರ್ಜಲಕ್ಕೆ ಹೆಚ್ಚಿನ ಗಮನ ಕೊಡುತ್ತದೆ. ಈ ಸಂಘಟನೆಯು ೨೨ ಕೆರೆಗಳ ಹಳ್ಳಿಗಳ ರೈತರನ್ನು ಸಂಘಟಿಸಿ ಸತ್ಯಾಗ್ರಹ, ಧರಣಿ, ಬೆಂಗಳೂರು ಚಲೋ ಮುಖಾಂತರ ಸರ್ಕಾರಕ್ಕೆ ಎಚ್ಚರಿಕೆ ನೀಡಿ, ಯೋಜನೆಯ ಕಾಮಗಾರಿಯ ಯಶಸ್ಸಿಗೆ ಕಾರಣವಾಗಿದೆ.

೬.೭. ರೈತ ಸಂಘಟನೆಗಳ ಸಮಸ್ಯೆಗಳು

ಈ ಪ್ರದೇಶದ ರೈತ ಸಂಘಟನೆಗಳು ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿವೆ. ಈ ಸಂಘಟನೆಗಳಲ್ಲಿ ಹಲವಾರು ಬಣಗಳನ್ನು ಕಾಣಬಹುದಾಗಿದೆ. ಎಂ.ಡಿ. ನಂಜುಂಡಸ್ವಾಮಿ ಬಣ ಮತ್ತು ಕೆ.ಎಸ್. ಪುಟ್ಟಣ್ಣಯ್ಯ ಚುಕ್ಕಿನಂಜುಂಡಸ್ವಾಮಿ ಬಣಕ್ಕೆ ಸೇರಿದ ಕರ್ನಾಟಕ ರಾಜ್ಯ ರೈತ ಸಂಘಟನೆಗಳಿವೆ. ಈ ಮೂರು ಬಣಗಳು ವಿಭಿನ್ನ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಯಶಸ್ವಿಯಾಗಿ ರೈತ ಸಂಘಟನೆಯನ್ನು ಸಂಘಟಿಸುವಲ್ಲಿ ವಿಫಲವಾಗಿವೆ.

ಈ ಎಲ್ಲ ರೈತ ಸಂಘಟನೆಗಳು ತಮ್ಮ ತಮ್ಮ ಪ್ರಾದೇಶಿಕ ಮಟ್ಟದಲ್ಲಿ ರೈತರ ಪರವಾಗಿ ತಮ್ಮ ಹೋರಾಟಗಳನ್ನು ಮಾಡುತ್ತಿವೆ. ಇವು ಕೆಲವು ಸ್ವಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಸಂಘಟನೆಯ ಕೊರತೆ

ಈ ಮೇಲೆ ತಿಳಿಸಿರುವಂತೆ ವಿಭಿನ್ನ ಸೈದ್ಧಾಂತಿಕ ದೃಷ್ಟಿಕೋನ ಹೊಂದಿರುವ ರೈತ ಸಂಘಟನೆಗಳು ಸರಿಯಾದ ರೀತಿ ಕಾರ್ಯ ನಿರ್ವಹಿಸಲು ಪ್ರಯತ್ನಿಸುತ್ತಿಲ್ಲ. ಇವು ತಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳಿಗೆ ಮಾತ್ರ ಹೋರಾಟ ನಡೆಸುತ್ತವೆ. ಒಂದು ಸಂಘಟನೆಯು ಸಮಸ್ಯೆಗಳನ್ನಿಟ್ಟು ಹೋರಾಡುತ್ತಿದ್ದರೆ ಇನ್ನೊಂದು ಸಂಘಟನೆಯ ಬೆಂಬಲ ಸಂಪೂರ್ಣವಾಗಿ ಸಿಗುತ್ತಿಲ್ಲ.

ಸೂಕ್ತ ನಾಯಕತ್ವದ ಕೊರತೆ

ಈಗಾಗಲೇ ತಿಳಿದಿರುವಂತೆ ರೈತ ಸಂಘಟನೆಗಳ ವಿಭಿನ್ನ ಸೈದ್ಧಾಂತಿಕ ಮತ್ತು ಸಂಘಟನೆಯ ಕೊರತೆಯ ನಡುವೆ ಈ ರೈತ ಸಂಘಟನೆಗಳ ನಾಯಕತ್ವದ ಕೊರತೆ ಒಂದು ದೊಡ್ಡ ಸಮಸ್ಯೆಯಾಗಿದೆ.

ಈ ಪ್ರದೇಶದ ಪ್ರತಿಯೊಂದು ಸಂಘಟನೆಯ ನಾಯಕರು ರೈತರ ಪರವಾಗಿ ಕಾರ್ಯ ನಿರ್ವಹಿಸದೇ ಇರುವುದು ಒಂದು ವಿಪರ್ಯಾಸವಾಗಿದೆ. ಒಂದು ಸಂಘಟನೆಯಲ್ಲಿನ ನಾಯಕರು ತಮ್ಮ ರೈತರ ಪರವಾಗಿ ಮತ್ತು ಸಂಘಟನೆಯ ಪರವಾಗಿ ಕಾರ್ಯ ನಿರ್ವಹಿಸಿದರೆ, ಮತ್ತೆ ಕೆಲವರು ಸ್ವಾರ್ಥಕ್ಕೆ ತಮ್ಮ ನಾಯಕತ್ವವನ್ನು ಬೆಳೆಸಿಕೊಳ್ಳುತ್ತಾರೆ. ಈ ನಾಯಕರಲ್ಲಿ ಸಂಘಟನಾ ಶಿಸ್ತು ಇಲ್ಲದಿರುವುದು ರಾಜಕೀಯ ಪಕ್ಷಗಳೊಂದಿಗೆ ಆಂತರಿಕ ಸಂಪರ್ಕ ಹೊಂದಿರುವುದು ಕಂಡುಬರುತ್ತದೆ.[೨೧]

ಜಾತಿ ಧರ್ಮಗಳ ಹಸ್ತಕ್ಷೇಪ

ಈ ಪ್ರದೇಶದ ರೈತ ಸಂಘಟನೆಗಳಲ್ಲಿ ಆಂತರಿಕ ಸಮಸ್ಯೆಯನ್ನು ಕಾಣಬಹುದಾಗಿದೆ. ಈ ರೈತ ಸಂಘಟನೆಗಳಲ್ಲಿ ಜಾತಿ, ಧರ್ಮಗಳು ಪ್ರವೇಶ ಮಾಡಿದೆ. ಇದರಿಂದಾಗಿ ಇಲ್ಲಿನ ಅಧ್ಯಕ್ಷರು ಮತ್ತು ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ನಡುವೆ ಆಂತರಿಕ ವೈಮನಸ್ಸನ್ನು ಕಾಣಬಹುದಾಗಿದೆ. ಈ ಸಂಘಟನೆಗಳಲ್ಲಿ ರಾಜಕೀಯ ಪಕ್ಷಗಳು ಭಾಗವಹಿಸಿ ನಾಯಕರಿಗೆ ಮತ್ತು ಸದಸ್ಯರಿಗೆ ಆಸೆ, ಆಮಿಷಗಳನ್ನು ತೋರಿಸಿ ಅವರಲ್ಲಿಯೇ ಆಂತರಿಕ ಭಿನ್ನತೆಯನ್ನು ಸೃಷ್ಟಿ ಮಾಡುತ್ತವೆ.

ರಾಜಕೀಯ ಪಕ್ಷಗಳ ಹಸ್ತಕ್ಷೇಪ

ಈ ರೈತ ಸಂಘಟನೆಗಳು ಸೈದ್ಧಾಂತಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಇಲ್ಲಿನ ರಾಜಕೀಯ ಪಕ್ಷಗಳ ಹಸ್ತಕ್ಷೇಪದಿಂದಾಗಿ ಅವು ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಆಡಳಿತ ವ್ಯವಸ್ಥೆಯಲ್ಲಿ ಸರ್ಕಾರಗಳು ಸಂಘಟನೆಗಳ ಪರವಾಗಿ ಕಾರ್ಯ ನಿರ್ವಹಿಸಿದರೆ ಬೇರೊಂದು ಪಕ್ಷಗಳು ಅದೇ ರೈತ ಸಂಘಟನೆಯ ಬೆಂಬಲವಾಗಿ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತವೆ. ಇದರಿಂದಾಗಿ ಈ ರೈತ ಸಂಘಟನೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ.

ಸ್ವಾತಂತ್ರ್ಯ ನಂತರ ನಡೆದ ರೈತ ಹೋರಾಟಗಳಲ್ಲಿ ರೈತರನ್ನು ಸಂಘಟಿಸುವುದರ ಮೂಲಕ ರೈತರಲ್ಲಿ ಒಂದು ಶಕ್ತಿಯಾಗಿ ರೂಪುಗೊಳ್ಳುವುದಕ್ಕೆ ರೈತ ಸಂಘಟನೆಗಳ ಪಾತ್ರ ಮಹತ್ವವಾದದ್ದು. ಪ್ರಜಾಪ್ರಭುತ್ವ ಸರ್ಕಾರದ ರೈತವಿರೋಧಿ ನಿಲುವುಗಳಿಂದ ಕಂಗಲಾದ ರೈತರನ್ನು ಸಂಘಟಿಸುವ ಮೂಲಕ ರೈತರ ಸಮಸ್ಯೆಗಳಿಗೆ ಪರಿಹಾರ

ದೊರಕಿಸಿ ಕೊಡುವಲ್ಲಿ ಮಹತ್ವದ ಪಾತ್ರ ವಹಿಸಿವೆ. ರೈತ ಸಂಘಟನೆಗಳು ಆರಂಭದಲ್ಲಿ ರಾಜಕೀಯ ರಹಿತವಾದ ತಳಹದಿಯಲ್ಲಿ ರೂಪುಗೊಂಡು ನಂತರದಲ್ಲಿ ರಾಜಕೀಯವನ್ನು ಒಪ್ಪಿಕೊಂಡಿವೆ. ರೈತ ಸಂಘಟನೆಗಳಲ್ಲಿ ವರ್ಗಕಲಹ, ಜಾತಿ, ಧರ್ಮಗಳು, ಪ್ರವೇಶ ಮಾಡಿವೆ. ಇವುಗಳನ್ನು ರಾಜಕೀಯ ಪಕ್ಷಗಳು ತಮ್ಮ ಮತಬ್ಯಾಂಕ್ ರಾಜಕಾರಣಕ್ಕೆ ಬಳಸಿಕೊಳ್ಳುವ ಅಪಾಯವಿದೆ. ಇದರಿಂದ ರೈತ ಸಂಘಟನೆಗಳು ಯಾವುದೇ ಪಕ್ಷಗಳ ತತ್ವ ಸಿದ್ಧಾಂತಗಳಿಗೆ ಬಲಿಯಾಗದೇ ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಮುಖಾಂತರ ಪ್ರಜಾಪ್ರಭುತ್ವದ ಸರ್ಕಾರವನ್ನು ರೈತರತ್ತ ಗಮನ ಹರಿಸುವಂತೆ ಮಾಡುವ ಕೆಲಸ ರೈತ ಸಂಘಟನೆಗಳ ಮೇಲಿದೆ.

ಟಿಪ್ಪಣಿಗಳು

೧. ತಂಬಂಡ ವಿಜಯ್ ಪೂಣಚ್ಚ, ರೈತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು.೬

೨. ಅದೇ, ಪು. ೬

೩. ಅದೇ, ಪು. ೭

೪. ಅಖಿಲ ಭಾರತ ಕಿಸಾನ್ ಸಭಾದ ಕರಪತ್ರದ ಮಾಹಿತಿ.

೫. ಅಖಿಲ ಭಾರತ ಕಿಸಾನ್ ಸಭಾದ ಕರಪತ್ರದ ಮಾಹಿತಿ.

೬. ಜನತಾವಾಣಿ ದಿನಪತ್ರಿಕೆ, ೨೧.೧೦.೧೯೮೪, ಪು. ೧

೭. ಬಿ.ಪಿ. ಕುಮಾರ್, ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳುವಳಿಗಳು, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭ ಪು. ೮೨

೮. ಅದೇ, ಪು. ೯೯

೯. ಅದೇ, ಪು. ೯೯

೧೦. ಎಂ.ಎಸ್.ಕೆ. ಶಾಸ್ತ್ರಿಯವರೊಂದಿಗೆ ನಡೆಸಿದ ಸಂದರ್ಶನದ ಮಾಹಿತಿ.

೧೧. ಎಂ.ಎಸ್.ಕೆ. ಶಾಸ್ತ್ರಿಯವರೊಂದಿಗೆ ನಡೆಸಿದ ಸಂದರ್ಶನದ ಮಾಹಿತಿ.

೧೨. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ಹೋರಾಟ ಹಾಗೂ ಸಾಮಾಜಿಕ ಚಳುವಳಿ ೨೦೦೯, ಪು. ೯೦

೧೩. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೯೨

೧೪. ಅದೇ, ಪು. ೨೭

೧೫. ಮುಜಾಫರ್ ಅಸ್ಸಾದಿ, ಪೂರ್ವೋಕ್ತ, ಪು. ೯೨

೧೬. ಎಂ.ಎಸ್.ಕೆ. ಶಾಸ್ತ್ರಿಯವರೊಂದಿಗೆ ಸಂದರ್ಶನದ ಮಾಹಿತಿ.

೧೭. ತಂಬಂಡ ವಿಜಯ್ ಪೂಣಚ್ಚ, ಪೂರ್ವೋಕ್ತ, ಪು. ೨೭

೧೮. ಮುಜಾಫರ್ ಅಸ್ಸಾದಿ, ಪೂರ್ವೋಕ್ತ, ಪು, ೯೨

೧೯. ಲಿಂಗದಳ್ಳಿ ಚೇತನಕುಮಾರ್, ಗೋಲಿಬಾರ್ ಗೌರ್ಮೆಂಟ್‌ನಲ್ಲಿ ರೈತರ ಕಗ್ಗೊಲೆ, ೨೦೦೮, ಪು. ೯೧

೨೦. ಕೆ.ಎಂ. ಕುಮಾರ್, ಕರ್ನಾಟಕದ ರೈತ ಚಳುವಳಿ, ೨೦೦೮, ಪು. ೮೧

೨೧. ಕ್ಷೇತ್ರಕಾರ್ಯದ ಮಾಹಿತಿಯ ಪ್ರಕಾರ.

* * *

ಅಧ್ಯಾಯ ಏಳು

ಸಮಾರೋಪ

ಸಮಾರೋಪ

ದಾವಣಗೆರೆ ಪ್ರದೇಶದಲ್ಲಿ ಕೃಷಿಯ ಬೆಳವಣಿಗೆಯೊಂದಿಗೆ ಅದಕ್ಕೆ ಪೂರಕವಾದ ಹಲವಾರು ವ್ಯವಸ್ಥೆಗಳು ಹುಟ್ಟಿಕೊಂಡವು. ಕೃಷಿಯ ಉತ್ಪಾದನೆಯೊಂದಿಗೆ ನಗರಗಳು, ವಾಣಿಜ್ಯ ಮಾರುಕಟ್ಟೆಗಳು, ಕೈಗಾರಿಕೆಗಳು ಬೆಳವಣಿಗೆಯಾದವು. ಇದರಿಂದಾಗಿ ೨೦ನೇ ಶತಮಾನದ ಮಧ್ಯಭಾಗದ ವೇಳೆಗೆ ಕರ್ನಾಟಕದ ಮ್ಯಾಂಚೆಸ್ಟರ್ ಎಂಬುದಾಗಿ ದಾವಣಗೆರೆ ಪ್ರದೇಶ ಗುರುತಿಸಿಕೊಂಡಿತ್ತು. ಕಾಲಕ್ರಮೇಣ ಕೃಷಿ ಕ್ಷೇತ್ರದಲ್ಲಾದ ಬದಲಾವಣೆಯ ಪರಿಣಾಮವಾಗಿ ದಾವಣಗೆರೆಯ ಹತ್ತಿಗಿರಣಿಗಳು ಅವನತಿ ಹೊಂದಲಾರಂಭಿಸಿದವು. ಕೃಷಿಯೊಂದಿಗೆ ಗುರುತಿಸಿಕೊಂಡ ರೈತರು ತಮ್ಮ ಸಮಸ್ಯೆಗಳ ಪರಿಹಾರೋಪಾಯಕ್ಕಾಗಿ ರಾಜ್ಯದಲ್ಲೇ ಗುರುತಿಸಬಹುದಾದಂತಹ ರೈತ ಹೋರಾಟಗಳನ್ನು ನಡೆಸುವ ಮೂಲಕ ಗಮನ ಸೆಳೆದರು. ಈ ಅಧ್ಯಯನದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಭೂ ಹಿಡುವಳಿ ವ್ಯವಸ್ಥೆ, ವಸಾಹತು ಕೃಷಿನೀತಿ, ಕೈಗಾರಿಕಾ ಅರ್ಥವ್ಯವಸ್ಥೆ, ರೈತ ಹೋರಾಟಗಳು ಹಾಗೂ ರೈತ ಸಂಘಟನೆಗಳ ಕುರಿತು ಬೆಳಕು ಚೆಲ್ಲುವಂತಹ ಪ್ರಯತ್ನವನ್ನು ಮಾಡಲಾಗಿದೆ.

ಇತ್ತೀಚಿನವರೆಗೂ ಚರಿತ್ರೆ ಅಧ್ಯಯನವು ರಾಜಪ್ರಭುತ್ವಕ್ಕೆ ಸೀಮಿತಗೊಂಡು ರಾಜರು, ಅವರ ಅಧಿಕಾರ ವ್ಯಾಪ್ತಿ, ಸಾಧನೆ, ಮುಂತಾದವುಗಳ ಮೇಲೆ ಬೆಳಕು ಚೆಲ್ಲುವುದು ಸಾಮಾನ್ಯವಾಗಿತ್ತು. ಆದರೆ ದೇಶದ ಆರ್ಥಿಕ ಪ್ರಗತಿಗೆ ಕೈ ಜೋಡಿಸುವ ರೈತರ ಬಗ್ಗೆ ಚಾರಿತ್ರಿಕ ಅಧ್ಯಯನಗಳು ನಡೆದಿರುವುದು ವಿರಳ. ಈ ಹಿನ್ನೆಲೆಯಲ್ಲಿ ಅಲಕ್ಷಿತ ವರ್ಗವಾದ ರೈತರ ನೋವು-ನಲಿವುಗಳನ್ನು ಅವರು ನಡೆಸಿದ ಹೋರಾಟಗಳನ್ನು ಚರಿತ್ರೆಯಲ್ಲಿ ದಾಖಲಿಸುವುದು ಅತ್ಯಂತ ಜರೂರಿನ ಜವಾಬ್ದಾರಿಯಾಗಿದೆ.

ಭೂ ಹಿಡುವಳಿ ವ್ಯವಸ್ಥೆಯು ಕಾಲದಿಂದ ಕಾಲಕ್ಕೆ ಬದಲಾವಣೆ ಆಗುವುದರ ಮೂಲಕ ಇಂದು ಚಿಕ್ಕ ಹಿಡುವಳಿಯಾಗಿ ಮಾರ್ಪಟ್ಟಿದೆ. ಈ ಹಿಡುವಳಿಗಳಲ್ಲಿ ವಸಾಹತು ಸರ್ಕಾರವು ಬಲವಂತವಾಗಿ ತಮ್ಮ ಕೃಷಿ ನೀತಿಯನ್ನು ಹೇರುವುದರ ಮೂಲಕ ಕೃಷಿಯನ್ನು ವಾಣಿಜ್ಯೀಕರಣಗೊಳಿಸಲಾಯಿತು. ಇದರಿಂದಾಗಿ ದಾವಣಗೆರೆ ಪ್ರದೇಶದ ಮೇಲೆಯೂ ಅದರ ಕರಿ ನೆರಳು ಬಿದ್ದಂತಾಯಿತು. ಇದರಿಂದಾಗಿ ಸಾಂಪ್ರದಾಯಿಕ ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದಂತಹ ರೈತರು ವಾಣಿಜ್ಯ ಬೆಳೆಗಳತ್ತ ಹೆಚ್ಚು-ಹೆಚ್ಚು ಆಕರ್ಷಿತರಾಗತೊಡಗಿದರು. ಈ ಬೆಳೆಗಳಲ್ಲಿ ಮುಖ್ಯವಾದವುಗಳೆಂದರೆ ಹತ್ತಿ, ಕಬ್ಬು, ಕಿತ್ತಳೆ ಹಾಗೂ ತಂಬಾಕು. ಈ ಬೆಳೆಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳುವುದರ ಮೂಲಕ ಸ್ಥಳೀಯ ಕೃಷಿಯೊಂದಿಗೆ ಸಮ್ಮಿಲನ ಮಾಡಿ ವಸಾಹತು ಸರ್ಕಾರ ಹೆಚ್ಚು ಲಾಭ ಮಾಡಿಕೊಳ್ಳತೊಡಗಿತು. ಇದರಿಂದಾಗಿ ಸ್ಥಳೀಯ ರೈತರಿಗೆ ಒಂದು ಕಡೆ ವಾಣಿಜ್ಯ ದೃಷ್ಟಿಯಿಂದ ಲಾಭವಾಗತೊಡಗಿದರ ಜೊತೆಗೆ ಆಹಾರಧಾನ್ಯಗಳ ಅಭಾವದ ಪರಿಸ್ಥಿತಿ ಉಂಟಾಯಿತು. ವಸಾಹತು ಸರ್ಕಾರದ

ಪ್ರೋತ್ಸಾಹ ಮತ್ತು ಮೈಸೂರು ಅರಸರ ಆಸಕ್ತಿಯಿಂದ ಕೈಗಾರಿಕೆಗಳಿಗೆ ಉತ್ತೇಜನ ದೊರೆಯುವುದರ ಮೂಲಕ ದಾವಣಗೆರೆಯು ಒಂದು ಕಾಲಘಟ್ಟದಲ್ಲಿ ಮ್ಯಾಂಚೆಸ್ಟರ್ ನಗರವೆಂಬ ಹೆಸರನ್ನು ಪಡೆದುಕೊಂಡಿತು. ಕಾಲಾನಂತರದಲ್ಲಿ ಭದ್ರಾ ಜಲಾಶಯದ ನೀರು ಈ ಪ್ರದೇಶದ ಭೂಮಿಗೆ ದೊರೆತ ಪರಿಣಾಮವಾಗಿ ಹತ್ತಿ ಬೆಳೆಯುತ್ತಿದ್ದಂತಹ ಪ್ರದೇಶಗಳಲ್ಲಿ ಭತ್ತ, ಕಬ್ಬು, ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರದೇಶದ ರೈತರು ಆಸಕ್ತಿ ವಹಿಸಿದ ಫಲವಾಗಿ ಇಂದು ದಾವಣಗೆರೆ ಪ್ರದೇಶದಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು, ಹತ್ತಿಗಿರಣಿಗಳು ಮತ್ತು ನೂರಾರು ಅಕ್ಕಿ ಮಿಲ್‌ಗಳು ಸ್ಥಾಪನೆಗೊಂಡಿವೆ.

ವಸಾಹತುಶಾಹಿ ಪ್ರಭುತ್ವವು ಗ್ರಾಹಕ ಸಂಸ್ಕೃತಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾರಂಭಿಸಿತು. ಈ ಪರಿಸ್ಥಿತಿಯಿಂದಾಗಿ ರೈತರು ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸಬೇಕಾಗಿತ್ತು. ಒಂದನೆಯದು ಬ್ರಿಟಿಷರು ರೂಪಿಸಿದ ನೀತಿಗಳು ಹಾಗೂ ಎರಡನೆಯದು ಮೈಸೂರು ಅರಸರು ಜಾರಿಗೊಳಿಸಿದಂತಹ ನೀತಿಗಳಾಗಿದ್ದವು. ಈ ನೀತಿಗಳ ವಿರುದ್ಧ ರೈತರು ಹೋರಾಟ ಮಾಡುವ ಪರಿಸ್ಥಿತಿ ಎದುರಾಗಿತ್ತು. ಆದರೆ ವಸಾಹತುಶಾಹಿ ಮತ್ತು ರಾಜಪ್ರಭುತ್ವವು ರೈತ ಹೋರಾಟಗಳನ್ನು ಬಹಳ ಕೌಶಲ್ಯದಿಂದ ದಮನ ಮಾಡಿತು. ಈ ರೀತಿಯ ಪರಿಣಾಮದಿಂದ ಆ ಕಾಲಘಟ್ಟದಲ್ಲಿ ರೈತರ ಸಂಘಟನೆಯ ಕೊರತೆಯಿಂದ ರೈತ ಹೋರಾಟಗಳು ಚುರುಕುಗೊಳ್ಳಲಿಲ್ಲ. ಪರೋಕ್ಷವಾಗಿ ಆ ಕಾಲದ ರಾಷ್ಟ್ರೀಯ ಹೋರಾಟ ಮಾರ್ಗವಾಗಿ ರೈತರು ತಮ್ಮ ಹೋರಾಟದ ಅಭಿವ್ಯಕ್ತಿಯನ್ನು ಗುರುತಿಸಿಕೊಂಡರು. ಇದರಿಂದಾಗಿ ರೈತ ಹೋರಾಟ ರಾಷ್ಟ್ರೀಯ ಹೋರಾಟದ ಭಾಗವಾಯಿತು. ದಾವಣಗೆರೆ ಪ್ರದೇಶದಲ್ಲಿ ಗಾಂಧೀಜಿಯ ಆಗಮನದ ನಂತರ ರೈತರು ತಮ್ಮ ಸಮಸ್ಯೆಗಳನ್ನು ಅರಿತುಕೊಂಡು ಕಾಂಗ್ರೆಸ್ ಪಕ್ಷದ ಮೂಲಕ ಗುರುತಿಸಿಕೊಂಡರು. ಅದು ರೂಪಿಸಿದಂತಹ ಹೋರಾಟಗಳಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು.

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಗೇಣಿದಾರರು ನಡೆಸಿದಂತಹ ಕಾಗೋಡು ಸತ್ಯಾಗ್ರಹದಲ್ಲಿ ದಾವಣಗೆರೆ ಪ್ರದೇಶದ ರೈತರು ಭಾಗವಹಿಸುವುದರ ಮೂಲಕ ರೈತರ ಸಮಸ್ಯೆಗಳಿಗೆ ಸ್ಪಂದಿಸಿದರು. ಇದರಂತೆ ಮಲಪ್ರಭಾ ಅಚ್ಚುಕಟ್ಟು ಪ್ರದೇಶ ಹೋರಾಟದಲ್ಲಿಯೂ ಭಾಗವಹಿಸಿದರು. ದಾವಣಗೆರೆ ಪ್ರದೇಶದಲ್ಲಿ ರೈತ ಹೋರಾಟ ಚುರುಕುಗೊಂಡಿದೆ. ೧೯೮೨ರ ಆನಗೋಡು ಗೋಲಿಬಾರ್ ಘಟನೆಯ ಮೂಲಕ ಚುರುಕುಗೊಂಡಿದೆ. ಅಲ್ಲಿಯವರೆಗೂ ಅಲ್ಲೊಂದು ಇಲ್ಲೊಂದು ಹೋರಾಟಗಳು ಕಾಣಿಸಿಕೊಂಡಿದ್ದವು. ವಿದ್ಯುತ್‌ಶಕ್ತಿ, ರಸಗೊಬ್ಬರ, ನೀರಾವರಿ, ವೈಜ್ಞಾನಿಕ ಬೆಲೆಗಾಗಿ, ಬೆಂಬಲ ಬೆಲೆ, ೨೨ ಕೆರೆಗಳ ನೀರು ತುಂಬಿಸುವ, ಸರ್ಕಾರ ವಶಪಡಿಸಿಕೊಂಡ ಭೂಸ್ವಾಧೀನವನ್ನು ವಿರೋಧಿಸುವ ಸಲುವಾಗಿ ರೈತರ ಹೋರಾಟ ತೀವ್ರಗೊಂಡಿತು. ಸರ್ಕಾರದ ವಿರುದ್ಧ ಭೂ ಸ್ವಾಧೀನ ವಿರೋಧಿಸಿ ನಡೆದಂತಹ ರೈತ ಹೋರಾಟದಿಂದ ರೈತರು ತಮ್ಮ ಭೂಮಿಯನ್ನು ಮತ್ತೆ ಪಡೆದುಕೊಂಡರು.

೧೯೮೦ರವರೆಗೂ ದಾವಣಗೆರೆ ಪ್ರದೇಶದಲ್ಲಿ ರೈತರು ಸಂಘಟಿತರಾಗಿರಲಿಲ್ಲ. ನಂತರ ಕಾಲದಲ್ಲಿ ರೈತ ಸಂಘಟನೆಗಳು ತಮ್ಮ ಅಸ್ಮಿತೆಗಳನ್ನು ಗುರುತಿಸಿಕೊಳ್ಳುವುದಕ್ಕೆ ಪ್ರಾರಂಭಿಸಿದವು. ಈ ಸಂಘಟನೆಗಳ ಮೇಲೆ ರಾಜಕೀಯ ಪಕ್ಷಗಳ ಹಸ್ತಕ್ಷೇಪವನ್ನು ತಳ್ಳಿಹಾಕುವಂತಿಲ್ಲ.

ಸ್ವಾತಂತ್ರ್ಯ ಕಾಲಘಟ್ಟದಲ್ಲಿ ರೈತ ಹೋರಾಟಗಳು ಲೂಟಿ ಮಾಡುವುದು, ಟೆಲಿಫೋನು ತಂತಿ ಕತ್ತರಿಸುವುದು, ಗಲಭೆ ಮಾಡುವುದು, ಈಚಲಮರಗಳನ್ನು ಕತ್ತರಿಸುವುದು, ಸರ್ಕಾರಿ ಕಛೇರಿಗಳನ್ನು ಬೆಂಕಿಗೆ ಆಹುತಿ ಮಾಡುವುದು ಮುಂತಾದ ರೀತಿಯಲ್ಲಿ ನಡೆದಿದ್ದವು. ಸ್ವಾತಂತ್ರ್ಯ ನಂತರ ಹೋರಾಟಗಳ ಸ್ವರೂಪ ಬದಲಾಗತೊಡಗಿತು. ಮನವಿ ಸಲ್ಲಿಸುವ, ಧರಣಿ ನಡೆಸುವ, ಸತ್ಯಾಗ್ರಹ ಮಾಡುವ, ಪಾದಯಾತ್ರೆ ನಡೆಸುವ ಮತ್ತು ಉಪವಾಸ ಕೈಗೊಳ್ಳುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಿದವು.

ಇಂದು ಸರ್ಕಾರವು ರೈತರಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಅವುಗಳೆಂದರೆ ರೈತ ಸಂಜೀವಿನಿ, ವಿಮಾಯೋಜನೆ, ಕಡಿಮೆ ಬಡ್ಡಿದರದಲ್ಲಿ ಸಾಲ, ಕಿಸಾನ್ ಕ್ರೆಡಿಟ್ ಕಾರ್ಡುಯೋಜನೆ, ಕೃಷಿ ಪಾಸ್ ಪುಸ್ತಕ, ರೈತರಿಗೆ ಅಗತ್ಯವಾದ ಕೃಷಿ ಕಾರ್ಯ ಕುರಿತು ಸಮಗ್ರ ಮಾಹಿತಿ ನೀಡುವ ರೈತ ಮಿತ್ರಯೋಜನೆ, ರೈತರಿಗೆ ಆರೋಗ್ಯ ವಿಮಾಯೋಜನೆ 'ಯಶಸ್ವಿನಿ' ಇತ್ಯಾದಿಗಳನ್ನು ಜಾರಿಗೊಳಿಸಿದೆ. ಆದರೆ ಈ ಯೋಜನೆಗಳು ಎಲ್ಲ ರೈತರಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ರೈತರ ಬದುಕಿಗೆ ಆಶಾಕಿರಣವಾದ ಸಹಕಾರಿ ಸಂಘಗಳಾದ ಅಪೆಕ್ಸ್ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್, ಪ್ರಾಥಮಿಕ ಕೃಷಿ ಅಭಿವೃದ್ಧಿ ಬ್ಯಾಂಕುಗಳು ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲವನ್ನು ಒದಗಿಸಿವೆ. ವಾಸ್ತವವಾಗಿ ಈ ವ್ಯವಸ್ಥೆ ರೈತರಿಗೆ ಬೇಕಾದ ಎಲ್ಲ ಸಾಲವನ್ನು ಒದಗಿಸಬೇಕಾಗಿತ್ತು. ಆದರೆ ಜಾಗತೀಕರಣದ ನಂತರ ವಾಣಿಜ್ಯ ಬ್ಯಾಂಕುಗಳು ಆದ್ಯತೆ ಕ್ಷೇತ್ರದ ವ್ಯಾಖ್ಯೆಯನ್ನು ಬದಲಾಯಿಸಿ ಕೃಷಿ ಸಾಲವನ್ನು ಕಡಿಮೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಮತ್ತು ಗ್ರಾಮೀಣ ಬ್ಯಾಂಕುಗಳ ಮಿತಿಗಳ ಹಿನ್ನೆಲೆಯಲ್ಲಿ ಸಹಕಾರಿ ಸಂಘಗಳು ರೈತಾಪಿ ಜನರಿಗೆ ಸಮರ್ಪಕವಾಗಿ ಅಲ್ಪಾವಧಿ ಮತ್ತು ದೀರ್ಘವಾದ ಸಾಲಗಳನ್ನು ದೊರಕಿಸಿಕೊಡಬೇಕಾಗಿತ್ತು. ದುರದೃಷ್ಟವಶಾತ್ ಅದು ಆ ರೀತಿಯಾಗಿ ಆಗಲಿಲ್ಲ. ಸಾಂಸ್ಥಿಕ ಮೂಲಗಳಿಂದ ಸಾಲ ದೊರೆಯದೇ ಇರುವಾಗ ಸಹಜವಾಗಿ ರೈತ ಖಾಸಗಿ ಸಾಲದ ವಿಷವರ್ತುಲಕ್ಕೆ ಸಿಲುಕಿ ಬೇರೆ ದಾರಿ ಕಾಣದೇ ಕೊನೆಗೆ ಆತ್ಮಹತ್ಯೆಗೆ ಮುಂದಾಗುತ್ತಾನೆ. ಹಾಗೆಯೇ ಸರ್ಕಾರದ ಸಾಲ ಮನ್ನಾ, ಬಡ್ಡಿ ಮನ್ನಾ ಯೋಜನೆಗಳು ಬಡ ರೈತರಿಗೆ ತಲುಪದೇ ಮಧ್ಯಮ ಅಥವಾ ಶ್ರೀಮಂತ ರೈತರಿಗೆ ದೊರಕುತ್ತವೆ. ಏಕೆಂದರೆ ಬಡ ರೈತನಿಗೆ ಬ್ಯಾಂಕುಗಳು ಸರಿಯಾದ ವೇಳೆಗೆ ಸಾಲ ನೀಡುವುದಿಲ್ಲ. ಇದರ ಪ್ರಯೋಜನವನ್ನು ಶ್ರೀಮಂತ ರೈತರು ಪಡೆದುಕೊಳ್ಳುತ್ತಾರೆ. ಬ್ಯಾಂಕುಗಳು ಜಮೀನನ್ನು ಆಧಾರ ಮಾಡಿಕೊಂಡು ಲ್ಯಾಂಡ್ ಮಾರ್ಟ್‌ಗೇಟ್ ಮಾಡಿಕೊಂಡು ಬ್ಯಾಂಕು ಸಾಲ ಕೊಡುತ್ತದೆ. ಇದು ಜಮೀನು ಹೊಂದಿರುವವರೆಗೆ ಹೊರತು ಬಡವರಿಗೆ ಯಾವ ವಿಧವಾಗಿಯೂ ಸಹಕಾರಿಯಾಗಿಲ್ಲ. ಕೇವಲ ಒಂದೆರಡು ಎಕರೆಗಳನ್ನು ಹೊಂದಿರುವ ಬಡ ರೈತರಿಗೆ ಬ್ಯಾಂಕ್ ಸಾಲ ಕೊಡುತ್ತಿಲ್ಲ. ದಾವಣಗೆರೆ ಪ್ರದೇಶದಲ್ಲಿ ಐದು ಎಕರೆಗಿಂತ ಕಡಿಮೆಯಿರುವವರು ಬಹಳ ರೈತರಿದ್ದಾರೆ. ಅವರಿಗೆ ಒಂದು ಪರ್ಸೆಂಟ್ ಕೂಡ ಕೊಟ್ಟಿಲ್ಲ. ಬ್ಯಾಂಕುಗಳು ಹೆಚ್ಚಾಗಿ ಐದು ಎಕರೆ ಮೇಲ್ಪಟ್ಟವರಿಗೆ ಮಾತ್ರ ಸಾಲ ದೊರಕಿಸಿಕೊಟ್ಟಿವೆ. ಇಂಥ ಕಾಯ್ದೆಗಳಿಂದಾಗಿ ಬಡ ರೈತರಿಗೆ ಪ್ರಯೋಜನವಾಗುತ್ತಿಲ್ಲ. ಇದರಿಂದಾಗಿ ಸರ್ಕಾರ ಪ್ರತಿಯೊಬ್ಬ ರೈತನಿಗೂ ಸಾಲ ಸೌಲಭ್ಯ ದೊರೆಯುವಂತೆ ಕಾನೂನು-ಕಾಯ್ದೆಗಳನ್ನು ಜಾರಿಗೊಳಿಸಬೇಕಾಗುತ್ತದೆ.

ಇದಲ್ಲದೆ ರೈತ ಸಾಲ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆಗಳನ್ನು ಸಹ ಸರ್ಕಾರದ ನೀತಿಗಳೇ ಸೃಷ್ಟಿಸಿವೆ. ಅದರಲ್ಲೂ ವಾಣಿಜ್ಯ ಬೆಳೆ ಬೆಳೆಯುವ ರೈತ ಬೀಜ, ಗೊಬ್ಬರ, ವಿದ್ಯುತ್, ನೀರು ಈ ಎಲ್ಲ ಅವಶ್ಯಕತೆಗಳಿಗಾಗಿ ಅನಿವಾರ್ಯವಾಗಿ ಸಾಲ ಮಾಡಲೇಬೇಕಾಗಿರುತ್ತದೆ. ಸರ್ಕಾರದ ಉದಾರೀಕರಣ ನೀತಿಯಿಂದ ಗೊಬ್ಬರದ ಬೆಲೆ ಕನಿಷ್ಟ ೭ ಪಟ್ಟು ಹೆಚ್ಚಾಗಿದೆ. ಆದರೆ ಸರ್ಕಾರ ಗೊಬ್ಬರಕ್ಕೆ ಕೊಡುತ್ತಿರುವ ಸಬ್ಸಿಡಿ ಅಷ್ಟೇ ಇದೆ ಮತ್ತು ದಿನೇ ದಿನೇ ಕಡಿಮೆಯಾಗುತ್ತಿದೆ. ಜಾಗತೀಕರಣ ನೀತಿಗಳು ಪ್ರಾರಂಭವಾಗುವುದಕ್ಕೆ ಮುನ್ನ ರೈತರಿಗೆ ಉಚಿತ ವಿದ್ಯುತ್ ಸಿಗುತ್ತಿತ್ತು. ಆದರೆ ವಿದ್ಯುತ್ ವಿತರಣೆ ಹಾಗೂ ಉತ್ಪಾದನೆಗಳ ಖಾಸಗೀಕರಣ ಪ್ರಾರಂಭವಾದ ನಂತರ ರೈತ ಬಳಸುವ ವಿದ್ಯುತ್‌ಗೆ ಬೆಲೆ ತೆರಲೇಬೇಕಾದ ಕಡ್ಡಾಯ ನೀತಿ ಅನುಸರಿಸಲಾಯಿತು. ಪ್ರತಿ ಬೋರ್‌ವೆಲ್‌ಗೂ ಮೀಟರ್ ಹಾಕುವ ಪದ್ಧತಿ ಜಾರಿಗೆ ಬಂದಿತು. ಮಾತ್ರವಲ್ಲದೆ ಪ್ರತಿ ೫ ಎಚ್.ಪಿ ಪಂಪ್‌ಸೆಟ್‌ಗೆ ವರ್ಷಕ್ಕೆ ಎರಡೂವರೆ ಸಾವಿರ ರೂಪಾಯಿಗಳನ್ನು ತೆರಲೇಬೇಕಾದ ಪರಿಸ್ಥಿತಿ ರೈತನಿಗೆ ಉಂಟಾಯಿತು. ಇದಲ್ಲದೇ ವಿದ್ಯುತ್ ಖಾಸಗೀಕರಣದಿಂದಾಗಿ ವಿದ್ಯುತ್‌ದರವು ಜಾಸ್ತಿಯಾಗಿರುವುದಲ್ಲದೆ ಖಾಸಗಿ ವಿದ್ಯುತ್ ಲಾಭದಾಯಕವಾಗಿರುವುದು ಶ್ರೀಮಂತ ಗ್ರಾಹಕರಿಗೆ ಮಾತ್ರ. ಸೀಮಿತವಾಗಿ ಗುಣಮಟ್ಟವಿಲ್ಲದ ಹಾಗೂ ವೋಲ್ಟೇಜ್ ವೈಪರೀತ್ಯ ಹೊಂದಿರುವ ವಿದ್ಯುತ್ ಗ್ರಾಮೀಣ ರೈತರಿಗೆ ಸಿಗುವಂತಾಯಿತು. ಇದರಿಂದಾಗಿ ಸತತವಾಗಿ ಬೋರ್‌ವೆಲ್ ವೈಫಲ್ಯವನ್ನು ರೈತರು ಎದುರಿಸುವುದರ ಜೊತೆಗೆ ಈ ಪ್ರದೇಶದ ಕೆಲವು ಕಡೆ ಸರ್ಕಾರದ ಸರಿಯಾದ ನೀರಾವರಿ ಉಸ್ತುವಾರಿ ಯೋಜನೆಗಳಿಲ್ಲದೆ ಕಾಲುವೆಯ ಕೊನೆಯ ಭಾಗದ ರೈತರಿಗೆ ಅಗತ್ಯ ಬಿದ್ದಾಗ ನೀರು ಸಿಗದೇ ಸಮಸ್ಯೆಯ ಸುಳಿಯಲ್ಲಿ ಸಿಲುಕುವಂತಾಯಿತು. ಈ ಕಾರಣಗಳಿಂದಾಗಿ ಹಳ್ಳಿಗಳಲ್ಲಿ ಕೂಲಿ ಕಾರ್ಮಿಕ ರೈತರ ಸಂಖ್ಯೆ ಕಡಿಮೆಯಾಗುತ್ತಿದ್ದು, ಅವರೆಲ್ಲ ನಗರಗಳತ್ತ ಮುಖ ಮಾಡುವ ಅನಿವಾರ್ಯತೆಗೆ ಒಳಗಾದರು. ಇದರಿಂದಾಗಿ ನಗರಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಹೊಸ ಬಗೆಯ ಸಮಸ್ಯೆಗಳು ಕಾಣಿಸಿಕೊಳ್ಳುವಂತಾಯಿತು.

ದಾವಣಗೆರೆ ಪ್ರದೇಶದ ರೈತ ಹೋರಾಟಗಳ ಕುರಿತು ಅಧ್ಯಯನ ಮಾಡಿದಾಗ ರೈತರು ಅನುಭವಿಸುತ್ತಿರುವ ಕೆಲ ಸಮಸ್ಯೆಗಳನ್ನು ಕಂಡುಕೊಳ್ಳಲಾಯಿತು. ಆ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ.

೧. ಕೃಷಿ ವರ್ಗದ ರೈತರ ಹಿತದೃಷ್ಟಿಯಿಂದ ಸರ್ಕಾರವು ಪ್ರತ್ಯೇಕವಾದ ಕೃಷಿ ಬಜೆಟ್‌ನ್ನು ಮಂಡಿಸಿದರೆ ಗ್ರಾಮೀಣ ಭಾಗದ ರೈತರಿಗೆ ಹೆಚ್ಚಿನ ಅನುಕೂಲವಾಗುವ ಸಾಧ್ಯತೆಯಿದೆ.

೨. ವಿದ್ಯುತ್ ಅಭಾವ ಸಾಮಾನ್ಯವಾಗುತ್ತಿರುವ ಇಂದಿನ ದಿನಗಳಲ್ಲಿ ಪರ್ಯಾಯ ವ್ಯವಸ್ಥೆಯತ್ತ ಗಮನ ಹರಿಸುವುದು ಪ್ರಗತಿಯ ದೃಷ್ಟಿಯಿಂದ ಅನಿವಾರ್ಯ. ಈ ಹಿನ್ನೆಲೆಯಲ್ಲಿ ಸರ್ಕಾರವು ಸೌರಶಕ್ತಿ ಬಳಕೆಗೆ ಆದ್ಯತೆ ನೀಡಿದರೆ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗಬಹುದು.

೩. ಕಾರ್ಮಿಕರಿಗೆ ದೊರಕುವಂತಹ ವಿಮಾ ಸೌಲಭ್ಯಗಳನ್ನು ರೈತರಿಗೂ ಸಹ ಒದಗಿಸುವ ಅವಶ್ಯಕತೆ ಇದೆ.

೪. ಗೊಬ್ಬರದ ಅಭಾವ ಸಾಮಾನ್ಯವಾಗುತ್ತಿರುವ ಇಂದಿನ ದಿನಗಳಲ್ಲಿ ಸಾವಯವ ಗೊಬ್ಬರದತ್ತ ರೈತರು ಹೆಚ್ಚು ಗಮನ ಹರಿಸುವಂತೆ ಮಾಡಿದರೆ ರಸಗೊಬ್ಬರದ ಅಭಾವವನ್ನು ಕಡಿಮೆಗೊಳಿಸಬಹುದು.

೫. ರೈತರು ಭೂ ಹಿಡುವಳಿಯಲ್ಲಿ ಒಂದೇ ಬೆಳೆಯನ್ನು ಬೆಳೆಯುವ ಬದಲಾಗಿ ಮಿಶ್ರ ಬೆಳೆ ಬೆಳೆಯುವ ಪದ್ಧತಿ ಅನುಸರಿಸಬಹುದು. ಇದರಿಂದ ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ.

೬. ಅಂತರ್ಜಲ ಅಭಿವೃದ್ಧಿಗಾಗಿ ರೈತರು ತಮ್ಮ ಜಮೀನುಗಳಲ್ಲಿ ಇಂಗು ಗುಂಡಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಂತರ್ಜಲ ಮಟ್ಟವನ್ನು ಕುಸಿಯದಂತೆ ಕಾಪಾಡಿಕೊಳ್ಳಬಹುದು.

೭. ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳುವುದು ಅತ್ಯಂತ ಮಹತ್ವದ್ದು. ಏಕೆಂದರೆ ಅತಿಯಾದ ಕೈಗಾರಿಕೆಗಳಿಂದಾಗಿ ಅವು ಬಿಡುವ ಸಂಸ್ಕರಿಸದ ಕೊಳಚೆ ನೀರು ಮತ್ತು ಕಲುಷಿತ ವಸ್ತುಗಳು, ಕೆರೆ, ಹೊಳೆಗಳನ್ನು ಸೇರಿ ಮಾಲಿನ್ಯವಾಗುವ ಸಂದರ್ಭವಿರುತ್ತದೆ. ಅಲ್ಲದೆ ಸಿಮೆಂಟ್ ಕಾರ್ಖಾನೆಗಳು ಸಮೀಪವಿರುವ ಫಲವತ್ತಾದ ಭೂಮಿಯ ಮೇಲೆ ಸಿಮೆಂಟಿನ ಧೂಳು ದಟ್ಟವಾಗಿ ಹರಡುತ್ತಿರುವುದರಿಂದಾಗಿ ಬರಡು ಭೂಮಿಗಳಾಗಿ ಪರಿವರ್ತಿತವಾಗುತ್ತಿವೆ.

೮. ರೈತ ಸಂಘಟನೆಗಳು ಹೊಸ ಸವಾಲುಗಳನ್ನು ಅಧ್ಯಯನ ಮಾಡಿ ಸಾಧಕ-ಬಾಧಕಗಳನ್ನು ಗಮನಿಸಿ, ತಮ್ಮ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಹೋರಾಟಗಳನ್ನು ರೂಪಿಸುವಾಗ ರೈತರ ಹಿತಾಸಕ್ತಿ ಕಾಪಾಡುವುದು, ಆ ಮೂಲಕ ಸ್ಪರ್ಧೆ ಎದುರಿಸುವ ನಿಟ್ಟಿನಲ್ಲಿ ಸಾಗಬೇಕಾಗುತ್ತದೆ. ಪ್ರತಿಭಟನೆಗಳು ಅಪ್ರಸ್ತುತ ಎನ್ನುವಂತಹ ಜಾಗತೀಕರಣದ ಸಂದರ್ಭದಲ್ಲಿ ಸಂಘಟನೆಗಳು ತಮ್ಮ ಹಳೇ ಕಾರ್ಯ ತಂತ್ರಗಳನ್ನು ಬದಲಾಯಿಸಿಕೊಂಡು ಅಗತ್ಯ, ಅರ್ಥಪೂರ್ಣ ಹೋರಾಟಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

೯. ದಾವಣಗೆರೆ ಪ್ರದೇಶದ ಪ್ರತಿಯೊಂದು ಹಳ್ಳಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಇದರಿಂದಾಗಿ ಹಳ್ಳಿಗರಿಗೆ ರಸ್ತೆ, ಆಸ್ಪತ್ರೆ, ವಸತಿ ಮುಂತಾದ ಮೂಲ ಸೌಲಭ್ಯದತ್ತ ಸರ್ಕಾರದ ಗಮನ ಹರಿಸಿ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಬೇಕಾದ ಅನಿವಾರ್ಯತೆ ಇದೆ.

ರೈತ ಹೋರಾಟಗಳು ಗ್ರಾಮೀಣ ಪ್ರದೇಶದಲ್ಲಿ ಕೆಲಮಟ್ಟಿಗೆ ನಗರೀಕರಣ(ಉಪನಗರ) ಪ್ರಕ್ರಿಯೆಯನ್ನು ಹುಟ್ಟುಹಾಕಿವೆ. ಮಾರುಕಟ್ಟೆಯ ಉಪಕೇಂದ್ರಗಳು, ಬ್ಯಾಂಕ್ ಸಹಕಾರಿ ಸಂಘ ತರಬೇತಿ ಶಿಬಿರಗಳು, ಹಳ್ಳಿ ಹಳ್ಳಿಗಳಲ್ಲಿ ವ್ಯವಸ್ಥೆಗೊಳ್ಳುತ್ತಿವೆ. ಗಣಿಗಾರಿಕೆ ವಿರೋಧ, ಪರಿಸರ ಜಾಗೃತಿ ವಿದ್ಯಾಕೇಂದ್ರಗಳ ಹೆಚ್ಚಳ, ಆರ್ಥಿಕ ಪುಷ್ಟಿ, ಈ ಪ್ರದೇಶದಲ್ಲಿನ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಜಿಲ್ಲಾ ರಚನೆಗೆ ರೈತ ಹೋರಾಟಗಳ ಕೊಡುಗೆ ಮಹತ್ವದ ಪಾತ್ರ ವಹಿಸಿದೆ.

ದಾವಣಗೆರೆ ಪ್ರದೇಶದ ರೈತ ಹೋರಾಟಗಳ ಬಗ್ಗೆ ಅಧ್ಯಯನ ನಡೆಸುವಾಗ ಕೆಲವು ಮಹತ್ವದ ವಿಚಾರಗಳು ಹಾಗೂ ಅವು ಇನ್ನೂ ಅಧ್ಯಯನಕ್ಕೊಳಗಾಗದೇ ಇರುವುದು ಗಮನಕ್ಕೆ ಬಂತು. ಅವುಗಳಲ್ಲಿ ಕೆಲವನ್ನು ಇಲ್ಲಿ ದಾಖಲಿಸಲಾಗಿದೆ.

ವಸಾಹತುಶಾಹಿಯ ಮತ್ತು ಮೈಸೂರು ಸಂಸ್ಥಾನದ ವಿರುದ್ಧ ನಡೆದ ಹೋರಾಟ ಹೊರತುಪಡಿಸಿ ರೈತ ಹೋರಾಟ ನಡೆದಿದ್ದರೆ ಅದು ಯಾವ ಕಾರಣಕ್ಕೆ ನಡೆಯಿತು ಮತ್ತು ಮೈಸೂರು ಸಂಸ್ಥಾನ ಮತ್ತು ವಸಾಹತು ಸರ್ಕಾರ ಯಾವ ರೀತಿ ಆ ಹೋರಾಟಗಳನ್ನು ಶಮನಗೊಳಿಸಿತು ಎಂಬುದರ ಬಗೆಗೆ ಸಮಯದ ಅಭಾವ ಮತ್ತು ಅಧ್ಯಯನದ ಕೊರತೆಯಿಂದಾಗಿ ಹೆಚ್ಚಿನ ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ. ಈ ಪ್ರಶ್ನೆಗಳನ್ನು ಎತ್ತಿರುವ ಉದ್ದೇಶ ಆ ಸಂದರ್ಭದಲ್ಲಿ ಬ್ರಿಟಿಷರ ನೀತಿಗಳಿಗೆ ಪ್ರತಿರೋಧವಾಗಿ ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ರೈತ ಸಮ್ಮೇಳನಗಳು, ಹೋರಾಟದ ವರದಿಗಳು ಕಂಡುಬಂದಿವೆ. ಹೀಗಾಗಿ ಇದನ್ನು ಪರಿಶೀಲಿಸುವ ಅಗತ್ಯವಿದೆ.

೧೯೬೦ರ ದಶಕದಲ್ಲಿ ಭದ್ರಾ ಜಲಾಶಯದಿಂದ ದಾವಣಗೆರೆ ಪ್ರದೇಶದ ಭೂಮಿ ನೀರಾವರಿ ಸೌಲಭ್ಯ ಪಡೆದುಕೊಂಡ ಮೇಲೆ ಆ ಪ್ರದೇಶದಿಂದ ಯಾವ ರೀತಿ ಕಂದಾಯ ವಸೂಲಿ ಮಾಡಲಾಗುತ್ತಿತ್ತು, ಅದರ ಜೊತೆಗೆ ದಾವಣಗೆರೆ ನಗರ ಯಾವ ರೀತಿ ಬೆಳವಣಿಗೆಯಾಯಿತು, ಭದ್ರಾ ಜಲಾಶಯದ ಕಾಲುವೆಯ ನೀರಿನ ಸೌಲಭ್ಯವಂಚಿತ ರೈತರು ಯಾವ ರೀತಿ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದರು, ಪ್ರಸ್ತುತ ಭದ್ರಾ ಕಾಲುವೆಯ ಕೊನೆಯ ಭಾಗದ ರೈತರ ಭೂಮಿಗೆ ನೀರು ಏಕೆ ತಲುಪುತ್ತಿಲ್ಲ ಎಂಬುದರ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ. ಪ್ರಜಾಪ್ರಭುತ್ವ ಸರ್ಕಾರದ ಭೂ ಸುಧಾರಣೆ ನೀತಿಯಿಂದಾಗಿ ಪ್ರದೇಶದ ದೊಡ್ಡ ಭೂ ಹಿಡುವಳಿಗಾರರ ಮೇಲೆ ಯಾವ ರೀತಿ ಪರಿಣಾಮ ಬೀರಿತು, ಭೂಮಿ ಇಲ್ಲದಂತಹ ರೈತರಿಗೆ ಈ ಭೂ ಸುಧಾರಣೆಯಿಂದಾಗಿ ಯಾವ ರೀತಿ ಪ್ರಯೋಜನವಾಯಿತು, ಈ ಕಾಯಿದೆಯಿಂದಾಗಿ ವರ್ಗ ಸಂಘರ್ಷ ಉಂಟಾಗಿತ್ತೇ ಎಂಬುದನ್ನು ತಿಳಿಯುವುದು ಅವಶ್ಯಕವಾಗಿದೆ. ಇದರ ಜೊತೆಗೆ ಪ್ರದೇಶದ ಎ.ಪಿ.ಎಂ.ಸಿ ಮಾರುಕಟ್ಟೆಯಿಂದ ರೈತರಿಗೆ ಯಾವ ರೀತಿಯ ಪ್ರಯೋಜನವಾಗಿದೆ ಹಾಗೂ ಪ್ರಾರಂಭದಿಂದ ಇಲ್ಲಿಯವರೆಗಿನ ರೈತ ನಾಯಕರು ಯಾವ ರೀತಿ ರೈತರನ್ನು ಸಂಘಟಿಸಿದರು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಬೇಕಾಗಿದೆ.

ದಾವಣಗೆರೆ ಪ್ರದೇಶದ ರೈತ ಹೋರಾಟಗಳ ಬಗ್ಗೆ ಇದು ಮೊದಲ ಸಂಶೋಧನಾ ಪ್ರಬಂಧವಾಗಿದ್ದು, ಇದರಲ್ಲಿ ಕೆಲವು ವಿಷಯಗಳ ಹುಡುಕಾಟ ಮಾಡಲಾಗಿದೆ. ಇದು ಇನ್ನೂ ಪ್ರಾರಂಭವಾಗಿದ್ದು, ಮುಂದಿನ ಸಂಶೋಧಕರು ಇದರ ಬಗ್ಗೆ ಆಸಕ್ತಿ ವಹಿಸಿ ಹೆಚ್ಚಿನ ಸಂಶೋಧನೆಯನ್ನು ಮಾಡಲು ಒಲವನ್ನು ತೋರಬೇಕಾಗಿದೆ.

* * *

ಅನುಬಂಧಗಳು

೧. ಸಂದರ್ಶನ ಮಾಡಿದ ವ್ಯಕ್ತಿಗಳು

೨. ಪರಾಮರ್ಶನ ಬರಹಗಳು

೩. ಛಾಯಾಚಿತ್ರಗಳು

೪. ನಕ್ಷೆಗಳು

೧. ಸಂದರ್ಶನ ಮಾಡಿದ ವ್ಯಕ್ತಿಗಳು

ಕ್ರ.ಸಂ	ಹೆಸರು
೧.	ಕೊಂಚೆ ಶಿವರುದ್ರಪ್ಪ ರಾಷ್ಟ್ರೀಯ ಕಿಸಾನ್ ಸಂಘ, ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕೂನಬೇವು, ಚಿತ್ರದುರ್ಗ(ತಾ)
೨.	ಕುಮಾರ್.ಬಿ.ಪಿ ಅಧ್ಯಾಪಕರು ಎ.ವಿ.ಕೆ.ಮಹಿಳಾ ಕಾಲೇಜು, ದಾವಣಗೆರೆ
೩.	ಓಬಳೇಶ್ ಜೈಲರ್ ಬಂದೀಖಾನೆ, ದಾವಣಗೆರೆ
೪.	ಹನುಮಂತಪ್ಪ ಜಿ.ಎಂ ಕಾರ್ಮಿಕ ಮುಂಖಂಡರು ಸಿ.ಪಿ.ಐ.ಕಚೇರಿ ಅಶೋಕ ರಸ್ತೆ, ದಾವಣಗೆರೆ
೫.	ಆವರಗೆರೆ ರುದ್ರಮುನಿ ಜಿಲ್ಲಾ ಗೌರವಾಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಾವಣಗೆರೆ
೬.	ಹೊನ್ನೂರು ಮುನಿಯಪ್ಪ ಜಿಲ್ಲಾಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಾವಣಗೆರೆ
೭.	ಶ್ರೀಮತಿ ಪ್ರೇಮಕಂದಗಲ್ ಜಿಲ್ಲಾಧ್ಯಕ್ಷರು, ಮಹಿಳಾ ಘಟಕ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಾವಣಗೆರೆ

೮. ಹುಚ್ಚವನಹಳ್ಳಿ ಮಂಜುನಾಥ
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರೈತ ಸಂಘ ಹಾಗೂ
ಹಸಿರು ಸೇನೆ (ನಂಜುಂಡಸ್ವಾಮಿ ಬಣ), ದಾವಣಗೆರೆ

೯. ಎಂ.ಎಸ್.ಕುಮಾರಶಾಸ್ತ್ರಿ
ರೈತ ಮುಖಂಡರು
ಮಾಯಕೊಂಡ

೧೦. ತೇಜಸ್ವಿನಿ ಪಾಟೀಲ್
ರಾಜ್ಯ ಪ್ರಧಾನ ಕಾರ್ಯದರ್ಶಿ
ರಾಜ್ಯ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ

೧೧. ಪೂಜಾರ್ ಆಂಜನಪ್ಪ
ಜಿಲ್ಲಾ ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ
ಮತ್ತು ಹಸಿರು ಸೇನೆ, ದಾವಣಗೆರೆ

೧೨. ಕಂದಗಲ್ ಶಿವಕುಮಾರ
ರೈತ

೧೩. ಡಾ.ಜಿ.ಮಂಜುನಾಥಗೌಡ
ಅಧ್ಯಕ್ಷರು, ೨೨ ಕೆರೆಗಳ ಏತ ನೀರಾವರಿ
ಹೋರಾಟ ಸಮಿತಿ, ದಾವಣಗೆರೆ

೧೪. ಕೊಟ್ರೇಶ್‌ನಾಯ್ಕ
ಉಪಾಧ್ಯಕ್ಷರು, ೨೨ ಕೆರೆಗಳ ಏತ ನೀರಾವರಿ
ಹೋರಾಟ ಸಮಿತಿ, ಹುಲಿಕಟ್ಟೆ

೧೫. ಟಿ.ವಿ.ಎಸ್.ರಾಜು
ಕಾರ್ಯದರ್ಶಿಗಳು
೨೨ ಕೆರಗಳ ಏತ ನೀರಾವರಿ ಹೋರಾಟ ಸಮಿತಿ

೧೬. ಹೇಮಂತರಾಜ್.ಕೆ.ಎಂ
ರೈತರು, ಆಲೂರು

೧೭. ಎಂ.ಜಿ.ಹನುಮಂತಪ್ಪ
ರೈತರು, ಆಲೂರು

೧೮. ಹೊಸಳ್ಳಿ ಮಲ್ಲೇಶ್
ಎಐಕೆಎಸ್ ರಾಜ್ಯ ಕಾರ್ಯದರ್ಶಿ
ಹರಪನಹಳ್ಳಿ

೧೯. ರುದ್ರೇಶ್
ಶಿಕ್ಷಕರು, ದಾವಣಗೆರೆ

೨೦. ತಿಪ್ಪೇರುದ್ರಪ್ಪ
ರೈತರು, ಆನಗೋಡು

೨೧. ಮಂಜುನಾಥ ಬಿ.ಕೆ
ರೈತರು, ಓಬಣ್ಣನಹಳ್ಳಿ

* * *

೨. ಪರಾಮರ್ಶನ ಬರಹಗಳು

೧. ಅನಂತರಾಮಯ್ಯ ಎನ್., ಭಾರತದ ಗ್ರಾಮೀಣ ಅಭಿವೃದ್ಧಿ, ೧೯೯೩, ಬೆಂಗಳೂರು

೨. ಈಶ್ವರಪ್ಪ ಎಂ.ಜಿ, (ಸಂ), ಶತಮಾನದ ದಾವಣಗೆರೆ, ಚಂಪಾಲಾಲ್ ಬಿ. ಡೆಲ್ಹರಿಯಾ, ೨೦೦೧, ದಾವಣಗೆರೆ

೩. ಕಂಠಿ ಎಸ್.ಎಸ್, ರೈತ ಮತ್ತು ಸಹಕಾರ, ೧೯೯೪, ಬೆಂಗಳೂರು

೪. ಕುಮಾರ್ ಕೆ.ಎಂ., ಕರ್ನಾಟಕದಲ್ಲಿನ ರೈತ ಚಳುವಳಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೮, ಬೆಂಗಳೂರು

೫. ಕುಲಕರ್ಣಿ ಕೆ.ಆರ್, ಒಕ್ಕಲುತನ ಹುಟ್ಟುವಳಿಯ ಮಾರಾಟ, ೧೯೫೩, ಬೆಂಗಳೂರು

೬. ಕುಲಕರ್ಣಿ.ಡಿ.ಕೆ, ಶಿವಮೊಗ್ಗ ಜಿಲ್ಲೆಯಲ್ಲಿ ರೈತ ಸಂಘಟನೆ ಮತ್ತು ಚಳುವಳಿ, ಇತಿಹಾಸ ದರ್ಶನ, ಸಂ-೫, ಕರ್ನಾಟಕ ಇತಿಹಾಸ ಅಕಾಡೆಮಿ, ೧೯೯೦, ಬೆಂಗಳೂರು

೭. ಕೃಷ್ಣರಾವ್ ವೈ.ವಿ, ಸ್ವಾತಂತ್ರ್ಯೋತ್ತರ ಕೃಷಿರಂಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮

೮. ಕೊಟ್ರೇಶ್ ಉತ್ತಂಗಿ ನಾ., ಹೊನ್ನೆಲೆಗಳು, ಸಹನಾದ್ರಿ ಪ್ರಕಾಶನ ಹೊನ್ನಾಳಿ, ೨೦೦೪

೯. ಗಿರಿಜ ಟಿ, ದಾವಣಗೆರೆ ಇದು ನಮ್ಮ ಜಿಲ್ಲೆ, ನೀಹಾರಿಕ ಪ್ರಕಾಶನ, ೨೦೦೧, ದಾವಣಗೆರೆ

೧೦. ಗೋವಿಂದರಾಜು ಸಿ.ಆರ್, ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬, ಬೆಂಗಳೂರು

೧೧. ಚನ್ನೇಶ್.ಟಿ.ಎಸ್, ಕೃಷಿ ಮತ್ತು ಪೇಟೆಂಟ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮, ವಿದ್ಯಾರಣ್ಯ

೧೨. ಚಂದ್ರಶೇಖರ್ ಎಸ್, ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ (ಅನು, ಸಿ.ನಾಗಣ್ಣ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೩. ಚಂದ್ರಶೇಖರ್ ಎಸ್, (ಸಂ), ಕರ್ನಾಟಕ ಚರಿತ್ರೆ (ಕ್ರಿ.ಶ.೧೯೦೦-೧೯೫೮) ಸಂ-೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೪. ಚಂದ್ರಶೇಖರ್ ಎಸ್, ವಸಾಹತು ಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೫. ಚಿನ್ನಸ್ವಾಮಿ ಸೋಸಲೆ, ನಮ್ಮ ಗ್ರಾಮಗಳು ಅಂದು ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೬. ಜಗನ್ನಾಥ ಜಮಾದಾರ, ಗ್ರಾಮೀಣ ವಿಕಾಸ, ಕೆ.ಎಚ್.ಪಾಟೀಲ ಪ್ರತಿಷ್ಠಾನ, ೧೯೯೩, ಗದಗ

೧೭. ಜೋಶಿ ಜಿ.ವಿ, ದಕ್ಷಿಣ ಕನ್ನಡ ಜಿಲ್ಲೆಯ ರೈತ ಹೋರಾಟ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೧೯೯೯, ಮಂಗಳೂರು

೧೮. ಟ್ರಾಮ್ ಬ್ರಾಸ್, ನ್ಯೂ ಫಾರ್ಮರ್ಸ್ ಮೂವ್‌ಮೆಂಟ್ ಇನ್ ಇಂಡಿಯಾ, ಪ್ರ್ಯಾಂಕ್‌ಕಾಸ್ ಪಬ್ಲಿಕೇಷನ್, ೧೯೯೫, ಯುಕೆ

೧೯. ತಂಬಂಡ ವಿಜಯ್ ಪೂಣಚ್ಚ, ರೈತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ವಿದ್ಯಾರಣ್ಯ

೨೦. ತಂಬಂಡ ವಿಜಯ್ ಪೂಣಚ್ಚ, (ಸಂ), ಚರಿತ್ರೆ ವಿಶ್ವಕೋಶ ಸಂ.೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ವಿದ್ಯಾರಣ್ಯ

೨೧. ತಂಬಂಡ ವಿಜಯ್ ಪೂಣಚ್ಚ, ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ವಿದ್ಯಾರಣ್ಯ

೨೨. ತಿಮ್ಮಯ್ಯ.ಜಿ., ಅಬ್ದುಲ್ ಅಜೀಜ್., ದಿ ಪೊಲಿಟಿಕಲ್ ಎಕಾನಮಿ ಆಫ್ ಲ್ಯಾಂಡ್ ರಿಫಾರ್ಮ್ಸ್, ಆಶೀಶ್ ಪಬ್ಲಿಶಿಂಗ್ ಹೌಸ್, ನವದೆಹಲಿ, ೧೯೮೪

೨೩. ದಾಮ್ಲೆ ಸಿ.ಬಿ., ಲ್ಯಾಂಡ್ ರಿಫಾರ್ಮ್ ಅಂಡ್ ಚೇಂಜಿಂಗ್ ಅಗ್ರೇರಿಯನ್ ರಿಲೇಷನ್ಸ್, ನವದೆಹಲಿ, ೧೯೯೨

೨೪. ಧನಾಗರೆ, ಪೆಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ, ೧೯೨೦-೫೦, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, ೧೯೮೨

೨೫. ದಿವಾಕರ್.ಆರ್.ಆರ್., ಕರ್ನಾಟಕದ ಪರಂಪರೆ, ಸಂ-೨, ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೬. ನರೇಂದ್ರ ಪ್ರಸಾದ್ ಎಸ್, ಪರಮೇಶ್ವರ್ ಬಿ, ಮಹದೇವಸ್ವಾಮಿ, ಭಾರತ ಸ್ವಾತಂತ್ರ್ಯ ಚಳುವಳಿ, ಚೇತನ ಬುಕ್ ಹೌಸ್, ಬೆಂಗಳೂರು, ೨೦೦೨

೨೭. ನಾಗಭೂಷಣ, ರೈತಭಾರತ: ಅವಸಾನದ ಅಂಚಿನಲ್ಲಿ, ಲೋಹಿಯಾ ಪ್ರಕಾಶನ, ೨೦೦೮

೨೮. ನಾಗರಾಜ್ ಎಂ.ಜಿ, ಕರ್ನಾಟಕ ರೈತ ಚಳುವಳಿ, ಸತ್ಯಾಗ್ರಹಗಳು ಸಂಪುಟ-೧,೨, ಮತ್ತು ೩ ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ಬೆಂಗಳೂರು, ೨೦೦೬

೨೯. ನಾಗೇಶ್ ಎಚ್.ವಿ, ಪುನೀತ್ ಎ.ಈ, ಭಾರತದಲ್ಲಿ ರೈತ ಹೋರಾಟಗಳು, ಚಂದ್ರನಾಥ ಪ್ರಕಾಶನ, ಧಾರವಾಡ, ೧೯೮೪

೩೦. ನಾಡಕರ್ಣಿ ಎಂ.ವಿ, ಪಾರ್ಮರ್ಸ್ ಮೂಮೆಂಟ್ ಇನ್ ಇಂಡಿಯಾ, ಅಲೈಡ್ ಪಬ್ಲಿಷರ್ಸ್ ನವದೆಹಲಿ, ೧೯೯೨.

೩೧. ನಾಡಕರ್ಣಿ ಎಂ.ವಿ, ಕರ್ನಾಟಕ ರೈತ ಹೋರಾಟಗಳು, ಪ್ರಿಂಟರ್ ಪ್ರಕಾಶನ, ಬೆಂಗಳೂರು, ೧೯೮೬

೩೨. ಸತೀಶ್ ಪಾಟೀಲ., ಹೆಬ್ಬಳ್ಳಿ ಭೂ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩೩. ಪುಟ್ಟಯ್ಯ ಬಿ.ಎಂ., ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೩೪. ಬಸವರಾಜ, ಶಿವಮೊಗ್ಗ ರೈತ ಚಳವಳಿ, ಸಮುದಾಯ ಪ್ರಕಾಶನ, ಬೆಂಗಳೂರು, ೧೯೮೧

೩೫. ಬಸವರಾಜಪ್ಪ ಹೆಚ್.ಇ, ಆಧುನಿಕ ಕರ್ನಾಟಕ ಭೂ ಸುಧಾರಣೆಯ ಅಧ್ಯಯನ ಇತಿಹಾಸ ದರ್ಶನ, ಸಂ.೧೪, ಕರ್ನಾಟಕ ಇತಿಹಾಸ ಅಕಾಡಮಿ, ಬೆಂಗಳೂರು, ೧೯೯೯

೩೬. ಬಸವರಾಜ ತಂಬಾಕೆ, ರೈತ ಸಂಘಟನೆ ಏಕೆ?, ಜಿಲ್ಲಾ ರೈತ ಸಂಘ, ಬೀದರ

೩೭. ಬಿಸಲಯ್ಯ ಎಸ್, ಆರ್ಥಿಕ ಜಾಗತೀಕರಣ ಮತ್ತು ಭಾರತದ ಆರ್ಥಿಕ ಸುಧಾರಣೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೦೨

೩೮. ಬಿಪನ್ ಚಂದ್ರ, ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್, ನವದೆಹಲಿ, ೧೯೮೭

೩೯. ಬಿಪನ್ ಚಂದ್ರ, ಅಮಲೇಶ ತ್ರಿಪಾಠಿ, ಬರುನ್‌ಡೆ, ಸ್ವಾತಂತ್ರ್ಯದ ಹೋರಾಟ (ಅನು: ಅನಂತರಾಮಯ್ಯ ಆರ್.ಎಲ್. ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ, ೨೦೦೧

೪೦. ಬುಕಾನನ್, ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಆ್ಯಂಡ್ ಮಲಬಾರ್, ಸಂಪುಟ-೧, ಏಷಿಯನ್ ಎಜುಕೇಷನಲ್ ಸರ್ವಿಸಸ್, ನವದೆಹಲಿ, ೧೯೮೮

೪೧. ಬೋರಲಿಂಗಯ್ಯ ಹಿ.ಚಿ, (ಸಂ), ಕಾಗೋಡು ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೪೨. ಬೋರಲಿಂಗಯ್ಯ ಹಿ.ಚಿ, (ಸಂ), ಅಭಿವೃದ್ಧಿಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೩. ಮುಜಾಫರ್ ಅಸ್ಸಾದಿ, ಪೆಸೆಂಟ್ ಮೂವ್‌ಮೆಂಟ್ ಇನ್ ಕರ್ನಾಟಕ, ಶಿಪ್ರ ಪಬ್ಲಿಕೇಷನ್ಸ್ ದೆಹಲಿ, ೧೯೯೭

೪೪. ಮುಜಾಫರ್ ಅಸ್ಸಾದಿ, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯

೪೫. ಮಜುಂದಾರ್ ಆರ್.ಸಿ, (ಅನು.), ಎ.ವಿ.ನಂರಸಿಂಹಮೂರ್ತಿ, ಸ್ವಾತಂತ್ರ್ಯ ಸಂಗ್ರಾಮ, ಭಾಗ-ಒಂದು, ಸಂಪುಟ-೨೩, ಭಾರತೀಯ ವಿದ್ಯಾಭವನ, ಬೆಂಗಳೂರು

೪೬. ಮುರಹರಿನಾಯ್ಕ, ರೈತರ ಹೋರಾಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬

೪೭. ಮೂರ್ತಿ ಎನ್, ಹೋರಾಟದ ಮಹಾಪ್ರಬಂಧ, ಸಂ.೨, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು, ೨೦೦೫

೪೮. ಮೋಹನ್‌ಕೃಷ್ಣ ರೈ.ಕೆ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೪೯. ಮೋಹನ್‌ಕೃಷ್ಣ ರೈ ಕೆ, ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫೦. ಮೋಹನ್‌ಕೃಷ್ಣ ರೈ.ಕೆ, ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫೧. ಮೋಹನ್‌ಕೃಷ್ಣ ರೈ.ಕೆ, ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೧೦

೫೨. ರಣಜಿತ್‌ಗುಹಾ, ಎಲಿಮೆಂಟರಿ ಆಸ್ಪೆಕ್ಟ್ಸ್ ಆಫ್ ಪೆಸೆಂಟ್ ಇನ್‌ಸರ್‌ಜೆನ್ಸಿ ಇನ್ ಕೊಲೋನಿಯಲ್ ಇಂಡಿಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ದೆಹಲಿ

೫೩. ರಣಜಿತ್‌ಗುಹಾ, (ಸಂ), ಸಬಾಲ್ಟರ್ನ್ ಸ್ಟಡೀಸ್, ರೈಟಿಂಗ್ಸ್, ಆನ್ ಸೌತ್ ಏಷಿಯನ್ ಹಿಸ್ಟರಿ ಅಂಡ್ ಸೊಸೈಟಿ, ವ್ಯಾಲ್ಯೂಮ್-೧, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ದೆಹಲಿ, ೧೯೮೨

೫೪. ರಾಜನ್ ಎಂ.ಎಸ್, ಕರ್ನಾಟಕದಲ್ಲಿ ಭೂ ಸುಧಾರಣೆ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೭

೫೫. ರಾಜನ್, ಲ್ಯಾಂಡ್ ರಿಫಾರ್‌ಮೇಶನ್ ಕರ್ನಾಟಕ್, ಹಿಂದುಸ್ತಾನ್ ಪಬ್ಲಿಕೇಷನ್ಸ್, ದೆಹಲಿ, ೧೯೮೯

೫೬. ರಾಮಮನೋಹರ ಲೋಹಿಯಾ, (ಮೂಲ), ಭಾರತದ ರೈತ ಮತ್ತು ಇತರ ಲೇಖನಗಳು, (ಅನು: ನಾರಾಯಣಸ್ವಾಮಿ ಜ.ಹೊ), ನೆಲಮನೆ ಪ್ರಕಾಶನ, ಮಂಡ್ಯ

೫೭. ರುಡಾಲ್ಫ್, ಮಾಡರ್ನಿಟಿ ಆಫ್ ಟ್ರೆಡಿಷನ್, ಪೊಲಿಟಿಕಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ

೫೮. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೯

೫೯. ಲಿಂಗದಳ್ಳಿ ಚೇತನಕುಮಾರ್, (ಸಂ), ಗೋಲಿಬಾರ್ ಗೌರ್ನ್ಮೆಂಟ್‌ನಲ್ಲಿ ರೈತರ ಕಗ್ಗೊಲೆ, ನೆಲದವ್ವ ಪ್ರಕಾಶನ, ಬೆಂಗಳೂರು, ೨೦೦೮

೬೦. ವಂದನಾಶಿವ, ಫ್ಯೂಚರ್ ಆಫ್ ಅವರ್ ಸೀಡ್ಸ್, ಫ್ಯೂಚರ್ ಆಫ್ ಅವರ್ ಫಾರ್‌ಮರ್ಸ್, ಆರ್.ಎಫ್.ಎಸ್.ಟಿ.ಎನ್.ಆರ್.ಪಿ ನ್ಯೂಡೆಲ್ಲಿ, ೧೯೯೬

೬೧. ವಂದನಾಶಿವ, ಬತ್ತದ ಚಿಲುಮೆ (ಅನು:ಮಾಧವ ಐತಾಳ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೬೨. ವಿಟ್ಟರ್ ಎಸ್.ಎಚ್, ನ್ಯೂ ಅಗ್ರಿಕಲ್ಚರ್, ಎ ವ್ಯೂ ಆಫ್ ದಿ ಟ್ವೆಂಟಿಫಸ್ಟ್ ಸೆಂಚುರಿ, ವೈಲಿ ಇಂಟರ್ ಸೈನ್ಸ್, ನ್ಯೂಯಾರ್ಕ್, ೧೯೮೩

೬೩. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ೨೦೦೬

೬೪. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೬೫. ವಿಷ್ಣುನಾಯ್ಕ, ದುಡಿಯುವ ಕೈಗಳ ಹೋರಾಟದ ಕಥೆ, ಡಾ.ದಿನಕರ ದೇಸಾಯಿ ಸ್ಮಾರಕ, ಪ್ರತಿಷ್ಠಾನ, ಅಂಕೋಲಾ, ೨೦೦೪

೬೬. ವೀರಭದ್ರಪ್ಪ ಬಿಸ್ಲಳ್ಳಿ, ಕೃಷಿ ಕ್ಷೇತ್ರದ ಹೊಸ ಸಂಕಟಗಳು, ಅಭಿರುಚಿ ಪ್ರಕಾಶನ, ಮೈಸೂರು, ೨೦೦೮

೬೭. ಶರಶ್ಚಂದ್ರ ರಾನಡೆ ಜಿ, ಕೃಷಿ ಉತ್ಪನ್ನ ದರ್ಪಣ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೪

೬೮. ಶಿವರಾಮಯ್ಯ, ದನಿಯಿಲ್ಲದವರ ದನಿ, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು, ೨೦೦೩

೬೯. ಶಿವಸುಂದರಂ, ರೈತರ ಆತ್ಮಹತ್ಯೆ, ಲಂಕೇಶ ಪ್ರಕಾಶನ, ಬೆಂಗಳೂರು, ೨೦೦೮

೭೦. ಶಂಕರನಾರಾಯಣರಾವ್ ಎನ್.ಪಿ, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ೨೦೦೮

೭೧. ಶ್ರೀನಿವಾಸ ಎಂ.ವಿ, ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ, ಚಿತ್ರದುರ್ಗ, ೧೯೭೬

೭೨. ಶ್ರೀನಿವಾಸಮೂರ್ತಿ ಎ.ಪಿ, ಭಾರತದ ಸ್ವಾತಂತ್ರ್ಯ ಚಳವಳಿ ೧೮೫೨-೧೯೪೭, ಅಭ್ಯುದಯ ಪ್ರಕಾಶನ, ಬೆಂಗಳೂರು, ೧೯೮೭

೭೩. ಶ್ರೀನಿವಾಸಮೂರ್ತಿ ಹೆಚ್.ವಿ, ಆರ್.ರಾಮಕೃಷ್ಣನ್, ಸಮಗ್ರ ಕರ್ನಾಟಕ ಚರಿತ್ರೆ, ಓರಿಯಂಟ್ ಲಾಂಗ್‌ಮನ್ ಲಿಮೆಟೆಡ್, ಬೆಂಗಳೂರು, ೧೯೯೫

೭೪. ಶೇಷಗಿರಿರಾವ್.ಎಲ್.ಎಸ್, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಸಪ್ನ ಬುಕ್ ಹೌಸ್, ಬೆಂಗಳೂರು, ೧೯೯೭

೭೫. ಶೇಷಾದ್ರಿ ಬಿ, ಟಿ.ಆರ್.ಚಂದ್ರಶೇಖರ್, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೭೬. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ-೧, ಗೀತಾ ಬುಕ್‌ಹೌಸ್, ಮೈಸೂರು, ೧೯೭೪

೭೭. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ-೨, ಗೀತಾ ಬುಕ್‌ಹೌಸ್, ಮೈಸೂರು, ೧೯೭೪

೭೮. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ-೩, ಗೀತಾ ಬುಕ್‌ಹೌಸ್, ಮೈಸೂರು, ೧೯೭೪

೭೯. ಸೂರ್ಯನಾಥ ಕಾಮತ್, ಒಕ್ಕಲುತನ ಮತ್ತು ಒಕ್ಕಲಿಗರು; ಇತಿಹಾಸ ಅನ್ವೇಷಣೆ, ಅರ್ಚನ ಪ್ರಕಾಶನ, ೨೦೦೬

೮೦. ಸೂರಿ ಕೆ.ಸಿ, ರೈತರ ಆತ್ಮಹತ್ಯೆಗಳಿಗೆ ಕಾರಣಗಳೇನು?, ನವಕರ್ನಾಟಕ ಪ್ರಕಾಶನ, ೨೦೦೬

೮೧. ಸೆಬಾಸ್ಟಿಯನ್ ಜೋಸೆಫ್, (ಸಂ), ಕರ್ನಾಟಕ ಚರಿತ್ರೆ (ಕ್ರಿ.ಶ.೧೮೦೦-೧೯೦೦) ಸಂಪುಟ-೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೮೨. ಹಂಜಾ ಅಲಾವಿ, ಪೆಸೆಂಟ್ ರೆವಲ್ಯೂಷನ್ಸ್, ಪೆಸೆಂಟ್ ಸ್ಟ್ರಗಲ್ಸ್ ಇನ್ ಇಂಡಿಯಾ, ದೆಹಲಿ, ೧೯೮೩

೮೩. ಹಬೀಬ್ ಇರ್ಫಾನ್, ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಮೊಗಲ್ ಇಂಡಿಯಾ, ಲೂಸಿಯಾ ಪಬ್ಲಿಕೇಷನ್, ಬೊಂಬಾಯಿ, ೧೯೬೨

೮೪. ಹಾಲಪ್ಪ ಜಿ.ಎಸ್., ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ, ಸಂ-೨, ಮೈಸೂರು ಸರ್ಕಾರ, ೧೯೯೪

ಗೆಜೆಟಿಯರ್‌ಗಳು

೧. ರೈಸ್.ಬಿ.ಎಲ್, (ಸಂ), ಮೈಸೂರು ಗೆಜೆಟಿಯರ್ ಸಂ-೧, ಮತ್ತು ೨, ಲಂಡನ್, ೧೮೯೭

೨. ಸತ್ಯನ್ ಬಿ.ಎಸ್, (ಸಂ), ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೬೭

೩. ಸೂರ್ಯನಾಥ ಯು ಕಾಮತ್, (ಸಂ), ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ-೨, ಕರ್ನಾಟಕ ಸರಕಾರ, ಬೆಂಗಳೂರು, ೧೯೮೫

ಸ್ಮರಣ ಸಂಚಿಕೆಗಳು

೧. ಈಶ್ವರಪ್ಪ ಎಂ.ಜಿ, (ಸಂ), ದವನಸಿರಿ, ಸ್ಮರಣ ಸಂಚಿಕೆ, ಅಖಿಲ ಭಾರತ ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ದಾವಣಗೆರೆ, ೧೯೯೨

೨. ಕೋಟಗಿ ಸಿದ್ಧಲಿಂಗಪ್ಪ, (ಸಂ), ಹೋರಾಟದ ನೆನಹು, ಸ್ಮರಣ ಸಂಚಿಕೆ, ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯಯೋಧರ ಸಮ್ಮೇಳನ, ಮನು ಮುದ್ರಣ, ಚಿತ್ರದುರ್ಗ, ೧೯೯೬

೩. ಪಾಟೀಲ ಎಚ್.ಎಸ್, ತಿರುಳ್ಗನ್ನಡ, ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕೊಪ್ಪಳ, ೧೯೯೩

೪. ಸೂರ್ಯನಾಥ ಯು. ಕಾಮತ್, ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು, ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು, ೧೯೯೩

ಎಂ.ಫಿಲ್ ನಿಬಂಧಗಳು (ಅಪ್ರಕಟಿತ)

೧. ಕೀರ್ತಿನಾಥ ಜಿ.ಎಸ್, ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಚಳುವಳಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೨. ತಿಪ್ಪೇಸ್ವಾಮಿ, ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩. ಸವಿತ ಬಿ.ಸಿ, ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಚಿಂತನೆಗಳ ವಿಶ್ಲೇಷಣೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪. ಹಿರೇಬಿದ್ರಿ ಹೊಳಿಬಸಪ್ಪ, ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

ಪಿಎಚ್.ಡಿ ಪ್ರಬಂಧಗಳು (ಅಪ್ರಕಟಿತ)

೧. ಕುಮಾರ್ ಬಿ.ಪಿ, ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨. ತಿಪ್ಪೇಸ್ವಾಮಿ ಎಚ್, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೩. ಬಸವರಾಜಪ್ಪ ಎಚ್.ಈ., ಚಿತ್ರದುರ್ಗ ಪ್ರದೇಶದ ಭೂ ಹಿಡುವಳಿಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ನಿಯತಕಾಲಿಕೆಗಳು, ದಿನಪತ್ರಿಕೆಗಳು

(ರೈತ ಹೋರಾಟಗಳು ಕುರಿತು ಉಲ್ಲೇಖಿತ ಲೇಖನಗಳನ್ನೊಳಗೊಂಡ ನಿಯತಕಾಲಿಕೆಗಳ ಪಟ್ಟಿ)

೧. ಅಗ್ನಿ ವಾರಪತ್ರಿಕೆ

೨. ಇಂಡಿಯನ್ ಎಕ್ಸ್‌ಪ್ರೆಸ್

೩. ಉದಯವಾಣಿ

೪. ಕನ್ನಡ ಪ್ರಭ

೫. ಗೌರಿ ಲಂಕೇಶ್ ಪತ್ರಿಕೆ

೬. ಜನತಾವಾಣಿ

೭. ಡೆಕ್ಕನ್ ಹೆರಾಲ್ಡ್

೮. ನಗರವಾಣಿ

೯. ಪ್ರಜಾವಾಣಿ

೧೦. ಲಂಕೇಶ್ ಪತ್ರಿಕೆ

೧೧. ವಿಜಯ ಕರ್ನಾಟಕ

೧೨. ಸಂಜೆವಾಣಿ

೧೩. ಸಂಯುಕ್ತ ಕರ್ನಾಟಕ

೧೪. ಹಾಯ್ ಬೆಂಗಳೂರು

೧೫. ಹೊಸತು

* * *

೩. ಛಾಯಾಚಿತ್ರಗಳು

ಛಾಯಾಚಿತ್ರಗಳು



ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮರಣ ಹೊಂದಿದ ರೈತರ ನೆನಪಿಗಾಗಿ ನಿರ್ಮಿಸಿದ ಸ್ಮಾರಕ, ನಗರಸಭೆ ಮುಂಭಾಗ ದಾವಣಗೆರೆ.



೧೯೯೨ರ ರಸಗೊಬ್ಬರಕ್ಕಾಗಿ ನಡೆದ ಹೋರಟದ ಗೋಲಿಬಾರ್‌ನಲ್ಲಿ ಹುತಾತ್ಮರಾದ ರೈತರ ಸ್ಮಾರಕ ಭವನ, ಆನಗೋಡು.



೨೨ ಕೆರೆಗಳ ಏತ ನೀರಾವರಿ ಹೋರಾಟ ಸಮಿತಿಯಿಂದ ರಾಜಭವನ ಚಲೋ ನಡೆಸಿದ ಸಂದರ್ಭ



ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿಯಾದ ಅಮರನಾರಾಯಣ ಅವರಿಗೆ ಮನವಿ ಸಲ್ಲಿಸುತ್ತಿರುವ ಸಂದರ್ಭ



ವಿವಿಧ ರೈತ ಸಂಘಟನೆಗಳು ರಸ್ತೆ ತಡೆ ಮಾಡುತ್ತಿರುವ ಸಂದರ್ಭ



ಭೂ ಸ್ವಾಧೀನ ವಿರೋಧಿಸಿದ ರೈತ ಮಹಿಳೆಯರನ್ನು ಬಂಧಿಸುತ್ತಿರುವ ಸಂದರ್ಭ



ಕರೂರು ಭೂ ಸ್ವಾಧೀನ ವಿರೋಧಿಸಿ ಧರಣಿ ನಿರತ ರೈತರು



ಭತ್ತದ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ದಾವಣಗೆರೆ ಪ್ರದೇಶದ ರೈತರಿಂದ ರಸ್ತೆ ತಡೆ ಹೋರಾಟ

೪. ನಕ್ಷೆಗಳು

ಕರ್ನಾಟಕ ರಾಜ್ಯ ನಕಾಶೆಯಲ್ಲಿ ದಾವಣಗೆರೆ ಜಿಲ್ಲೆ



ದಾವಣಗೆರೆ ಜಿಲ್ಲೆ



DAVANGERE
District Map
N
Srigarthota
Harpanahalli
BELLARY
To Haveri
Neelagunda
Mattihalli
Tavargundi
Ardikere
Sokke
Anaburu
HAVERI
NH-4
Duggavatti
Uchchangipura
Harihar
Anaji
Jagalur
Devikere
DAVANGERE
Vasana
Hadadi
Kurki
Hebbalu
Malebennur
Mayakonda
Honnali
Matti
To Chitradurga
NH-4
Nyamati
Sasvihulli
Sante Bennur
CHITTRADURGA
Savalanga
Channagiri
LEGEND
District Boundary
National Highway
Major Road
Railway
District Headquarter
Major Town
Other Town
River
SHIMOGA
Jaladalu
Ubrani
To Hassan
Map not to Scale
Copyright © 2009 www.mapsofindia.com
CHIKMAGALUR